ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
'ಎವರೆಸ್ಟ್'ನಲ್ಲೂ ಸ್ವಚ್ಛತಾ ಅಭಿಯಾನ!



ಆಳ–ಅಗಲ
ಕೇಂದ್ರ ಸರ್ಕಾರಕ್ಕೆ ಮಾಹಿತಿ ಇರಲಿಲ್ಲವೇ...

'10 ವರ್ಷದಲ್ಲಿ ಜಗತ್ತಿನ ಶ್ರೀಮಂತ ಪಕ್ಷವಾದ ಬಿಜೆಪಿ' 9

ಕರ್ನಾಟಕದಲ್ಲಿರೋದು ಕಾಂಗ್ರೆಸ್‌ನ 'ವಿಶ್ವಾಸದ ಅಲೆ' 8

ವಿಧಿಬದ್ಧವಲ್ಲದ ಮದುವೆಗೆ ಮಾನ್ಯತೆ ಇಲ್ಲ: 11

ಸಗಟು ವಾಹನ ಮಾರಾಟ ಏರಿಕೆ 10

ಎಸ್ಸೆಸ್ಸೆಲ್ಸಿ: 8ಕ್ಕೆ ಫಲಿತಾಂಶ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮುಕ್ತಾಯವಾಗಿದ್ದು, ಮೇ 8ರಂದು ಫಲಿತಾಂಶ ಪ್ರಕಟಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸಿದ್ಧತೆ ನಡೆಸಿದೆ.

ಮಾರ್ಚ್ 25ರಿಂದ ಏ.6ರವರೆಗೆ ರಾಜ್ಯದ 2,750 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದಿದ್ದವು. ಆಯಾ ವಿಷಯಗಳ ಪರೀಕ್ಷೆಗಳು ಮುಗಿದ ಮರುದಿನವೇ ಮೌಲ್ಯಮಾಪನ ಕಾರ್ಯ ಆರಂಭಿಸಲಾಗಿತ್ತು. ಎಲ್ಲ ಪತ್ರಿಕೆಗಳ ಮೌಲ್ಯಮಾಪನ ಪೂರ್ಣಗೊಂಡಿದ್ದು, ಅಂಕಗಳ ಕೂಡುವಿಕೆ ಕಾರ್ಯ ನಡೆಯುತ್ತಿದೆ. ಮೇ 6ರ ಒಳಗೆ ಎಲ್ಲ ಪ್ರಕ್ರಿಯೆಗಳು ಪೂರ್ಣಗೊಳ್ಳಲಿವೆ. ಮೇ 7ರಂದು ರಾಜ್ಯದಲ್ಲಿ ಎರಡನೇ ಹಂತದ ಲೋಕಸಭಾ ಚುನಾವಣೆಯ ಮತದಾನ ನಡೆಯಲಿರುವುದರಿಂದ 8ರಂದು ಫಲಿತಾಂಶ ಪ್ರಕಟಿಸಲು ಮಂಡಳಿ ನಿರ್ಧರಿಸಿದೆ.

4Aನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಹಾಸನ ಅತ್ಯಾಚಾರ ಪ್ರಕರಣ: ಕಾಂಗ್ರೆಸ್–ಬಿಜೆಪಿ ನಾಯಕರ ವಾಕ್ಸಮರ ತಾರಕಕ್ಕೆ

ಪ್ರಜ್ವಲ್‌ಗೆ ಯಾರ 'ರಹದಾರಿ'?

ನೂರಾರು ಮಹಿಳೆಯರ ಮೇಲೆ ಅತ್ಯಾಚಾರ ಎಸಗಿರುವ ಆರೋಪಕ್ಕೆ ಗುರಿಯಾಗಿರುವ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ, ದೇಶದಿಂದ ಪರಾರಿಯಾಗಲು ಯಾರು ಕಾರಣ ಎಂಬ ವಿಷಯ ಬುಧವಾರ ಚರ್ಚೆಯ ಮುನ್ನೆಲೆಗೆ ಬಂದಿದೆ. 'ಚುನಾವಣೆ ಮುಗಿಯುವವರೆಗೆ ಸುಮ್ಮನಿದ್ದ ಕಾಂಗ್ರೆಸ್‌ನವರು, ಘೋರ ಅಪರಾಧ ಮಾಡಿದವರು (ಪ್ರಜ್ವಲ್ ರೇವಣ್ಣ) ಓಡಿ ಹೋಗಲು ಅವಕಾಶ ನೀಡಿದರು' ಎಂದು ಗೃಹ ಸಚಿವ ಅಮಿತ್ ಶಾ ಕಿಡಿಕಾರಿದರು.'ದೇವೇಗೌಡರೇ ಯೋಜನೆ ರೂಪಿಸಿದ್ದಾರೆ' ಎಂದು ಆಪಾದಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಪ್ರಜ್ವಲ್ ವಾಪಸ್ ಕರೆತರಲು ನೆರವು ನೀಡಿ' ಎಂದು ಕೋರಿ ಪ್ರಧಾನಿ ಮೋದಿಯವರಿಗೆ ಪತ್ರ ಬರೆದಿದ್ದಾರೆ.

ದೇವೇಗೌಡರ ಯೋಜನೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

- ಎಸ್‌ಐಟಿ: ಸಾಧ್ಯವಾಗದ ಸ್ಥಳ ಮಹಜರು
- ಕಾಲಾವಕಾಶ ಕೇಳಿದ ಪ್ರಜ್ವಲ್
- ವಿಚಾರಣೆಗೆ ಎಚ್‌.ಡಿ. ರೇವಣ್ಣ ಗೈರು
- ಮೇ 15ರಂದು ದೇಶಕ್ಕೆ ವಾಪಸ್?

ಬೆಂಗಳೂರು/ಯಾದಗಿರಿ: 'ಲೈಂಗಿಕ ಹಗರಣದ ಆರೋಪಿಯಾಗಿರುವ ತಮ್ಮ ಮೊಮ್ಮಗ ಪ್ರಜ್ವಲ್ ರೇವಣ್ಣನನ್ನು ವಿದೇಶಕ್ಕೆ ಕಳುಹಿಸಿಕೊಡಲು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರೇ ಯೋಜನೆ ರೂಪಿಸಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಾಸನದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿದ್ದ ಪ್ರಜ್ವಲ್ ಏಪ್ರಿಲ್ 26ರಂದು ಮತದಾನ ಮುಗಿದ ಬಳಿಕ ಜರ್ಮನಿಗೆ ಪರಾರಿಯಾಗಿದ್ದಾನೆ ಎನ್ನಲಾಗುತ್ತಿದೆ. ವಿದೇಶಕ್ಕೆ ಹೋಗಲು ಆತನಿಗೆ ಯಾರು ವೀಸಾ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ? ಕೇಂದ್ರ ಸರ್ಕಾರವೇ ಮಾಡಿಕೊಟ್ಟಿರಬೇಕಲ್ಲವೇ? ಕೇಂದ್ರ ಸರ್ಕಾರದ ಗಮನಕ್ಕೆ ಬಾರದೇ ವಿದೇಶಕ್ಕೆ ಹೋಗಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು. 'ಮಾತೃಶಕ್ತಿ ಬಗ್ಗೆ ಮಾತನಾಡುವ ಬಿಜೆಪಿಯವರಿಗೆ ನಿಜವಾಗಿಯೂ ಮಹಿಳೆಯರ ಬಗ್ಗೆ ಕಾಳಜಿ ಇದ್ದರೆ ಮೈತ್ರಿ ಅಭ್ಯರ್ಥಿಯಾಗಿ ಪ್ರಜ್ವಲ್‌ನನ್ನು ಏಕೆ ಕಣಕ್ಕೆ ಇಳಿಸಿದರು? ವಿಡಿಯೊಗಳ ಬಗ್ಗೆ ಮೊದಲೇ ಮಾಹಿತಿ ಇದ್ದರೂ ಜೆಡಿಎಸ್ ಜೊತೆಗೆ ಏಕೆ ಮೈತ್ರಿ ಮಾಡಿಕೊಂಡರು? ಈ ಬಗ್ಗೆ ವಿವರಣೆ ನೀಡಲಿ' ಎಂದರು.

'ಪ್ರಜ್ವಲ್ ಚಾಲಕ ಕಾರ್ತಿಕ್ ವಿಡಿಯೊಗಳಿದ್ದ ಪೆನ್ ಡ್ರೈವ್ ಅನ್ನು ಬಿಜೆಪಿ ಮುಖಂಡ ಜಿ. ದೇವರಾಜೇಗೌಡರಿಗೆ ಕೊಟ್ಟಿರುವುದಾಗಿ ಹೇಳಿದ್ದಾನೆಯೇ ಹೊರತು ಡಿ.ಕೆ. ಶಿವಕುಮಾರ್‌ಗೆ ನೀಡಿರುವುದಾಗಿ ಹೇಳಿಲ್ಲ. ಈ ಪ್ರಕರಣಕ್ಕೂ ಶಿವಕುಮಾರ್‌ಗೂ ಯಾವುದೇ ಸಂಬಂಧವಿಲ್ಲ' ಎಂದರು.

> **ಹಾಸನ ಎನ್‌ಡಿಎ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ವಿರುದ್ಧ ಕೇಳಿಬಂದಿರುವ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಮಹಿಳೆಯರ ಪರವಾಗಿ ಕೊನೆಗೂ ಪ್ರತಿಕ್ರಿಯಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಧನ್ಯವಾದಗಳು.**
>
> **ಸಿದ್ದರಾಮಯ್ಯ**, ಮುಖ್ಯಮಂತ್ರಿ



ಪ್ರಜ್ವಲ್ ಪರಾರಿಗೆ ಸಿ.ಎಂ ಕಾರಣ: ಶಾ

ಹುಬ್ಬಳ್ಳಿ: 'ಒಕ್ಕಲಿಗರ ಪ್ರಾಬಲ್ಯವಿರುವ ಪ್ರದೇಶಗಳ ಚುನಾವಣೆ ಮುಗಿಯುವವರೆಗೆ ಸುಮ್ಮನಿದ್ದು, ಯಾವುದೇ ಕ್ರಮ ಕೈಗೊಂಡಿಲ್ಲ. ಅವರಿಗೆ (ಪ್ರಜ್ವಲ್ ರೇವಣ್ಣ) ಓಡಿ ಹೋಗಲು ಅವಕಾಶ ನೀಡಿದ್ದೀರಿ. ಘೋರ ಅಪರಾಧ ಮಾಡಿದವರು ಓಡಿಹೋದರು' ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ಗೃಹ ಸಚಿವ ಅಮಿತ್ ಶಾ ಹರಿಹಾಯ್ದರು.

ಇಲ್ಲಿನ ನೆಹರೂ ಮೈದಾನದಲ್ಲಿ ಬುಧವಾರ ಬಿಜೆಪಿ ವಿಜಯ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಇಲ್ಲಿ ನಿಮ್ಮ ಸರ್ಕಾರ ಇದೆ. ನೀವು ಕ್ರಮ ಕೈಗೊಳ್ಳಬೇಕಾಗಿತ್ತು ಎಂದರು.

'ಕರ್ನಾಟಕದಲ್ಲಿ ಜೆಡಿಎಸ್ ಜೊತೆ ನಮ್ಮ ಮೈತ್ರಿ ಇದೆ. ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಹೊರಬಿದ್ದಿದ್ದೆ ತಡ, ಬಿಜೆಪಿ ಮೇಲೆ ಕಾಂಗ್ರೆಸ್ ಮುಗಿಬಿದ್ದಿದೆ. ಅತ್ಯಾಚಾರಿ ಯಾರೇ ಆಗಿದ್ದರೂ ಬಿಜೆಪಿ ಅವರ ಪರ ಇರಲ್ಲ' ಎಂದರು.

'ಮಹಿಳೆಯರ ಮೇಲೆ ಅತ್ಯಾಚಾರ ಮಾಡುವಂತಹವರ ಜೊತೆ ಬಿಜೆಪಿ ಇರಲ್ಲ. ನಮ್ಮ ಜೊತೆಗಾರರೇ ಕೃತ್ಯದಲ್ಲಿ ಭಾಗಿಯಾಗಿದ್ದರೂ ಅತ್ಯಂತ ಕಠೋರ ಶಿಕ್ಷೆ ಕೊಡಬೇಕು' ಎಂದು ಶಾ ಒತ್ತಾಯಿಸಿದರು.

ಇತ್ತ ಬೆಂಗಳೂರಿನಲ್ಲಿ ಮಾತನಾಡಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಪ್ರಜ್ವಲ್ ವಿದೇಶಕ್ಕೆ ಹೋಗುವವರೆಗೆ ರಾಜ್ಯದ ಪೊಲೀಸರು ಏನು ಮಾಡುತ್ತಿದ್ದರು? ಗುಪ್ತಚರ ದಳ ಸಂಪೂರ್ಣ ವಿಫಲವಾಗಿದೆ ಎಂದು ದೂರಿದರು.

ದಾವಣಗೆರೆಯಲ್ಲಿ ಮಾತನಾಡಿದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ, 'ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಪ್ರಜ್ವಲ್ ರೇವಣ್ಣ ಪರಾರಿಯಾಗುವವರೆಗೂ ರಾಜ್ಯ ಸರ್ಕಾರ ಮಲಗಿಗೊಂಡಿತ್ತಾ? ಈ ಪ್ರಕರಣವನ್ನು ವ್ಯವಸ್ಥಿತವಾಗಿ ಮುಚ್ಚಿಹಾಕುವ ಯತ್ನ ನಡೆದಿದೆ' ಎಂದು ಟೀಕಿಸಿದರು.



ವಾಪಸ್ ಕರೆತರಲು ನೆರವಾಗಿ: ಮೋದಿಗೆ ಮುಖ್ಯಮಂತ್ರಿ ಪತ್ರ

'ಪ್ರಜ್ವಲ್ ಅವರನ್ನು ವಾಪಸ್ ಕರೆತಂದು, ಈ ನೆಲದ ಕಾನೂನಿನ ಅನ್ವಯ ವಿಚಾರಣೆಗೆ ಗುರಿಪಡಿಸುವುದು ದೇಶಕ್ಕೆ ಅತ್ಯಂತ ಪ್ರಮುಖವಾದ ವಿಷಯ. ಆತನ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸಿ, ವಿದೇಶದಿಂದ ಕರೆತರಲು ಸಹಕಾರ ನೀಡಬೇಕು' ಎಂದು ಸಿದ್ದರಾಮಯ್ಯ ಅವರು, ಪ್ರಧಾನಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

'ಪೊಲೀಸ್ ತನಿಖೆ ಹಾಗೂ ಬಂಧನ ಭೀತಿಯಿಂದ ಪ್ರಜ್ವಲ್ ಅವರು, ರಾಜತಾಂತ್ರಿಕ ಪಾಸ್‌ಪೋರ್ಟ್ ಬಳಸಿಕೊಂಡು ವಿದೇಶಕ್ಕೆ ತೆರಳಿದ್ದಾರೆ. ಭಾರತ ಸರ್ಕಾರದ ರಾಜತಾಂತ್ರಿಕ ವ್ಯವಸ್ಥೆ, ಪೊಲೀಸರು ಹಾಗೂ ಇಂಟರ್‌ಪೋಲ್ ಪೊಲೀಸರನ್ನು ಬಳಸಿಕೊಂಡು ಅವರನ್ನು ಮರಳಿ ಕರೆತರಲು ವಿದೇಶಾಂಗ ವ್ಯವಹಾರಗಳು ಮತ್ತು ಗೃಹ ಸಚಿವಾಲಯದ ನೆರವಿನ ಅಗತ್ಯವಿದೆ. ಸೂಕ್ತ ಸಹಕಾರ ನೀಡುವಂತೆ ವಿದೇಶಾಂಗ ಸಚಿವಾಲಯ ಮತ್ತು ಕೇಂದ್ರ ಗೃಹ ಇಲಾಖೆಗೆ ಸೂಚಿಸಬೇಕು' ಎಂದು ಮನವಿ ಮಾಡಿದ್ದಾರೆ.

5ನೇ ಪುಟ ನೋಡಿ

ನೀರು, ಒಳಚರಂಡಿ ಸಂಪರ್ಕಕ್ಕೆ ಅನುಮತಿ ಪಡೆಯದವರಿಗೆ ಆರು ತಿಂಗಳು ಜೈಲು!

ಅಕ್ರಮ ಸಂಪರ್ಕ: ದಕ್ಷಿಣದಲ್ಲೇ ಹೆಚ್ಚು

• ಆರ್. ಮಂಜುನಾಥ್



ಎಲ್ಲೆಲ್ಲಿ ಎಷ್ಟೆಷ್ಟು ಅಕ್ರಮ ಸಂಪರ್ಕ?

ವಲಯ	ಸರ್ವೆ ಮಾಡಿದ ಕಟ್ಟಡಗಳು	ಅನಧಿಕೃತ ಕಟ್ಟಡಗಳು	ನೋಟಿಸ್ ಜಾರಿ
ಪೂರ್ವ	196	126	116
ಪಶ್ಚಿಮ	70	70	45
ಉತ್ತರ	107	103	51
ದಕ್ಷಿಣ	179	162	128

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ಒಳಚರಂಡಿ ಹಾಗೂ ಕುಡಿಯುವ ನೀರಿನ ಸಂಪರ್ಕ ಪಡೆದುಕೊಂಡಿರುವವರಿಗೆ ದಂಡದ ಸಹಿತ ಆರು ತಿಂಗಳ ಜೈಲು ಶಿಕ್ಷೆ ವಿಧಿಸುವ ನೋಟಿಸ್ ಜಾರಿ ಮಾಡಲಾಗುತ್ತಿದೆ. ದಕ್ಷಿಣ ಭಾಗದಲ್ಲಿ ಅತಿ ಹೆಚ್ಚು ನೋಟಿಸ್‌ಗಳನ್ನು ಜಲಮಂಡಳಿ ನೀಡಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿ ನೀರಿನ ಸಂಪರ್ಕವನ್ನು ಅಕ್ರಮವಾಗಿ ಹೊಂದಿದವರು ಅದನ್ನು ಸಕ್ರಮಗೊಳಿಸಿಕೊಳ್ಳಲು ಮೇ 7ರವರೆಗೆ ಅವಕಾಶ ನೀಡಲಾಗಿದೆ. ಜಲಮಂಡಳಿ ನಿಗದಿಪಡಿಸಿರುವ ಶುಲ್ಕ ಪಾವತಿಸಿ, ಸಕ್ರಮ ಗೊಳಿಸಿಕೊಳ್ಳಬೇಕು. ಇಲ್ಲದಿದ್ದರೆ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆ–1964 ಕಲಂ 65 ಮತ್ತು 72 ಅನ್ವಯ ನೀರು ಹಾಗೂ ಒಳಚರಂಡಿ ಸಂಪರ್ಕಕ್ಕೆ ಜಲಮಂಡಳಿಯಿಂದ ಅನುಮತಿ ಪಡೆದುಕೊಂಡಿರಬೇಕು. ಈ ಕಾಯ್ದೆ ಉಲ್ಲಂಘನೆ ಮಾಡಿದ್ದರೆ ಕನಿಷ್ಠ ₹5 ಸಾವಿರ ದಂಡ ವಿಧಿಸಬಹುದು. ಅಲ್ಲದೆ, ಸಂಪರ್ಕ ಕಡಿತಗೊಳಿಸುವ, ಮರು ಸಂಪರ್ಕ ನೀಡುವ ವೆಚ್ಚವನ್ನೂ ಜಲಮಂಡಳಿಗೆ ಪಾವತಿಸಬೇಕು. ಇದಲ್ಲದೆ, ಕಾನೂನು ಕ್ರಮವಾಗಿ ಮೊಕದ್ದಮೆ ದಾಖಲಾದರೆ, ಕಾಯ್ದೆಯಂತೆ 6 ತಿಂಗಳು ಶಿಕ್ಷೆಯಾಗಲಿದೆ.

ಜಲಮಂಡಳಿ ಸಿಬ್ಬಂದಿ ನೋಟಿಸ್ ನೀಡಿದ ನಂತರ ಹಲವು ವಿಭಾಗಗಳಲ್ಲಿ ನಾಗರಿಕರು ಸಂಪರ್ಕವನ್ನು ಸಕ್ರಮಗೊಳಿಸಿಕೊಂಡಿದ್ದಾರೆ. ನೈರುತ್ಯ-2 ವಿಭಾಗ ಹಾಗೂ ದಕ್ಷಿಣ-1 ವಿಭಾಗದಲ್ಲಿ ತಲಾ 22, ಈಶಾನ್ಯದಲ್ಲಿ 11 ಹಾಗೂ ಪೂರ್ವ ವಿಭಾಗದಲ್ಲಿ 10 ಸಂಪರ್ಕಗಳು ಸಕ್ರಮಗೊಂಡಿವೆ. ಒಟ್ಟು 221 ಸಂಪರ್ಕಗಳನ್ನು ಸಕ್ರಮಗೊಳಿಸಲಾಗಿದೆ ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

ಪೂರ್ವ 1 ಮತ್ತು 2 ವಿಭಾಗದಲ್ಲಿ ಕ್ರಮವಾಗಿ 46 ಹಾಗೂ 28 ಜನರಿಗೆ ನೋಟಿಸ್ ನೀಡಲಾಗಿದ್ದರೂ ಯಾವುದೇ ಕ್ರಮ ಜರುಗಿಸಿಲ್ಲ. ಕೇಂದ್ರ ವಿಭಾಗದಲ್ಲೂ 14 ನೋಟಿಸ್ ಮಾತ್ರ ನೀಡಲಾಗಿದೆ. ಉತ್ತರದಲ್ಲಿ 40, ದಕ್ಷಿಣದಲ್ಲಿ 39, ನೈರುತ್ಯ–1ರಲ್ಲಿ 39, ನೈರುತ್ಯ–2ರಲ್ಲಿ 36 ನೋಟಿಸ್ ಜಾರಿ ಮಾಡಲಾಗಿದೆ. ಒಟ್ಟಾರೆ 390 ನೋಟಿಸ್ ಜಾರಿ ಮಾಡಿದ್ದು, ಇವುಗಳಲ್ಲಿ ಈವರೆಗೆ ಯಾವುದೇ ರೀತಿಯ ಕ್ರಮ ಇನ್ನೂ ಕೈಗೊಂಡಿಲ್ಲ.

ಜಲಮಂಡಳಿ ಅಧಿಕಾರಿಗಳು ಏಪ್ರಿಲ್‌ನಲ್ಲಿ ಎರಡು ವಾರ ನಗರದ ವಿವಿಧ ಭಾಗಗಳಲ್ಲಿ ಸಮೀಕ್ಷೆ ನಡೆಸಿದ್ದಾರೆ. ಅದರಂತೆ ಅಕ್ರಮ ಸಂಪರ್ಕಗಳನ್ನು ಗುರುತಿಸಲಾಗಿದೆ. ಆದರೆ ಎಲ್ಲೆಡೆಯೂ ಸಮೀಕ್ಷೆ ನಡೆದಿಲ್ಲ. ಮುಂದಿನ ದಿನಗಳಲ್ಲಿ ಕಾರ್ಯಪಾಲಕ ಎಂಜಿನಿಯರ್ ಮಟ್ಟದಲ್ಲಿ ಎಲ್ಲ ರಸ್ತೆಗಳಲ್ಲೂ ಸಂಪರ್ಕ ಪಡೆದುಕೊಂಡಿರುವ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಲು ಜಲಮಂಡಳಿ ಅಧ್ಯಕ್ಷರು ಸೂಚಿಸಿದ್ದಾರೆ.

1916 ಕರೆ: ನಗರದಲ್ಲಿ ಒಳಚರಂಡಿ ಹಾಗೂ ನೀರಿನ ಸಂಪರ್ಕವನ್ನು ಅಕ್ರಮವಾಗಿ ಪಡೆದುಕೊಂಡಿರುವವರ ಮಾಹಿತಿ ಇದ್ದರೆ, ನಾಗರಿಕರು 1916ಗೆ ಕರೆ ಮಾಡಿ ದೂರು ನೀಡಬಹುದು ಎಂದು ಅಧ್ಯಕ್ಷರು ತಿಳಿಸಿದ್ದಾರೆ.

ಏರಿಯೇಟರ್: ಮೇ 8ರಿಂದ ದಂಡ

ನಲ್ಲಿಗಳಿಗೆ ಏರಿಯೇಟರ್ ಅಳವಡಿಸಿಕೊಳ್ಳುವ ಗಡುವನ್ನು ಜಲಮಂಡಳಿ ಮತ್ತೊಮ್ಮೆ ವಿಸ್ತರಿಸಿದೆ. ಮೇ 7ರವರೆಗೆ ಅವಕಾಶ ನೀಡಲಾಗಿದ್ದು, ಮೇ 8ರಿಂದ ದಂಡ ವಿಧಿಸಲು ನಿರ್ಧರಿಸಲಾಗಿದೆ.

ನೀರು ಉಳಿತಾಯ ಹಾಗೂ ನೀರಿನ ಸದ್ಬಳಕೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಮಾಲ್‌ಗಳಲ್ಲಿ, ವಾಣಿಜ್ಯ ಸಂಕೀರ್ಣ, ಅಪಾರ್ಟ್‌ಮೆಂಟ್, ಸರ್ಕಾರಿ ಕಟ್ಟಡ, ಐಷಾರಾಮಿ ಹೋಟೆಲ್, ರೆಸ್ಟೋರೆಂಟ್ ಹಾಗೂ ಧಾರ್ಮಿಕ ಸ್ಥಳಗಳನ್ನೊಳಗೊಂಡ ಸಾರ್ವಜನಿಕ ಪ್ರದೇಶಗಳಲ್ಲಿ ಸ್ವಚ್ಛತೆಗಾಗಿ ಬಳಸುವ ನಲ್ಲಿಗಳಲ್ಲಿ ಕಡ್ಡಾಯವಾಗಿ ಏರಿಯೇಟರ್/ ಫ್ಲೋ ರಿಸ್ಟ್ರಿಕ್ಟರ್ ಅಳವಡಿಸಿಕೊಳ್ಳಲು ಏಪ್ರಿಲ್ 30ರ ಅವಕಾಶ ನೀಡಲಾಗಿತ್ತು.

ನಗರದಲ್ಲಿ 6 ಲಕ್ಷಕ್ಕೂ ಹೆಚ್ಚು ಏರಿಯೇಟರ್‌ಗಳನ್ನು ಅಳವಡಿಸಿಕೊಳ್ಳಲಾಗಿದೆ. ಮೇ 8ರ ನಂತರ ಜಲಮಂಡಳಿ ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಏರಿಯೇಟರ್ ಅಳವಡಿಸಿಕೊಳ್ಳದವರಿಗೆ ಮೇಲೆ ದಂಡ ವಿಧಿಸಲು ಸೂಚನೆ ನೀಡಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಜಲಮಂಡಳಿ ಕಾರ್ಮಿಕರು, ಸಿಬ್ಬಂದಿಗೆ ಆರೋಗ್ಯ ತಪಾಸಣೆ

ಪ್ರಜಾವಾಣಿ ವಾರ್ತೆ



ಜಲಮಂಡಳಿ ವತಿಯಿಂದ ಆಯೋಜಿಸಿದ್ದ ಆರೋಗ್ಯ ಶಿಬಿರವನ್ನು ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ವೀಕ್ಷಿಸಿದರು

ಬೆಂಗಳೂರು: ಜಲಮಂಡಳಿಯ ಕಾರ್ಮಿಕರು ಹಾಗೂ ಸಿಬ್ಬಂದಿಯ ಆರೋಗ್ಯವನ್ನು ಸುಸ್ಥಿಯಲ್ಲಿಡುವ ದೃಷ್ಟಿಯಿಂದ ಪ್ರತಿವರ್ಷ ಮೇ ತಿಂಗಳಲ್ಲಿ ಆರೋಗ್ಯ ಉಚಿತ ತಪಾಸಣೆ ನಡೆಸಲಾಗುವುದು ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಎಚ್‌ಬಿಆರ್ ಬಡಾವಣೆಯಲ್ಲಿರುವ ಜಲಮಂಡಳಿ ಕಚೇರಿಯಲ್ಲಿ ಕಾರ್ಮಿಕ ದಿನಾಚರಣೆಯ ಅಂಗವಾಗಿ ಆಲ್ಟಿಯಸ್ ಮತ್ತು ಲಕ್ಷ್ಮಿ ಗ್ರೂಪ್ ಆಸ್ಪತ್ರೆ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಆರೋಗ್ಯ ಉಚಿತ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಗರಕ್ಕೆ ನಿರಂತರವಾಗಿ ನೀರು ಸರಬರಾಜು ಮಾಡಲು ಹಾಗೂ ನಗರದ ಸ್ವಾಸ್ಥ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಜಲಮಂಡಳಿಯ ವಾಟರ್‌ಮ್ಯಾನ್, ಸ್ಯಾನಿಟರಿ ವರ್ಕರ್, ಜೆಟ್ಟಿ ಡ್ರೈವರ್ ಸೇರಿದಂತೆ ಎಲ್ಲಾ ಸಿಬ್ಬಂದಿಗೂ ಮಂಡಳಿ ವತಿಯಿಂದ ಉಚಿತವಾಗಿ ಆರೋಗ್ಯ ತಪಾಸಣೆ ನಡೆಸಲಾಗುವುದು. ಇದಕ್ಕಾಗಿ ಹಲವು ಪ್ರಮುಖ ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದರು.

ಜಲಮಂಡಳಿಯ ಕಾರ್ಮಿಕರು ಹಾಗೂ ಸಿಬ್ಬಂದಿಯೂ ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿಯನ್ನು ಹೊಂದಬೇಕು. ದುಶ್ಚಟಗಳಿಂದ ದೂರವಿದ್ದು, ಉತ್ತಮ ಆರೋಗ್ಯದ ಕಡೆಗೆ ಗಮನ ನೀಡಬೇಕು ಎಂದು ಕರೆ ನೀಡಿದರು.

ನಿರ್ವಹಣಾ ವಿಭಾಗದ ಮುಖ್ಯ ಎಂಜಿನಿಯರ್ ಕುಮಾರ್ ನಾಯ್ಕ್, ಎಸ್.ಇ. ದಲಾಯತ್, ಕಾರ್ಯನಿರ್ವಾಹಕ ಎಂಜಿನಿಯರ್ ಚನ್ನಬಸವರಾಜು ಇದ್ದರು. 300ಕ್ಕೂ ಹೆಚ್ಚು ಸಿಬ್ಬಂದಿ ಹಾಗೂ ಅವರ ಕುಟುಂಬದ ಸದಸ್ಯರು ಆರೋಗ್ಯ ಶಿಬಿರದಲ್ಲಿ ಭಾಗವಹಿಸಿದ್ದರು.

ಕಾರ್ಮಿಕರ ದಿನಾಚರಣೆ: ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಆಗ್ರಹ

‘ಕಾರ್ಮಿಕ ವಿರೋಧಿ ನೀತಿ ಹಿಂಪಡೆಯಿರಿ’

ಪ್ರಜಾವಾಣಿ ವಾರ್ತೆ



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ‘ಮೇ ದಿನ’ದ ಅಂಗವಾಗಿ ಬುಧವಾರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಹಮ್ಮಿಕೊಂಡಿದ್ದ ಸಾರ್ವಜನಿಕ ಸಭೆಯಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳ ಸದಸ್ಯರು ಘೋಷಣೆಗಳನ್ನು ಕೂಗಿದರು –ಪ್ರಜಾವಾಣಿ ಚಿತ್ರ/ ರಂಜು ಪಿ.

ಬೆಂಗಳೂರು: ಹಲವರ ತ್ಯಾಗ, ಬಲಿದಾನ ಮತ್ತು ಹೋರಾಟಗಳಿಂದ ಚಾರಿತ್ರಿಕವಾಗಿ ‘ಮೇ ದಿನ’ದಂದು ಗಳಿಸಿದ್ದ ಎಂಟು ಗಂಟೆಗಳ ಕೆಲಸದ ಅವಧಿಯನ್ನು 12 ಗಂಟೆಗಳಿಗೆ ಹೆಚ್ಚಿಸಿರುವ ಸರ್ಕಾರದ ನಡೆಯನ್ನು ವಿರೋಧಿಸುವ ಮೂಲಕ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆ.ಸಿ.ಟಿ.ಯು) ಬುಧವಾರ ಕಾರ್ಮಿಕ ದಿನ ಆಚರಿಸಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ‘ಮೇ ದಿನಾಚರಣೆ’ಯ ಸಾರ್ವಜನಿಕ ಸಭೆಯಲ್ಲಿ ಸಾವಿರಾರು ಕಾರ್ಮಿಕರು ಕೆಂಪು ಬಟ್ಟೆ ಧರಿಸಿ ಪಾಲ್ಗೊಂಡಿದ್ದರು.

‘ಕಾರ್ಮಿಕ ಸಮುದಾಯದ ಮೇಲೆ ಹಿಂದೆಂದಿಗಿಂತಲೂ ಈಗ ಹೆಚ್ಚು ದಮನ ಹಾಗೂ ದಬ್ಬಾಳಿಕೆಗಳು ನಡೆಯುತ್ತಿವೆ. ಜಾಗತಿಕವಾಗಿ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ಯುದ್ಧ ಮತ್ತು ಅರಾಜಕತೆಯನ್ನು ಸೃಷ್ಟಿಸಿವೆ. ಇದಕ್ಕೆ ಇಸ್ರೇಲ್–ಪ್ಯಾಲೆಸ್ಟೀನ್, ರಷ್ಯಾ-ಯುಕ್ರೇನ್ ಯುದ್ಧಗಳೇ ಸಾಕ್ಷಿ. ಅದೇ ರೀತಿ ದೇಶದಲ್ಲೂ ಬಿಜೆಪಿ ನೇತೃತ್ವದ ಬಲಪಂಥೀಯ ಸರ್ಕಾರ 10 ವರ್ಷಗಳ ದುರಾಡಳಿತದಲ್ಲಿ ಕಾರ್ಮಿಕ ವರ್ಗದ ಬದುಕನ್ನು ಛಿದ್ರಗೊಳಿಸಿದೆ. ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೊಳಿಸಿದೆ’ ಎಂದು ಕಾರ್ಮಿಕ ಮುಖಂಡರು ಆರೋಪಿಸಿದರು.

‘1990ರಲ್ಲಿ ದೇಶದಲ್ಲಿ ಅನುಷ್ಠಾನಗೊಂಡ ಹೊಸ ಆರ್ಥಿಕ ನೀತಿಯ ಪರಿಣಾಮ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣ ಆದವು. ಈ ಬೆಳವಣಿಗೆ ಕಾರ್ಮಿಕ ಸಮುದಾಯವನ್ನು ಶೋಷಣೆಗೆ ತಳ್ಳಿತು. ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ವಸತಿ ಎಲ್ಲವೂ ಕೈಗೆಟುಕದಂತೆ ಆಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ತೀರ್ಮಾನಗಳು ಕಾರ್ಪೊರೇಟ್ ಕಂಪನಿಗಳ ಪರವಾಗಿವೆ. ಅವರ ಆಸ್ತಿ ದುಪ್ಪಟ್ಟಾಗಿದ್ದು, ಜನಸಾಮಾನ್ಯರ ಆದಾಯ ನೆಲಕಚ್ಚಿದೆ. ಸುಳ್ಳನ್ನು ಬಂಡವಾಳ ಮಾಡಿಕೊಂಡು ಕೇಂದ್ರ ಸರ್ಕಾರ ಜನರನ್ನು ದಾರಿ ತಪ್ಪಿಸಿ ಭಾವನಾತ್ಮಕ ವಿಷಯಗಳನ್ನು ಮುನ್ನಡೆಗೆ ತಂದು ಕಾರ್ಮಿಕರ ಏಕತೆಗೆ ಧಕ್ಕೆ ತರುತ್ತಿದೆ’ ಎಂದರು.

‘ನಾಲ್ಕು ಕಾರ್ಮಿಕ ಸಂಹಿತೆ (ಕೋಡ್)ಗಳನ್ನು ಜಾರಿಗೊಳಿಸಿ ಮುಷ್ಕರದ ಹಕ್ಕು ಕಸಿದುಕೊಳ್ಳುತ್ತಿದೆ. ನಿಗದಿತ ಅವಧಿಯ ಉದ್ಯೋಗ, ಗುತ್ತಿಗೆ ಪದ್ಧತಿಯಲ್ಲಿ ಕಾರ್ಮಿಕರನ್ನು ನೇಮಕಾತಿ ಮಾಡಿಕೊಂಡು ಬೇಕಾದಾಗ ಬಳಸಿ ಬಿಸಾಡಲು ಈ ಕೋಡ್‌ಗಳು ಅನುಮತಿ ನೀಡುತ್ತವೆ’ ಎಂದು ಕಾರ್ಮಿಕ ಸಂಘಟನೆಗಳ ಮುಖಂಡರು ಆರೋಪಿಸಿದರು.

‘ಮುಂಬರುವ ದಿನಗಳಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಹೋರಾಟ ಮುಂದುವರೆಯಬೇಕಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಸಂಘಟಿತ ಹೋರಾಟವನ್ನು ಮುಂದುವರಿಸುವ ಪಣವನ್ನು ನಾವಿಂದು ತೆಗೆದುಕೊಳ್ಳಬೇಕಿದೆ. ಇದು ಮೇ ದಿನದ ಘೋಷಣೆಯಾಗಲಿ’ ಎಂದು ತಿಳಿಸಿದರು.

ಕಾನೂನು ತಜ್ಞ ಬಾಬು ಮ್ಯಾಥ್ಯೂ, ಜೆ.ಸಿ.ಟಿ.ಯುನ ರಾಜ್ಯ ಸಂಚಾಲಕ ಕೆ.ವಿ. ಭಟ್, ಕಾರ್ಮಿಕ ಸಂಘಟನೆಗಳ ಮುಖಂಡರಾದ ಮೈಕಲ್ ಫರ್ನಾಂಡಿಸ್, ಶಾಮಣ್ಣ ರೆಡ್ಡಿ, ಕೆ.ಎನ್. ಉಮೇಶ್, ಎಂ.ಜೆಡ್. ಅಲಿ, ರಮಾ ಟಿ.ಸಿ., ಜಿ.ಆರ್. ಶಿವಶಂಕರ್ ಭಾಗವಹಿಸಿದ್ದರು.

ನಗರದಲ್ಲಿ ಇಂದು

ರಾಮನವಮಿ ಸಂಗೀತೋತ್ಸವ: ಗಾಯನ: ನಾಗಮಣಿ ಶ್ರೀನಾಥ್, ಪಿಟೀಲು: ಸಿಂಧು ಸುಚೇತನ್, ಮೃದಂಗ: ಅನಿರುದ್ಧ ಭಟ್, ಖಂಜಿರ: ಭಾರ್ಗವ ಹಾಲಂಬಿ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30



ನಾಗಮಣಿ ಶ್ರೀನಾಥ್

ರಾಮನವಮಿ ಸಂಗೀತೋತ್ಸವ–2024: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಮಲ್ಲಾಡಿ ಸಹೋದರರು, ಮೈಸೂರು ಕಾರ್ತಿಕ್, ಅರ್ಜುನ್ ಕುಮಾರ್, ಗಿರಿಧರ್ ಉಡುಪ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 6.30ರಿಂದ

ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ ಅಂಗವಾಗಿ ‘ಕಾರ್ಮಿಕರ ಹಿತರಕ್ಷಣೆಯಲ್ಲಿ ಬಾಬಾ ಸಾಹೇಬರ ಪಾತ್ರ’ ಕುರಿತು ಚಿಂತನಾಗೋಷ್ಠಿ, ಕವಿಗೋಷ್ಠಿ: ಉದ್ಘಾಟನೆ: ಅಶೋಕ್ ಎನ್. ಛಲವಾದಿ, ವಿಚಾರ ಮಂಡನೆ: ಕೆ. ಪ್ರಕಾಶ್, ಅತಿಥಿ: ಟಿ.ಎಚ್. ಯಶೋದಾ, ಅಧ್ಯಕ್ಷತೆ: ಗೌಡಗೆರೆ ಮಾಯುಶ್ರೀ, ಉಪಸ್ಥಿತಿ: ಪ್ರಕಾಶ್, ದತ್ತಾತ್ರೇಯ ನಾರಾಯಣಕರ್, ಆಶಯ ನುಡಿ: ಕೃಷ್ಣಮೂರ್ತಿ ಎಂ.ಎಸ್., ಆಯೋಜನೆ: ದಲಿತ ಸಾಹಿತ್ಯ ಪರಿಷತ್ತು, ಸ್ಥಳ: ಗಾಂಧಿ ಸಾಹಿತ್ಯ ಸಂಘ, 8ನೇ ಅಡ್ಡರಸ್ತೆ, ಮಲ್ಲೇಶ್ವರಂ ಕ್ಲಬ್ ಹಿಂಭಾಗ, ಮಲ್ಲೇಶ್ವರ, ಸಂಜೆ 4

ವಿಶ್ವ ನೃತ್ಯ ದಿನಾಚರಣೆ, ಮಾಯಾರಾವ್ ಸ್ಮರಣಾರ್ಥ ಕಥಕ್ ಉತ್ಸವ: ಅತಿಥಿಗಳು: ಧರಣಿದೇವಿ ಮಾಲಗತ್ತಿ, ಶ್ರೀನಿವಾಸ್ ಜಿ. ಕಪ್ಪಣ್ಣ, ನೃತ್ಯ: ಎ.ವಿ. ಸತ್ಯನಾರಾಯಣ, ನಂದಿನಿ ಕೆ. ಮಹ್ತಾ, ಶೋಭಾ ಧನಂಜಯ್, ಮೀನಾಕ್ಷಿ ಕಾಮತ್, ಚೈತ್ರಾ ಅರವಿಂದ, ಆಯೋಜನೆ: ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

‘ದುರ್ಗದ ತಪ್ಪಲಲ್ಲಿ ಬೆಳೆದ ಯುವ-ಕಲೆಯನ್ನು ಅಪ್ಪಿಕೊಂಡಿದ್ದು ಹೇಗೆ?’ ಕುರಿತು ಉಪನ್ಯಾಸ: ಯು. ಮೃತ್ಯುಂಜಯ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಇಂದು ಜಲಮಂಡಳಿ ಫೋನ್ ಇನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ವಿವಿಧ ವಿಚಾರಗಳ ಬಗ್ಗೆ ಸಾರ್ವಜನಿಕರು ಮಾಹಿತಿ ಪಡೆಯಲು, ಗೊಂದಲ ಪರಿಹರಿಸಿಕೊಳ್ಳಲು ಬೆಂಗಳೂರು ಒಳಚರಂಡಿ ಮಂಡಳಿ ತನ್ನ ಉಪ ವಿಭಾಗಗಳಲ್ಲಿ ಮೇ 2ರಂದು ಬೆಳಿಗ್ಗೆ 9ರಿಂದ 11ರವರೆಗೆ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ.

ಆಯಾ ವಿಭಾಗದ ಸಂಖ್ಯೆಗಳಿಗೆ, 1916ಗೆ ಕರೆ ಮಾಡಬಹುದು ಅಥವಾ 8762228888ಗೆ ವಾಟ್ಸ್ ಆ್ಯಪ್ ಸಂದೇಶ ಕಳುಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಲ್ಲು ಕ್ವಾರಿಯಲ್ಲಿ ಸ್ಫೋಟ– 3 ಸಾವು

ಚೆನ್ನೈ: ತಮಿಳುನಾಡಿನ ಕರಿಯಪಟ್ಟಿಯಲ್ಲಿಯ ಕಲ್ಲುಕ್ವಾರಿಯೊಂದರ ಉಗ್ರಾಣದಲ್ಲಿ ಬುಧವಾರ ಬೆಳಿಗ್ಗೆ ಸ್ಫೋಟ ಸಂಭವಿಸಿ ಮೂವರು ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ.

ಈ ಉಗ್ರಾಣದಲ್ಲಿ ಕಲ್ಲುಗಳನ್ನು ಒಡೆಯಲು ಬಳಸುವ ಸ್ಫೋಟಕಗಳನ್ನು ಇರಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಯಲ್ಲಿ ಎರಡು ವಾಹನಗಳು ಸಂಪೂರ್ಣವಾಗಿ ಹಾನಿಗೀಡಾಗಿವೆ.

ನಿಧನ ವಾರ್ತೆ

ಕೆ.ಸಿ.ನಾಗೇಂದ್ರ



ಬೆಂಗಳೂರು: ನಗರದ ಅಬ್ಬಿಗೆರೆ ನಿವಾಸಿ ಕೆ.ಸಿ. ನಾಗೇಂದ್ರ (61) ಮಂಗಳವಾರ ರಾತ್ರಿ ನಿಧನರಾದರು.

ಮೃತರಿಗೆ ಪತ್ನಿ, ಪುತ್ರಿ ಇದ್ದಾರೆ. ಬಿಬಿಎಂಪಿ ನಿವೃತ್ತ ಉದ್ಯೋಗಿ ನಾಗೇಂದ್ರ ಅವರು ಕೋಲಾರ ಜಿಲ್ಲೆಯ ಜೋಡಿ ಕೃಷ್ಣಾಪುರದವರು.

ಮೃತರ ಅಂತ್ಯಕ್ರಿಯೆ ಬುಧವಾರ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

'ಎವರೆಸ್ಟ್'ನಲ್ಲೂ ಸ್ವಚ್ಛತಾ ಅಭಿಯಾನ!

ಚನ್ನಬಸಪ್ಪ ರೊಟ್ಟಿ

ಮೌಂಟ್ ಎವರೆಸ್ಟ್ ಪರ್ವತ ಪ್ರದೇಶದಲ್ಲಿ ಎವರೆಸ್ಟ್ ಸ್ವಚ್ಛತಾ ಅಭಿಯಾನ (Everest Cleaning Campaign) – 2024ಅನ್ನು ನೇಪಾಳ ಸೇನೆ ಆರಂಭಿಸಿದೆ. ಈ ಸ್ವಚ್ಛತಾ ಅಭಿಯಾನದಡಿ ಎವರೆಸ್ಟ್ ಪರ್ವತದಲ್ಲಿ ಸಂಗ್ರಹಗೊಂಡಿರುವ ಮಾನವ ನಿರ್ಮಿತ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಿ ಮಾಲಿನ್ಯ ಮಟ್ಟವನ್ನು ನಿಯಂತ್ರಿಸುವ ಹಾಗೂ ಹವಾಮಾನ ಬದಲಾವಣೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವ ಗುರಿಯನ್ನು ಹೊಂದಲಾಗಿದೆ. ಈ ಬಾರಿಯ ಅಭಿಯಾನ 'ಕಸ ನಿರ್ಮೂಲನೆ ಮಾಡಿ; ಹಿಮಾಲಯ ಉಳಿಸಿ' ಎಂಬ ಧ್ಯೇಯವಾಕ್ಯದಡಿ ನಡೆಯುತ್ತಿದೆ.

ಕಠ್ಮಂಡುವಿನಲ್ಲಿ ನೇಪಾಳ ಸೇನಾ ಮುಖ್ಯಸ್ಥ ಜನರಲ್ ಪ್ರಭುರಾಮ್ ಶರ್ಮಾ ಈಚೆಗೆ ಈ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿದ್ದು, ಸಾಗರಮಾತಾ (ಹಿಮಾಲಯ) ಪ್ರದೇಶದಲ್ಲಿ ಮಾನವ ನಿರ್ಮಿತ ತ್ಯಾಜ್ಯದ ಪ್ರಮಾಣ ಹೆಚ್ಚುತ್ತಿದೆ. ಹೀಗಾಗಿ, ಪರಿಸರ ಕಾಳಜಿಯ ಅಗತ್ಯ ಹೆಚ್ಚಾಗಿದೆ. ಹಿಮಾಲಯ ಪರ್ವತದ ಪರಿಸರ ಸಂರಕ್ಷಣೆ ಸಾರ್ವಜನಿಕ ಕಾಳಜಿಯ ವಿಷಯ ಆಗಿರುವುದರಿಂದ ಈ ಅಭಿಯಾನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಎಲ್ಲ ಪಾಲುದಾರರು ಸಹಕರಿಸಬೇಕು ಮತ್ತು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು ಎಂದು ಕೋರಿದ್ದಾರೆ.

ಮೇಜರ್ ಆದಿತ್ಯ ಕರ್ಕಿ ನೇತೃತ್ವದ 12 ಮಂದಿ ನೇಪಾಳ ಯೋಧರ ತಂಡ ಏಪ್ರಿಲ್ 14ರಿಂದ ಎವರೆಸ್ಟ್ ಬೇಸ್ ಕ್ಯಾಂಪ್‌ನಿಂದ ಈ ಅಭಿಯಾನ ಆರಂಭಿಸಿದೆ. 18 ಶೆರ್ಪಾಗಳ ತಂಡ ಕೂಡ ಈ ಸ್ವಚ್ಛತಾ ಅಭಿಯಾನದಡಿ ನೇಪಾಳ ಸೈನಿಕರೊಂದಿಗೆ ಸಹಕರಿಸಲಿದೆ. ಈ ಅಭಿಯಾನಕ್ಕೆ ನೇಪಾಳದ ಅರಣ್ಯ ಮತ್ತು ಪರಿಸರ ಸಚಿವಾಲಯ, ಪ್ರವಾಸೋದ್ಯಮ ಇಲಾಖೆ ಮತ್ತು ನೇಪಾಳ ಪರ್ವತಾರೋಹಿಗಳ ಸಂಘಗಳು ನೆರವು ನೀಡುತ್ತಿವೆ. ಈ ಸ್ವಚ್ಛತಾ ಅಭಿಯಾನ 50 ದಿನಗಳವರೆಗೆ ನಡೆಯಲಿದೆ.

ಈ ತಂಡ ಮೌಂಟ್ ಎವರೆಸ್ಟ್, ಮೌಂಟ್ ಲೊಟ್ಸೆ ಮತ್ತು ಮೌಂಟ್ ನಪ್ಟ್ಸೆಗಳಿಂದ ಕಸವನ್ನು ಸಂಗ್ರಹಿಸಿ ತರಲಿದೆ. ಕಸವನ್ನು ಪ್ರತ್ಯೇಕವಾಗಿ ವಿಂಗಡಿಸಿ ಜೈವಿಕ ತ್ಯಾಜ್ಯವನ್ನು ಬೇಸ್ ಕ್ಯಾಂಪಿನಿಂದ 'ನಾಮ್ಚೆ ಬಜಾರ್' ಪಟ್ಟಣಕ್ಕೆ ತಂದು ಅಲ್ಲಿನ ಸರ್ಕಾರೇತರ ಸೇವಾ ಸಂಸ್ಥೆ 'ಸಾಗರಮಾತಾ ಮಾಲಿನ್ಯ ನಿಯಂತ್ರಣ ಸಮಿತಿ'ಗೆ (SPCC: Sagarmatha Pollution Control Committee') ಹಸ್ತಾಂತರಿಸಲಿದೆ. ಸಾಗರಮಾತಾ ಮಾಲಿನ್ಯ ನಿಯಂತ್ರಣ ಸಮಿತಿ ಆ ಜೈವಿಕ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಘಟಿಸಿ, ಯಾವುದೇ ಅಪಾಯವಿಲ್ಲದಂತೆ ವಿಲೇವಾರಿ ಮಾಡಲಿದೆ. ಜೈವಿಕವಲ್ಲದ ತ್ಯಾಜ್ಯ ಮತ್ತು ಮೃತ ದೇಹಗಳನ್ನು ಹೆಲಿಕಾಪ್ಟರ್ ಮೂಲಕ ಕಠ್ಮಂಡುವಿಗೆ ತರಲಾಗುತ್ತದೆ. ಹೀಗೆ ತಂದ ಘನ ಅವಶೇಷಗಳನ್ನು ಕಠ್ಮಂಡು ಬಳಿ ಇರುವ 'ಕ್ನಿನ್ವಾ ಬ್ಲೂ ವೆಸ್ಟ್' ಸಂಸ್ಥೆಯ ವಿಶೇಷ ಕಸ ವಿಲೇವಾರಿ ಘಟಕದಲ್ಲಿ ಸಂಗ್ರಹಿಸಿ ಪ್ಲಾಸ್ಟಿಕ್, ಗಾಜು, ಕಬ್ಬಿಣ, ಅಲ್ಯೂಮಿನಿಯಂ ಮತ್ತು ಬಟ್ಟೆಯಂಥ ವಿವಿಧ ವರ್ಗಗಳಾಗಿ ವಿಂಗಡಿಸಲಾಗುತ್ತದೆ. ಅವುಗಳಲ್ಲಿ ಮರುಬಳಕೆಗೆ ಸಾಧ್ಯವಿರುವ ವಸ್ತುಗಳನ್ನು ಪರಿಷ್ಕರಣೆಗೆ ಕಳುಹಿಸಲಾಗುತ್ತದೆ. ಮರುಬಳಕೆಗೆ ಅಸಾಧ್ಯವಾದ ವಸ್ತುಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತದೆ ಎಂದು ನೇಪಾಳ ಸೇನೆಯ ವಕ್ತಾರ ಬ್ರಿಗೇಡಿಯರ್ ಕೃಷ್ಣ ಪ್ರಸಾದ್ ಭಂಡಾರಿ ಮಾಹಿತಿ ನೀಡಿದ್ದಾರೆ.

ನೇಪಾಳ ಸೇನೆ 2019ರಿಂದ ಎವರೆಸ್ಟ್ ಪ್ರದೇಶದಲ್ಲಿ ಸ್ವಚ್ಛತಾ ಅಭಿಯಾನ ನಡೆಸುತ್ತಿದೆ. ನೇಪಾಳ ಸೇನೆಯ ನೇತೃತ್ವದಲ್ಲಿ ನಡೆಯುತ್ತಿರುವ ನಾಲ್ಕನೇ ಸ್ವಚ್ಛತಾ ಅಭಿಯಾನ ಇದಾಗಿದೆ. 2019ರಲ್ಲಿ ನಡೆಸಿದ ಮೊದಲ ಅಭಿಯಾನದಲ್ಲಿ 10 ಟನ್ ಕಸ ಹಾಗೂ 4 ಶವಗಳನ್ನು ಸಂಗ್ರಹಿಸಲಾಗಿತ್ತು. ಈ ಅಭಿಯಾನದಡಿ 2.3 ಕೋಟಿ ನೇಪಾಳ ರೂಪಾಯಿ ವ್ಯಯಿಸಲಾಗಿತ್ತು. 2022ರಲ್ಲಿ ನಡೆಸಿದ ಎರಡನೇ ಅಭಿಯಾನದಲ್ಲಿ 8 ಟನ್ ಕಸ ಹಾಗೂ 2 ಶವಗಳನ್ನು ಸಂಗ್ರಹಿಸಲಾಗಿತ್ತು. 2023ರಲ್ಲಿ ನಡೆಸಿದ ಮೂರನೇ ಅಭಿಯಾನದಲ್ಲಿ 7 ಟನ್ ಕಸ ಹಾಗೂ 3 ಶವಗಳನ್ನು ಸಂಗ್ರಹಿಸಿ ವಿಲೇವಾರಿ ಮಾಡಲಾಗಿತ್ತು. ಈ ಬಾರಿ 2024ರ 'ಮೌಂಟೇನ್ ಕ್ಲೀನಿಂಗ್ ಕ್ಯಾಂಪೇನ್' ಅಭಿಯಾನದಡಿ ಮೌಂಟ್ ಎವರೆಸ್ಟ್ ಪರ್ವತ ಪ್ರದೇಶದಿಂದ ಪ್ಲಾಸ್ಟಿಕ್ ತ್ಯಾಜ್ಯ, ಬಳಸಿ ಬಿಸಾಡಿದ ವಸ್ತುಗಳು ಸೇರಿದಂತೆ ಸುಮಾರು 10 ಟನ್ ಕಸ ಮತ್ತು ಐದು ಮೃತದೇಹಗಳನ್ನು ಸಂಗ್ರಹಿಸುವ ಗುರಿ ಹೊಂದಲಾಗಿದೆ.



ಮೌಂಟ್ ಎವರೆಸ್ಟ್ ಪರ್ವತ ಪ್ರದೇಶದಲ್ಲಿ ಕ್ಯಾಂಪ್‌ಗಳು

ಕಸ ಸಂಗ್ರಹಿಸಿ ತಂದರೆ ಬಹುಮಾನ!

2018ರಲ್ಲಿ ಎವರೆಸ್ಟ್ ಏರುವ ಪರ್ವತಾರೋಹಿಗಳು ಕನಿಷ್ಠ 8 ಕೆ.ಜಿ ಕಸವನ್ನು ಹೆಕ್ಕಿ ತಂದರೆ 4000 ಡಾಲರ್ ಹಣ ಮರುಪಾವತಿ ಮಾಡುವುದಾಗಿ ನೇಪಾಳ ಸರ್ಕಾರ ಘೋಷಿಸಿತ್ತು. ನಂತರ ಎವರೆಸ್ಟ್ ಪರ್ವತ ಪ್ರದೇಶದಿಂದ ಕನಿಷ್ಠ 1 ಕೆ.ಜಿ ಕಸವನ್ನು ಹೆಕ್ಕಿ ತಂದವರಿಗೂ ಕೂಡ ಸೂಕ್ತ ಬಹುಮಾನ ನೀಡಲಾಗುವುದು ಎಂದು ನೇಪಾಳ ಸರ್ಕಾರ ತಿಳಿಸಿದೆ. ಒಟ್ಟಿನಲ್ಲಿ ಈಗಿರುವ ಪರಿಸ್ಥಿತಿಯಲ್ಲಿ ಎವರೆಸ್ಟ್ ಸ್ವಚ್ಛತೆ ಒಂದೋ ಎರಡೋ ವರ್ಷಗಳಲ್ಲಂತೂ ಮುಗಿಯುವುದು ಅಸಾಧ್ಯ. ಇದೊಂದು ನಿರಂತರ ಅಭಿಯಾನವಾಗಿ ಮುಂದುವರಿದರೆ ಮಾತ್ರ ಮುಂದೊಂದು ದಿನ 'ಸ್ವಚ್ಛ ಎವರೆಸ್ಟ್' ಅನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಗಲಿದೆ ಎಂಬುದು ನೇಪಾಳ ಸರ್ಕಾರದ ಅಭಿಮತ.

ಈಚೆಗೆ ಜಾಗತಿಕ ತಾಪಮಾನ ಹೆಚ್ಚಳದಿಂದಾಗಿ ಹಿಮ ಕರಗುತ್ತಿದ್ದು, ಹಿಮದಡಿ ವರ್ಷಗಳಿಂದ ಸಿಲುಕಿದ್ದ ತ್ಯಾಜ್ಯ ಹಾಗೂ ಮಾನವ ಶವದ ಅವಶೇಷಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿವೆ. ಆದರೆ, ಹಿಮಾಲಯ ಪರ್ವತ ಪ್ರದೇಶದಲ್ಲಿನ ಕಡಿಮೆ ತಾಪಮಾನ, ಎತ್ತರ, ಮತ್ತಿತರ ಪ್ರಾಕೃತಿಕ ಅಡೆತಡೆಗಳಿಂದ ಅವುಗಳನ್ನು ತೆರವುಗೊಳಿಸುವುದು ಅಥವಾ ಸಂಗ್ರಹಿಸುವುದು ಸವಾಲಿನ ಕೆಲಸವಾಗಿದೆ.

ಭಾರತ, ಟಿಬೆಟ್, ಚೀನಾದಿಂದಲೂ ಸ್ವಚ್ಛತಾ ಅಭಿಯಾನ

2015ರ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಭಾರತೀಯ ಸೇನೆಯ 34 ಯೋಧರ ತಂಡ ಮೇಜರ್ ರಣವೀರ್ ಸಿಂಗ್ ಜುಮ್ವಾವಲ್ ನೇತೃತ್ವದಲ್ಲಿ 'ಸ್ವಚ್ಛ ಭಾರತ ಅಭಿಯಾನ'ದ ಭಾಗವಾಗಿ ಎವರೆಸ್ಟ್‌ನಿಂದ 4 ಟನ್ ಕಸ ಸಂಗ್ರಹಿಸಿ ತಂದಿತ್ತು. ಭಾರತದ ಲೆಫ್ಟಿನೆಂಟ್ ಕಮಾಂಡರ್ ಎಂ.ಎಸ್.ಕೋಹ್ಲಿ ನೇತೃತ್ವದ ತಂಡ ಎವರೆಸ್ಟ್ ಏರಿ 50 ವರ್ಷಗಳನ್ನು ಪೂರ್ಣಗೊಳಿಸಿದ ಸಾಧನೆಯ ಸ್ಮರಣಾರ್ಥ ಈ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಎವರೆಸ್ಟ್ ಶಿಖರದಲ್ಲಿ ಬಳಸಿ ಬಿಸಾಕಿರುವ ಬಾಟಲಿ, ಪ್ಲಾಸ್ಟಿಕ್, ಟೆಂಟ್, ಸ್ಲೀಪಿಂಗ್ ಬ್ಯಾಗ್, ಆಕ್ಸಿಜನ್ ಸಿಲಿಂಡರ್‌ಗಳನ್ನು ಹಾಗೂ ಎರಡು ಶವಗಳನ್ನು ಈ ತಂಡ ಕೆಳಕ್ಕೆ ತಂದಿತ್ತು. 2017ರ ಮೇನಲ್ಲಿ ಟಿಬೆಟ್ ಒಂಬತ್ತು ದಿನಗಳ ಎವರೆಸ್ಟ್ ಸ್ವಚ್ಛತಾ ಅಭಿಯಾನವನ್ನು ಕೈಗೊಂಡು ಸುಮಾರು 5 ಟನ್ ಕಸ ಸಂಗ್ರಹಿಸಿತ್ತು. 2018ರಲ್ಲಿ ಚೀನಾ ಮತ್ತು ಇತರ ದೇಶಗಳ 60 ಸ್ವಯಂಸೇವಕರು ಸೇರಿಕೊಂಡು ಐದು ದಿನಗಳಲ್ಲಿ ನಾಲ್ಕು ಟನ್ ಕಸವನ್ನು ಎವರೆಸ್ಟ್‌ನಿಂದ ಸಂಗ್ರಹಿಸಿದ್ದರು. ❖

ಚಾರಣಕ್ಕೆ ಹೆಸರಾಗಿರುವುದೇ ಎವರೆಸ್ಟ್‌ಗೆ ಮುಳುವಾಗುತ್ತಿದೆ!

ವಿಶ್ವದ ಅತಿ ಎತ್ತರದ ಪರ್ವತ ಮೌಂಟ್ ಎವರೆಸ್ಟ್ ಸಮುದ್ರ ಮಟ್ಟದಿಂದ 8,848 ಮೀಟರ್ (29,029 ಅಡಿ) ಎತ್ತರದಲ್ಲಿದೆ. ಹೀಗಾಗಿ, ಎವರೆಸ್ಟ್ ಪ್ರತಿ ವರ್ಷ ಸಾವಿರಾರು ಪರ್ವತಾರೋಹಿಗಳು ಮತ್ತು ಚಾರಣಿಗರನ್ನು ಆಕರ್ಷಿಸುತ್ತದೆ. ಪ್ರತಿ ವರ್ಷ ಸುಮಾರು 80 ಸಾವಿರಕ್ಕೂ ಹೆಚ್ಚು ಪರ್ವತಾರೋಹಿಗಳು ಮೌಂಟ್ ಎವರೆಸ್ಟ್ ಏರಲು ಪ್ರಯತ್ನಿಸುತ್ತಾರೆ. ಬೆಟ್ಟ ಇಳಿಯುವ ಸಂದರ್ಭದಲ್ಲಿ ಉಸಿರಾಡಲು ಕಷ್ಟಪಡುವ ಪರ್ವತಾರೋಹಿಗಳಿಗೆ ವಾಕರಿಕೆ ಸಮಸ್ಯೆಯೂ ಕಾಡುತ್ತದೆ. ಹೀಗಾಗಿ, ಅವರು ತಮ್ಮ ಟೆಂಟುಗಳನ್ನು ಹೊತ್ತುತರುವ ಬದಲು ಅಲ್ಲಿಯೇ ಬಿಟ್ಟುಬಿಡುತ್ತಾರೆ. ಯಾವ ತಂಡದ ಟೆಂಟು ಎಂಬುದು ಗೊತ್ತಾಗದಿರಲಿ ಎಂಬ ಕಾರಣಕ್ಕೆ ಟೆಂಟ್ ಮೇಲಿರುವ ಲಾಂಛನವನ್ನೂ ಕಿತ್ತುಹಾಕುತ್ತಾರೆ. ಅಲ್ಲದೇ, ತಮ್ಮ ಜೊತೆಗೆ ತಂದಿದ್ದ ಡಬ್ಬಗಳು, ಪ್ಲಾಸ್ಟಿಕ್ ಚೀಲಗಳು, ಒಲೆ, ಮತ್ತಿತರ ಉಪಕರಣಗಳು, ಆಮ್ಲಜನಕ ಟ್ಯಾಂಕ್‌ಗಳು ಮತ್ತು ಪರ್ವತಾರೋಹಣ ಸಾಮಗ್ರಿಗಳನ್ನು ಅಲ್ಲಿಯೇ ಬಿಟ್ಟು ಬರುತ್ತಾರೆ. ಇದಲ್ಲದೇ, ಟನ್‌ಗಟ್ಟಲೇ ಮಾನವ ಮಲ ಈಗಾಗಲೇ ಎವರೆಸ್ಟ್‌ನಲ್ಲಿ ಸಂಗ್ರಹವಾಗಿದೆ. ಹೀಗಾಗಿ, ಎವರೆಸ್ಟ್ ಮಡಿಲಲ್ಲಿ ಕಸದ ಸಮಸ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ.

ಬಹುಆಯ್ಕೆಯ ಪ್ರಶ್ನೆಗಳು

ಸಂವಿಧಾನ

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಬಹುಆಯ್ಕೆಯ ಪ್ರಶ್ನೋತ್ತರಗಳು ಇಲ್ಲಿವೆ..

1. ರಾಜ್ಯದ ಮುಖ್ಯಮಂತ್ರಿಗಳನ್ನು ಈ ಕೆಳಗಿನ ಯಾರು ನೇಮಕ ಮಾಡುತ್ತಾರೆ ?
ಎ) ಪ್ರಧಾನಿ
ಬಿ) ರಾಷ್ಟ್ರಪತಿ
ಸಿ) ರಾಜ್ಯಪಾಲ
ಡಿ) ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು
ಉತ್ತರ : ಸಿ

2.ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?
ಎ) ರಾಜ್ಯ ಸರ್ಕಾರದ ಕಾರ್ಯಾಂಗೀಯ ಅಧಿಕಾರಗಳು ರಾಜ್ಯಪಾಲರ ಹೆಸರಿನಲ್ಲಿ ನಡೆಯುತ್ತವೆ.
ಬಿ) ಆದರೆ ನೈಜ ಕಾರ್ಯಾಂಗ ಮಾತ್ರ ಮುಖ್ಯಮಂತ್ರಿಗಳೇ ಆಗಿರುತ್ತಾರೆ.
ಸಿ) ರಾಜ್ಯ ಸರ್ಕಾರದ ಸಾಂವಿಧಾನಿಕ ಮುಖ್ಯಸ್ಥರು ರಾಜ್ಯಪಾಲರಾಗಿರುತ್ತಾರೆ.
ಡಿ) ಆದರೆ ನೈಜ ಮುಖ್ಯಸ್ಥರು ಮುಖ್ಯಮಂತ್ರಿಗಳೇ ಆಗಿರುತ್ತಾರೆ.
1) ಹೇಳಿಕೆ ಎ,ಬಿ ಸರಿಯಾಗಿದೆ ಆದರೆ ಸಿ,ಡಿ ತಪ್ಪಾಗಿದೆ
2)ಹೇಳಿಕೆ ಎ,ಬಿ, ಸಿ ಸರಿಯಾಗಿದೆ ಆದರೆ ಡಿ ತಪ್ಪಾಗಿದೆ.
3)ಎಲ್ಲಾ ಹೇಳಿಕೆಗಳು ತಪ್ಪಾಗಿವೆ.
4) ಎಲ್ಲಾ ಹೇಳಿಕೆಗಳು ಸರಿಯಾಗಿದೆ.
ಉತ್ತರ : 4

3. ಭಾರತದ ಸರ್ವೋಚ್ಛ ನ್ಯಾಯಾಲಯವು ಪ್ರಥಮವಾಗಿ ಎಲ್ಲಿ ಸ್ಥಾಪಿತವಾಯಿತು ?
ಎ) ದೆಹಲಿ ಬಿ)ಕೋಲ್ಕತ್ತಾ
ಸಿ)ಮದ್ರಾಸ್ ಡಿ) ಉತ್ತರಾಖಂಡ್
ಉತ್ತರ : ಬಿ

4. ಬಂಗಾಳದ ಮೊದಲ ಗವರ್ನರ್ ಜನರಲ್ ಯಾರಾಗಿದ್ದರು ?
ಎ) ವಾರನ್ ಹೇಸ್ಟಿಂಗ್ಸ್
ಬಿ) ಲಾರ್ಡ್ ಮೆಕಾಲೆ
ಸಿ) ರಾಬರ್ಟ್ ಕ್ಲೈವ್
ಡಿ) ಲಾರ್ಡ್ ವಿಲಿಯಂ ಬೆಂಟಿಂಕ್
ಉತ್ತರ : ಎ

5 .ಈ ಕೆಳಗಿನ ಯಾವ ಕಾಯ್ದೆಯ ಮೂಲಕ ಭಾರತದಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಭೂಪ್ರದೇಶಗಳನ್ನು ಪ್ರಪ್ರಥಮವಾಗಿ ಬ್ರಿಟಿಷ್ ಸ್ವಾಮ್ಯಕ್ಕೆ ಒಳಪಟ್ಟ ಪ್ರದೇಶಗಳೆಂದು ಕರೆಯಲಾಯಿತು ?
ಎ) ರೆಗ್ಯುಲೇಟಿಂಗ್ ಕಾಯ್ದೆ 1773
ಬಿ) ಪಿಟ್ಸ್ ಇಂಡಿಯಾ ಕಾಯ್ದೆ 1784
ಸಿ) ಮಿಂಟೋ ಮಾರ್ಲೆ ಕಾಯಿದೆ 1919
ಡಿ) 1857 ರ ಭಾರತ ಸರಕಾರದ ಶಾಸನ
ಉತ್ತರ: ಬಿ

6. ಈ ಕೆಳಗಿನ ಯಾವ ಕಾಯ್ದೆಯ ಮೂಲಕ ಬ್ರಿಟಿಷ್ ಸರಕಾರವು ಪ್ರಪ್ರಥಮ ಬಾರಿಗೆ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ವ್ಯವಹಾರಗಳನ್ನು ನಿಯಂತ್ರಿಸಲು ಆರಂಭಿಸಿತು?
ಎ) ಮಿಂಟೋ ಮಾರ್ಲೆ ಕಾಯಿದೆ 1919
ಬಿ) ರೆಗ್ಯುಲೇಟಿಂಗ್ ಕಾಯ್ದೆ 1773
ಸಿ) ಪಿಟ್ಸ್ ಇಂಡಿಯಾ ಕಾಯ್ದೆ 1784
ಡಿ) 1853ರ ಭಾರತ ಸರ್ಕಾರದ ಶಾಸನ
ಉತ್ತರ :ಬಿ

7. ಸರಕಾರಿ ಸೇವೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಜಾರಿಗೆ ತಂದ ಶಾಸನ ಯಾವುದು ?
ಎ) ಚಾರ್ಟರ್ ಕಾಯಿದೆ 1853
ಬಿ) ರೆಗ್ಯುಲೇಟಿಂಗ್ ಕಾಯಿದೆ 1773
ಸಿ)ಮಿಂಟೋ ಮಾರ್ಲೆ ಶಾಸನ 1919
ಡಿ) 1935ರ ಭಾರತ ಸರ್ಕಾರದ ಕಾಯ್ದೆ
ಉತ್ತರ:ಎ

8. ಈ ಕೆಳಗಿನ ಯಾವ ಕಾಯ್ದೆ ಮೂಲಕ ಭಾರತದಲ್ಲಿ ಚುನಾವಣಾ ಪದ್ಧತಿಯ ಆರಂಭಕ್ಕೆ ನಾಂದಿ ಹಾಡಲಾಯಿತು ?
ಎ. ಭಾರತ ಸರ್ಕಾರ ಕಾಯ್ದೆ 1858
ಬಿ. ಭಾರತದ ಕೌನ್ಸಿಲ್ ಕಾಯ್ದೆ1861
ಸಿ. ಭಾರತದ ಕೌನ್ಸಿಲ್ ಕಾಯ್ದೆ 1892
ಡಿ. ಭಾರತದ ಕೌನ್ಸಿಲ್ ಕಾಯ್ದೆ 1909
ಉತ್ತರ :ಸಿ

9. ಈ ಕೆಳಗಿನ ಯಾವ ಕಾಯ್ದೆಯನ್ನು ಮಾರ್ಲೆ ಮಿಂಟೋ ಸುಧಾರಣೆಗಳು ಎನ್ನುತ್ತಾರೆ ?
ಎ. ಭಾರತದ ಕೌನ್ಸಿಲ್ ಕಾಯ್ದೆ 1892
ಬಿ.ಭಾರತ ಸರ್ಕಾರ ಕಾಯ್ದೆ 1919
ಸಿ. ಭಾರತದಸರ್ಕಾರ ಕಾಯ್ದೆ 1935
ಡಿ. ಭಾರತದ ಕೌನ್ಸಿಲ್ ಕಾಯ್ದೆ 1909
ಉತ್ತರ :ಡಿ

10.ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿ?
ಎ. ಭಾರತ ಕೌನ್ಸಿಲ್ ಕಾಯ್ದೆ 1909 ಅನ್ನು ಮಾರ್ಲೆ ಮಿಂಟೋ ಸುಧಾರಣೆಗಳು ಎಂದು ಹೇಳುತ್ತಾರೆ.
ಬಿ. ಈ ಕಾಯ್ದೆ ಜಾರಿಗೆ ಬಂದ ಸಂದರ್ಭದಲ್ಲಿ ಲಾರ್ಡ್ ಮಾರ್ಲೆ ಭಾರತದ ಕಾರ್ಯದರ್ಶಿಯಾಗಿದ್ದರು ಮತ್ತು ಲಾರ್ಡ್ ಮಿಂಟೋ ಭಾರತದ ವೈಸ್‌ರಾಯ್ ಆಗಿದ್ದರು.
1. ಹೇಳಿಕೆ ಎ ಸರಿಯಾಗಿದೆ ಬಿ ತಪ್ಪಾಗಿದೆ.
2.ಹೇಳಿಕೆ ಬಿ ಸರಿಯಾಗಿದೆ ಎ ತಪ್ಪಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ
4. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ :4 ❖

ನೀಟ್- ಪಿಯುಸಿ ಪರೀಕ್ಷೆ ದಿಕ್ಸೂಚಿ

NEET PHYSICS

31) A solid cylinder of radius R made of a material of thermal conductivity K_1 is surrounded by a cylindrical shell of inner radius R and outer radius 2R made of a material of thermal conductivity K_2. The two ends of the combined system are maintained at two different temperatures.

Then there is no loss of heat across the cylindrical surface and the system is in steady state. The effective thermal conductivity of the system is

(a) $K_1 + K_2$ (b) $\frac{K_1 K_2}{K_1 + K_2}$
(c) $\frac{2K_1 + K_2}{4}$ (d) $\frac{K_1 + 3K_2}{4}$

Ans:- (d)

Expln- As there is no loss of heat, and the system is in steady state.

$$\therefore Q_{total} = Q_1 + Q_2$$
$$\Rightarrow \frac{K(4R^2)d\theta}{dx} = \frac{K_1 R^2 d\theta}{dx} + \frac{K_2(3R^2)d\theta}{dx}$$
$$\Rightarrow 4K = K_1 + 3K_2$$
$$\Rightarrow K = \frac{K_1 + 3K_2}{4}$$

32) A person with vibrating tuning fork of frequency 338 Hz is moving towards a vertical wall with a speed of 2 ms^{-1}. Velocity of sound in air is 340 ms^{-1}. The number of beats heard by that person per seconds is

(a) 2 (b) 4
(c) 6 (d) 8

Ans:- (b)

Expln- As the person having tuning fork is moving towards a wall, therefore, $v_s = v_0 = 2$ m/s (given)

$$\text{So, } \frac{f'}{f} = \frac{v + v_0}{v - v_0}$$
$$\Rightarrow \frac{f' - f}{f} = \frac{v + v_0 - v + v_0}{v - v_0}$$
$$\Rightarrow \frac{\Delta f}{f} = \frac{2v_0}{v - v_0}$$
$$\text{(or) } \Delta f = \frac{2v_0}{v - v_0} \times f = \frac{2 \times 2 \times 338}{(340 - 2)} = 4$$

33) Pick out the wrong statement from the following

(a) Lateral shift increases as the angle of incidence increases
(b) Lateral shift increases as the value of refractive index increases
(c) Normal shift decreases as the value of refractive index increases
(d) Both normal shift and lateral shift are directly proportional to the thickness of the medium

Ans:- (b)

Expln– The lateral shift, $L_s = \frac{t\,[\sin(i - r)]}{\cos r}$

and normal shift, $L_N = t\left(1 - \frac{1}{\mu}\right)$

34) A rectangular coil of 100 turns and size 0.1m × 0.05 m is placed perpendicular to a magnetic field of 0.1 T. If the field drops to 0.05 T in 0.05 s, the magnitude of the e.m.f. induced in the coil is –

(a) 1.4 (b) 1.3
(c) 0.05 (d) 0.5

Ans:- (d)

Expln- Given, n = 100 turns, $A = 0.1 \times 0.05\ m^2$, $B_1 = 0.1$ T, $B_2 = 0.05$ T, dt = 0.05 s

We know that,

$$e = \left|\frac{-d\phi}{dt}\right| = \frac{d}{dt}(nBA\cos\theta) = \frac{nA\,dB\cos\theta}{dt}$$

Here, $\theta = 0^0$

$$\therefore e = \frac{nAdB}{dt} = \frac{100 \times 0.1 \times 0.05 \times (0.1 - 0.05)}{0.05}$$
$$\Rightarrow e = 0.5\ V$$

35) A series combination of resistor(R), capacitor(C) is connected to an A.C. source of angular frequency ω. Keeping the voltage same, if the frequency is changed to ω/3, the current becomes half of the original current. Then the ratio of the capacitive reactance and resistance at the former frequency is

(a) $\sqrt{0.6}$ (b) $\sqrt{3}$ (c) $\sqrt{2}$ (d) $\sqrt{6}$

Ans:- (a)

Expln– The impendance of the circuit,

$$Z = \sqrt{R^2 + X_C^2}$$

When angular frequency of source is reduced to $\frac{1}{3}$,


The capacitor reactance is increased by 3 times.

$$\therefore Z' = \sqrt{R^2 + (3X_C)^2} = \sqrt{R^2 + 9X_C^2}$$

As current becomes half

$$\therefore Z' = 2Z = \sqrt{R^2 + 9X_C^2}$$
$$\Rightarrow 2\sqrt{R^2 + X_C^2} = \sqrt{R^2 + 9X_C^2}$$
$$\Rightarrow 4(R^2 + X_C^2) = R^2 + 9X_C^2 \Rightarrow 3R^2 = 5X_C^2$$
$$\text{(or) } \frac{X_C}{R} = \sqrt{\frac{3}{5}} = \sqrt{0.6}$$

36) A boy throws a cricket ball from the boundary to the wicket-keeper. If the frictional force due to air cannot be ignored, the forces acting on the ball at the position X are represented by ....



Ans:- (d)

II PUC CHEMISTRY

Solutions

Multiple Choice Questions:-

5. Maximum amount of a solid solute that can be dissolved in a specified amount of a given liquid solvent does *not* depend upon ....

a) Temperature b) Nature of solute
c) Pressure d) Nature of solvent

Ans:- C

6. Low concentration of oxygen in the blood and tissues of people living at high altitude is due to ....

a) low temperature
b) low atmospheric pressure
c) high atmospheric pressure
d) both low temperature and high atmospheric pressure.

Ans:- b

7. Considering the formation, breaking and strength of hydrogen bond, predict which of the following mixtures will show a positive deviation from Raoult's law?

a) Methanol and acetone
b) Chloroform and acetone
c) Nitric acid and water
d) Phenol and aniline. Ans:- a

8. Colligative properties depend on

a) the nature of the solute particles dissolved in solution.
b) the number of solute particles in solution.
c) the physical properties of the solute particles dissolved in solution.
d) the nature of solvent particles.

Ans:-b

9. In comparison to a 0.01 M solution of glucose, the depression in freezing point of a 0.01M $MgCl_2$ solution is.........

a) the same b) about twice
c) about 3 times d) about 6 times

Ans:- C

10. An unripe mango placed in a concentrated salt solution to prepare pickles, shrivels because............

a) it gains water due to osmosis,
b) it loses water due to reverse osmosis.
c) it gains water due to reverse osmosis.
d) it loses water due to osmosis.

Ans:- d

11. At a given temperature, osmotic pressure of a concentrated solution of a substance

a) is higher than that of a dilute solution.
b) is lower than that of a dilute solution.
c) is same as that of a dilute solution.
d) cannot compared with osmotic pressure of dilute solution.

Ans:- a

12. Which of the following is not a gaseous solution?

a) Camphor in nitrogen gas
b) chloroforom mixed with nitrogen gas
c) Solution of hydrogen in palladium
d) mixture ofoxygen and nitrogen

Ans:- C

Answer the following:-

1. What is the normality of two solutions mixed together?

Ans:- Normality of solution formed on mixing two solutions.

When volume V_1 of a solution of normality N_1 is mixed with the volume V_2 of another solution of normality N_2 then the normality N of the resulting solution of Volume V (Volume-$V = V_1 + V_2$) is given by the equation

$$N_1 V_1 + N_2 V_2 = N (V_1 + V_2)$$

Note :- Molality of a solution is considered better for expressing the concentration of the solution as completed to molarity.

2. What is meant by colligative properties?

Ans:- The properties of dilute solutions which depend only on the number of solute particles and not on the nature of solute particles are called colligative properties.

3. Mention some of the colligative properties.

Ans:- Some of the colligative properties are as follows –

(1) Osmotic pressure
(2) Relative lowering of vapour pressure
(3) Elevation in boiling point
(4) Depression in freezing point

4. Define ideal solutions and give an example.

Ans:- ***Ideal solution*** – it is the one where the intermolecular interactions between the components are of the same magnitude as the intermolecular interactions found in the pure components. ***Eg***:- A mixture of benzene and toluene.

5. Define Non-ideal solutions and give an example.

Ans:- ***Non - ideal solution*** – it is the one where the intermolecular interactions between the components are different from the intermolecular interactions found in between the molecules of the pure components. *Eg*:- A mixture of benzene and acetone.

6. What is vapour pressure?

Ans:- Pressure exerted by the vapour above the liquid surface, in equilibrium with the liquid is called its vapour pressure, at the given temperature. The vapour pressure increases with the rise in temperature.

7. What is lowering of the vapour pressure?

Ans:- The difference between the vapour pressure of the pure solvent P^0 and that of the solution P, is called the lowering of the vapour pressure $P^0 - P$.

8. What is relative lowering of vapour pressure?

Ans:- The relative lowering of vapour pressure is the ratio of the lowering of vapour pressure for the solution to the vapour pressure of the pure solvent. The relative lowering of vapour pressure is given by,

$$\frac{P^0 - P}{P^0}$$

(Contd.....)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಜೂನ್ ವೇಳೆಗೆ ಪರಿಷ್ಕೃತ ಸಂಪುಟಗಳು ಲಭ್ಯ

‘ಕನ್ನಡ ವಿಶ್ವಕೋಶ’ ಪರಿಷ್ಕರಣೆ ಪೂರ್ಣ

• ಮೋಹನ್ ಕುಮಾರ ಸಿ.

ಮೈಸೂರು: ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ಹೊರತರುತ್ತಿರುವ ‘ಕನ್ನಡ ವಿಶ್ವಕೋಶ’ದ ಎಲ್ಲ ಸಂಪುಟಗಳ ಪರಿಷ್ಕರಣೆ ಕಾರ್ಯ ಮುಗಿಯುವ ಹಂತಕ್ಕೆ ಬಂದಿದ್ದು, ಜೂನ್ ವೇಳೆಗೆ ಮರು ಬಿಡುಗಡೆಯಾಗಲಿವೆ.

ವಿಶ್ವಕೋಶವು 14 ಸಂಪುಟಗಳನ್ನು ಹೊಂದಿದ್ದು, ಪರಿಷ್ಕರಣೆ ಆಗಿರಲಿಲ್ಲ. 2014ರವರೆಗೆ ಸಂಪುಟ 7ರವರೆಗೆ ಪರಿಷ್ಕರಣೆ ನಡೆದಿತ್ತು. 10 ಹಾಗೂ 13ನೇ ಸಂಪುಟಗಳ ಕಾರ್ಯ ಇದೀಗ ಮುಗಿದಿದ್ದು, ಬಿಡುಗಡೆಗೆ ಸಿದ್ಧವಾಗಿವೆ. 11, 12, 14ನೇ ಸಂಪುಟಗಳ ಕೆಲಸ ಭರದಿಂದ ಸಾಗಿದೆ.

‘ಎನ್‌ಸೈಕ್ಲೊಪಿಡಿಯಾ ಬ್ರಿಟಾನಿಕಾ’ ಮಾದರಿಯಲ್ಲಿ 1968ರಲ್ಲಿ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ವಿಶ್ವಕೋಶಗಳನ್ನು ಹೊರತರಲಾಗುತ್ತಿದೆ. 14 ಸಾಮಾನ್ಯ ವಿಶ್ವಕೋಶಗಳ ರಚನೆಯು 2004ರಲ್ಲಿ ಪೂರ್ಣಗೊಂಡಿತ್ತು. ಇದೀಗ ಬಹುತೇಕ ಎಲ್ಲ ಸಂಪುಟಗಳ ಪರಿಷ್ಕರಣೆ ನಡೆದಿದೆ’ ಎಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ವಿಜಯಕುಮಾರಿ ಎಸ್. ಕರಿಕಲ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಾಂಶಗಳು

- ವಿಷಯ ತಜ್ಞರ ನೇತೃತ್ವದಲ್ಲಿ ರಚನಾ ಕಾರ್ಯ
- ವಿಶ್ವಕೋಶದ ಬೆಲೆ ₹ 550ರಿಂದ ₹ 650
- ವಿಷಯ ವಿಶ್ವಕೋಶಗಳ ಬೆಲೆ ₹ 300ರಿಂದ ₹500


‘12 ಸಂಪುಟಗಳು ಖಾಲಿ ಆಗಿದ್ದವು. ಇವುಗಳೊಂದಿಗೆ ಕರ್ನಾಟಕ ವಿಶ್ವಕೋಶಗಳ 2 ಸಂಪುಟ, ಜಾನಪದ, ಪ್ರಾಣಿವಿಜ್ಞಾನ, ಭೂಗೋಳವಿಜ್ಞಾನ, ಇತಿಹಾಸ, ಪುರಾತತ್ವ ವಿಷಯ ವಿಶ್ವಕೋಶಗಳ ಪರಿಷ್ಕರಣೆ ಹಾಗೂ ಪುನರ್ ಮುದ್ರಣ ಕಾರ್ಯ ನಡೆಯುತ್ತಿದೆ’ ಎಂದರು.

‘ವೈದ್ಯವಿಜ್ಞಾನ, ಮಾನವ ವಿಜ್ಞಾನ, ಪತ್ರಿಕೋದ್ಯಮ ವಿಷಯಗಳ ಕುರಿತ ಹೊಸ ವಿಶ್ವಕೋಶಗಳ ರಚನಾ ಕಾರ್ಯವೂ ಪ್ರಗತಿಯಲ್ಲಿದೆ’ ಎಂದರು.

‘ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕೋಶಗಳನ್ನು ರಚಿಸಲಾಗಿದೆ. ‘ಅ’ಕಾರಾದಿಯಾಗಿ ಎಲ್ಲ ವಿಷಯಗಳ ಮಾಹಿತಿ ಇರಲಿದ್ದು, ವಿಷಯ ತಜ್ಞರ ಗೌರವ ಸಂಪಾದನೆಯಡಿ ರಚಿತಗೊಂಡಿವೆ. ಅವರಿಗೆ ಗೌರವ ಸಂಭಾವನೆ ನೀಡಲಾಗುತ್ತದೆ’ ಎಂದರು.

‘ಸಾವಿರ ಪುಟಗಳ ವಿಶ್ವಕೋಶಗಳ ಬೆಲೆಯು ಪ್ರತಿ ಸಂಪುಟಕ್ಕೆ ₹ 550ರಿಂದ ₹ 650ರವರೆಗೆ ಇದೆ. ವಿಷಯ ವಿಶ್ವಕೋಶಗಳ ಬೆಲೆಯು ₹ 300ರಿಂದ ₹500ರವರೆಗೆ ಇದೆ. ಕರ್ನಾಟಕ ವಿಶ್ವಕೋಶದ ಇಂಗ್ಲಿಷ್ ಆವೃತ್ತಿಯು 2016ರಲ್ಲಿ ಪ್ರಕಟಗೊಂಡಿದ್ದು, ಇದರ ಬೆಲೆ ₹ 1 ಸಾವಿರ’ ಎಂದು ತಿಳಿಸಿದರು.

‘ಮೊದಲು ಸರ್ಕಾರಿ ಮುದ್ರಾಣಾಲಯದಲ್ಲಿ ಮುದ್ರಿತವಾಗುತ್ತಿತ್ತು. 2004ರಿಂದ ಇ-ಟೆಂಡರ್ ಮೂಲಕ ಮುದ್ರಣಕ್ಕೆ ಖಾಸಗಿಯವರಿಗೆ ನೀಡಲಾಗುತ್ತಿದೆ’ ಎಂದರು.



ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಿದ್ಧಪಡಿಸಿರುವ ‘ಕನ್ನಡ ವಿಶ್ವಕೋಶ’

‘ದಶಕದ ಶ್ರಮ’

‘ವಿಶ್ವಕೋಶಗಳ ಪರಿಷ್ಕರಣೆ ಸುಲಭದ ಕಾರ್ಯವಲ್ಲ. ಸಮಯ ಹೆಚ್ಚು ಬೇಕು. ಒಂದೊಂದು ಪುಸ್ತಕ ರೂಪಿಸಲು ದಶಕದ ಶ್ರಮವಿದೆ. ಹೊಸ ವಿಷಯಗಳನ್ನು ಸೇರಿಸಲಾಗುತ್ತದೆ. ಚಂದ್ರಯಾನ, ಮಂಗಳಯಾನದಂಥ ವಿಷಯಗಳೂ ಪುಸ್ತಕದಲ್ಲಿವೆ’ ಎಂದು ವಿಜಯಕುಮಾರಿ ಕರಿಕಲ್ ಹೇಳಿದರು.

‘ಆನ್‌ಲೈನ್‌ನಲ್ಲಿ ಎಲ್ಲ ವಿಷಯಗಳ ಮಾಹಿತಿ ಸಿಕ್ಕಿದರೂ ವಿಶ್ವಕೋಶದಂತೆ ಸಮಗ್ರವಾಗಿ ದೊರೆಯದು. ಹಿಡಿ-ಹಿಡಿಯಾಗಿ ವಿಷಯ ಗ್ರಹಿಸಲು ಈ ಗ್ರಂಥ ಓದುವುದೇ ಮುಖ್ಯ’ ಎಂದರು.

‘ಜೂನ್ ಒಳಗೆ ಪರಿಷ್ಕೃತ ಪ್ರತಿಗಳ ಬಿಡುಗಡೆ ನಡೆಯಲಿದೆ. ರಿಯಾಯಿತಿ ದರದಲ್ಲಿ ಮಾರಲಾಗುತ್ತದೆ. ಬಂದ ಹಣವನ್ನು ಪರಿಷ್ಕರಣೆ ಮತ್ತು ಮುದ್ರಣಕ್ಕೆ ಬಳಸಲಾಗುತ್ತದೆ’ ಎನ್ನುತ್ತಾರೆ ಅವರು.

ಎಸ್ಸೆಸ್ಸೆಲ್ಸಿ: 8ಕ್ಕೆ ಫಲಿತಾಂಶ?

ಒಂದನೇ ಪುಟದಿಂದ...

4.41 ಲಕ್ಷ ಬಾಲಕರು, 4.28 ಲಕ್ಷ ಬಾಲಕಿಯರೂ ಸೇರಿದಂತೆ ಒಟ್ಟು 8.69 ಲಕ್ಷ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದರು. ಇದೇ ಮೊದಲ ಬಾರಿಗೆ ಮೂರು ಪರೀಕ್ಷೆಗಳನ್ನು ಪರಿಚಯಿಸಲಾಗಿದ್ದು, ಮೇ ಮೂರನೇ ವಾರದಲ್ಲೇ ಎರಡನೇ ಪರೀಕ್ಷೆ ಆರಂಭವಾಗಲಿದೆ.

ಉತ್ತೀರ್ಣರಾದ ವಿದ್ಯಾರ್ಥಿಗಳು ಸಹ ಅಂಕಗಳನ್ನು ವೃದ್ಧಿಸಿಕೊಳ್ಳಲು ಉಳಿದ ಎರಡು ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ಯಾವ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳು ಬರುತ್ತವೆಯೋ ಅದರ ಅಂಕಪಟ್ಟಿಯನ್ನು ಪಡೆಯಬಹುದು.

ಧರ್ಮಸ್ಥಳ: 123 ಜೋಡಿ ವಿವಾಹ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳದಲ್ಲಿ ಬುಧವಾರ ನಡೆದ 52ನೇ ವರ್ಷದ ಉಚಿತ ಸಾಮೂಹಿಕ ವಿವಾಹದಲ್ಲಿ 39 ಅಂತರ್ಜಾತಿಯ ಜೋಡಿ ಸೇರಿದಂತೆ ಒಟ್ಟು 123 ವಧು-ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಸಂಜೆ 6.45ರ ಗೋದೂಳಿ ಮುಹೂರ್ತದಲ್ಲಿ ವೇದಮಂತ್ರದೊಂದಿಗೆ ನಡೆದ ಮಂಗಳಸೂತ್ರ ಧಾರಣೆಗೆ ನೂರಾರು ಜನರು ಸಾಕ್ಷಿಯಾದರು.

ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಮತ್ತು ಹೇಮಾವತಿ ಹೆಗ್ಗಡೆ ಅವರು ಬೀಡಿನಲ್ಲಿ ವಧುವಿಗೆ ಸೀರೆ, ರವಿಕೆ ಮತ್ತು ವರನಿಗೆ ಧೋತಿ, ಶಾಲು ವಿತರಿಸಿದರು. ಸಂಜೆ 6 ಗಂಟೆಗೆ ವಧು- ವರರು ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕಿ ಸಭಾಭವನದಲ್ಲಿ ಹಾಜರಾದರು. ವೀರೇಂದ್ರ ಹೆಗ್ಗಡೆ ದಂಪತಿ ಜೊತೆ ಚಿತ್ರನಟ ದೊಡ್ಡಣ್ಣ ದಂಪತಿ ಮಂಗಳ ಸೂತ್ರ ವಿತರಿಸಿದರು. ಆಯಾ ಜಾತಿ-ಮತ ಸಂಪ್ರದಾಯದಂತೆ ಧಾರ್ಮಿಕ ವಿಧಿಗಳನ್ನು ನಡೆಸಲಾಯಿತು.


ಧರ್ಮಸ್ಥಳದಲ್ಲಿ 52ನೇ ವರ್ಷದ ಉಚಿತ ಸಾಮೂಹಿಕ ವಿವಾಹವು ಬುಧವಾರ ನಡೆಯಿತು

ಕೋಣ ತಿವಿದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಜಾತ್ರೆಗೆ ತಂದಿದ್ದ ದೇವರ ಕೋಣ ತಿವಿದ ಪರಿಣಾಮ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ತಾಲ್ಲೂಕಿನ ಮದಕರಿಪುರ ಗ್ರಾಮದಲ್ಲಿ ಬುಧವಾರ ನಡೆದಿದೆ.

ಗ್ರಾಮದ ನಿವಾಸಿ ಕೊಲ್ಲರಪ್ಪ (65) ಮೃತರು. ಗ್ರಾಮದೇವತೆ ಕೊಲ್ಲಾಪುರದಮ್ಮ ಜಾತ್ರೆ ನಡೆಯುತ್ತಿದ್ದು, ಸಂಪ್ರದಾಯದಂತೆ ಬುಧವಾರ ಬೆಳಗಿನ ಜಾವ ಕೋಣವನ್ನು ದೇವಸ್ಥಾನದ ಬಳಿ ಕಟ್ಟಲು ಕೊಲ್ಲರಪ್ಪ ಹಿಡಿದುಕೊಂಡು ಹೊರಟಿದ್ದಾರೆ. ಕೋಣ ಅವರ ತೊಡೆಯ ಭಾಗಕ್ಕೆ ತಿವಿದಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಅವರು ಮೃತಪಟ್ಟರು ಎಂದು ವೈದ್ಯರು ತಿಳಿಸಿದ್ದಾರೆ. ಈ ಕುರಿತು ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಕಳಸದಲ್ಲಿ ಬುಧವಾರ ದಾಂಪತ್ಯ ಜೀವನಕ್ಕೆ ಕಾಲಿಟ್ಟ ನಟಿ ಮಾನ್ವಿತಾ ಕಾಮತ್ ಹಾಗೂ ಸಂಗೀತ ನಿರ್ಮಾಪಕ ಅರುಣ್ ಜೋಡಿ

ಹಾಲಿನ ಸಬ್ಸಿಡಿ ಬಿಡುಗಡೆಗೆ ಆಗ್ರಹ

ಬೆಂಗಳೂರು: ಹಾಲು ಉತ್ಪಾದಕರಿಗೆ ನೀಡಬೇಕಿರುವ ಸಬ್ಸಿಡಿ ಬಾಕಿ ₹700 ಕೋಟಿಯನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಹೇಳಿಕೆ ಹಂಚಿಕೊಂಡಿರುವ ಅವರು, ಬರದಿಂದ ರೈತರು ಕಂಗಾಲಾಗಿದ್ದಾರೆ. ಇಂತಹ ಸಮಯದಲ್ಲಿ ಹಾಲಿನ ಸಬ್ಸಿಡಿ ಬಿಡುಗಡೆ ಮಾಡದೆ ರಾಜ್ಯ ಸರ್ಕಾರ ದೋಖಾ ಮಾಡುತ್ತಿದೆ. ಸರ್ಕಾರದ ಆತ್ಮಸಾಕ್ಷಿ ಸತ್ತು ಹೋಗಿದೆಯಾ ಎಂದು ಪ್ರಶ್ನಿಸಿದ್ದಾರೆ.

ಕೃಷಿ ಅನುದಾನಕ್ಕೆ ಶೇ 32ರಷ್ಟು ಕತ್ತರಿ ಹಾಕಿದ್ದಾರೆ. ಚುನಾವಣೆ ಸಮಯದಲ್ಲಿ ಒಂದು ಲೀಟರ್ ಹಾಲಿನ ಸಬ್ಸಿಡಿಯನ್ನು ₹7 ಹೆಚ್ಚಿಸುತ್ತೇವೆ ಎಂದು ಹೇಳಿದ್ದ ಕಾಂಗ್ರೆಸ್ ಈಗ ₹5 ಸಬ್ಸಿಡಿ ಕೊಡದೆ 7 ತಿಂಗಳಿಂದ ಸತಾಯಿಸುತ್ತಿದೆ. ಸಂಕಷ್ಟದಲ್ಲಿರುವ ಹಾಲು ಉತ್ಪಾದಕರಿಗೆ ಕೂಡಲೇ ಸಬ್ಸಿಡಿ ಹಣ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಅಮಿತ್ ಶಾ ಭೇಟಿಯಾದ ನೇಹಾ ಪೋಷಕರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಿವಿಬಿ ಕಾಲೇಜು ಆವರಣದಲ್ಲಿ ಕೊಲೆಯಾದ ವಿದ್ಯಾರ್ಥಿನಿ ನೇಹಾ ಅವರ ಪೋಷಕರಾದ ನಿರಂಜನಯ್ಯ ಹಿರೇಮಠ ಮತ್ತು ಗೀತಾ ಬುಧವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ, ಮನವಿ ಸಲ್ಲಿಸಿದರು.

ಬಿಜೆಪಿ ವಿಜಯ ಸಂಕಲ್ಪ ಸಮಾವೇಶದ ಸ್ಥಳದ ಬಳಿ ಭೇಟಿಯಾದ ಪೋಷಕರು, ‘ಹೆಣ್ಣುಮಕ್ಕಳ ಮೇಲೆ ನಡೆಯುವ ಇಂತಹ ಅಪರಾಧ ಕೃತ್ಯಗಳನ್ನು ತಡೆಯಲು ನೇಹಾ ಹೆಸರಿನಲ್ಲಿ ಕಾನೂನು ಜಾರಿಗೆ ತರಬೇಕು. ತನಿಖೆ ಬೇಗ ಪೂರ್ಣಗೊಳಿಸಿ, 120 ದಿನಗಳಲ್ಲಿ ಅಪರಾಧಿಗೆ ಮರಣದಂಡನೆ ಶಿಕ್ಷೆ ವಿಧಿಸಬೇಕು’ ಎಂದರು.


ಹುಬ್ಬಳ್ಳಿಯಲ್ಲಿ ಬುಧವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ವಿದ್ಯಾರ್ಥಿನಿ ನೇಹಾ ಪೋಷಕರಾದ ನಿರಂಜನಯ್ಯ ಹಿರೇಮಠ ಮತ್ತು ಗೀತಾ ಭೇಟಿಯಾದರು.

‘ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರವು ಸಿಐಡಿಗೆ ವಹಿಸಿದೆ. ಆ ತನಿಖೆ ತೃಪ್ತಿಕರ ಆಗದಿದ್ದರೆ, ಸಿಬಿಐ ತನಿಖೆಗೆ ನೀವು ಒತ್ತಾಯಿಸಿ. ರಾಜ್ಯ ಸರ್ಕಾರವು ತನಿಖೆಯನ್ನು ಸಿಬಿಐಗೆ ಒಪ್ಪಿಸಿದರೆ, ನಾವು ಮುಂದಿನ ಕ್ರಮ ಜರುಗಿಸುತ್ತೇವೆ’ ಎಂದು ಶಾ ಹೇಳಿದರು. ‘ಮಗಳ ಸಾವಿಗೆ ಸಿಐಡಿ ತನಿಖೆಯಲ್ಲಿ ನ್ಯಾಯ ಸಿಗದಿದ್ದರೆ, ಸಿಬಿಐ ತನಿಖೆಗೆ ಒತ್ತಾಯಿಸುವೆ. ಅಮಿತ್ ಶಾ ಅವರ ಜೊತೆ 10 ನಿಮಿಷ ಚರ್ಚಿಸಿದ್ದು, ಗಂಭೀರವಾಗಿ ಪರಿಗಣಿಸುವುದಾಗಿ ಭರವಸೆ ನೀಡಿದ್ದಾರೆ’ ಎಂದು ನಿರಂಜನಯ್ಯ ತಿಳಿಸಿದರು.

‘ಯಾರು ಜವಾಬ್ದಾರಿ’?: ಇದಕ್ಕೂ ಮೊದಲು ಬಿಜೆಪಿ ಸಮಾವೇಶದಲ್ಲಿ ಮಾತನಾಡಿದ ಅಮಿತ್ ಶಾ ಅವರು, ‘ನೇಹಾ ಹಿರೇಮಠ ಕೊಲೆ ಪ್ರಕರಣಕ್ಕೆ ಯಾರು ಜವಾಬ್ದಾರರು? ಮಹಿಳೆಯರಿಗೆ ರಕ್ಷಣೆ ನೀಡಲು ಆಗದಿದ್ದರೆ ಹುದ್ದೆಯಿಂದ ಕೆಳಗಿಳಿಯಿರಿ. ನಾವು ರಕ್ಷಣೆ ಕೊಡುತ್ತೇವೆ’ ಎಂದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ‘ರಾಜ್ಯದಲ್ಲಿ ಈಗ ಸಾಬರ (ಮುಸ್ಲಿಂ) ಸರ್ಕಾರವಿದೆ. ಪಾಕ್ ಪರ ಘೋಷಣೆ ಕೂಗುವವರು, ಹಿಂದೂಗಳ ಮೇಲೆ ಹಲ್ಲೆ ಮಾಡುವವರನ್ನು ಎನ್‌ಕೌಂಟರ್ ಮಾಡಬೇಕು. ಅವರ ಆಸ್ತಿ ಜೆಸಿಬಿ ಮೂಲಕ ನೆಲಸಮ ಮಾಡಬೇಕು’ ಎಂದರು.

ಅಂಬೇಡ್ಕರ್ ಪುತ್ಥಳಿಗೆ ಅಪಮಾನ ಪ್ರಕರಣ: ಆರೋಪಿಗೆ ಜಾಮೀನು

ಆರೋಪಿ ಕುಟುಂಬಸ್ಥರ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕೋಟನೂರ (ಡಿ) ಗ್ರಾಮದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಪುತ್ಥಳಿಗೆ ಅಪಮಾನ ಮಾಡಿದ ಪ್ರಕರಣದ ಆರೋಪಿಯೊಬ್ಬ ಜಾಮೀನಿನ ಮೇಲೆ ಬಿಡುಗಡೆಯಾದ ಬೆನ್ನಲ್ಲೇ ಮಂಗಳವಾರ ರಾತ್ರಿ ಗುಂಪೊಂದು ಆತನ ಕುಟುಂಬದವರ ಮೇಲೆ ಹಲ್ಲೆ ನಡೆಸಿದೆ. ಇದನ್ನು ಖಂಡಿಸಿ ಕುಟುಂಬದವರು ಹಾಗೂ ಬಿಜೆಪಿಯ ಮುಖಂಡರು ಬುಧವಾರ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

‘ಜನವರಿ 23ರಂದು ಪುತ್ಥಳಿಗೆ ಅಪಮಾನಿಸಿದ ಪ್ರಕರಣದಲ್ಲಿ ಬಂಧಿತರಾಗಿದ್ದ ಆರೋಪಿಗಳ ಪೈಕಿ ಸಂಗಮೇಶ ಪಾಟೀಲ ಅವರು ಮಂಗಳವಾರ ಜಾಮೀನಿನ ಮೇಲೆ ಹೊರಬಂದರು. ಸಂಗಮೇಶ ಅವರನ್ನು ಹುಡುಕಿಕೊಂಡು ಆತನ ಮನೆಗೆ ಬಂದ ಗುಂಪೊಂದು ಕುಟುಂಬದವರ ಮೇಲೆ ಹಲ್ಲೆ ಮಾಡಿದೆ. ಸಂಗಮೇಶ ಮನೆಯಲ್ಲಿ ಇಲ್ಲ ಎಂದರೂ ದಾಂದಲೆ ನಡೆಸಿದ್ದಾರೆ. ನಾಲ್ವರು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ’ ಎಂದು ಸಂಗಮೇಶ ಅವರ ಸಹೋದರ ಶಿವಕುಮಾರ ಆರೋಪಿಸಿದರು.

ಪ್ರಕರಣ ದಾಖಲಿಸಲು ಪೊಲೀಸರು ಹಿಂದೇಟು ಹಾಕಿದ್ದಾರೆ ಎಂದು ಆರೋಪಿಸಿದ ಕುಟುಂಬಸ್ಥರು, ವೀರಶೈವ ಲಿಂಗಾಯತ ಕೆಲ ಮುಖಂಡರು, ಬಿಜೆಪಿಯ ನಾಯಕರು ಸುಮಾರು ಮೂರೂವರೆ ಗಂಟೆ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು. ಕಲಬುರಗಿ-ಜೇವರ್ಗಿ ರಸ್ತೆಯಲ್ಲಿ ಪ್ರತಿಭಟನೆ ನಡೆಯಿತು.


ಅಂಬೇಡ್ಕರ್ ಪುತ್ಥಳಿ ಅಪಮಾನ ಪ್ರಕರಣದ ಆರೋಪಿಯ ಕುಟುಂಬದವರ ಮೇಲಿನ ಹಲ್ಲೆಯನ್ನು ಖಂಡಿಸಿ ಕಲಬುರಗಿಯಲ್ಲಿ ಬುಧವಾರ ಬಿಜೆಪಿ ಮುಖಂಡರು ಪ್ರತಿಭಟಿಸಿದರು.

ಕುಸಿದುಬಿದ್ದ ಸಂಸದ: ಪ್ರತಿಭಟನೆಯ ವೇಳೆ ಬಿಜೆಪಿ ನಾಯಕರು ಹಾಗೂ ಪೊಲೀಸರ ನಡುವೆ ಸುಮಾರು ಒಂದು ಗಂಟೆ ಕಾಲ ವಾಗ್ವಾದ, ತಳ್ಳಾಟ ಜೋರಾಗಿ ನಡೆಯಿತು. ತಾಪಮಾನವು ಸುಮಾರು 44 ಡಿಗ್ರಿ ಸೆಲ್ಸಿಯಸ್ ಇತ್ತು. ಜೊತೆಗೆ ತಳ್ಳಾಟದಿಂದ ಬಸವಳಿದ ಸಂಸದ ಡಾ.ಉಮೇಶ ಜಾಧವ ಅವರು ತಲೆ ಸುತ್ತಿ ರಸ್ತೆಯಲ್ಲೇ ಕುಸಿದು ಬಿದ್ದರು. ಬಳಿಕ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ‘ಪ್ರಕರಣದ ಸಂಬಂಧ ಈಗಾಲೇ ಐವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೀನುಗಳ ಮಾರಣಹೋಮ

ಅಯ್ಯನಕೆರೆ: ತೂಬು ದುರಸ್ತಿಗೆ ನೀರು ಖಾಲಿ: ತಾಪದಿಂದ ಜಲಚರಗಳ ಸಾವು

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ನಗರದ ಐತಿಹಾಸಿಕ ಅಯ್ಯನಕೆರೆಯಲ್ಲಿ ತೂಬು ದುರಸ್ತಿಗೆಂದು ನೀರು ಖಾಲಿ ಮಾಡಲಾಗಿದ್ದು, ನೀರಿನ ಕೊರತೆ ಮತ್ತು ತಾಪಮಾನ ಹೆಚ್ಚಳದಿಂದ ಮೀನುಗಳ ಮಾರಣಹೋಮವೇ ನಡೆದಿದೆ.

420 ಎಂಸಿಎಫ್‌ಟಿ (ಮಿಲಿಯನ್ ಕ್ಯುಬಿಕ್ ಮೀಟರ್) ಸಾಮರ್ಥ್ಯದ ಕೆರೆಯ ನೀರು ಬಹುತೇಕ ಖಾಲಿಯಾಗಿದೆ. ಬರಗಾಲದಲ್ಲಿ ನೀರಿನ ಹರಿವು ಕಡಿಮೆಯಾಗಿದ್ದು ಈ ಸ್ಥಿತಿಗೆ ಒಂದು ಕಾರಣವಾದರೆ, ತೂಬು ರಿಪೇರಿ ಕಾರ್ಯಕ್ಕೆಂದು ನೀರು ಖಾಲಿ ಮಾಡಿರುವುದು ಇನ್ನೊಂದು ಕಾರಣವಾಗಿದೆ.

ಈ ಕೆರೆಯಿಂದ ಕೃಷಿ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಪೂರೈಸಲಾಗುತ್ತದೆ. ಅಲ್ಲದೇ ಸಮೀಪದ ಸಖರಾಯಪಟ್ಟಣಕ್ಕೆ ಕುಡಿಯುವ ನೀರು ಪೂರೈಸಲು ಬಳಕೆ ಮಾಡಿಕೊಳ್ಳಲಾಗುತ್ತದೆ. ಮಳೆಗಾಲದಲ್ಲಿ ಒಮ್ಮೆ ಕೆರೆ ಭರ್ತಿಯಾಗಿದ್ದು, ನಂತರ ಮಳೆ ಕೊರತೆಯಾಗಿದ್ದರಿಂದ ನೀರಿನ ಹರಿವು ಕಡಿಮೆಯಾಯಿತು.

ಕೆರೆ ಏರಿಯ ಮಧ್ಯದಲ್ಲಿರುವ ವೀಕ್ಷಣಾ ಗೋಪುರದ ಕೆಳಗೆ ಅಳವಡಿಸಲಾಗಿರುವ ತೂಬಿನ ದುರಸ್ತಿ ಕಾರ್ಯ ಕೈಗೊಳ್ಳಲು ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಇದ್ದ ನೀರನ್ನೂ ಖಾಲಿ ಮಾಡಿದ್ದಾರೆ. ತೂಬಿನ ಕೊಂತ ಮುರಿದಿದ್ದು, ಅದನ್ನು ನೀರಿನಿಂದ ಮೇಲೆತ್ತಲು ಅಧಿಕಾರಿಗಳು ಹಲವು ರೀತಿಯ ಸಾಹಸ ಮಾಡಿದ್ದಾರೆ. ಕೊಂತ ಮುರಿದಿದ್ದರಿಂದ ಮೇಲೆತ್ತುವ ಸರಳು ಮತ್ತು ಕೊಂತದ ಸಂಪರ್ಕ ಕಡಿತವಾಗಿದೆ. ಕೊಂತ ಮೇಲೆತ್ತದಿದ್ದರೆ ತೂಬಿನಿಂದ ನೀರು ಹೊರಕ್ಕೆ ಹೋಗುವುದಿಲ್ಲ. ಮಳೆಗಾಲಕ್ಕೂ ಮುನ್ನ ಈ ಕಾಮಗಾರಿ ಕೈಗೊಳ್ಳದಿದ್ದರೆ ಇಡೀ ವರ್ಷ ತೂಬಿನಿಂದ ನೀರು ಹರಿಸುವುದೇ ಕಷ್ಟವಾಗುತ್ತಿತ್ತು ಎಂದು ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.



ಮೀನುಗಳ ಮಾರಣ ಹೋಮದ ಬಳಿಕ ಅಳಿದು ಉಳಿದಿರುವ ಮೀನುಗಳನ್ನು ಹಿಡಿದು ಒಣಗಿಸಲು ಹಾಕಿರುವುದು

‘ನೀರಿನ ಕೊರತೆ; ಶುಂಠಿ ಔಷಧ ಕಾರಣ’

‘ಮೀನು ಸಾಕಾಣಿಕೆ ಗುತ್ತಿಗೆ ಪಡೆದಿದ್ದವರ ಮಾಹಿತಿ ಪ್ರಕಾರ 8 ಲಕ್ಷ ಮೀನಿನ ಮರಿಗಳನ್ನು ಕೆರೆಗೆ ಬಿಡಲಾಗಿತ್ತು. ತಾಪಮಾನ ಹೆಚ್ಚಳ ಮತ್ತು ನೀರಿನ ಕೊರತೆ ಮೀನುಗಳ ಸಾವಿಗೆ ಕಾರಣ’ ಎಂದು ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಕುಮಾರಸ್ವಾಮಿ ‘ಪ್ರಜಾವಾಣಿ’ಗೆ ಸ್ಪಷ್ಟಪಡಿಸಿದರು.

‘ಕಳೆದ ವಾರ ಒಂದೆರಡು ಬಾರಿ ಮಳೆಯಾಗಿದ್ದು, ಸುತ್ತಮುತ್ತಲ ಶುಂಠಿ ಹೊಲಗಳಿಂದ ನೀರು ಕೆರೆ ಸೇರಿದೆ. ಶುಂಠಿಗೆ ಬಳಸಿದ್ದ ಕಳೆನಾಶಕ ಔಷಧಿಯೂ ಕೆರೆ ಸೇರಿಕೊಂಡಿದೆ. ನೀರು ಕಡಿಮೆ ಇದ್ದಿದ್ದರಿಂದ ಮೀನುಗಳಿಗೆ ಉಸಿರಾಟದ ತೊಂದರೆ ಆಗಿರಬಹುದು’ ಎಂದು ಅವರು ಹೇಳಿದರು.

ಚಾಲ್ತಿಯಲ್ಲಿದ್ದ ಒಂದು ಕೊಂತದಿಂದ ನೀರು ಖಾಲಿ ಮಾಡಿ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ. ಒಂದೆರಡು ದಿನಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಅವರು ಮಾಹಿತಿ ನೀಡಿದರು.

ನೀರು ಖಾಲಿ ಮಾಡಿದ್ದರಿಂದ ಮೀನುಗಳ ಮಾರಣ ಹೋಮ ನಡೆದಿದೆ. ಕೆರೆಗಳಲ್ಲಿದ್ದ 8 ಲಕ್ಷಕ್ಕೂ ಹೆಚ್ಚು ಮೀನುಗಳಲ್ಲಿ ಬಹುತೇಕವು ಈಗ ಮೃತಪಟ್ಟಿವೆ. ಮೀನುಗಳು ಸಾವಿರಾರು ಸಂಖ್ಯೆಯಲ್ಲಿ ಸತ್ತಿರುವುದರಿಂದ ಕೆರೆಯ ಸುತ್ತ ದುರ್ವಾಸನೆ ಹಬ್ಬಿದೆ. ಅಳಿದುಳಿದ ಮೀನುಗಳನ್ನು ಹಿಡಿಯುವ ಕಾರ್ಯ ಆರಂಭವಾಗಿದೆ. ಒಂದು ವಾರ ಮೀನು ಹಿಡಿಯಲಾಗಿದ್ದು, ವಾರದಲ್ಲೇ ಮೀನುಗಾರರಿಗೆ ಬೇಟೆ ಕಡಿಮೆಯಾಗಿದೆ. ಆದ್ದರಿಂದ ಅವರು ಕೂಡ ಗಂಟುಮೂಟೆ ಕಟ್ಟಿದ್ದಾರೆ.


‘ಮೀನುಗಳು ಸತ್ತಿರುವುದರಿಂದ ಬಲೆಗೆ ಮೀನು ಇಲ್ಲವಾಗಿವೆ. ಸತ್ತಿರುವ ಮೀನು ಹಿಡಿದು ಏನು ಮಾಡುವುದು’ ಎಂದು ಮೀನುಗಾರರು ಪ್ರಶ್ನಿಸುತ್ತಾರೆ.

ಪ್ರಚಾರ ಸಭೆಯಲ್ಲಿ ಶಾಸಕ ರಾಜು ಕಾಗೆ ಆಕ್ರೋಶದ ನುಡಿ

‘ಮೋದಿ ಸತ್ತರೆ ಯಾರೂ ಪ್ರಧಾನಿ ಆಗಲ್ಲವೇ?’

ಪ್ರಜಾವಾಣಿ ವಾರ್ತೆ

ಕಾಗವಾಡ (ಬೆಳಗಾವಿ ಜಿಲ್ಲೆ): ‘ಪ್ರಧಾನಿ ನರೇಂದ್ರ ಮೋದಿ ಸತ್ತರೆ ಈ ದೇಶದಲ್ಲಿ ಮುಂದೆ ಯಾರೂ ಪ್ರಧಾನಿ ಆಗುವುದೇ ಇಲ್ಲವೇ? ಏಕೆ ಮೋದಿ... ಮೋದಿ... ಎಂದು ಕೂಗುತ್ತೀರಿ’ ಎಂದು ಶಾಸಕ ಭರಮಗೌಡ (ರಾಜು) ಕಾಗೆ ಹರಿಹಾಯ್ದರು.



ಭರಮಗೌಡ (ರಾಜು) ಕಾಗೆ

ತಾಲ್ಲೂಕಿನ ಮದಬಾವಿಯಲ್ಲಿ ಮಂಗಳವಾರ ರಾತ್ರಿ ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕಾ ಜಾರಕಿಹೊಳಿ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಯುವಜನರು ಮೋದಿ ಮೋದಿ... ಎನ್ನುತ್ತಾರೆ. ಮೋದಿಯನ್ನು ತೊಗೊಂಡು ನೆಕ್ಕುತ್ತೀರಾ’ ಎಂದೂ ಪ್ರಶ್ನಿಸಿದರು.

‘ನಾನೂ ಪದವೀಧರ. ನಾನೂ ಸಹ ಈ ದೇಶವನ್ನು ಸಮರ್ಥವಾಗಿ ಮುನ್ನಡೆಸುತ್ತೇನೆ ಎನ್ನುವ ಆತ್ಮವಿಶ್ವಾಸವಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬೇಕು, ದೇಶಕ್ಕೆ ಮೋದಿ ಬೇಕು ಎನ್ನುತ್ತಾರೆ. ಮೋದಿ ಇಲ್ಲಿ ಬಂದು ನಿಮ್ಮ ಸಮಸ್ಯೆ ಆಲಿಸುತ್ತಾರೆಯೇ? ಇಲ್ಲಿ ನಿಮಗೆ ಸಮಸ್ಯೆಯಾದರೆ ಸ್ಪಂದಿಸುವುದು ನಾನೇ’ ಎಂದರು.

‘ಉದ್ಯೋಗ ಸೃಷ್ಟಿಸುವುದಾಗಿ ಮೋದಿ 10 ವರ್ಷಗಳಿಂದ ಹೇಳುತ್ತಿದ್ದಾರೆ. ಲಕ್ಷಾಂತರ ಯುವಜನರು ಪದವಿ ಪಡೆದೂ ನಿರುದ್ಯೋಗಿ ಆಗಿದ್ದಾರೆ. ಉದ್ಯೋಗ ಕೊಡಿ ಎಂದು ಮೋದಿ ಅವರಿಗೆ ಕೇಳಿದರೆ ಪಕೋಡ ಮಾರಲು ಹೋಗಿ ಎನ್ನುತ್ತಾರೆ. ಆದರೂ ಯುವಕರು ಮೋದಿ...ಮೋದಿ... ಎನ್ನುತ್ತಿದ್ದಾರೆ’ ಎಂದು ಕಿಡಿ ಕಾರಿದರು.

ವಿದ್ಯುತ್ ಸ್ಥಗಿತ– ಕಾಗೆ ಬೆದರಿಕೆ: ಕಾಗವಾಡ ತಾಲ್ಲೂಕಿನ ಮಂಗಾವತಿ ಮತ್ತು ಜುಗುಳ ಗ್ರಾಮಗಳಲ್ಲಿ ಪ್ರಚಾರ ಮಾಡಿ ಮಾತನಾಡಿದ ಭರಮಗೌಡ (ರಾಜು) ಕಾಗೆ, ‘ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕಾ ಜಾರಕಿಹೊಳಿ ಅವರಿಗೆ ನಿರೀಕ್ಷಿತ ಮತ ಬರದೇ ಇದ್ದರೆ ನಿಮ್ಮೂರಿನ ವಿದ್ಯುತ್ ಕಡಿತಗೊಳಿಸುತ್ತೇನೆ’ ಎಂದು ಬೆದರಿಕೆ ಹಾಕಿದ್ದಾರೆ. ಶಾಸಕರ ಈ ಹೇಳಿಕೆಗಳ ವಿಡಿಯೊ ತುಣುಕುಗಳು ಬುಧವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು.

ಶಾಸಕ ಕಾಗೆ ಅವರಿಗೆ ನೋಟಿಸ್

ಚಿಕ್ಕೋಡಿ: ಪ್ರಧಾನಿ ಸಾವು ಹಾಗೂ ಕಾಂಗ್ರೆಸ್‌ಗೆ ಮತ ನೀಡದಿದ್ದರೆ ವಿದ್ಯುತ್ ಕಡಿತ ಮಾಡುವ ಹೇಳಿಕೆ ನೀಡಿದ ಶಾಸಕ ಭರಮಗೌಡ (ರಾಜು) ಕಾಗೆ ಅವರಿಗೆ ಚಿಕ್ಕೋಡಿ ಜಿಲ್ಲಾ ಚುನಾವಣಾಧಿಕಾರಿ ರಾಹುಲ್ ಶಿಂಧೆ ಅವರು ‘ನೀತಿ ಸಂಹಿತೆ ಉಲ್ಲಂಘನೆ’ ಅಡಿ ಬುಧವಾರ ನೋಟಿಸ್ ನೀಡಿದ್ದಾರೆ.

‘ತಮ್ಮ ಎರಡೂ ಹೇಳಿಕೆಗಳ ಕುರಿತು 24 ಗಂಟೆಯೊಳಗೆ ವಿವರಣೆ ಕೊಡಬೇಕು ಎಂದು ಕಾಗವಾಡ ವಿಧಾನಸಭಾ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಮೂಲಕ ನೋಟಿಸ್ ಜಾರಿ ಮಾಡಲಾಗಿದೆ’ ಎಂದು ರಾಹುಲ್ ಶಿಂಧೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಕ್ಷದ ಪರ ಪ್ರಚಾರ ಆಹಾರ ಶಿರಸ್ತೇದಾರ ಅಮಾನತು

ಪ್ರಜಾವಾಣಿ ವಾರ್ತೆ

ಬೀದರ್: ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವಾಗ ರಾಜಕೀಯ ಪಕ್ಷವೊಂದರ ಪರ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಕೈಗೊಂಡಿದ್ದ ಜಿಲ್ಲೆಯ ಔರಾದ್ (ಬಿ) ತಾಲ್ಲೂಕಿನ ತಹಶೀಲ್ದಾರ್ ಕಚೇರಿಯಲ್ಲಿ ಆಹಾರ ಶಿರಸ್ತೇದಾರ ಆಗಿ ಕೆಲಸ ನಿರ್ವಹಿಸುತ್ತಿದ್ದ ರವಿ ಸೂರ್ಯವಂಶಿ ಅವರನ್ನು ಅಮಾನತುಗೊಳಿಸಿ ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ ಬುಧವಾರ ಆದೇಶ ಹೊರಡಿಸಿದ್ದಾರೆ.

ಸರ್ಕಾರಿ ನೌಕರನಾಗಿ ರಾಜಕೀಯ ಪಕ್ಷದ ಪರ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಕೈಗೊಂಡು ಅನಿಸಿಕೆ ವ್ಯಕ್ತಪಡಿಸುವುದು ನಿಯಮಬಾಹಿರ. ಪ್ರಜಾಪ್ರತಿನಿಧಿ ಕಾಯ್ದೆ ಪ್ರಕಾರ ಇಲಾಖಾ ವಿಚಾರಣೆ ಕಾಯ್ದಿರಿಸಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಅಮಾನತು ಮಾಡಲಾಗಿದೆ. ಕೇಂದ್ರ ಸ್ಥಾನ ಬಿಡತಕ್ಕದಲ್ಲ ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ಯುವತಿ– ಶಾಸಕ ಸಂಭಾಷಣೆ ವಿಡಿಯೊ: ದೂರು

ಪ್ರಜಾವಾಣಿ ವಾರ್ತೆ

ರಾಮನಗರ: ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ರಾಮನಗರದ ಕಾಂಗ್ರೆಸ್ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಮತ್ತು ಯುವತಿ ನಡುವಿನ ಸಂಭಾಷಣೆಯ ವಿಡಿಯೊಗೆ ಸಂಬಂಧಿಸಿದಂತೆ ಬುಧವಾರ ನಗರದ ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ಕಾರ್ಯಕರ್ತೆಯೂ ಆಗಿರುವ 25 ವರ್ಷದ ಯುವತಿಯೇ ಖುದ್ದಾಗಿ ಠಾಣೆಗೆ ಬಂದು ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಶಾಸಕ ಇಕ್ಬಾಲ್ ಹುಸೇನ್ ಮತ್ತು ನನ್ನ ನಡುವಿನ ಸಂಬಂಧ ತಂದೆ, ಮಗಳ ಸಂಬಂಧವಾಗಿದೆ. ನನ್ನ ಜೊತೆಯಾಗಲೀ ಅಥವಾ ಬೇರೆಯವರ ಜೊತೆಯಾಗಲೀ ಅವರು ಅಸಭ್ಯವಾಗಿ ವರ್ತಿಸಿಲ್ಲ’ ಎಂದು ಯುವತಿ ದೂರಿನಲ್ಲಿ ಹೇಳಿದ್ದಾರೆ.

‘ನಾನು ಶಾಸಕರೊಂದಿಗೆ ವಾಟ್ಸ್‌ಆ್ಯಪ್ ವಿಡಿಯೊ ಕಾಲ್‌ನಲ್ಲಿ ಮಾತನಾಡಿರುವಂತೆ ಅಶ್ಲೀಲ ವಿಡಿಯೊ ಸೃಷ್ಟಿಸಿರುವ ತಮ್ಮಣ್ಣಗೌಡ ಗುಂಡ್ಕಲ್ ಎಂಬುವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಅದನ್ನು ಹಂಚಿಕೊಂಡು ನನ್ನ ಮಾನಕ್ಕೆ ಧಕ್ಕೆ ತಂದಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಯುವತಿ ದೂರಿನಲ್ಲಿ ತಿಳಿಸಿದ್ದಾರೆ.

ಸಿದ್ದರಾಮಯ್ಯ, ಡಿಕೆಶಿ ಹಾಜರಿಗೆ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡಿ ಪಕ್ಷದ ವರ್ಚಸ್ಸಿಗೆ ಧಕ್ಕೆ ತಂದಿದ್ದಾರೆ’ ಎಂದು ಆರೋಪಿಸಿ ಬಿಜೆಪಿ ದಾಖಲಿಸಿರುವ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೂನ್ 1ರಂದು ಹಾಜರಾಗಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಕಾಲಾವಕಾಶ ನೀಡಿದೆ.

ಈ ಸಂಬಂಧ ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಬಿ.ಎಸ್.ಕೇಶವಪ್ರಸಾದ್ ಸಲ್ಲಿಸಿರುವ ಖಾಸಗಿ ದೂರನ್ನು ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ’ದ 42ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶೆ ಜೆ.ಪ್ರೀತ್ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಆರೋಪಿಗಳ ಪರ ವಕೀಲರು, ‘ಚುನಾವಣೆಯ ನಿಮಿತ್ತ ನಮ್ಮ ಅರ್ಜಿದಾರರು ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಇನ್ನಷ್ಟು ಕಾಲಾವಕಾಶ ನೀಡಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು ಜೂನ್ 1ಕ್ಕೆ ಹಾಜರಾಗುವಂತೆ ಆದೇಶಿಸಿ ವಿಚಾರಣೆ ಮುಂದೂಡಿದರು. ಈ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿಯವರೂ ಆರೋಪಿಯಾಗಿದ್ದು, ಅವರೂ ಜೂನ್ 1ರಂದು ಹಾಜರಾಗುವಂತೆ ಈಗಾಗಲೇ ಸಮನ್ಸ್ ಜಾರಿಗೊಳಿಸಲಾಗಿದೆ. ದೂರುದಾರರ ಪರ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್ ಹಾಜರಿದ್ದರು.

ಪ್ರಕರಣವೇನು?: ‘2023ರಲ್ಲಿ ನಡೆದ ಕರ್ನಾಟಕ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಮತ್ತು ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ 2023ರ ಮೇ 5ರಂದು ಜಾಹೀರಾತು ನೀಡಿ, ಆಡಳಿತಾರೂಢ ರಾಜ್ಯ ಬಿಜೆಪಿ ಸರ್ಕಾರ ಶೇ 40ರಷ್ಟು ಕಮಿಷನ್ ಸರ್ಕಾರ. ಇದು ಕಳೆದ ನಾಲ್ಕು ವರ್ಷಗಳಲ್ಲಿ ₹1.50 ಲಕ್ಷ ಕೋಟಿ ಲೂಟಿ ಹೊಡೆದಿರುವ ಭ್ರಷ್ಟ ಸರ್ಕಾರ’ ಎಂದು ಆರೋಪಿಸಿದ್ದರು. ‘ಈ ಆರೋಪಕ್ಕೆ ಫಿರ್ಯಾದುದಾರರೇ ಇಲ್ಲ. ಇದು ರಾಷ್ಟ್ರೀಯ ಪಕ್ಷವೊಂದರ ವಿರುದ್ಧ ಮಾಡಲಾಗಿರುವ ಆಧಾರ ರಹಿತ, ಪೂರ್ವಗ್ರಹ ಪೀಡಿತ ಮತ್ತು ಮಾನಹಾನಿಕರ ಆರೋಪ’ ಎಂದು ಈ ಖಾಸಗಿ ದೂರು ದಾಖಲಿಸಲಾಗಿದೆ.

ಭೂಪರಿವರ್ತನೆ ವಿರುದ್ಧ ರಾಷ್ಟ್ರಪತಿಗೆ ಪತ್ರ

ಮಡಿಕೇರಿ: ಇಲ್ಲಿನ ಸಿದ್ದಾಪುರದ ಕಾವೇರಿ ಜಲಾನಯನ ಪ್ರದೇಶದಲ್ಲಿ 2,400 ಎಕರೆ ಕಾಫಿ ತೋಟವನ್ನು ಭೂಪರಿವರ್ತನೆ ಮಾಡಬಾರದು ಎಂದು ಕೋರಿ ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ರಾಷ್ಟ್ರಪತಿ, ಪ್ರಧಾನಮಂತ್ರಿ, ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ, ಯುನೆಸ್ಕೊದ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

‘ದೊಡ್ಡ ಪ್ರಮಾಣದಲ್ಲಿ ಕಾಫಿ ತೋಟವನ್ನು ಭೂಪರಿವರ್ತನೆ ಮಾಡಿ ಅಲ್ಲಿ ಉಪನಗರ, ಮಿನಿನಗರಗಳು ಹಾಗೂ ಬಡಾವಣೆಗಳು ನಿರ್ಮಾಣವಾದರೆ ಮುಂದೆ ಭಾರಿ ಉತ್ಪಾತಕ್ಕೆ ಕಾರಣವಾಗಲಿದೆ’ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಕಾಫಿ ತೋಟ ಭೂಪರಿವರ್ತನೆ ಮಾಡಿ ಅಲ್ಲಿ ಬಡಾವಣೆಗಳನ್ನು ನಿರ್ಮಿಸುವುದರಿಂದ ಸಾವಿರಾರು ಮರಗಳ ಹನನವಾಗುತ್ತದೆ; ಅಪೂರ್ವ ಜೀವವೈವಿಧ್ಯಗಳು ನಾಶವಾಗುತ್ತವೆ. ಹಸಿರು ಹೊದಿಕೆ ಇಲ್ಲವಾಗಿ ಪರಿಸರಕ್ಕೆ ತೊಂದರೆ ಆಗುತ್ತದೆ. ಹಲವು ತೊರೆಗಳು, ಜಲಮೂಲಗಳು ಬತ್ತಿ ಹೋಗಿ, ಅವು ಸೇರುವ ನದಿಗಳಲ್ಲಿ ನೀರು ಕಡಿಮೆಯಾಗುತ್ತದೆ’ ಎಂದು ತಿಳಿಸಿದ್ದಾರೆ.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಎನ್.ಯು.ನಾಚಪ್ಪ, ‘ಪತ್ರವನ್ನು ಪ್ರಧಾನಮಂತ್ರಿ, ರಾಷ್ಟ್ರಪತಿ ಸೇರಿದಂತೆ ಸಂಬಂಧಪಟ್ಟವರಿಗೆ ರವಾನಿಸಲಾಗಿದೆ. ಸದ್ಯದಲ್ಲೇ ಪ್ರತಿಭಟನೆಯನ್ನೂ ನಡೆಸಿ ಗಮನಸೆಳೆಯಲಾಗುವುದು’ ಎಂದರು.

‘ದೊಡ್ಡ ಪ್ರಮಾಣದಲ್ಲಿ ಭೂಪರಿವರ್ತನೆ ಕೋರಿ ಯಾವುದೇ ಅರ್ಜಿಗಳು ಬಂದಿಲ್ಲ’ ಎಂದು ಕೊಡಗು ಜಿಲ್ಲಾಧಿಕಾರಿ ವೆಂಕಟ್ ರಾಜಾ ಪ್ರತಿಕ್ರಿಯಿಸಿದರು.

ಬೇಗೆಯಿಂದ ಪರಿತಪಿಸುತ್ತಿರುವ ಕುರಿಗಾಹಿಗಳು

ಬಿರುಬಿಸಿಲು: ಟಗರುಗಳಿಗೆ ಫ್ಯಾನ್ ವ್ಯವಸ್ಥೆ

• ಎಚ್.ಎಸ್.ಘಂಟಿ

ಗುಳೇದಗುಡ್ಡ (ಬಾಗಲಕೋಟೆ ಜಿಲ್ಲೆ): ಗುಳೇದಗುಡ್ಡ ಪಟ್ಟಣ ಹೊರತುಪಡಿಸಿದರೆ ತಾಲ್ಲೂಕಿನಲ್ಲಿ 38 ಗ್ರಾಮಗಳಿದ್ದು ಇಲ್ಲಿ ಕೆರೆ, ಬಾವಿ, ಹಳ್ಳ ಕೊಳ್ಳಗಳು ಸಂಪೂರ್ಣವಾಗಿ ಬತ್ತಿವೆ. ಪ್ರಾಣಿ ಪಕ್ಷಿಗಳಿಗೆ ಹೆಚ್ಚಿದ ಬಿರುಬಿಸಿಲಿನಿಂದ ಸಂಕಷ್ಟವಾಗಿದೆ.

ತಾಲ್ಲೂಕಿನ ಕೊಟ್ನಳ್ಳಿ, ಸಬ್ಬಲಹುಣಸಿ, ನಾಗರಾಳ ಎಸ್.ಪಿ, ಹಾನಾಪುರ, ಹುಲ್ಲಿಕೇರಿ ಎಸ್.ಪಿ ಮುಂತಾದ ಗ್ರಾಮಗಳಲ್ಲಿ ಕುರಿಗಾಹಿಗಳು ಕುರಿ ಮೇಯಿಸುವ ವೇಳೆ ಬದಲಿಸಿಕೊಂಡಿದ್ದಾರೆ. ಬೆಳಿಗ್ಗೆ 8 ರಿಂದ 11 ಗಂಟೆ, ಸಂಜೆ 4 ರಿಂದ 6 ಗಂಟೆಯವರೆಗೆ ಮಾತ್ರ ಮೇಕೆ, ಕುರಿ ಮೇಯಿಸುತ್ತಾರೆ. ಮಧ್ಯಾಹ್ನ ಮರಗಳ ನೆರಳಿನ ಆಶ್ರಯ ಪಡೆಯುತ್ತಾರೆ.



ಗುಳೇದಗುಡ್ಡ ತಾಲ್ಲೂಕಿನ ಗ್ರಾಮವೊಂದರಲ್ಲಿ ಟಗರುಗಳಿಗೆ ಫ್ಯಾನ್ ವ್ಯವಸ್ಥೆ ಮಾಡಲಾಗಿದೆ

‘ಬಿಸಿಲಿನ ಧಗೆಯಿಂದ ಕುರಿ, ಟಗರುಗಳು ಮೃತಪಟ್ಟಿವೆ. ಬಿಸಿಲಿನ ಬೇಗೆ ತಪ್ಪಿಸಲು ಶೆಡ್, ಮನೆಯಲ್ಲಿ ಪ್ರತೇಕ ಕೊಠಡಿ ಮಾಡಿ ಅಲ್ಲಿ ಟಗರುಗಳಿಗೆ ಫ್ಯಾನ್ ಹಚ್ಚಲಾಗಿದೆ’ ಎಂದು ಸಬ್ಬಲಹುಣಸಿಯ ಕುರಿಗಾರ ಮಲ್ಲಪ್ಪ ನಡಶೇಸಿ ಹೇಳಿದರು.

ಬಿಸಿಲಿನ ತಾಪಕ್ಕೆ ಸಾಮೂಹಿಕ ದನ ಮೇಯಿಸುವುದನ್ನು ಹಳ್ಳಿಗಳಲ್ಲಿ ನಿಲ್ಲಿಸಿದ್ದಾರೆ. ದನದ ಮಾಲೀಕರು ಮನೆಯಲ್ಲೇ ಮೇವು, ನೀರಿನ ವ್ಯವಸ್ಥೆ ಮಾಡಿದ್ದಾರೆ.

> **ತಾಲ್ಲೂಕಿನಲ್ಲಿ 38 ಗ್ರಾಮಗಳಿದ್ದು ಇಲ್ಲಿ ಕೆರೆ, ಬಾವಿ, ಹಳ್ಳ ಕೊಳ್ಳಗಳು ಸಂಪೂರ್ಣವಾಗಿ ಬತ್ತಿವೆ. ಪ್ರಾಣಿ, ಪಕ್ಷಿಗಳು ಹೆಚ್ಚಿದ ಬಿರುಬಿಸಿಲಿನಿಂದ ತೀವ್ರ ಸಂಕಷ್ಟಕ್ಕೆ ಒಳಗಾಗಿವೆ.**
> **ಡಾ.ಸುರೇಶ ಜಾಧವ,** ಪಶು ವೈದ್ಯಾಧಿಕಾರಿ

‘ಬೇಸಿಗೆಯಲ್ಲಿ ಜಾನುವಾರುಗಳಿಗೆ ಉತ್ತಮ ನೀರನ್ನು ಕುಡಿಸಬೇಕು. ದನಕರು ಮತ್ತು ಕುರಿಗಳಿಗೆ ಗ್ರಾಮದಲ್ಲಿ ನೀರಿನ ತೊಟ್ಟಿ ನಿರ್ಮಿಸಲಾಗುತ್ತಿದೆ. ಹೀಗಾಗಿ ಪಶುಗಳಿಗೆ ಸದ್ಯ ಯಾವುದೇ ರೋಗಗಳು ಕಂಡು ಬಂದಿಲ್ಲ’ ಎಂದು ಪಶು ವೈದ್ಯಾಧಿಕಾರಿ ಡಾ.ಸುರೇಶ ಜಾಧವ ಹೇಳಿದರು.

ಹೋಮ ಮಾಡಿ ಬೆಂಗಳೂರಿಗೆ ತೆರಳಿದ ಎಚ್‌.ಡಿ. ರೇವಣ್ಣ ದಂಪತಿ • ತನಿಖೆಗೆ ಸಹಕಾರ ನೀಡುವುದಾಗಿ ಭರವಸೆ

ಎಸ್‌ಐಟಿ: ಸಾಧ್ಯವಾಗದ ಸ್ಥಳ ಮಹಜರು

ಪ್ರಜಾವಾಣಿ ವಾರ್ತೆ

ಹಾಸನ: ಮನೆ ಕೆಲಸದ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಪ್ರಕರಣದ ಆರೋಪಿಯಾಗಿರುವ ಜೆಡಿಎಸ್ ಶಾಸಕ ಎಚ್‌.ಡಿ. ರೇವಣ್ಣ ಎಸ್‌ಐಟಿಯಿಂದ ನೋಟಿಸ್ ಜಾರಿಯಾಗುತ್ತಲೇ, ಹೊಳೆನರಸೀಪುರದ ತಮ್ಮ ಮನೆಯಲ್ಲಿ ಬುಧವಾರ ಬೆಳಿಗ್ಗೆ ಹೋಮ, ವಿಶೇಷ ಪೂಜೆ ನೆರವೇರಿಸಿ ದೇವರ ಮೊರೆ ಹೋಗಿದ್ದಾರೆ.

ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ಪ್ರಮುಖ ಆರೋಪಿಯಾಗಿರುವ ರೇವಣ್ಣ ಹಾಗೂ ಸಂಸದ ಪ್ರಜ್ವಲ್ ರೇವಣ್ಣ ಅವರ ಮನೆ ಬಾಗಿಲಿಗೆ ಎಸ್‌ಐಟಿ ತಂಡ ಮಂಗಳವಾರ ನೋಟಿಸ್ ಅಂಟಿಸಿತ್ತು. ಅದರಂತೆ ಬುಧವಾರ ಸಂಜೆ ಹೊಳೆನರಸೀಪುರಕ್ಕೆ ಬಂದು ಸ್ಥಳ ಮಹಜರು ನಡೆಸಲು ನಿರ್ಧರಿಸಿತ್ತು. ಆದರೆ, ರೇವಣ್ಣ ದಂಪತಿ ಬೆಂಗಳೂರಿಗೆ ತೆರಳಿದ್ದರಿಂದ ತಂಡ ಮನೆಗೆ ಭೇಟಿ ನೀಡಲು ಸಾಧ್ಯವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಮನೆಯಲ್ಲಿಯೇ ಹೋಮ: ಬೆಂಗಳೂರಿನಿಂದ ಮಂಗಳವಾರ ರಾತ್ರಿ ಹೊಳೆನರಸೀಪುರಕ್ಕೆ ಬಂದಿದ್ದ ರೇವಣ್ಣ, ಬುಧವಾರ ಬೆಳಗಿನ ಜಾವ ಮನೆಯಲ್ಲಿ ಹೋಮ ನೆರವೇರಿಸಿದರು. ಮನೆಯೊಳಗೇ ಹೋಮ ಕುಂಡ ನಿರ್ಮಿಸಿ, ಬೆಳಿಗ್ಗೆಯಿಂದ ಪೂಜೆ ಸಲ್ಲಿಸಿದರು. ಪೂರ್ಣಾಹುತಿ ನೆರವೇರಿಸಿದ ನಂತರ ರೇವಣ್ಣ ಹಾಗೂ ಭವಾನಿ ಪ್ರತ್ಯೇಕ ಕಾರುಗಳಲ್ಲಿ ಬೆಂಗಳೂರಿಗೆ ತೆರಳಿದರು ಎಂದು ತಿಳಿದುಬಂದಿದೆ.

ಈ ವೇಳೆ ಮಾತನಾಡಿದ ರೇವಣ್ಣ, 'ಎಸ್‌ಐಟಿ ಅವರು ಮನೆಗೆ ನೋಟಿಸ್ ಅಂಟಿಸಿದ್ದಾರೆ. ಅದರಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುತ್ತೇನೆ. ನಂತರ ಏನು ಮಾಡಬೇಕು ಎಂದು ತೀರ್ಮಾನಿಸಲಾಗುವುದು. ತನಿಖೆಗೆ ಎಲ್ಲ ರೀತಿಯಲ್ಲೂ ಸಹಕರಿಸುತ್ತೇನೆ. ನಾನು ಯಾವುದೇ ತಪ್ಪು ಮಾಡಿಲ್ಲ. ಶಕ್ತಿ ಇದೆ, ಎಲ್ಲವನ್ನೂ ಎದುರಿಸುತ್ತೇನೆ. ಎಲ್ಲ ಸರಿ ಹೋಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಈ ಎಲ್ಲ ಆರೋಪಗಳ ಹಿಂದೆ ದೊಡ್ಡ ಷಡ್ಯಂತ್ರ ಅಡಗಿದೆ. ನಾನು ಯಾವುದೇ ತನಿಖೆ ಎದುರಿಸಲು ಸಿದ್ಧ. ಆ ಶಕ್ತಿ ಇದೆ' ಎಂದರು.

ರೇವಣ್ಣ ಅವರು ಗುರುವಾರ ಎಸ್‌ಐಟಿ ಮುಂದೆ ವಿಚಾರಣೆಗೆ ಹಾಜರಾಗುವ ಸಾಧ್ಯತೆ ಇದೆ. ಅದಕ್ಕೂ ಮುನ್ನ ನ್ಯಾಯಾಲಯದಿಂದ ತಡೆಯಾಜ್ಞೆ ಪಡೆಯಲು ಪ್ರಯತ್ನಿಸುತ್ತಿದ್ದು, ಅದಕ್ಕಾಗಿಯೇ ಬುಧವಾರ ಬೆಂಗಳೂರಿಗೆ ತೆರಳಿದ್ದಾರೆ ಎಂದು ಹೇಳಲಾಗುತ್ತಿದೆ.

ಹೇಳಿಕೆ ನೀಡಲು ಸಂತ್ರಸ್ತೆಯರ ನಕಾರ

'ಪೆನ್‌ಡ್ರೈವ್‌ನಲ್ಲಿರುವ ವಿಡಿಯೊಗಳಲ್ಲಿ ಕಾಣಿಸಿಕೊಂಡಿರುವ ಸಂತ್ರಸ್ತೆಯರು ಎಸ್‌ಐಟಿ ವಿಚಾರಣೆಗೆ ಸಹಕಾರ ನೀಡುತ್ತಿಲ್ಲ' ಎಂದು ಮೂಲಗಳು ತಿಳಿಸಿವೆ.

'ನಮ್ಮನ್ನು ಏನೂ ಕೇಳಬೇಡಿ, ನಾವು ಏನನ್ನೂ ಹೇಳುವುದಿಲ್ಲ. ಒಂದು ವೇಳೆ ನಮ್ಮನ್ನು ಬಲವಂತ ಮಾಡಿದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ' ಎಂದು ಕೆಲ ಸಂತ್ರಸ್ತೆಯರು ಎಸ್‌ಐಟಿ ತಂಡಕ್ಕೆ ತಿಳಿಸಿದ್ದಾರೆ. ಇದರಿಂದಾಗಿ ತನಿಖೆಗೆ ದೊಡ್ಡ ಅಡ್ಡಿ ಉಂಟಾಗಿದೆ. ವಿಡಿಯೊದಲ್ಲಿರುವ ಇನ್ನೂ ಕೆಲವರು ಸಂಪರ್ಕಕ್ಕೆ ಸಿಗುತ್ತಿಲ್ಲ' ಎಂದು ತಿಳಿದು ಬಂದಿದೆ.

ಕಾರ್ತಿಕ್ ವಿದೇಶಕ್ಕೆ ತೆರಳಿದರೆ?

ಮಂಗಳವಾರ ಅಜ್ಞಾತ ಸ್ಥಳದಿಂದ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿ, ಪೆನ್‌ಡ್ರೈವ್ ಕುರಿತು ಮಾಹಿತಿ ನೀಡಿದ್ದ ಪ್ರಜ್ವಲ್ ರೇವಣ್ಣ ಅವರ ಮಾಜಿ ಕಾರು ಚಾಲಕ ಕಾರ್ತಿಕ್, ಇದೀಗ ವಿದೇಶಕ್ಕೆ ತೆರಳಿದ್ದಾರೆ ಎನ್ನುವ ಮಾತುಗಳು ಜಿಲ್ಲೆಯಲ್ಲಿ ಕೇಳಿಬರುತ್ತಿವೆ.

'ಬಿಜೆಪಿ ಮುಖಂಡ ದೇವರಾಜೇಗೌಡ ಅವರಿಗೆ ಮಾತ್ರ ವಿಡಿಯೊಗಳನ್ನು ನೀಡಿದ್ದೇನೆ. ಎಸ್‌ಐಟಿ ಮುಂದೆ ಎಲ್ಲವನ್ನೂ ಹೇಳುತ್ತೇನೆ' ಎಂದಿದ್ದ ಕಾರ್ತಿಕ್ ದಿಢೀರನೆ ವಿದೇಶಕ್ಕೆ ಹಾರಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದೆ.

ಮೋದಿ ಪರಿವಾರದ ವ್ಯಕ್ತಿ ಪ್ರಜ್ವಲ್: ಸುಪ್ರಿಯಾ ಶ್ರೀನೇತ್

ಬೆಂಗಳೂರು: ರಾಕ್ಷಸೀ ಕೃತ್ಯ ಎಸಗಿರುವ ಪ್ರಜ್ವಲ್ ರೇವಣ್ಣ ಅವರು ನರೇಂದ್ರ ಮೋದಿ ಪರಿವಾರದ ವ್ಯಕ್ತಿ. ಇಂತಹ ಅಭ್ಯರ್ಥಿ ಪರವಾಗಿ 15 ದಿನಗಳ ಹಿಂದಷ್ಟೇ ಪ್ರಧಾನಿ ಮತಯಾಚಿಸಿದ್ದಾರೆ. ಆರೋಪಿ ವಿದೇಶಕ್ಕೆ ಪರಾರಿಯಾಗಲು ಕೇಂದ್ರ ಸರ್ಕಾರದ ಸಹಕಾರವಿದೆ ಎಂದು ಎಐಸಿಸಿ ಮಾಧ್ಯಮ, ಸಂವಹನ ವಿಭಾಗದ ಅಧ್ಯಕ್ಷೆ ಸುಪ್ರಿಯಾ ಶ್ರೀನೇತ್ ಆರೋಪಿಸಿದರು.

ಪ್ರಿಯಾಂಕಾ ಗಾಂಧಿ ಮಾಂಗಲ್ಯ ನೋಡಲು ಹೋಗುವುದೂ ಬಿಜೆಪಿ ನಾಯಕರಿಗೆ ಗೊತ್ತಾಗುತ್ತದೆ. 'ಇಷ್ಟು ದೊಡ್ಡ ಆರೋಪಿ ತಪ್ಪಿಸಿಕೊಂಡು ಹೋಗುವುದು ತಿಳಿಯಲಿಲ್ಲವೇ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು.

ಮಹಿಳೆಯ ಮೇಲೆ ಶೋಷಣೆ ನಡೆದಾಗ ಪ್ರಧಾನಿ ಮೋದಿ ಅವರು ಕಣ್ಣು ಮುಚ್ಚಿಕೊಳ್ಳುವುದಷ್ಟೇ ಅಲ್ಲ, 500 ಮೀಟರ್ ದೂರ ನಿಲ್ಲುತ್ತಾರೆ. ಪ್ರಜ್ವಲ್ ರೇವಣ್ಣನ ಕರ್ಮಕಾಂಡಗಳ ಮಾಹಿತಿಯನ್ನು ಹಾಸನದ ಸ್ಥಳೀಯ ಬಿಜೆಪಿ ಮುಖಂಡರು ಡಿಸೆಂಬರ್‌ನಲ್ಲೇ ತಮ್ಮ ಪಕ್ಷದ ವರಿಷ್ಠರ ಗಮನಕ್ಕೆ ತಂದಿದ್ದಾರೆ. ಪ್ರಧಾನಿಗೆ ದುಷ್ಕೃತ್ಯಗಳ ಬಗ್ಗೆ ಮೊದಲೇ ಮಾಹಿತಿ ಇದ್ದರೂ, ಒಂದೇ ವೇದಿಕೆ ಹಂಚಿಕೊಂಡಿದ್ದಾರೆ. ಮೈತ್ರಿ ಮಾತುಕತೆ ವೇಳೆ ದೆಹಲಿಯಲ್ಲೂ ಭೇಟಿ ಮಾಡಿದ್ದಾರೆ ಎಂದು ಟೀಕಿಸಿದರು.

ಪ್ರಜ್ವಲ್ ರೇವಣ್ಣ ಎಸಗಿರುವ ಕೃತ್ಯ ನೋಡಿದರೆ ಆಘಾತ ಆಗುತ್ತದೆ. ಸಾವಿರಾರು ಮಹಿಳೆಯರ ಮೇಲೆ ಎಸಗಿರುವ ಕೃತ್ಯವನ್ನು ತಾನೇ ಚಿತ್ರೀಕರಣ ಮಾಡಿಕೊಂಡಿದ್ದಾನೆ. ಮನೆಗೆಲಸದವರು, ಪಕ್ಷದ ಕಾರ್ಯಕರ್ತರು, ಜನಪ್ರತಿನಿಧಿಗಳು, ಸರ್ಕಾರಿ ನೌಕರರ ಮೇಲೆ ದೌರ್ಜನ್ಯ ಎಸಗಿದ್ದಾನೆ. 'ಇದು ದೇಶದ ದೊಡ್ಡ ಅತ್ಯಾಚಾರ ಪ್ರಕರಣ ಎಂದರು.

ಮಣಿಪುರದಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರ, ಕುಲದೀಪ್ ಸಿಂಗ್ ಸೆಂಗಾರ್ ಪ್ರಕರಣ, ಬ್ರಿಜ್ ಭೂಷಣ್ ಸಿಂಗ್ ನಡೆಸಿದ ದೌರ್ಜನ್ಯ ಪ್ರಕರಣಗಳೇ ಬಿಜೆಪಿ ಮನಸ್ಥಿತಿಗೆ ಸಾಕ್ಷಿ. ಸ್ಮೃತಿ ಇರಾನಿ ಮೌನವ್ರತ ಆಚರಿಸುತ್ತಿದ್ದಾರೆ. ರಾಷ್ಟ್ರೀಯ ಮಹಿಳಾ ಆಯೋಗ ವಿರೋಧ ಪಕ್ಷದ ನಾಯಕರಿಗೆ ನೋಟಿಸ್ ನೀಡುವುದಕ್ಕೆ ಮಾತ್ರ ಸೀಮಿತವಾಗಿದೆ ಎಂದು ಟೀಕಿಸಿದರು.

‘ಉಮೇಶ್ ರೆಡ್ಡಿಗಿಂತ ಹತ್ತು ಪಟ್ಟು ಹೆಚ್ಚು ವಿಕೃತಕಾಮಿ’

ಬೀದರ್: 'ಸಂಸದ ಪ್ರಜ್ವಲ್ ರೇವಣ್ಣ ಉಮೇಶ್ ರೆಡ್ಡಿಗಿಂತ ಹತ್ತು ಪಟ್ಟು ಹೆಚ್ಚು ವಿಕೃತಕಾಮಿ' ಎಂದು ಕಾಂಗ್ರೆಸ್ ಮಹಿಳಾ ಘಟಕದ ರಾಜ್ಯ ಅಧ್ಯಕ್ಷೆ ಪುಷ್ಪಾ ಅಮರನಾಥ್ ಆರೋಪಿಸಿದರು.

'ನಿರ್ಭಯಾ ಅತ್ಯಾಚಾರ ಪ್ರಕರಣ ಇಡೀ ದೇಶವನ್ನು ಅಲ್ಲಾಡಿಸಿತ್ತು. ಕರ್ನಾಟಕದಲ್ಲಿ ವಿಕೃತಕಾಮಿ ಉಮೇಶ್ ರೆಡ್ಡಿ ನಡೆಸಿದ ಅತ್ಯಾಚಾರ, ಸರಣಿ ಕೊಲೆ ಪ್ರಕರಣ ರಾಜ್ಯವನ್ನು ಬೆಚ್ಚಿ ಬೀಳಿಸಿತ್ತು. ಅದಕ್ಕಿಂತ ಭೀಕರವಾಗಿ ಇಡೀ ಪ್ರಪಂಚ ತಿರುಗಿ ನೋಡುವಂತಹ ಘಟನೆ ಹಾಸನದಲ್ಲಿ ನಡೆದಿದೆ. [illegible] ಒಬ್ಬ ಸಂಸದ, ಜನರ ಪರವಾಗಿ ಕೆಲಸ ಮಾಡಬೇಕಾದವನು ಹೀನಾಯ ಕೃತ್ಯವೆಸಗಿ ಕರ್ನಾಟಕದ ಮಾನವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹರಾಜು ಹಾಕಿದ್ದಾನೆ. ಇದರಿಂದ ಹೆಣ್ಣು ಮಕ್ಕಳ ಮಾನ ಬೀದಿಗೆ ಬಿದ್ದಿದೆ' ಎಂದು ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಎನ್‌ಡಿಎ ಮೈತ್ರಿಕೂಟದಿಂದ ಜೆಡಿಎಸ್ ಹೊರಹಾಕಲಿ: ರಾಜಣ್ಣ

ಪ್ರಜಾವಾಣಿ ವಾರ್ತೆ


ಕೆ.ಎನ್. ರಾಜಣ್ಣ

ಬಾಗಲಕೋಟೆ: ‘ಬಿಜೆಪಿಗೆ ಹೆಣ್ಣುಮಕ್ಕಳ ಬಗ್ಗೆ ನಿಜವಾದ ಕಾಳಜಿ ಇದ್ದರೆ, ಎನ್‌ಡಿಎ ಮೈತ್ರಿಕೂಟದಿಂದ ಜೆಡಿಎಸ್ ಪಕ್ಷವನ್ನು ಹೊರ ಹಾಕಬೇಕು’ ಎಂದು ಸಚಿವ ಕೆ.ಎನ್. ರಾಜಣ್ಣ ಆಗ್ರಹಿಸಿದರು.

‘ಭಾರತ್ ಮಾತಾಕೀ ಜೈ ಎನ್ನುವ ಬಿಜೆಪಿಯವರು ಮಹಿಳೆಯರ ಮೇಲೆ ದೌರ್ಜನ್ಯವಾದಾಗ ಮಾತನಾಡಲ್ಲ. ಮೈತ್ರಿ ಕೂಟದಲ್ಲಿರುವ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ವಿಡಿಯೊ ಹರಿದಾಡುತ್ತಿವೆ. ಜೆಡಿಎಸ್ ಜೊತೆ ಮೈತ್ರಿ ಕಡಿದುಕೊಂಡು, ಕಾಳಜಿ ಪ್ರದರ್ಶಿಸಲಿ’ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ವಿಡಿಯೊ ಬಿಡುಗಡೆ ಮಾಡಿದ್ದು ಯಾರು ಎಂಬುದನ್ನು ಪ್ರಶ್ನಿಸುವ ಮೂಲಕ ಪ್ರಕರಣದ ದಿಕ್ಕು ತಪ್ಪಿಸುವ ಕೆಲಸ ಜೆಡಿಎಸ್ ಮಾಡುತ್ತಿದೆ. ಕೃತ್ಯ ಎಸಗಿದ್ದು ಯಾಕೆ? ಎಂಬುದನ್ನೂ ಪ್ರಶ್ನಿಸಬೇಕು’ ಎಂದರು.

ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣವನ್ನು ಪಕ್ಷ ಬೆಂಬಲಿಸುವುದಿಲ್ಲ. ಸಿದ್ದರಾಮಯ್ಯ ಕೆಳಗಿಳಿದು ಬಿಜೆಪಿಗೆ ಅಧಿಕಾರ ನೀಡಿದರೆ 24 ಗಂಟೆಯಲ್ಲಿ ಪ್ರಜ್ವಲ್ ವಿರುದ್ಧ ಕ್ರಮಕೈಗೊಳ್ಳುತ್ತೇವೆ
ಆರ್. ಅಶೋಕ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಚುನಾವಣೆಯಲ್ಲಿ ಗೆದ್ದರೆ, ಪ್ರಜ್ವಲ್ ರೇವಣ್ಣ ಎನ್‌ಡಿಎ ಮೈತ್ರಿಕೂಟದ ಸಂಸದರಾಗುತ್ತಾರೆ. ಜೆಡಿಎಸ್‌ನಲ್ಲಿ ಇರುವ ಅವರ ವಿರುದ್ಧ ಆ ಪಕ್ಷವೇ ಕ್ರಮ ಕೈಗೊಳ್ಳಬೇಕು
ಮಾಳವಿಕಾ ಅವಿನಾಶ, ಬಿಜೆಪಿ ವಕ್ತಾರೆ

ಕರ್ನಾಟಕದಲ್ಲಿ ಸಂಸದ ಪ್ರಜ್ವಲ್ ರೇವಣ್ಣ ಅವರ ವಿರುದ್ಧ ಕಾಂಗ್ರೆಸ್ ಸರ್ಕಾರ ಏಕೆ ಕ್ರಮ ಜರುಗಿಸುತ್ತಿಲ್ಲ, ಕುಟುಂಬ ಅಥವಾ ಪಕ್ಷವನ್ನು ಪರಿಗಣಿಸದೇ ಕಠಿಣ ಕ್ರಮ ಜರುಗಿಸಬೇಕು ಎಂದು ನಾನು ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಶ್ನಿಸುತ್ತೇನೆ
ಅನುರಾಗ್ ಠಾಕುರ್, ಕೇಂದ್ರ ಸಚಿವ

ಪ್ರಜ್ವಲ್‌ಗೆ ಒಂದೇ ದಿನದಲ್ಲಿ ವೀಸಾ ಹೇಗೆ ಸಿಕ್ಕಿತು ಎಂದು ಶಾಸಕ ವಿನಯ್ ಕುಲಕರ್ಣಿ ಪ್ರಶ್ನಿಸುತ್ತಾರೆ. ವೀಸಾ ಜರ್ಮನಿ ಸರ್ಕಾರ ಕೊಡುತ್ತದೆ. ವೀಸಾ ಕೊಡುವವರು ಕೇಂದ್ರ ಸರ್ಕಾರದವರಲ್ಲ. ಅಷ್ಟು ಗೊತ್ತಿಲ್ಲವಾ?
ಬಸವರಾಜ ಬೊಮ್ಮಾಯಿ, ಹಾವೇರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ



ಮತದಾನ ಜಾಗೃತಿ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಕುಂಚೂರು ಗ್ರಾಮದಲ್ಲಿ ಬುಧವಾರ ಕೂಲಿಕಾರ್ಮಿಕರು ಅಕ್ಷರ ರೂಪದಲ್ಲಿ ಕೂತು ಮತದಾನದ ಕುರಿತು ಜಾಗೃತಿ ಮೂಡಿಸಿದರು

ಕ್ರಿಮಿನಲ್‌ಗಳಿಗೆ ‘ರಕ್ಷಣೆಯ ಗ್ಯಾರಂಟಿ’: ರಾಹುಲ್


ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಮೋದಿ ಅವರ ‘ರಾಜಕೀಯ ಕುಟುಂಬದ ಭಾಗವಾಗಿರುವುದು’ ಕ್ರಿಮಿನಲ್‌ಗಳಿಗೆ ‘ರಕ್ಷಣೆಯ ಗ್ಯಾರಂಟಿ’ಯೇ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ.

ಜೆಡಿಎಸ್ ಮುಖಂಡ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ಹಗರಣಕ್ಕೆ ಸಂಬಂಧಿಸಿದಂತೆ ಪ್ರಧಾನಿ ಮೋದಿ ವಿರುದ್ಧ ಅವರು ಬುಧವಾರ ಈ ರೀತಿ ಪ್ರತಿಕ್ರಿಯಿಸಿದ್ದಾರೆ.

ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ರಾಹುಲ್, ‘ಎಂದಿನಂತೆಯೇ, ನರೇಂದ್ರ ಮೋದಿ ಅವರು ಕರ್ನಾಟಕದಲ್ಲಿ ಮಹಿಳೆಯರ ಮೇಲೆ ನಡೆದ ಭಯಂಕರ ಅಪರಾಧಗಳ ಬಗ್ಗೆ ನಾಚಿಕೆಗೇಡಿನ ಮೌನ ವಹಿಸಿದ್ದಾರೆ’ ಎಂದು ಟೀಕಿಸಿದ್ದಾರೆ.

‘ಎಲ್ಲ ಗೊತ್ತಿದ್ದರೂ, ನೂರಾರು ಹೆಣ್ಣುಮಕ್ಕಳನ್ನು ಶೋಷಿಸಿದ ರಾಕ್ಷಸನ ಪರವಾಗಿ ಅವರು ಪ್ರಚಾರ ಮಾಡಿದ್ದು ಏಕೆ; ಕೇವಲ ಮತಗಳಿಗಾಗಿಯೇ? ಎಲ್ಲಕ್ಕಿಂತ ಹೆಚ್ಚಾಗಿ, ಅಂತಹ ದೊಡ್ಡ ಕ್ರಿಮಿನಲ್ ಅಷ್ಟು ಸುಲಭವಾಗಿ ದೇಶ ದಿಂದ ಪಲಾಯನ ಮಾಡಿದ್ದು ಹೇಗೆ? ಎಂದು ಪ್ರಧಾನಿ ಉತ್ತರಿಸಬೇಕಿದೆ’ ಎಂದಿದ್ದಾರೆ.

‘ಕೈಸರ್‌ಗಂಜ್‌ನಿಂದ ಕರ್ನಾಟಕದ ವರೆಗೆ ಮತ್ತು ಉನ್ನಾವೊದಿಂದ ಉತ್ತರಾಖಂಡದವರೆಗೆ ದೇಶದಾದ್ಯಂತ ಕ್ರಿಮಿನಲ್‌ಗಳಿಗೆ ಪ್ರಧಾನಿಯ ‘ಮೌನ ಬೆಂಬಲ’ವು ಧೈರ್ಯ ತುಂಬುತ್ತಿದೆ’ ಎಂದು ಆರೋಪಿಸಿದ್ದಾರೆ.

ಕಾಲಾವಕಾಶ ಕೇಳಿದ ಪ್ರಜ್ವಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಬೆಂಗಳೂರಿನಲ್ಲಿ ಇಲ್ಲದ ಕಾರಣ, ವಿಚಾರಣೆಗೆ ಹಾಜರಾಗಲು ಆಗುತ್ತಿಲ್ಲ. ನಾನು ನನ್ನ ವಕೀಲರ ಮೂಲಕ ವಿಚಾರಣೆಗೆ ಕಾಲಾವಕಾಶ ಕೋರಿ ಎಸ್‌ಐಟಿ ಅಧಿಕಾರಿಗಳಿಗೆ ಮನವಿ ಮಾಡಿದ್ದೇನೆ. ಸತ್ಯ ಆದಷ್ಟು ಬೇಗ ಹೊರಬರಲಿದೆ’ ಎಂದು ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಪ್ರಜ್ವಲ್ ರೇವಣ್ಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ವಿಚಾರಣೆಗೆ ಹಾಜರಾಗಲು ಏಳು ದಿನಗಳ ಕಾಲಾವಕಾಶ ನೀಡುವಂತೆ ಕೋರಿ ಆರೋಪಿ ಪ್ರಜ್ವಲ್ ರೇವಣ್ಣ ಪರವಾಗಿ ವಕೀಲ ಅರುಣ್ ಜಿ. ಅವರು ಎಸ್‌ಐಟಿ ಅಧಿಕಾರಿಗಳಿಗೆ ಬುಧವಾರ ಪತ್ರ ಬರೆದಿದ್ದರು. ಅದನ್ನು ತಮ್ಮ ‘ಎಕ್ಸ್’ ಖಾತೆಯಲ್ಲಿ ಪ್ರಜ್ವಲ್ ಹಂಚಿಕೊಂಡಿದ್ದಾರೆ.

ಮನೆ ಕೆಲಸದ ಮಹಿಳೆ ಹಾಗೂ ಅವರ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಡಿ ಜೆಡಿಎಸ್ ಶಾಸಕ ಎಚ್‌.ಡಿ. ರೇವಣ್ಣ ಹಾಗೂ ಅವರ ಮಗ, ಸಂಸದ ಪ್ರಜ್ವಲ್ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳು, 24 ಗಂಟೆಯೊಳಗೆ ವಿಚಾರಣೆಗೆ ಹಾಜರಾಗುವಂತೆ ಇಬ್ಬರಿಗೂ ಮಂಗಳವಾರ ನೋಟಿಸ್ ನೀಡಿದ್ದರು. ಆರೋಪಿಗಳ ಮನೆಗಳಿಗೂ ನೋಟಿಸ್ ಪ್ರತಿ ಅಂಟಿಸಿದ್ದರು.

‘ಮೇ 1ರಂದು ವಿಚಾರಣೆಗೆ ಹಾಜರಾಗುವಂತೆ ಪ್ರಜ್ವಲ್ ಅವರಿಗೆ ನೀಡಿರುವ ನೋಟಿಸ್ ಬಗ್ಗೆ, ಅವರ ಕುಟುಂಬದವರಿಂದ ಮಾಹಿತಿ ಗೊತ್ತಾಗಿದೆ. ನನ್ನ ಕಕ್ಷಿದಾರ ಪ್ರಜ್ವಲ್, ಬೆಂಗಳೂರಿನಿಂದ ಹೊರಗಡೆ ಪ್ರವಾಸದಲ್ಲಿದ್ದಾರೆ. ನೋಟಿಸ್ ಬಗ್ಗೆ ಅವರಿಗೆ ತಿಳಿಸಲಾಗಿದೆ. ಅವರು ಬೆಂಗಳೂರಿಗೆ ಬಂದು ವಿಚಾರಣೆಗೆ ಹಾಜರಾಗಲು ಏಳು ದಿನಗಳ ಕಾಲಾವಕಾಶ ಅಗತ್ಯವಿರುವುದಾಗಿ ತಿಳಿಸಿದ್ದಾರೆ. ಹೀಗಾಗಿ, ತಾವು 7 ದಿನಗಳ ಕಾಲಾವಕಾಶ ಕೊಟ್ಟು ಮತ್ತೊಂದು ದಿನಾಂಕದಂದು ವಿಚಾರಣೆಗೆ ಹಾಜರಾಗಲು ಅವಕಾಶ ನೀಡಬೇಕು’ ಎಂದು ಪತ್ರದಲ್ಲಿ ವಕೀಲ ಅರುಣ್ ಕೋರಿದ್ದಾರೆ.

ವಿಚಾರಣೆಗೆ ಎಚ್‌.ಡಿ. ರೇವಣ್ಣ ಗೈರು

‘ಲೈಂಗಿಕ ದೌರ್ಜನ್ಯ ಆರೋಪದಡಿ ಹೊಳೆನರಸೀಪುರ ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಜೆಡಿಎಸ್ ಶಾಸಕ ಎಚ್‌.ಡಿ. ರೇವಣ್ಣ ಮೊದಲ ಆರೋಪಿ. ಅವರಿಗೂ ನೋಟಿಸ್ ನೀಡಲಾಗಿತ್ತು. ಆದರೆ, ಅವರು ಬುಧವಾರ ವಿಚಾರಣೆಗೆ ಗೈರಾಗಿದ್ದಾರೆ’ ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

‘ಗುರುವಾರವೂ ಅವರು ವಿಚಾರಣೆಗೆ ಬರಲು ಅವಕಾಶವಿದೆ. ಆಕಸ್ಮಾತ್ ವಿಚಾರಣೆಗೆ ಬಾರದಿದ್ದರೆ, ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ತಿಳಿಸಿವೆ.

‘ಮೇ 15ರಂದು ಟಿಕೆಟ್ ಬುಕ್ಕಿಂಗ್’

‘ಪ್ರಕರಣ ದಾಖಲಾಗುವ ಮುನ್ನವೇ ಪ್ರಜ್ವಲ್ ರೇವಣ್ಣ ವಿದೇಶ ಪ್ರವಾಸಕ್ಕೆ ಹೋಗಿದ್ದಾರೆ. ಸದ್ಯ ಅವರು ಜರ್ಮನಿಯಲ್ಲಿರುವ ಮಾಹಿತಿ ಇದೆ. ಮೇ 15ರಂದು ವಾಪಸು ರಾಜ್ಯಕ್ಕೆ ಬರಲು ಅವರು ಟಿಕೆಟ್ ಕಾಯ್ದಿರಿಸಿರುವುದು ಗೊತ್ತಾಗಿದೆ’ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

‘ಆರೋಪಿ ಪ್ರಜ್ವಲ್ ಪರವಾಗಿ ವಕೀಲರು ನೀಡಿರುವ ಉತ್ತರವನ್ನು ಪರಿಶೀಲಿಸಲಾಗುತ್ತಿದೆ. ಇದೊಂದು ಸೂಕ್ಷ್ಮ ಪ್ರಕರಣ. ಹೀಗಾಗಿ, ವಕೀಲರ ಉತ್ತರವನ್ನು ಮಾನ್ಯ ಮಾಡಬೇಕಾ? ಅಥವಾ ಬೇಡವೇ? ಎಂಬುದನ್ನು ಕಾನೂನು ತಜ್ಞರ ಸಲಹೆ ಪಡೆದು ತೀರ್ಮಾನಿಸಲಾಗುವುದು’ ಎಂದೂ ತಿಳಿಸಿವೆ.

ನೈತಿಕ ಹೊಣೆ ಹೊತ್ತು ಪ್ರಧಾನಿ ರಾಜೀನಾಮೆ ನೀಡಲಿ: ಜಿಗ್ನೇಶ್

ಪ್ರಜಾವಾಣಿ ವಾರ್ತೆ


ಜಿಗ್ನೇಶ್ ಮೆವಾನಿ

ವಿಜಯಪುರ: ‘ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರಿ ಎಂಬುದು ಮೊದಲೇ ಗೊತ್ತಿದ್ದೂ ಆತನ ಪರವಾಗಿ ಚುನಾವಣೆ ಪ್ರಚಾರ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು’ ಎಂದು ಗುಜರಾತ್ ಶಾಸಕ, ಸಾಮಾಜಿಕ ಹೋರಾಟಗಾರ ಜಿಗ್ನೇಶ್ ಮೆವಾನಿ ಆಗ್ರಹಿಸಿದರು.

‘ಬೆಳಿಗ್ಗೆಯಿಂದ ಸಂಜೆವರೆಗೆ ಯಾರು ಭಾರತ ಮಾತಾಕೀ ಜೈ ಎನ್ನುತ್ತಿದ್ದಾರೋ, ಅವರ ಬೆಂಬಲಿಗರು ಮಾಡಿರುವ ಅಸಹ್ಯ ಕೃತ್ಯ ಇದು. ಕರ್ನಾಟಕ ಮಾತ್ರವಲ್ಲದೇ ಇಡೀ ಭಾರತದ ಇತಿಹಾಸದಲ್ಲೇ ಇದೊಂದು ಕಂಡು ಕೇಳರಿಯದ ಕಳಂಕಿತ ಅಧ್ಯಾಯವಾಗಿದೆ’ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ಪ್ರಜ್ವಲ್ ರೇವಣ್ಣ ಮಾಡಿರುವ ಹೇಯ ಕೃತ್ಯ ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವ ವಿಚಾರ. ಇಂತಹ ಕಾಮುಕನಿಗೆ ಬಿಜೆಪಿ ಬೆಂಬಲ ನೀಡಿದ್ದು ನಾಚಿಕೆಗೇಡಿನ ಸಂಗತಿ. ಬಿಜೆಪಿಯ ನಿಜವಾದ ಮುಖ ಇದು. ಪ್ರಧಾನಿ ಮೋದಿ, ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಮಹಿಳೆಯರ ಬಗ್ಗೆ ಕನಿಷ್ಠ ಗೌರವ ಇಲ್ಲ ಎಂಬುದು ಮತ್ತೊಮ್ಮೆ ಈ ಘಟನೆಯಿಂದ ಸಾಬೀತಾಗಿದೆ. ಇದು ಭಾರತದ ಎಲ್ಲ ಮಹಿಳೆಯರ ಮೇಲೆ ನಡೆದ ಬಲತ್ಕಾರವಾಗಿದೆ’ ಎಂದರು.

‘ದೆಹಲಿಯಲ್ಲಿ ಲೈಂಗಿಕ ದೌರ್ಜನ್ಯ ಖಂಡಿಸಿ ಮಹಿಳಾ ಕುಸ್ತಿಪಟುಗಳು ಪ್ರತಿಭಟನೆ ಮಾಡಿದರೂ, ಮಣಿಪುರದಲ್ಲಿ ಮಹಿಳೆಯನ್ನು ಬೆತ್ತಲೆ ಮೆರವಣಿಗೆ ಮಾಡಿದರೂ ಪ್ರಧಾನಿ ಸ್ಪಂದಿಸಲಿಲ್ಲ, ಗುಜರಾತ್‌ನಲ್ಲಿ ಬಿಲ್ಕಿಸ್ ಬಾನು ಮೇಲೆ ಅತ್ಯಾಚಾರ ಎಸಗಿದ ಅಪರಾಧಿಗಳನ್ನು ಜೈಲಿನಿಂದ ಕರೆತರುವಾಗ ಸಂಭ್ರಮದಿಂದ ಸ್ವಾಗತಿಸಿದರೂ ಪ್ರಧಾನಿ ಕಣ್ತೆರೆಯಲಿಲ್ಲ. ಇದುವೇ ಪ್ರಧಾನಿ ಮೋದಿ ಹಾಗೂ ಬಿಜೆಪಿ, ಆರ್‌ಎಸ್‌ಎಸ್‌ನ ನಿಜವಾದ ಮುಖ’ ಎಂದರು.

ನೆಹರು ಓಲೇಕಾರ ಕಾಂಗ್ರೆಸ್‌ಗೆ

ಪ್ರಜಾವಾಣಿ ವಾರ್ತೆ

ಹಾವೇರಿ: 2023ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೈತಪ್ಪಿದ್ದರಿಂದ,ವರ್ಷದಿಂದ ಪಕ್ಷದ ಚಟುವಟಿಕೆಗಳಿಂದ ದೂರ ಉಳಿದಿದ್ದ ಬಿಜೆಪಿ ಮಾಜಿ ಶಾಸಕ ನೆಹರು ಓಲೇಕಾರ ಬುಧವಾರ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಯಾದಗಿರಿಯಲ್ಲಿ ಬುಧವಾರ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಓಲೇಕಾರ ಕಾಂಗ್ರೆಸ್ ಸೇರಿದ್ದಾರೆ. ಮತದಾನಕ್ಕೆ ಇನ್ನು 5 ದಿನ ಬಾಕಿ ಇರುವಾಗ ಓಲೇಕಾರ ಕಾಂಗ್ರೆಸ್ ಸೇರ್ಪಡೆ ಆಗಿದ್ದರಿಂದ ಯಾರಿಗೆ ಲಾಭ, ಯಾರಿಗೆ ನಷ್ಟ ಎಂಬ ಬಗ್ಗೆ ಕ್ಷೇತ್ರದಲ್ಲಿ ಚರ್ಚೆ ಶುರುವಾಗಿದೆ. ಕೆಲ ದಿನಗಳ ಹಿಂದೆ ಬಿಜೆಪಿಯ ಚುನಾವಣಾ ಪ್ರಚಾರ ಸಭೆಗೆ ಬರಲಿದ್ದಾರೆ ಎಂಬ ವದಂತಿ ಹರಡಿತ್ತು. ಆಗ ಬಿಜೆಪಿಯ ಇಬ್ಬರು ಮಾಜಿ ಶಾಸಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

ವಾಪಸ್ ಕರೆತರಲು ನೆರವಾಗಿ: ಪತ್ರ

ಒಂದನೇ ಪುಟದಿಂದ...

‘ಆರೋಪಿಯಾದ ಪ್ರಜ್ವಲ್ ಈ ನೆಲದ ಕಾನೂನು ಪ್ರಕಾರ ಅವರು ತನಿಖೆಯನ್ನು ಎದುರಿಸಬೇಕಿದೆ. ಪ್ರಕರಣದ ಎಲ್ಲ ದಾಖಲೆಗಳನ್ನು ನೀಡಲು ಎಸ್‌ಐಟಿ ಸಿದ್ಧವಿದೆ. ಅಗತ್ಯವಿರುವ ಇತರೆ ಕಾನೂನು ಔಪಚಾರಿಕತೆಯನ್ನು ಪೂರ್ಣಗೊಳಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ’ ಎಂದು ಪ್ರತಿಪಾದಿಸಿದ್ದಾರೆ.

‘ಹಲವು ಮಹಿಳೆಯರನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡ ಆರೋಪವನ್ನು ಪ್ರಜ್ವಲ್ ಎದುರಿಸುತ್ತಿದ್ದಾರೆ. ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿದ್ದ ಪ್ರಜ್ವಲ್ ವಿರುದ್ಧ ಲೈಂಗಿಕ ದೌರ್ಜನ್ಯ ಕುರಿತ ಆರೋಪಗಳು ಗಂಭೀರ ಸ್ವರೂಪದ್ದಾಗಿದ್ದು, ದೇಶದ ಮಾನ ಹರಾಜು ಹಾಕಿವೆ’ ಎಂದೂ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಯತ್ನಾಳ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಚಾರಿತ್ರ್ಯವಧೆ ಹಾಗೂ ಧರ್ಮಗಳ ಮಧ್ಯೆ ದ್ವೇಷ ಭಾವನೆ ಕೆರಳುವಂತೆ ಮಾತನಾಡಿ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದ ಮೇಲೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ನವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸೋಮವಾರ ನಡೆದ ವಿಜಯ ಸಂಕಲ್ಪ ಸಮಾವೇಶದಲ್ಲಿ ಬಾಗಲಕೋಟೆಯಲ್ಲಿ ಬಹಳಷ್ಟು ಲೀಡರ್, ಗಂಡಸು, ಹೆಂಗಸು ಇದ್ದರೂ, ರಂಜಾನ್ ಆಚರಣೆ ಮಾಡುವಂತಹ ಕುಟುಂಬಕ್ಕೆ ಟಿಕೆಟ್ ನೀಡಿದ್ದಾರೆ ಎಂದು ಯತ್ನಾಳ ಹೇಳಿದರು’ ಎಂದು ಕಾರ್ಮಿಕ ನಿರೀಕ್ಷಕ ರಮೇಶ ಸಿಂದಗಿ ದೂರು ನೀಡಿದ್ದಾರೆ.

‘ಡಿಸಿಸಿ ಬ್ಯಾಂಕ್, ಬಸವೇಶ್ವರ ಬ್ಯಾಂಕ್, ಸಕ್ಕರೆ ಕಾರ್ಖಾನೆ ಎಲ್ಲವನ್ನೂ ಒಡೆದು ಹೋಗುತ್ತಾರೆ. ವಿಜಯಪುರದಲ್ಲೂ ಇದೇ ಕೆಲಸ ಮಾಡಿದ್ದಾರೆ. ಸಚಿವ ಶಿವಾನಂದ ಪಾಟೀಲ ಅವರ ವೈಯಕ್ತಿಕ ಚಾರಿತ್ರ್ಯಕ್ಕೆ ಧಕ್ಕೆ ಮಾಡಿ, ಅವರ ಬಗ್ಗೆ ಸಾರ್ವಜನಿಕರಲ್ಲಿ ಕೆಟ್ಟ ಅಭಿಪ್ರಾಯ ಮೂಡಿಸುವಂತೆ ದ್ವೇಷ ಭಾಷಣ ಮಾಡಿದ್ದಾರೆ’ ಎಂದು ತಿಳಿಸಿದ್ದಾರೆ.

ಸುಧಾ, ಮಯೂರ ಓದಿರಿ

ಪ್ರಜ್ವಲ್ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ • ‘ಆಪರೇಷನ್ ಕನಕ್’ ಕಾರ್ಯಾಚರಣೆ

ಸಿಬಿಐ ವಿಚಾರಣೆಯಲ್ಲಿ ಎಸ್‌ಐಟಿ ಮುಖ್ಯಸ್ಥ

ಪ್ರಜಾವಾಣಿ ವಾರ್ತೆ


ಬಿಜಯ್ ಕುಮಾರ್

ಬೆಂಗಳೂರು: ಶಾಸಕ ಎಚ್‌.ಡಿ. ರೇವಣ್ಣ ಹಾಗೂ ಅವರ ಮಗ ಪ್ರಜ್ವಲ್ ವಿರುದ್ಧ ದಾಖಲಾಗಿರುವ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಮುಖ್ಯಸ್ಥ (ವಿಶೇಷ ತನಿಖಾ ತಂಡ) ಬಿಜಯ್ ಕುಮಾರ್ ಸಿಂಗ್ ವಿರುದ್ಧ, ಭ್ರಷ್ಟಾಚಾರದ ಪ್ರಕರಣವೊಂದರಲ್ಲಿ ಸಿಬಿಐ, ‘ಆಪರೇಷನ್ ಕನಕ್’ ಹೆಸರಿನಲ್ಲಿ ವಿಚಾರಣೆ ನಡೆಸುತ್ತಿದೆ.

‘ಭಾರತೀಯ ಆಹಾರ ನಿಗಮದಲ್ಲಿ (ಎಫ್‌ಸಿಐ) ನಡೆದಿದೆ’ ಎನ್ನಲಾದ ಭ್ರಷ್ಟಾಚಾರದ ಬಗ್ಗೆ ಕಾರ್ಯನಿರ್ವಾಹಕ ನಿರ್ದೇಶಕ ಸುದೀಪ್ ಸಿಂಗ್ ಸೇರಿದಂತೆ 74 ಆರೋಪಿಗಳ ವಿರುದ್ಧ 2023ರ ಜನವರಿ 10ರಂದು ಸಿಬಿಐ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿಕೊಂಡಿದ್ದರು. ‘ಆಪರೇಷನ್ ಕನಕ್’ ಹೆಸರಿನಲ್ಲಿ ಕಾರ್ಯಾಚರಣೆ ನಡೆಸಿದ್ದ ಅಧಿಕಾರಿಗಳು, ದೇಶದ 50 ಸ್ಥಳಗಳ ಮೇಲೆ ದಾಳಿ ಮಾಡಿದ್ದರು.

ಕರ್ನಾಟಕ ಕೇಡರ್‌ನ 1996 ಬ್ಯಾಚ್ ಐಪಿಎಸ್ ಅಧಿಕಾರಿಯಾದ ಬಿಜಯ್ ಕುಮಾರ್ ಸಿಂಗ್ (ಬಿ.ಕೆ.ಸಿಂಗ್) ಅವರನ್ನು ಎಫ್‌ಸಿಐನ ಕಾರ್ಯನಿರ್ವಾಹಕ ನಿರ್ದೇಶಕರಾಗಿ (ಸಿಬ್ಬಂದಿ) 2019ರ ಅಕ್ಟೋಬರ್ 17ರಂದು ನೇಮಕ ಮಾಡಲಾಗಿತ್ತು. ರಾಜ್ಯ ಸೇವೆಯಿಂದ ಬಿಡುಗಡೆಗೊಂಡಿದ್ದ ಬಿ.ಕೆ. ಸಿಂಗ್, ಕೇಂದ್ರ ಸೇವೆಯ ಹೊಸ ಜವಾಬ್ದಾರಿ ವಹಿಸಿಕೊಂಡಿದ್ದರು.

ಇವರ ಅಧಿಕಾರ ಅವಧಿಯಲ್ಲಿ ಎಫ್‌ಸಿಐನಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರವನ್ನು ಸಿಬಿಐ ಪತ್ತೆ ಮಾಡಿತ್ತು. ಚಂಡೀಗಢದ ಡೆಪ್ಯುಟಿ ಜನರಲ್ ಮ್ಯಾನೇಜರ್ (ಡಿಜಿಎಂ) ದರ್ಜೆ ಅಧಿಕಾರಿ ಸೇರಿದಂತೆ ಹಲವರನ್ನು ಬಂಧಿಸಿತ್ತು. ಬಿ.ಕೆ. ಸಿಂಗ್ ಅಧೀನದಲ್ಲಿ ಕೆಲಸ ಮಾಡುತ್ತಿದ್ದರು ಎನ್ನಲಾದ ಡಿಜಿಎಂ ರಾಜೀವ್‌ಕುಮಾರ್ ಮಿಶ್ರಾ ವಿರುದ್ಧವೂ ಸಿಬಿಐ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡಿದ್ದರು.

‘ಭ್ರಷ್ಟಾಚಾರದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ’ ಎಂಬುದಾಗಿ ಬಿ.ಕೆ. ಸಿಂಗ್ ಹೇಳಿದ್ದರು. ಇದೇ ಕಾರಣಕ್ಕೆ ಸಿಬಿಐ ಅಧಿಕಾರಿಗಳು, ಸಿಂಗ್ ವಿರುದ್ಧ ಕಾನೂನು ಕ್ರಮ ಜರುಗಿಸಿಲ್ಲ. ಆದರೆ, ಸಿಂಗ್ ಅವರನ್ನು ಮೇಲಿಂದ ಮೇಲೆ ಪ್ರಕರಣದ ವಿಚಾರಣೆಗೆ ಒಳಪಡಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಅವಧಿಗೂ ಮುನ್ನವೇ ಸೇವೆಯಿಂದ ಬಿಡುಗಡೆ: ಆಹಾರ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಎಫ್‌ಸಿಐ ಕಾರ್ಯನಿರ್ವಹಿಸುತ್ತಿದೆ. ಭ್ರಷ್ಟಾಚಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಸಚಿವಾಲಯ, ಬಿ.ಕೆ. ಸಿಂಗ್ ಹಾಗೂ ಇತರೆ ಅಧಿಕಾರಿಗಳನ್ನು ಅಧಿಕಾರ ಅವಧಿಗೂ ಮುನ್ನ ಸೇವೆಯಿಂದ ಬಿಡುಗಡೆ ಮಾಡಿ ಆದೇಶ ಹೊರಡಿಸಿತ್ತು.

2019ರ ಅಕ್ಟೋಬರ್ 17ರಂದು ನೇಮಕಗೊಂಡಿದ್ದ ಬಿ.ಕೆ. ಸಿಂಗ್ ಅಧಿಕಾರ ಅವಧಿ ಐದು ವರ್ಷವಾಗಿತ್ತು. ಭ್ರಷ್ಟಾಚಾರ ಪ್ರಕರಣದಿಂದಾಗಿ, 2023ರ ನವೆಂಬರ್ 30ರಂದು ಬಿ.ಕೆ. ಸಿಂಗ್ ಅವರನ್ನು ಸೇವೆಯಿಂದ ಬಿಡುಗಡೆ ಮಾಡಲಾಗಿತ್ತು. ಬಳಿಕ ಅವರು ರಾಜ್ಯ ಸೇವೆಗೆ ವಾಪಸು ಬಂದಿದ್ದಾರೆ ಎಂಬುದು ದಾಖಲೆಗಳಿಂದ ಗೊತ್ತಾಗುತ್ತಿದೆ.

‘ಎಫ್‌ಸಿಐ ಭ್ರಷ್ಟಾಚಾರ ಪ್ರಕರಣದಲ್ಲಿ 74 ಆರೋಪಿಗಳು ಭಾಗಿಯಾಗಿರುವುದಕ್ಕೆ ಪುರಾವೆಗಳು ಸಿಕ್ಕಿದ್ದು, ಅವುಗಳ ಆಧಾರದಲ್ಲಿ ತನಿಖೆ ಮುಂದುವರಿದಿದೆ. 74 ಆರೋಪಿಗಳ ಪೈಕಿ 34 ಅಧಿಕಾರಿಗಳು ಸದ್ಯ ಕೆಲಸದಲ್ಲಿದ್ದಾರೆ. ಮೂವರು ಅಧಿಕಾರಿಗಳು ನಿವೃತ್ತರಾಗಿದ್ದಾರೆ. 17 ಖಾಸಗಿ ವ್ಯಕ್ತಿಗಳು ಹಾಗೂ 20 ಸಂಸ್ಥೆಗಳ ಪ್ರತಿನಿಧಿಗಳು ಕೃತ್ಯದಲ್ಲಿ ಭಾಗಿಯಾಗಿರುವುದು ಗೊತ್ತಾಗಿದೆ’ ಎಂದು ಸಿಬಿಐ ಮೂಲಗಳು ಹೇಳಿವೆ.

‘ಪ್ರಕರಣದಲ್ಲಿ ಎಡಿಜಿಪಿ ಬಿ.ಕೆ. ಸಿಂಗ್ ಅವರ ಪಾತ್ರವಿರುವ ಬಗ್ಗೆ ಸದ್ಯಕ್ಕೆ ಯಾವುದೇ ಪುರಾವೆ ಲಭ್ಯವಾಗಿಲ್ಲ. ಆದರೆ, ವಿಚಾರಣೆ ಮಾತ್ರ ನಡೆಯುತ್ತಿದೆ. ಮುಂಬರುವ ದಿನಗಳಲ್ಲಿ ಪುರಾವೆಗಳು ಲಭ್ಯವಾದರೆ, ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ತನಿಖೆಗೆ ರಚಿಸಲಾಗಿದ್ದ ವಿಶೇಷ ತನಿಖಾ ತಂಡಕ್ಕೂ (ಎಸ್‌ಐಟಿ) ಬಿ.ಕೆ. ಸಿಂಗ್ ಅವರು ಮುಖ್ಯಸ್ಥರಾಗಿದ್ದರು.

ಸಿಬಿಐ ವಿಚಾರಣೆ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬಿ.ಕೆ. ಸಿಂಗ್ ಅವರು ಲಭ್ಯರಾಗಲಿಲ್ಲ.

ಒಂದು ಟ್ರಕ್‌ಗೆ ₹ 1,050 ಲಂಚ ಸಂಗ್ರಹ ಯಾರಿಗೆಷ್ಟು ಹಂಚಿಕೆ

ಜಿಎಂ ಕಚೇರಿ	₹200 ಲಂಚ
ವಿವಿಧ ವಿಭಾಗಗಳ 4 ಡಿಜಿಎಂ ಕಚೇರಿ	ತಲಾ ₹50 ಲಂಚ
ಲ್ಯಾಬ್ ಆರ್‌ಒ ಕಚೇರಿ	₹20 ಲಂಚ
ಕಾರ್ಯನಿರ್ವಾಹಕ ನಿರ್ದೇಶಕ ಕಚೇರಿ	₹100 ಲಂಚ
ಏಜೆಂಟ್ ಹಾಗೂ ಇತರರು	₹530 ಲಂಚ

*(ಸಿಬಿಐ ಅಧಿಕಾರಿಗಳ ತನಿಖಾ ವರದಿ ಮಾಹಿತಿ)

ಏನಿದು ಪ್ರಕರಣ?

ಅಕ್ಕಿ ಹಾಗೂ ಆಹಾರ ಧಾನ್ಯಗಳ ವ್ಯಾಪಾರಿಗಳು, ದೇಶದ ಹಲವೆಡೆ ಅಕ್ರಮವಾಗಿ ಗೋದಾಮು ತೆರೆದಿದ್ದರು. ಕಳಪೆ ಅಕ್ಕಿ– ಆಹಾರ ಧಾನ್ಯಗಳನ್ನು ಸಂಗ್ರಹಿಸಿ ದೇಶದ ಹಲವೆಡೆಗೆ ಟ್ರಕ್‌ಗಳ ಮೂಲಕ ಸರಬರಾಜು ಮಾಡುತ್ತಿದ್ದರು. ಇದನ್ನು ತಡೆಯಬೇಕಾದ ಎಫ್‌ಸಿಐ ಅಧಿಕಾರಿಗಳು, ವ್ಯಾಪಾರಿಗಳು ಹಾಗೂ ಏಜೆಂಟ್‌ರಿಂದ ಲಂಚ ಪಡೆಯುತ್ತಿದ್ದರು. ಪ್ರತಿ ಟ್ರಕ್ ಲೆಕ್ಕದಲ್ಲಿ ಹಣ ವಸೂಲಿ ಮಾಡುತ್ತಿದ್ದರು. ಅಕ್ರಮದ ಬಗ್ಗೆ ದಾಖಲಾಗುವ ಪ್ರಕರಣಗಳ ವಿಚಾರಣೆಯಲ್ಲಿ ಆರೋಪಿಗಳ ಪರ ವರದಿ ತಯಾರಿಸಲು ಹಣ ಪಡೆಯುತ್ತಿದ್ದರೆಂಬ ಆರೋಪವಿತ್ತು. ಈ ಬಗ್ಗೆ ಮಾಹಿತಿ ಕಲೆ ಹಾಕಿದ್ದ ಸಿಬಿಐ ಅಧಿಕಾರಿಗಳು, ರಹಸ್ಯ ಕಾರ್ಯಾಚರಣೆ ನಡೆಸಿ ಪುರಾವೆ ಸಂಗ್ರಹಿಸಿ ಅಧಿಕಾರಿಗಳು ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದರು. ಎಫ್‌ಸಿಐ ಭ್ರಷ್ಟಾಚಾರ ಪ್ರಕರಣವನ್ನು ಭೇದಿಸಲು ‘ಆಪರೇಷನ್ ಕನಕ್’ ಕಾರ್ಯಾಚರಣೆ ಶುರು ಮಾಡಿದ್ದ ಸಿಬಿಐ ಅಧಿಕಾರಿಗಳು, ಪಂಜಾಬ್, ಉತ್ತರ ಪ್ರದೇಶ ಹಾಗೂ ಚಂಡೀಗಢದ 90 ಸ್ಥಳಗಳ ಮೇಲೆ ದಾಳಿ ಮಾಡಿದ್ದರು. ಒಟ್ಟು ₹1.03 ಕೋಟಿ ನಗದು (ಅಧಿಕಾರಿಯೊಬ್ಬರ ಮನೆಯ ವಾಷಿಂಗ್ ಮಷಿನ್‌ನಲ್ಲಿ ₹ 80 ಲಕ್ಷ ಸಿಕ್ಕಿತ್ತು) ಹಾಗೂ ₹ 3 ಕೋಟಿ ಮೌಲ್ಯದ ಇತರೆ ಆಸ್ತಿಗಳನ್ನು ಜಪ್ತಿ ಮಾಡಿದ್ದರು.

ಡೆಲಿವರಿ ಬಾಯ್ ಮೇಲೆ ಹಲ್ಲೆ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ಆಹಾರ ಡೆಲಿವರಿ ಬಾಯ್ ಸಂಕೇತ್ ಎಂಬುವವರ ಮೇಲೆ ಹಲ್ಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ದಾಮಿನಿ ಹಾಗೂ ಇತರ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

'ಏಪ್ರಿಲ್ 28ರ ರಾತ್ರಿ ನಡೆದಿರುವ ಕೃತ್ಯ ಸಂಬಂಧ ಗಾಯಾಳು ಸಂಕೇತ್ ದೂರು ನೀಡಿದ್ದಾರೆ. ಆರೋಪಿಗಳಾದ ದಾಮಿನಿ, ಮರಿಯನ್, ನಾಗೇಂದ್ರ ಹಾಗೂ ಕಿರಣ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಸಂಕೇತ್, ಆಹಾರ ಪೂರೈಕೆಗೆಂದು ಏಪ್ರಿಲ್ 23ರಂದು ಕಂಠೀರವ ಕ್ರೀಡಾಂಗಣದ ಬಳಿಗೆ ಹೋಗಿದ್ದರು. ಅದೇ ಸಂದರ್ಭದಲ್ಲಿ ದಾಮಿನಿ ಪರಿಚಯವಾಗಿತ್ತು. ಅವರಿಬ್ಬರೂ ಕೆಲ ನಿಮಿಷ ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಮೊಬೈಲ್‌ಗಳು ಅದಲು-ಬದಲಾಗಿದ್ದವು. ಇದನ್ನು ಗಮನಿಸದೇ ಇಬ್ಬರೂ ಸ್ಥಳದಿಂದ ಹೊರಟು ಹೋಗಿದ್ದರು.'


'ಕೆಲ ಹೊತ್ತಿನ ನಂತರ ದಾಮಿನಿ, ಸಂಕೇತ್ ಅವರಿಗೆ ಕರೆ ಮಾಡಿದ್ದರು. ಮೊಬೈಲ್ ವಾಪಸು ನೀಡುವಂತೆ ತಿಳಿಸಿದ್ದರು. ಕೆಲಸದಲ್ಲಿದ್ದ ಸಂಕೇತ್, ಕೆಲ ದಿನ ಬಿಟ್ಟು ಮೊಬೈಲ್ ವಾಪಸು ನೀಡುವುದಾಗಿ ಹೇಳಿದ್ದರು. ಮೂರು ದಿನವಾದರೂ ಮೊಬೈಲ್ ವಾಪಸು ಕೊಟ್ಟರಲಿಲ್ಲ' ಎಂದು ಪೊಲೀಸರು ತಿಳಿಸಿದರು.

'ದಾಮಿನಿ ಹಾಗೂ ಸಹಚರರು, ಸಂಕೇತ್ ಅವರಿಗಾಗಿ ಹುಡುಕಾಟ ಆರಂಭಿಸಿದ್ದರು. ನಾಗರಬಾವಿ ವೃತ್ತದ ಬಳಿ ಸಂಕೇತ್ ಸಿಕ್ಕಿಬಿದ್ದಿದ್ದರು. ಅವರ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ಬಿಯರ್ ಬಾಟಲಿಯಿಂದ ತಲೆಗೆ ಹೊಡೆದಿದ್ದರು. ಚಾಕುವಿನಿಂದ ಇರಿಯಲು ಯತ್ನಿಸಿ ಸ್ಥಳದಿಂದ ಪರಾರಿಯಾಗಿದ್ದರು. ಗಾಯಾಳು ಸಂಕೇತ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು' ಎಂದು ಹೇಳಿದರು.

ಐದು ಜಿಲ್ಲೆಗಳಲ್ಲಿ ಅತಿ ಹೆಚ್ಚು ತಾಪಮಾನ ದಾಖಲು • ಬಿಸಿಲಿಗೆ ಜನ ಹೈರಾಣ

ರಾಜ್ಯದಲ್ಲಿ 45 ಡಿಗ್ರಿ ಸೆಲ್ಸಿಯಸ್ ದಾಟಿದ ಉಷ್ಣಾಂಶ

45 ಡಿಗ್ರಿ ಸೆಲ್ಸಿಯಸ್‌ಗಿಂತ ಅಧಿಕ ತಾಪಮಾನ
40 ಡಿಗ್ರಿ ಸೆಲ್ಸಿಯಸ್‌ಗಿಂತ ಅಧಿಕ ತಾಪಮಾನ
40 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ತಾಪಮಾನ



ಪ್ರಜಾವಾಣಿ ವಾರ್ತೆ

ವಿಜಯಪುರ: ರಾಜ್ಯದ ಐದು ಜಿಲ್ಲೆಗಳಲ್ಲಿ ಅತಿ ಹೆಚ್ಚು ಉಷ್ಣಾಂಶ ಮಂಗಳವಾರ (ಏಪ್ರಿಲ್ 30) ದಾಖಲಾಗಿದೆ.

'ಬಾಗಲಕೋಟೆ ಜಿಲ್ಲೆಯ ಕರಡಿ 45.3, ರಾಯಚೂರು ಜಿಲ್ಲೆಯ ಗಿಲ್ಲೆಸೂಗೂರಿನಲ್ಲಿ 45.2, ಯಾದಗಿರಿ ಜಿಲ್ಲೆಯ ಗೋಗಿಯಲ್ಲಿ 45.1 ಮತ್ತು ವಿಜಯಪುರ ಜಿಲ್ಲೆಯ ನಾಲತವಾಡದಲ್ಲಿ 45 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಗದಗ, ಹಾಸನ, ಹಾವೇರಿ, ಕಲಬುರ್ಗಿ, ಕೋಲಾರ, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ, ವಿಜಯಪುರ, ತುಮಕೂರು, ಉಡುಪಿ, ಉತ್ತರ ಕನ್ನಡ, ಯಾದಗಿರಿ ಜಿಲ್ಲೆಯ ಬಹುತೇಕ ಕಡೆ 40 ಡಿಗ್ರಿ ಸೆಲ್ಸಿಯಸ್‌ಗೂ ಅಧಿಕ ತಾಪಮಾನ ದಾಖಲಾಗಿದೆ.

ರಾಯಚೂರು ವರದಿ: ತಾಲ್ಲೂಕಿನ ಗಿಲ್ಲೆಸೂಗುರಲ್ಲಿ ಬುಧವಾರ 45.3 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.

ರಾಯಚೂರು, ಮಾನ್ವಿ ಹಾಗೂ ದೇವದುರ್ಗದಲ್ಲಿ ಸೋಮವಾರ 43.30 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿತ್ತು. ಮಂಗಳವಾರ ದೇವದುರ್ಗ ತಾಲ್ಲೂಕಿನ ಗಬ್ಬೂರು, ರಾಯಚೂರು ತಾಲ್ಲೂಕಿನ ಗಿಲ್ಲೆಸೂಗುರು 45.2 ಹಾಗೂ ಸಿಂಧನೂರಿನ ಬಾದರ್ಲಿಯಲ್ಲಿ 45 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು.

ಕಲ್ಲು ಬಂಡೆಗಳಿಂದ ತುಂಬಿಕೊಂಡಿರುವ ಊರುಗಳಲ್ಲಿ ರಾತ್ರಿಯಾದರೂ ಧಗೆ ಕಡಿಮೆಯಾಗುತ್ತಿಲ್ಲ. ಮನೆಗಳಲ್ಲಿನ ಫ್ಯಾನ್‌ಗಳು ಸಹ ಬಿಸಿಗಾಳಿಯನ್ನೇ ಸೂಸುತ್ತಿವೆ. ಮನೆಗಳ ನಲ್ಲಿಗಳಲ್ಲೂ ಬಿಸಿ ನೀರು ಬರುತ್ತಿದೆ. ಬೆಂಕಿ ಬಿಸಿಲಿಗೆ ಜನ ಹೈರಾಣಾಗಿದ್ದಾರೆ.

'ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಮುಂದಿನ ಐದು ದಿನಗಳವರೆಗೆ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 42 ಡಿಗ್ರಿ ಸೆಲ್ಸಿಯಸ್‌ನಿಂದ 45 ಡಿಗ್ರಿ ಸೆಲ್ಸಿಯಸ್ ಮುಂದುವರಿಯಲಿದೆ' ಎಂದು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಹವಾಮಾನ ಘಟಕದ ಶಾಂತಪ್ಪ ದುತ್ತರಗಾಂವಿ ತಿಳಿಸಿದ್ದಾರೆ.

'ಬಿಸಿ ಗಾಳಿ ಹಾಗೂ ಅತಿಯಾದ ಬಿಸಿಲು ಇರುವ ಕಾರಣ ರೈತರು ಮಧ್ಯಾಹ್ನ 12 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗಿನ ಅವಧಿಯಲ್ಲಿ ಮನೆಯಲ್ಲಿ ಇದ್ದು, ಆರೋಗ್ಯ ಕಾಯ್ದುಕೊಳ್ಳಬೇಕು' ಎಂದು ಸಲಹೆ ನೀಡಿದ್ದಾರೆ. ಐಎಂಡಿ ವರದಿ ಪ್ರಕಾರ ಕಲಬುರಗಿಯಲ್ಲಿ ಗರಿಷ್ಠ 43.3 ಸೆಲ್ಸಿಯಸ್, ಕೊಪ್ಪಳದಲ್ಲಿ 42 ಹಾಗೂ ಬೀದರ್‌ನಲ್ಲಿ 41.2 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.



ಬಿಸಿಲಿನಲ್ಲಿ ಆಮ್ಲೆಟ್ ತಯಾರಿಸಿದ ಯುವಕರು

ಲಿಂಗಸುಗೂರು (ರಾಯಚೂರು ಜಿಲ್ಲೆ): ಪಟ್ಟಣದ ಸ್ವಾಮಿ ವಿವೇಕಾನಂದ ಬಡಾವಣೆಯ ಯುವಕರ ಗುಂಪೊಂದು ಬುಧವಾರ ಬಿಸಿಲಿನಲ್ಲಿ ಕಬ್ಬಿಣದ ತವಾ ಇಟ್ಟು ಆಮ್ಲೆಟ್ ತಯಾರಿಸಿ ತಿನ್ನುವ ಮೂಲಕ ಬಿಸಿಲಿನ ಪ್ರಖರತೆಗೆ ಕನ್ನಡಿ ಹಿಡಿದರು.

'ಬಿಸಿಲಿನ ಝಳಕ್ಕೆ ರೋಸಿ ಹೋಗಿದ್ದೇವೆ. ಕುತೂಹಲಕ್ಕಾಗಿ ಬಿಸಿಲಿನಲ್ಲಿ ಆಮ್ಲೆಟ್ ಮಾಡುವ ಪ್ರಯೋಗ ಮಾಡಿದೆವು. ಒಂದೂವರೆ ಗಂಟೆಯಲ್ಲಿ ತವಾ ಕಾಯಿತು. ಬಳಿಕ ಆಮ್ಲೆಟ್ ಮಾಡಿ ತಿಂದೆವು' ಎಂದು ಯುವಕ ಪ್ರಭು ಗಸ್ತಿ ತಿಳಿಸಿದರು.

ಜಿಲ್ಲೆಯಾದ್ಯಂತ ಒಂದು ವಾರದಿಂದ ಪ್ರತಿದಿನ 44ರಿಂದ 45 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗುತ್ತಿದೆ.

16 ಜಿಲ್ಲೆಗಳಲ್ಲಿ ತೀವ್ರ ಶಾಖದ ಅಲೆ, ಒಣಹವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಬುಧವಾರವೂ ಬಿಸಿ ಗಾಳಿ ಕಾಣಿಸಿಕೊಂಡಿದ್ದು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಪ್ರಕಾರ ರಾಜ್ಯದ 28 ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿದೆ.

ಉಡುಪಿ, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆ ಹೊರತುಪಡಿಸಿ ಉಳಿದ ಎಲ್ಲ ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು ವರದಿಯಾಗಿದೆ. ಕಲಬುರಗಿ ಹಾಗೂ ರಾಯಚೂರಿನಲ್ಲಿ ಗರಿಷ್ಠ ಉಷ್ಣಾಂಶ 46.7 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ. ಯಾದಗಿರಿ, ವಿಜಯಪುರ, ಕೊಪ್ಪಳ ಹಾಗೂ ಬಳ್ಳಾರಿಯಲ್ಲಿ ಗರಿಷ್ಠ ಉಷ್ಣಾಂಶ 45 ಡಿಗ್ರಿ ಸೆಲ್ಸಿಯಸ್ ಹಾಗೂ ಅದಕ್ಕಿಂತ ಹೆಚ್ಚು ವರದಿಯಾಗಿದೆ. ಬೆಂಗಳೂರು ಸೇರಿ 16 ಜಿಲ್ಲೆಗಳಲ್ಲಿ ತೀವ್ರ ಶಾಖದ ಅಲೆ ಕಾಣಿಸಿಕೊಂಡಿದೆ ಎಂದು ಕೆಎಸ್‌ಎನ್‌ಡಿಎಂಸಿ ತಿಳಿಸಿದೆ.

ಭಾರತೀಯ ಹವಾಮಾನ ಇಲಾಖೆಯ (ಐಎಂಡಿ) ಬೆಂಗಳೂರು ಘಟಕವು ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ ಹಾಗೂ ಕೊಪ್ಪಳ ಜಿಲ್ಲೆಗೆ ಗುರುವಾರ 'ರೆಡ್ ಅಲರ್ಟ್' ಘೋಷಿಸಿದ್ದು, ಈ ಜಿಲ್ಲೆಗಳಲ್ಲಿ ತೀವ್ರ ಶಾಖದ ಅಲೆಗಳು ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಬಳ್ಳಾರಿ, ಕಲಬುರಗಿ, ವಿಜಯಪುರ, ರಾಯಚೂರು, ಚಿತ್ರದುರ್ಗ, ದಾವಣಗೆರೆ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ತುಮಕೂರು ಮತ್ತು ಯಾದಗಿರಿ ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದ್ದು, ಈ ಜಿಲ್ಲೆಗಳಲ್ಲಿ ಬಿಸಿ ಗಾಳಿ ಕಾಣಿಸಿಕೊಳ್ಳುವ ಸಂಭವವಿದೆ.

ಇದೇ 5ರವರೆಗೆ ರಾಜ್ಯದಾದ್ಯಂತ ಒಣಹವೆ ಇರುವ ಸಾಧ್ಯತೆಯಿದ್ದು, 6ರಿಂದ ರಾಜ್ಯದ ಕೆಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ. ಮೇ 4ರವರೆಗೆ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಬಿಸಿ ವಾತಾವರಣ ವಿರುವ ಸಂಭವವಿದೆ.

ಗುರುವಾರದಿಂದ ಮುಂದಿನ ಐದು ದಿನಗಳು ಬಾಗಲಕೋಟೆ, ಕಲಬುರಗಿ ಹಾಗೂ ಕೊಪ್ಪಳ ಜಿಲ್ಲೆಯಲ್ಲಿ ರಾತ್ರಿಯ ಅವಧಿಯೂ ಬಿಸಿ ವಾತಾವರಣದಿಂದ ಕೂಡಿರುವ ಸಾಧ್ಯತೆಯಿದೆ ಎಂದು ಐಎಂಡಿ ಬೆಂಗಳೂರು ಘಟಕ ತಿಳಿಸಿದೆ.

ಸುಲೇಪೇಟ: ಬಿಸಿಲಿನಿಂದ ವ್ಯಕ್ತಿ ಸಾವು?

ಚಿಂಚೋಳಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಸುಲೇಪೇಟ ಬಸ್ ನಿಲ್ದಾಣದಲ್ಲಿ ಬುಧವಾರ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಬಿಸಿಲಿನ ತಾಪದಿಂದ ಬಳಲಿರಬಹುದು ಎಂದು ಶಂಕಿಸಲಾಗಿದೆ.

ಬೀದರ್ ಜಿಲ್ಲೆಯ ಹುಮನಾಬದ್ ನಿವಾಸಿ ರಾಜು ಶರಣಪ್ಪ (45) ಮೃತ ವ್ಯಕ್ತಿ. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಘಟನಾ ಸ್ಥಳಕ್ಕೆ ಸ್ಥಳೀಯ ಠಾಣೆಯ ಸಬ್ ಇನ್‌ಸ್ಪೆಕ್ಟರ್ ನಂದಿನಿ ಭೇಟಿ ನೀಡಿ ಪರಿಶೀಲಿಸಿದರು.

ಸುದ್ದಿ 2 ನಿಮಿಷ

ಪತಿ ಮೇಲೆ ಹಲ್ಲೆ: ಪ್ರಶ್ನೆ ಮಾಡಿದ ಪತ್ನಿಗೆ ಕಿರುಕುಳ ಆರೋಪ

ಬೆಂಗಳೂರು: ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ವ್ಯಕ್ತಿಯೊಬ್ಬರ ಮೇಲೆ ನಾಲ್ವರು ಕಿಡಿಗೇಡಿಗಳು ಹಲ್ಲೆ ಮಾಡಿದ್ದು, ಅದನ್ನು ಪ್ರಶ್ನಿಸಿದ ಪತ್ನಿಗೂ ಕಿರುಕುಳ ನೀಡಿರುವ ಆರೋಪ ವ್ಯಕ್ತವಾಗಿದೆ.

'ಠಾಣೆ ವ್ಯಾಪ್ತಿಯ ವಿರುಪಾಕ್ಷಪುರದಲ್ಲಿ ಮಂಗಳವಾರ ರಾತ್ರಿ ನಡೆದಿರುವ ಘಟನೆ ಬಗ್ಗೆ ಮಾಹಿತಿ ಲಭ್ಯವಾಗಿದೆ. ದೂರು ನೀಡುವಂತೆ ಸಂತ್ರಸ್ತ ದಂಪತಿಯನ್ನು ಕೋರಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಂತ್ರಸ್ತ ವಿಶಾಲ್ ತಿವಾರಿ ರಸ್ತೆಯಲ್ಲಿ ಹೊರಟಿದ್ದಾಗ ನಾಲ್ವರು ಕಿಡಿಗೇಡಿಗಳು ಅಡ್ಡಗಟ್ಟಿದ್ದರು. ಹಲ್ಲೆ ಮಾಡಿ ಬೆದರಿಕೆಯೊಡ್ಡಿದ್ದರು. ವಿಶಾಲ್ ಅವರು ತುರ್ತು ಸಹಾಯಕ್ಕಾಗಿ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರು. ಅದರ ನಡುವೆಯೇ ತಮ್ಮ ಪತ್ನಿಯನ್ನೂ ಸ್ಥಳಕ್ಕೆ ಕರೆಸಿದ್ದರು. ಅವರ ಪತ್ನಿಗೂ ಆರೋಪಿಗಳು ಕಿರುಕುಳ ನೀಡಿದ್ದರೆಂದು ಹೇಳಲಾಗುತ್ತಿದೆ.'

'ಕೆಲ ನಿಮಿಷಗಳಲ್ಲಿ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಅಷ್ಟರಲ್ಲೇ ಆರೋಪಿಗಳು ಓಡಿಹೋಗಿದ್ದಾರೆ. ವಿಶಾಲ್ ಅವರು ಮದ್ಯದ ಅಮಲಿನಲ್ಲಿದ್ದರು. ಅವರನ್ನು ಮಾತನಾಡಿಸಿದ್ದ ಸಿಬ್ಬಂದಿ, ಠಾಣೆಗೆ ಬಂದು ದೂರು ನೀಡುವಂತೆ ತಿಳಿಸಿ ಸ್ಥಳದಿಂದ ವಾಪಸು ಬಂದಿದ್ದಾರೆ. ಈ ಎಲ್ಲ ದೃಶ್ಯ ಸಿಬ್ಬಂದಿಯ ಬಾಡಿವೋರ್ನ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆರೋಪಿಗಳು ತಮಗೆ ಲೈಂಗಿಕ ಕಿರುಕುಳ ನೀಡಿದ್ದಾರೆಂದು ಪತ್ನಿ ಆರೋಪಿಸುತ್ತಿದ್ದಾರೆ. ಆದರೆ, ಇದುವರೆಗೂ ಯಾವುದೇ ದೂರು ನೀಡಿಲ್ಲ' ಎಂದು ಪೊಲೀಸರು ತಿಳಿಸಿದರು.

ಮಹಿಳೆ ಒಳ ಉಡುಪಿನಲ್ಲಿ ₹50 ಲಕ್ಷ ಮೌಲ್ಯದ ಚಿನ್ನ



ದೇವನಹಳ್ಳಿ: ದುಬೈನಿಂದ ಒಳ ಉಡುಪಿನಲ್ಲಿ ಚಿನ್ನದ ಪುಡಿ ಅಡಗಿಸಿಟ್ಟುಕೊಂಡು ಬಂದಿದ್ದ ಮಹಿಳಾ ಪ್ರಯಾಣಿಕರೊಬ್ಬರು ತಪಾಸಣೆ ವೇಳೆ ಕಸ್ಟಮ್ಸ್ ಅಧಿಕಾರಿಗಳ ಕೈಗೆ ಸಿಕ್ಕಿ ಬಿದ್ದಿದ್ದಾರೆ.

ದುಬೈನಿಂದ ಸೋಮವಾರ (ಏ.29) ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಮಹಿಳೆಯನ್ನು ತಪಾಸಣೆ ಮಾಡಿದಾಗ ಆಕೆಯ ಒಳ ಉಡುಪಿನಲ್ಲಿ 717 ಗ್ರಾಂ ಚಿನ್ನದ ಪುಡಿ ಪತ್ತೆಯಾಗಿದೆ. ಅದರ ಅಂದಾಜು ಮೌಲ್ಯ ₹49.52 ಲಕ್ಷ ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

ಚಿನ್ನ ಕಳ್ಳ ಸಾಗಣೆ ಉದ್ದೇಶದಿಂದಲೇ ಮಹಿಳೆ ವಿಶೇಷವಾಗಿ ಒಳ ಉಡುಪು ಸಿದ್ಧಪಡಿಸಿಕೊಂಡಿದ್ದರು ಎಂಬ ವಿಷಯ ತನಿಖೆ ವೇಳೆ ತಿಳಿದುಬಂದಿದೆ. ಚಿನ್ನವನ್ನು ಪುಡಿ ಮಾಡಿ ಒಳ ಉಡುಪಿನಲ್ಲಿ ಲೇಪಿಸಲಾಗಿತ್ತು. ಅದು ಗೋಚರಿಸದಂತೆ ಮಹಿಳೆ ಗಾಢ ಕಪ್ಪು ಬಣ್ಣದ ಉಡುಪು ಧರಿಸಿದ್ದರು.

ಎರಡು ಚಿನ್ನದ ಬಿಸ್ಕೆಟ್ ಪ್ರಮಾಣದ ಚಿನ್ನದ ಪುಡಿ ಒಳ ಉಡುಪಿನಲ್ಲಿತ್ತು. ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೈಕ್ ಉರುಳಿ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ನಸುಕಿನಲ್ಲಿ ಅಪಘಾತ ಸಂಭವಿಸಿದ್ದು, ಸೌರಭ್ (30) ಎಂಬುವವರು ಮೃತಪಟ್ಟಿದ್ದಾರೆ.

'ಮಣಿಪುರದ ಸೌರಭ್, ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಲ್ಯಾವೆಲ್ಲೆ ರಸ್ತೆಯಲ್ಲಿರುವ ಕೊಠಡಿಯೊಂದರಲ್ಲಿ ಸ್ನೇಹಿತನ ಜೊತೆ ವಾಸವಿದ್ದರು' ಎಂದು ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಹೇಳಿದರು.

'ಸೌರಭ್ ಹಾಗೂ ಸ್ನೇಹಿತ, ದ್ವಿಚಕ್ರ ವಾಹನದಲ್ಲಿ ಜಯನಗರದಲ್ಲಿರುವ ಸ್ನೇಹಿತನ ಮನೆಗೆ ಮಂಗಳವಾರ ರಾತ್ರಿ ಹೋಗಿದ್ದರು. ನಸುಕಿನ 4 ಗಂಟೆ ಸುಮಾರಿಗೆ ಇಬ್ಬರೂ ಅಲ್ಲಿಂದ ಹೊರಟಿದ್ದರು.'

'ಸೌರಭ್ ಅವರು ದ್ವಿಚಕ್ರ ವಾಹನ ಚಲಾಯಿಸುತ್ತಿದ್ದರು. ಸ್ನೇಹಿತ, ಹಿಂಬದಿಯಲ್ಲಿ ಕುಳಿತಿದ್ದ. ಲ್ಯಾವೆಲ್ಲೆ ರಸ್ತೆಯಲ್ಲಿ ತೆರಳುತ್ತಿದ್ದಾಗ ದ್ವಿಚಕ್ರ ವಾಹನ ಉರುಳಿಬಿದ್ದಿತ್ತು. ತಲೆಗೆ ತೀವ್ರ ಪೆಟ್ಟು ಬಿದ್ದು ಸೌರಭ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಗೊಂಡಿರುವ ಸ್ನೇಹಿತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅತಿ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಲಾರಿ ಕದ್ದು ಗುಜರಿಗೆ ಮಾರಾಟ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಲವೆಡೆ ರಸ್ತೆಬದಿ ನಿಲ್ಲಿಸುತ್ತಿದ್ದ ಲಾರಿಗಳನ್ನು ಕದ್ದೊಯ್ದು ಗುಜರಿಗೆ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಭಾರತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸಂಜಯ್ ಗಾಂಧಿ ನಗರದ ರಾಜ (24) ಹಾಗೂ ಬಾಹುಬಲಿ ನಗರದ ರಂಜಿತ್ ಕುಮಾರ್ (20) ಬಂಧಿತರು. ಇವರಿಂದ ₹ 12 ಲಕ್ಷ ಮೌಲ್ಯದ ಲಾರಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೋಲ್ಸ್ ಪಾರ್ಕ್ ಬಳಿಯ ಪಾರ್ಕಿಂಗ್ ಜಾಗದಲ್ಲಿ ಲಾರಿ ನಿಲ್ಲಿಸಿದ್ದ ಆರೋಪಿಗಳು, ಅನುಮಾನಾಸ್ಪದ ರೀತಿಯಲ್ಲಿ ಸುತ್ತಾಡುತ್ತಿದ್ದರು. ಗಸ್ತಿನಲ್ಲಿದ್ದ ಪೊಲೀಸರು, ಇಬ್ಬರನ್ನೂ ಪ್ರಶ್ನಿಸಲು ಮುಂದಾಗಿದ್ದರು. ಪೊಲೀಸರನ್ನು ನೋಡಿ ಆರೋಪಿಗಳು ಪರಾರಿಯಾಗಲು ಯತ್ನಿಸಿದ್ದರು. ಅನುಮಾನಗೊಂಡ ಪೊಲೀಸರು, ಇಬ್ಬರನ್ನೂ ಬೆನ್ನಟ್ಟಿ ಹಿಡಿದು ವಶಕ್ಕೆ ಪಡೆದು ವಿಚಾರಿಸಿದಾಗ, ಲಾರಿ ಕಳ್ಳತನದ ಸಂಗತಿ ಗೊತ್ತಾಗಿದೆ' ಎಂದು ತಿಳಿಸಿದರು.

'ಕನಕಪುರ ಮುಖ್ಯರಸ್ತೆಯಲ್ಲಿರುವ ಸಿಲ್ಕ್ ಇನ್‌ಸ್ಟಿಟ್ಯೂಟ್ ಕ್ವಾರ್ಟರ್ಸ್ ಬಳಿಯ ಮೆಟ್ರೊ ಪಿಲ್ಲರ್ ಬಳಿ ನಿಲ್ಲಿಸಿದ್ದ ಲಾರಿಯನ್ನು ಆರೋಪಿಗಳು ಕಳ್ಳತನ ಮಾಡಿದ್ದರು. ಅದನ್ನು ಗುಜರಿ ವ್ಯಾಪಾರಿಗಳಿಗೆ ಮಾರಾಟ ಮಾಡಲೆಂದು ಭಾರತಿನಗರಕ್ಕೆ ಬಂದಿದ್ದರು. ಇದೇ ಸಂದರ್ಭದಲ್ಲಿ ಸಿಬ್ಬಂದಿ ಕೈಗೆ ಸಿಕ್ಕಿಬಿದ್ದಿದ್ದಾರೆ.'

'ಇಬ್ಬರೂ ಆರೋಪಿಗಳು, ವೃತ್ತಿಯಲ್ಲಿ ಚಾಲಕರು. ಹೆಚ್ಚು ಹಣ ಸಂಪಾದಿಸಲು ಕಳ್ಳತನಕ್ಕೆ ಇಳಿದಿದ್ದರು. ಇದೇ ಆರೋಪಿಗಳು ಮತ್ತಷ್ಟು ಕಡೆ ಲಾರಿ ಕಳ್ಳತನ ಮಾಡಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಸ್ನೇಹಿತೆ ಜೊತೆ ಚಾಟಿಂಗ್ ಯುವಕನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನ ಸ್ನೇಹಿತೆ ಜೊತೆ ವಾಟ್ಸ್‌ಆ್ಯಪ್ ಚಾಟ್ ಮಾಡುತ್ತಿದ್ದಾನೆ ಎಂಬ ಕಾರಣಕ್ಕೆ ಯುವಕನೊಬ್ಬನ ಮೇಲೆ ಲಾಂಗ್‌ನಿಂದ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ಇಬ್ಬರು ಆರೋಪಿಗಳನ್ನು ಶಂಕರಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಶಶಾಂಕ್ ಹಾಗೂ ಈತನ ಸ್ನೇಹಿತ ಚಂದನ್ ಬಂಧಿತರು. ಇವರಿಬ್ಬರೂ ಸೇರಿಕೊಂಡು ಹರ್ಷಿತ್ ಎಂಬುವವರ ಮೇಲೆ ಹಲ್ಲೆ ಮಾಡಿದ್ದರು. ಹರ್ಷಿತ್ ನೀಡಿದ್ದ ಹೇಳಿಕೆ ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಹರ್ಷಿತ್ ಅವರ ತಂದೆ, ಬಸವನಗುಡಿಯಲ್ಲಿ ಹೂವು ಅಲಂಕಾರ ಮಳಿಗೆ ಇಟ್ಟುಕೊಂಡಿದ್ದಾರೆ. ತಂದೆಯ ಕೆಲಸಕ್ಕೆ ಹರ್ಷಿತ್ ಸಹಾಯ ಮಾಡುತ್ತಿದ್ದ. ಮಳಿಗೆ ಬಳಿಯ ಲ್ಯಾಬ್‌ವೊಂದರಲ್ಲಿ ಯುವತಿ ಕೆಲಸ ಮಾಡುತ್ತಿದ್ದು, ಅವರಿಗೂ ಹರ್ಷಿತ್‌ಗೂ ಪರಿಚಯವಾಗಿತ್ತು. ಪರಸ್ಪರ ಮೊಬೈಲ್ ನಂಬರ್ ಬದಲಾಯಿಸಿಕೊಂಡು, ಚಾಟ್ ಮಾಡಲಾರಂಭಿಸಿದ್ದರು.'

'ಯುವತಿಯ ಸ್ನೇಹಿತನಾಗಿದ್ದ ಶಶಾಂಕ್, ವಾಟ್ಸ್‌ಆ್ಯಪ್ ಚಾಟಿಂಗ್ ಅನ್ನು ಗಮನಿಸಿದ್ದ. 'ಹರ್ಷಿತ್ ಸ್ನೇಹಿತ. ಆತನಿಗೂ ನನಗೂ ಯಾವುದೇ ಸಂಬಂಧವಿಲ್ಲ' ಎಂದು ಯುವತಿ ಹೇಳಿದ್ದರು. ಅಷ್ಟಾದರೂ ಆರೋಪಿ, ಹರ್ಷಿತ್ ಮೇಲೆ ಅನುಮಾನ ಪಟ್ಟಿದ್ದ. ಶಶಾಂಕ್ ಹಾಗೂ ಯುವತಿ ಪರಸ್ಪರ ಪ್ರೀತಿಸುತ್ತಿದ್ದರೆಂಬ ಮಾಹಿತಿಯೂ ಇದೆ' ಎಂದು ಪೊಲೀಸರು ತಿಳಿಸಿದರು.

ಲಾಂಗ್‌ನಿಂದ ಹೊಡೆದು ಪರಾರಿ: 'ಆರೋಪಿ ಶಶಾಂಕ್, ಸ್ನೇಹಿತ ಚಂದನ್ ಜೊತೆ ಸಂಚು ರೂಪಿಸಿದ್ದ. ಏಪ್ರಿಲ್ 28ರಂದು ಇಬ್ಬರೂ ಮದ್ಯ ಕುಡಿದಿದ್ದರು. ನಂತರ, ಬೈಕ್‌ನಲ್ಲಿ ಹರ್ಷಿತ್ ಅವರ ಮಳಿಗೆಗೆ ಹೋಗಿದ್ದರು. ಅಲ್ಲಿಯೇ ಹರ್ಷಿತ್ ಮೇಲೆ ಲಾಂಗ್‌ನಿಂದ ಹಲ್ಲೆ ಮಾಡಿ ಪರಾರಿಯಾಗಿದ್ದರು.'

'ಹರ್ಷಿತ್ ಅವರ ಬಲಗೈ ಹೆಬ್ಬೆರಳು ತುಂಡಾಗಿತ್ತು. ಎಡಗೈಗೂ ಗಾಯವಾಗಿತ್ತು. ಎರಡೂ ಕೈಗಳಿಂದ ರಕ್ತ ಸೋರುತ್ತಿತ್ತು. ಸ್ಥಳೀಯರು ಹರ್ಷಿತ್ ಅವರನ್ನು ಆಸ್ಪತ್ರೆಗೆ ಸೇರಿಸಿದ್ದರು. ಅವರ ಆರೋಗ್ಯದಲ್ಲಿ ಸದ್ಯ ಚೇತರಿಕೆ ಕಂಡುಬಂದಿದೆ' ಎಂದು ಪೊಲೀಸರು ಹೇಳಿದರು.

2 ಗುಂಪುಗಳ ನಡುವೆ ಮಾರಾಮಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದಾಪುರ ಠಾಣೆ ವ್ಯಾಪ್ತಿಯಲ್ಲಿ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆದಿದ್ದು, ಈ ಸಂಬಂಧ 12 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಗುಟ್ಟೇಪಾಳ್ಯದಲ್ಲಿ ಏ.28ರಂದು ರಾತ್ರಿ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದ್ದು, ಹಲವರು ಗಾಯಗೊಂಡಿದ್ದಾರೆ. ಈ ಸಂಬಂಧ ಎರಡೂ ಕಡೆಯವರು ದೂರು ನೀಡಿದ್ದು, ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಒಂದು ಗುಂಪಿನ ಬಾಬು, ಪ್ರವೀಣ್, ಅರುಣ್, ಅಜಿತ್, ಭರತ್ ಹಾಗೂ ಎದುರಾಳಿ ಗುಂಪಿನ ವಾಸೀಂ, ವಾಹೀದ್, ಇಲಿಯಾಸ್, ನಹೀಂ, ಅರ್ಬಾಜ್, ಅಬ್ರಾರ್ ಸೇರಿ 12 ಮಂದಿಯನ್ನು ಬಂಧಿಸಲಾಗಿದೆ. ಮತ್ತಷ್ಟು ಮಂದಿ ತಲೆಮರೆಸಿಕೊಂಡಿದ್ದಾರೆ' ಎಂದು ತಿಳಿಸಿದರು.

ಚಾಕು-ದೊಣ್ಣೆ ಹಿಡಿದು ಹೊಡೆದಾಟ: 'ಒಂದು ಗುಂಪಿನ ದೂರುದಾರರ ಸಂಬಂಧಿಕರೊಬ್ಬರು ಮೃತಪಟ್ಟಿದ್ದರು. ಮನೆಯ ಮುಂದೆ ಪಾರ್ಥಿವ ಶರೀರ ಇರಿಸಲಾಗಿತ್ತು. ಇದೇ ಸ್ಥಳಕ್ಕೆ ಬಂದಿದ್ದ ಎದುರಾಳಿ ತಂಡದ ಯುವಕ, ಕಿರಿದಾದ ರಸ್ತೆಯಲ್ಲಿ ಅತಿ ವೇಗವಾಗಿ ಬೈಕ್ ಚಲಾಯಿಸಿದ್ದರು. ದೂರುದಾರ ಹಾಗೂ ಇತರರು ಅವರನ್ನು ಪ್ರಶ್ನಿಸಿದ್ದರು' ಎಂದರು.

'ಬೈಕ್ ಚಲಾಯಿಸಿದ್ದ ಯುವಕನ ತಂದೆಗೂ ದೂರುದಾರರು ವಿಷಯ ತಿಳಿಸಿದ್ದರು. ಇದಾದ ನಂತರ ಯುವಕ ಹಾಗೂ ಆತನ ಕಡೆಯವರು, ಏಪ್ರಿಲ್ 28ರಂದು ರಾತ್ರಿ ಚಾಕು, ದೊಣ್ಣೆ ಹಿಡಿದು ದೂರುದಾರ ಹಾಗೂ ಇತರರ ಮೇಲೆ ಹಲ್ಲೆ ಮಾಡಿದ್ದರು. ಇದರಿಂದಾಗಿ, 2 ಗುಂಪಿನವರು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳಕ್ಕೆ ಸೇರಿದ್ದರು. ಪರಸ್ಪರ ಮಾರಾಮಾರಿ ನಡೆದಿತ್ತು' ಎಂದು ತಿಳಿಸಿದರು.

'ಸೃಷ್ಟಿ ರಾಷ್ಟ್ರೀಯ ನೃತ್ಯ ಪರಿಣತಿ ಪ್ರಶಸ್ತಿ' ಪ್ರದಾನ

'ನೃತ್ಯ ಸಾಂಸ್ಕೃತಿಕ ಜಗತ್ತಿನ ಅವಿಭಾಜ್ಯ ಅಂಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸ್ತ್ರೀಯ ನೃತ್ಯವು ಸಾಂಸ್ಕೃತಿಕ ಜಗತ್ತಿನ ಅವಿಭಾಜ್ಯ ಅಂಗ. ಈ ಕಲಾ ಪ್ರಕಾರವನ್ನು ರಾಜ ಮಹಾರಾಜರ ಕಾಲದಿಂದಲೂ ಪ್ರೋತ್ಸಾಹಿಸುತ್ತಾ ಬರಲಾಗಿದೆ' ಎಂದು ಮೈಸೂರು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಅವರು ತಿಳಿಸಿದರು.

ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ ನಗರದಲ್ಲಿ ಬುಧವಾರ ಹಮ್ಮಿಕೊಂಡ ವಿಶ್ವ ನೃತ್ಯ ದಿನಾಚರಣೆ, ಮಾಯಾರಾವ್ ಸ್ಮರಣಾರ್ಥ ಕಥಕ್ ಉತ್ಸವದಲ್ಲಿ ಕಲಾವಿದೆ ಲಕ್ಷ್ಮಿ ಗೋಪಾಲಸ್ವಾಮಿ ಅವರಿಗೆ 'ಸೃಷ್ಟಿ ರಾಷ್ಟ್ರೀಯ ನೃತ್ಯ ಪರಿಣತಿ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು.

'ನೃತ್ಯದ ಬಗ್ಗೆ ವಿವಿಧ ಶಾಸನಗಳಲ್ಲಿಯೂ ಉಲ್ಲೇಖಿಸಲಾಗಿದೆ. ಸ್ವಾತಂತ್ರ್ಯ ದೊರೆತ ಬಳಿಕ ಸಂಘ–ಸಂಸ್ಥೆಗಳು ನೃತ್ಯ ಸೇರಿ ವಿವಿಧ ಕಲಾ ಪ್ರಕಾರವನ್ನು ಪ್ರೋತ್ಸಾಹಿಸಿ, ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುತ್ತಿವೆ. ಇದು ಶ್ಲಾಘನೀಯ ಕಾರ್ಯ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸೃಷ್ಟಿ ಅಭಿನಯ ಕಲಾವಿದರ ಕೇಂದ್ರದ ನಿರ್ದೇಶಕ ಎ.ವಿ. ಸತ್ಯನಾರಾಯಣ, 'ನೃತ್ಯವು ಮನರಂಜನೆ ಮಾತ್ರವಾಗಿರದೆ, ಅಷ್ಟಾಂಗ ಸೇವೆಯಲ್ಲಿ ಒಂದಾಗಿದೆ. ನಮ್ಮ ಸಂಸ್ಕೃತಿಯಲ್ಲಿಯೇ ನೃತ್ಯ ಇದೆ. ಹೋಳಿ, ಗಣೇಶ ಹಬ್ಬ ವಿವಿಧ ಸಂದರ್ಭದಲ್ಲಿ ನೃತ್ಯ ಕಾಣಬಹುದಾಗಿದ್ದು, ಈ ಕಲಾ ಪ್ರಕಾರ ಜೀವನದ ಅವಿಭಾಜ್ಯ ಅಂಗವಾಗಿದೆ' ಎಂದು ಹೇಳಿದರು.

ಪ್ರಶಸ್ತಿ ಸ್ವೀಕರಿಸಿ ಸಂತಸ ವ್ಯಕ್ತಪಡಿಸಿದ ಲಕ್ಷ್ಮಿ ಗೋಪಾಲಸ್ವಾಮಿ, 'ಅಭಿನಯ ಮತ್ತು ನೃತ್ಯದಲ್ಲಿ ಯಶಸ್ಸು ಸಾಧಿಸಲು ಸರಿಯಾದ ಹಾದಿಯಲ್ಲಿ ಸಾಗಬೇಕು. ಈ ಗೌರವವು ಸಂತೋಷ ನೀಡಿದೆ' ಎಂದು ಹೇಳಿದರು.

ಇದೇ ವೇಳೆ ಕಲಾವಿದರು ಭರತನಾಟ್ಯ, ಕುಚಿಪುಡಿ, ಒಡಿಸ್ಸಿ, ಕಥಕ್ ಸೇರಿ ವಿವಿಧ ನೃತ್ಯ ಪ್ರಕಾರದಲ್ಲಿ ಪ್ರದರ್ಶನ ನೀಡಿದರು. ಎ.ವಿ.ಸತ್ಯನಾರಾಯಣ ಅವರು ನಾಟ್ಯ ಸಂಯೋಜನೆ ಮಾಡಿರುವ 'ಭಜ ಗೋವಿಂದಂ' ನೃತ್ಯ ನಾಟಕ ಪ್ರದರ್ಶನವೂ ನಡೆಯಿತು.



ಕಾರ್ಯಕ್ರಮದಲ್ಲಿ ಲಕ್ಷ್ಮಿ ಗೋಪಾಲಸ್ವಾಮಿ ಅವರಿಗೆ 'ಸೃಷ್ಟಿ ರಾಷ್ಟ್ರೀಯ ನೃತ್ಯ ಪರಿಣತಿ ಪ್ರಶಸ್ತಿ'ಯನ್ನು ಪ್ರಮೋದಾದೇವಿ ಒಡೆಯರ್ ಪ್ರದಾನ ಮಾಡಿದರು. ರೋಟರಿ 3191 ಜಿಲ್ಲೆಯ ಗವರ್ನರ್ ಉದಯ ಕುಮಾರ್ ಭಾಸ್ಕರ, ಪದ್ಮ ಶಿವಶಂಕರ್, ರೋಟರಿ ಸಂಸ್ಥೆಯ ವಚನ್ ಸುಂಕು, ಎ.ವಿ. ಸತ್ಯನಾರಾಯಣ ಹಾಗೂ ರೋಟರಿ ಸಂಸ್ಥೆಯ ಲೋಕನಾಥ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಇಬ್ಬರು ಯುವಕರಿಗೆ ₹66 ಲಕ್ಷ ವಂಚನೆ

ತುಮಕೂರು: ಜಿಲ್ಲೆಯ ಇಬ್ಬರು ಯುವಕರು ಸೈಬರ್ ವಂಚಕರಿಂದಾಗಿ ₹66.30 ಲಕ್ಷ ಕಳೆದುಕೊಂಡಿದ್ದಾರೆ.

ಸಪ್ತಗಿರಿ ಬಡಾವಣೆಯ ನಿವಾಸಿ ಎಲ್.ಶ್ರೀಧರ್ ಎಂಬುವವರು 'ಷೇರು ಮಾರುಕಟ್ಟೆಯಲ್ಲಿ ₹10 ಲಕ್ಷ ಹೂಡಿಕೆ ಮಾಡಿದರೆ ದಿನಕ್ಕೆ ಶೇ20 ರಷ್ಟು ಲಾಭ ಗಳಿಸಬಹುದು' ಎಂಬ ಆಮಿಷಕ್ಕೆ ಒಳಗಾಗಿ ₹35 ಲಕ್ಷ ಕಳೆದಕೊಂಡಿದ್ದಾರೆ.

ಸೈಬರ್ ಆರೋಪಿಗಳು ವಾಟ್ಸ್‌ಆ್ಯಪ್ ಮುಖಾಂತರ ಪರಿಚಯಿಸಿಕೊಂಡು ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಶ್ರೀಧರ್ ಈ ಬಗ್ಗೆ ಆಸಕ್ತಿ ತೋರಿದ ನಂತರ 'ವಿಐಪಿ ಗ್ರೂಪ್ 100' ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಅವರನ್ನು ಸೇರಿಸಿದ್ದಾರೆ.

ಶ್ರೀಧರ್ ಹಂತ ಹಂತವಾಗಿ ಒಟ್ಟು ₹35 ಲಕ್ಷವನ್ನು ವಿವಿಧ ಖಾತೆಗಳಿಗೆ ಹಾಕಿದ್ದಾರೆ. ಏ.30ರಂದು ಆರೋಪಿಗಳು ಮೆಸೇಜ್ ಮಾಡಿ, 'ನಿಮಗೆ ₹49.16 ಲಕ್ಷ ಲಾಭ ಬಂದಿದ್ದು, ಇದನ್ನು ಪಡೆಯಲು ₹54.53 ಲಕ್ಷ ವರ್ಗಾಯಿಸುವಂತೆ ತಿಳಿಸಿದ್ದಾರೆ. ಅನುಮಾನಗೊಂಡ ಶ್ರೀಧರ್ ಸೈಬರ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ತಿಪಟೂರು ತಾಲ್ಲೂಕಿನ ಬೈರನಾಯಕನಹಳ್ಳಿಯ ನಿವಾಸಿ ಬಿ.ಆರ್. ವಿನಯ್ ಎಂಬುವರಿಗೆ 'ಟಾಸ್ಕ್‌ಗಳಲ್ಲಿ ಬಂಡವಾಳ ಹೂಡಿದರೆ ಅಧಿಕ ಲಾಭ ಗಳಿಸಬಹುದು' ಎಂಬ ಆಸೆ ತೋರಿಸಿ ₹31 ಲಕ್ಷ ವಂಚಿಸಲಾಗಿದೆ.

ಆಮ್ಲಜನಕ ದುರಂತದ ಕಹಿಗೆ ಮೂರು ವರ್ಷ, ಸುಧಾರಣೆಯಾಗದ ಸಂತ್ರಸ್ತರ ಬದುಕು

ಸಿಗದ ನ್ಯಾಯ, ತಪ್ಪಿತಸ್ಥರಿಗೆ ಆಗದ ಶಿಕ್ಷೆ

● ಸೂರ್ಯನಾರಾಯಣ ವಿ.



ದುರ್ಘಟನೆಯಲ್ಲಿ ಮೃತಪಟ್ಟವರ ಸಂಬಂಧಿಕರು ಆಸ್ಪತ್ರೆ ಮುಂದೆ ಮೂರು ವರ್ಷಗಳ ಹಿಂದೆ ರೋದಿಸಿದ್ದ ಸಂದರ್ಭ

ಚಾಮರಾಜನಗರ: ನಗರದ ಕೋವಿಡ್ ಆಸ್ಪತ್ರೆಯಲ್ಲಿ ಸಂಭವಿಸಿದ್ದ ಆಮ್ಲಜನಕ ಪೂರೈಕೆಯಾಗದೆ ನಡೆದ ದುರಂತಕ್ಕೆ ಬುಧವಾರಕ್ಕೆ ಸರಿಯಾಗಿ ಮೂರು ವರ್ಷ. ಇಷ್ಟು ಕಾಲ ಕಳೆದರೂ ಸಂತ್ರಸ್ತರ ಕುಟುಂಬದವರಿಗೆ ನ್ಯಾಯ ಸಿಕ್ಕಿಲ್ಲ. ತಪ್ಪಿತಸ್ಥರಿಗೆ ಶಿಕ್ಷೆಯಾಗಿಲ್ಲ.

2021ರ ಮೇ 2ರ ರಾತ್ರಿ ನಗರದ ಕೋವಿಡ್ ಆಸ್ಪತ್ರೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಆಮ್ಲಜನಕ ಲಭ್ಯವಿರದೆ ವೆಂಟಿಲೇಟರ್, ಐಸಿಯುನಲ್ಲಿದ್ದ ಕೋವಿಡ್ ಸೋಂಕಿತರು ಮೃತಪಟ್ಟಿದ್ದರು. ರಾತ್ರಿ 8.30ಕ್ಕೆ ಆಮ್ಲಜನಕ ಖಾಲಿಯಾಗಿತ್ತು. ಮತ್ತೆ ಪೂರೈಕೆಯಾದಾಗ ಮುಂಜಾನೆ 2.30 ಆಗಿತ್ತು. ಆ ದಿನದ ಅವಧಿಯಲ್ಲಿ 24 ಮಂದಿ ಮೃತಪಟ್ಟಿದ್ದರು. ಆದರೆ, ಅಂದಿನ ಬಿಜೆಪಿ ಸರ್ಕಾರ ಕೇವಲ ಮೂವರು ಮೃತಪಟ್ಟಿದ್ದಾರೆ ಎಂದು ಹೇಳಿತ್ತು.

ಆಮ್ಲಜನಕ ಕೊರತೆಯ ಕಾರಣಕ್ಕೆ ಉಂಟಾದ ಆರೋಗ್ಯ ಸಮಸ್ಯೆಗಳಿಂದಾಗಿ ನಂತರದ ಹಲವು ದಿನಗಳಲ್ಲಿ ಕೊನೆಯುಸಿರೆಳೆದಿದ್ದರು. ಒಟ್ಟಾರೆಯಾಗಿ 36 ಮಂದಿ ಮೃತಪಟ್ಟಿದ್ದಾರೆ ಎಂದು ಹೇಳಲಾಗಿತ್ತು.

ಹೈಕೋರ್ಟ್ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿತ್ತು. ಜಿಲ್ಲಾಡಳಿತ, ಆಸ್ಪತ್ರೆ ಆಡಳಿತದ ನಿರ್ಲಕ್ಷ್ಯದಿಂದಾಗಿ ಈ ದುರಂತ ಸಂಭವಿಸಿದೆ ಎಂದು ತನಿಖಾ ವರದಿ ಹೇಳಿತ್ತು. ಸರ್ಕಾರವೂ ನಂತರ ಪ್ರತ್ಯೇಕವಾಗಿ ತನಿಖೆ ನಡೆಸಿತ್ತು.

ಆರಂಭದಲ್ಲಿ, ಮೃತಪಟ್ಟವರ ಕುಟುಂಬದವರಿಗೆ ಸರ್ಕಾರ ಪರಿಹಾರ ಘೋಷಣೆ ಮಾಡಿರಲಿಲ್ಲ. ಹೈಕೋರ್ಟ್ ಸೂಚನೆಯ ನಂತರ ಮೃತಪಟ್ಟವರಲ್ಲಿ 13 ಜನರ ಕುಟುಂಬಗಳಿಗೆ ₹5 ಲಕ್ಷ, ಉಳಿದ 11 ಮಂದಿಯ ಕುಟುಂಬಕ್ಕೆ ತಲಾ ₹2 ಲಕ್ಷ ಪರಿಹಾರ ನೀಡಲಾಗಿತ್ತು.

ಅಂದು ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್, 36 ಮಂದಿಯ ಮನೆಗೂ ಭೇಟಿ ನೀಡಿ ₹1 ಲಕ್ಷ ಪರಿಹಾರ ನೀಡಿತ್ತಲ್ಲದೇ, ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ಉದ್ಯೋಗ, ಪ್ರಕರಣದ ಬಗ್ಗೆ ಕೂಲಂಕಷ ತನಿಖೆ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ಭರವಸೆ ನೀಡಿತ್ತು.

ಆದರೆ, ಸರ್ಕಾರ ರಚನೆಯಾಗಿ ಒಂದು ವರ್ಷವಾದರೂ, ಪ್ರಕರಣದ ಬಗ್ಗೆ ತನಿಖೆ ಆರಂಭವಾಗಿಲ್ಲ.

ಈ ವರ್ಷದ ಫೆ.1ರಿಂದ 32 ಮಂದಿಯ ಕುಟುಂಬಗಳ ತಲಾ ಒಬ್ಬ ಸದಸ್ಯರಿಗೆ ಗುತ್ತಿಗೆ ಆಧಾರದಲ್ಲಿ ಜಿಲ್ಲೆಯಲ್ಲಿ ಗ್ರೂಪ್ 'ಡಿ' ಹುದ್ದೆಯನ್ನು ನೀಡುವುದಾಗಿ ಹೇಳಿತ್ತು. ಬಹುತೇಕ ಮಂದಿ ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಕೆಲಸ ನೀಡಬೇಕು ಎಂದು ಹೇಳಿ, ಗ್ರೂಪ್ 'ಡಿ' ಹುದ್ದೆಯನ್ನು ಒಪ್ಪಿಲ್ಲ. 14 ಮಂದಿ ವಿವಿಧ ಇಲಾಖೆಗಳ ಕಚೇರಿಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಅನಿವಾರ್ಯವಾಗಿ ಕೆಲಸ ಮಾಡುತ್ತಿದ್ದಾರೆ.

ಸರ್ಕಾರಿ ಕೆಲಸ ಕೊಡಿ, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ: ಕಾಂಗ್ರೆಸ್ ಪಕ್ಷವು ನೀಡಿದ ಭರವಸೆಯಂತೆ ಕಾಯಂ ಸರ್ಕಾರಿ ಕೆಲಸ ನೀಡಬೇಕು ಎನ್ನುವುದು ಸಂತ್ರಸ್ತರ ಕುಟುಂಬದ ಸದಸ್ಯರ ಆಗ್ರಹ. 36 ಜನರ ಸಾವಿಗೆ ಕಾರಣರಾದ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು ಎಂಬುದು ಅವರ ಮತ್ತೊಂದು ಬೇಡಿಕೆ.

'ನನ್ನ ಮಗನನ್ನು ಓದಿಸಬೇಕು. ಜೀವನ ನಿರ್ವಹಣೆ ಕಷ್ಟವಾಗಿರುವ ಕಾರಣಕ್ಕೆ ಅನಿವಾರ್ಯವಾಗಿ ಹೊರಗುತ್ತಿಗೆ ಆಧಾರದ ಕೆಲಸವನ್ನು ಒಪ್ಪಿಕೊಂಡಿದ್ದೇನೆ. ₹12,500 ವೇತನ ಬರುತ್ತದೆ. ಇದು ಸಾಲುತ್ತಿಲ್ಲ. ಸರ್ಕಾರ ನೀಡಿದ ಭರವಸೆಯಂತೆ ಕಾಯಂ ನೌಕರಿ ನೀಡಬೇಕು' ಎಂದು ದುರ್ಘಟನೆಯಲ್ಲಿ ಗಂಡನನ್ನು ಕಳೆದುಕೊಂಡ ಬಿಸಿಲವಾಡಿಯ ಜ್ಯೋತಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಆಮ್ಲಜನಕ ಪೂರೈಸುವ ಜವಾಬ್ದಾರಿಯನ್ನು ಹೊತ್ತುಕೊಂಡವರು ಕರ್ತವ್ಯ ನಿರ್ಲಕ್ಷ್ಯ ಮಾಡಿದ್ದರಿಂದ ನಾವು ಮನೆಯ ಆಧಾರ ಸ್ತಂಭಗಳನ್ನು ಕಳೆದುಕೊಳ್ಳಬೇಕಾಯಿತು. ಇಂತಹ ದೊಡ್ಡ ತಪ್ಪು ಮಾಡಿದವರು ಯಾರು ಎಂದು ಗೊತ್ತಾಗಿಲ್ಲ. ಅವರಿಗೆ ಶಿಕ್ಷೆಯೂ ಆಗಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಸರ್ಕಾರದಿಂದ ನೆರವು ಸಿಕ್ಕಿಲ್ಲ'

ದುರಂತದಲ್ಲಿ ತಾಯಿಯನ್ನು ಕಳೆದುಕೊಂಡ ಚಾಮರಾಜನಗರದ ರಮೇಶ್ ಬಾಬು ಪ್ರತಿಕ್ರಿಯಿಸಿ, 'ಆ ಕಹಿ ಘಟನೆಯನ್ನು ಮರೆಯಲು ಸಾಧ್ಯವಾಗುತ್ತಿಲ್ಲ. ಯಾರೋ ಮಾಡಿದ ತಪ್ಪಿಗೆ ನಾವೆಲ್ಲ ಕುಟುಂಬದವರನ್ನು ಕಳೆದುಕೊಳ್ಳಬೇಕಾಯಿತು. ತಪ್ಪು ಮಾಡಿದವರಿಗೆ ಶಿಕ್ಷೆಯೂ ಆಗಿಲ್ಲ. ನಮ್ಮ ಕುಟುಂಬಕ್ಕೆ ಸರ್ಕಾರದಿಂದ ನೆರವೂ ಸಿಕ್ಕಿಲ್ಲ' ಎಂದು ಹೇಳಿದರು.

'ಕಾಯಂ ಸರ್ಕಾರಿ ನೌಕರಿ ಭರವಸೆಯಾಗಿ ಉಳಿದಿದೆ. ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಕೊಡುತ್ತೇವೆ ಎಂದು ಹೇಳಿದ್ದರೂ, 'ಡಿ' ಗ್ರೂಪ್ ಹುದ್ದೆಗಳನ್ನು ನೀಡುತ್ತೇವೆ ಎಂದು ಹೇಳಿದ್ದಾರೆ. 'ಅದಕ್ಕೆ ಸಹಾಯಕನಾಗಿ ಕೆಲಸ ಮಾಡುತ್ತೀರಾ' ಎಂದು ಕೇಳಿದ್ದರು. ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಕೆಲಸ ಕೊಡಿ ಎಂದು ಕೇಳಿದ್ದೆವು. ಅದನ್ನು ಅವರು ಕೊಟ್ಟಿಲ್ಲ' ಎಂದರು.



ಸಂತ್ರಸ್ತರ ಕುಟುಂಬಗಳಿಗೆ ನ್ಯಾಯ, ತಪ್ಪಿತಸ್ಥರಿಗೆ ಶಿಕ್ಷೆಯಾಗುವ ತನಕ ನಮ್ಮ ಪಕ್ಷವು ಹೋರಾಟ ನಡೆಸಲಿದೆ

ಎಂ.ಮಹೇಶ್, ಎಸ್‌ಡಿಪಿಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ

ಭ್ರೂಣ ಹತ್ಯೆ: ಮಾಹಿತಿ ಕೊಡದ ಔಷಧ ಏಜೆನ್ಸಿ

● ಎಂ.ಎನ್.ಯೋಗೇಶ್

ಮಂಡ್ಯ: ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಸಂಬಂಧ ಜಿಲ್ಲೆಯ ಸಗಟು ಔಷಧ ಮಾರಾಟಗಾರರು ಎಂಟಿಪಿ ಕಿಟ್ ಮಾರಾಟ ಕುರಿತಂತೆ ಕಳೆದ 6 ತಿಂಗಳಿಂದಲೂ ಸಮರ್ಪಕ ಮಾಹಿತಿ ನೀಡಿಲ್ಲ. ಹೀಗಾಗಿ ಪ್ರಕರಣದಲ್ಲಿ ಡ್ರಗ್ ಏಜೆನ್ಸಿ ಮಾಲೀಕರ ಪಾತ್ರ ಇರುವ ಬಗ್ಗೆಯೂ ಅನುಮಾನ ಮೂಡಿದೆ.

ಮಂಡ್ಯ, ಮೈಸೂರು, ಬೆಂಗಳೂರು, ರಾಮನಗರ ಜಿಲ್ಲೆಗಳಲ್ಲಿ ಅವ್ಯಾಹತವಾಗಿ ಹೆಣ್ಣುಭ್ರೂಣ ಹತ್ಯೆ ನಡೆಯುತ್ತಿದ್ದ ಎಂಬ ಆರೋಪ ಕೇಳಿಬಂದ ಕಾರಣ ರಾಜ್ಯ ಸರ್ಕಾರ ಕಳೆದ ವರ್ಷವೇ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಿತ್ತು. ತನಿಖೆ ಪೂರ್ಣಗೊಂಡಿದ್ದು, ಸಿಐಡಿ ಅಧಿಕಾರಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ.

ಅದರ ಜೊತೆಗೆ ಪ್ರಕರಣದಲ್ಲಿ ಔಷಧ ಮಾರಾಟ ಏಜೆನ್ಸಿಗಳ ಕೂಡ ಭಾಗಿಯಾಗಿರುವ ಬಗ್ಗೆ ಆರೋಗ್ಯ ಇಲಾಖೆ ಅಧಿಕಾರಿಗಳು ಪ್ರತ್ಯೇಕವಾಗಿ ತನಿಖೆ ನಡೆಸುತ್ತಿದ್ದಾರೆ.

ಭ್ರೂಣ ಹತ್ಯೆಗೆ ಬಳಸುವ ಎಂಟಿಪಿ (ಮೆಡಿಕಲ್ ಟರ್ಮಿನೇಷನ್ ಆಫ್ ಪ್ರೆಗ್ನೆನ್ಸಿ) ಕಿಟ್‌ಗಳು ಕಾಳಸಂತೆಯಲ್ಲಿ ಮಾರಾಟವಾಗಿವೆ ಎಂಬ ಆರೋಪ ಕೇಳಿಬಂದ ಕಾರಣ ಅದರ ಸಂಪೂರ್ಣ ಲೆಕ್ಕ ಕೊಡುವಂತೆ ಔಷಧ ಮಾರಾಟ ಏಜೆನ್ಸಿಗಳಿಗೆ ಜಿಲ್ಲಾ ಆರೋಗ್ಯಾಧಿಕಾರಿ, ಸಹಾಯಕ ಔಷಧ ನಿಯಂತ್ರಣಾಧಿಕಾರಿ ಕೋರಿದ್ದರು.

ಜಿಲ್ಲೆಯಲ್ಲಿ 30ಕ್ಕೂ ಹೆಚ್ಚು ಸಗಟು ಔಷಧ ಮಾರಾಟ ಮಳಿಗೆಗಳಿದ್ದು, ಅವುಗಳಲ್ಲಿ ಕೇವಲ 12 ಮಾರಾಟಗಾರರಷ್ಟೇ ಮಾಹಿತಿ ನೀಡಿದ್ದಾರೆ. ಇನ್ನುಳಿದ 18ಕ್ಕೂ ಏಜೆನ್ಸಿಗಳು ಮಾಹಿತಿ ನೀಡದಿರುವುದು ಅನುಮಾನಕ್ಕೆ ಕಾರಣವಾಗಿದೆ. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಮೋಹನ್ ಅವರು 3 ಬಾರಿ ಸೂಚನೆ ಕೊಟ್ಟರೂ ಅವರು ಮಾಹಿತಿ ನೀಡಿಲ್ಲ.

'ಔಷಧ ಏಜೆನ್ಸಿ ಮಾಲೀಕರು ವೈದ್ಯರ ಸಲಹಾ ಚೀಟಿ ಇಲ್ಲದೇ ಕೇಳಿದವರಿಗೆಲ್ಲಾ 10 ಪಟ್ಟು ಹೆಚ್ಚು ಬೆಲೆಗೆ ಎಂಟಿಪಿ ಕಿಟ್ ಮಾರಿದ್ದಾರೆ. ಮಾರಾಟದ ಬಗ್ಗೆ ರಶೀದಿ ನಿರ್ವಹಣೆ ಮಾಡಿಲ್ಲ. ಹೀಗಾಗಿ ಮಾಹಿತಿ ನೀಡದ ಔಷಧ ಏಜೆನ್ಸಿ ಮಾಲೀಕರನ್ನೂ ಪ್ರಕರಣದಲ್ಲಿ ಹೊಣೆಗಾರರನ್ನಾಗಿ ಮಾಡಬೇಕು' ಎಂದು ವೈದ್ಯರೊಬ್ಬರು ಒತ್ತಾಯಿಸಿದರು.

6,626 ಕಿಟ್ ಮಾರಾಟ: ಎಂಟಿಪಿ ಕಿಟ್‌ನಲ್ಲಿ ಮಿಫೆಪ್ರಿಸ್ಟಾನ್, ಮಿಸೋಪ್ರೋಸ್ಟ್ ಮಾತ್ರೆಗಳಿದ್ದು ತಾಯಿಯ ಜೀವ ಉಳಿಸುವ ಉದ್ದೇಶಕ್ಕೆ ಮಾತ್ರ ಬಳಕೆ ಮಾಡಲಾಗುತ್ತದೆ. ಆದರೆ ಔಷಧಿ ಮಾರಾಟಗಾರರು ಹೆಣ್ಣುಭ್ರೂಣ ಹತ್ಯೆಗೂ ಇವುಗಳನ್ನು ಮಾರಾಟ ಮಾಡಿದ್ದಾರೆ ಎಂಬುದು ಆರೋಗ್ಯ ಇಲಾಖೆ ಅಧಿಕಾರಿಗಳ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.



ಮಾಗಡಿ ರಸ್ತೆಯ ಕನ್ನಲ್ಲಿಯಲ್ಲಿ ನಡೆದ ವಿಜೃಂಭಣೆಯ ವೀರಭದ್ರಸ್ವಾಮಿ ಬ್ರಹ್ಮರಥೋತ್ಸವ

ಕನ್ನಲ್ಲಿಯಲ್ಲಿ ವಿಜೃಂಭಣೆಯ ವೀರಭದ್ರಸ್ವಾಮಿ ರಥೋತ್ಸವ

ರಾಜರಾಜೇಶ್ವರಿನಗರ: ಇತಿಹಾಸ ಪ್ರಸಿದ್ಧ ಕನ್ನಲ್ಲಿಯಲ್ಲಿ ಶ್ರೀ ವೀರಭದ್ರಸ್ವಾಮಿ ದೇವರ ಬ್ರಹ್ಮರಥೋತ್ಸವ, ಗ್ರಾಮೀಣ ಸೊಗಡಿನ ಸಾಂಸ್ಕೃತಿಕ ಉತ್ಸವ, ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ನಡೆಯಿತು.

ಮಾಗಡಿ ಮುಖ್ಯರಸ್ತೆಯ ಕನ್ನಲ್ಲಿಯಲ್ಲಿ ನಡೆದ ರಥೋತ್ಸವದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಭಕ್ತರು, ರಥೋತ್ಸವಕ್ಕೆ ಬಾಳೆಹಣ್ಣು-ದವನ ಎಸೆದು ಭಕ್ತಿಭಾವ ಮೆರೆದರು.

ವೀರಭದ್ರಸ್ವಾಮಿ ದೇವರನ್ನು ಹೊತ್ತ ರಥವನ್ನು ಭಕ್ತರು ಎಳೆದು ಧನ್ಯತಾ ಭಾವ ತೋರಿದರು. ವೀರಭದ್ರನ ಕುಣಿತ, ಡೊಳ್ಳು ಕುಣಿತ, ತಮಟೆ, ನಗಾರಿ, ವಾದ್ಯಮೇಳದೊಂದಿಗೆ ನಡೆದ ಜನಪದ ಉತ್ಸವದಲ್ಲಿ ವಯೋ ಭೇದವಿಲ್ಲದೆ ಎಲ್ಲರೂ ಕುಣಿದು ಕುಪ್ಪಳಿಸಿದರು. ರಥೋತ್ಸವಕ್ಕೂ ಮುನ್ನ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ನೆರವೇರಿದವು.

ದೇವಸ್ಥಾನದ ದಾಸೋಹ ಸಮಿತಿ ಅಧ್ಯಕ್ಷ ಶಾಂತರಾಜು ಮಾತನಾಡಿ, 'ರಾಜ-ಮಹಾರಾಜರ ಕಾಲದಿಂದಲೂ ಜಾತ್ರಾ ಮಹೋತ್ಸವ ನಡೆಯುತ್ತಿದೆ. ದೇವಸ್ಥಾನ ಆಡಳಿತ ಮಂಡಳಿ, ಗ್ರಾಮಸ್ಥರು ಸೇರಿ ಉತ್ಸವ, ರಥೋತ್ಸವ ನಡೆಸುತ್ತಿದ್ದಾರೆ' ಎಂದು ತಿಳಿಸಿದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ನೇತೃತ್ವದಲ್ಲಿ ಅಲ್ಲಮಪ್ರಭು ಕಲಾ ಶಾಲಾ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಹಾಸ್ಯಕಲಾವಿದ ತುಕಾಲಿ ಸಂತೋಷ್ ತಂಡದವರಿಂದ ಹಾಸ್ಯ ನಾಟಕ ನಡೆಯಿತು.

ತಮಿಳುನಾಡು ಬೇಡಿಕೆ ತಿರಸ್ಕಾರ

ಪ್ರಜಾವಾಣಿ ವಾರ್ತೆ



- ದಕ್ಷಿಣ ಭಾರತದಲ್ಲಿ ಈ ವರ್ಷ ಗಂಭೀರವಾದ ನೀರಿನ ಬಿಕ್ಕಟ್ಟದೆ ಹಾಗೂ ಭೀಕರ ಬೇಸಿಗೆ ಇದೆ. ಕಳೆದ ವರ್ಷ ದಕ್ಷಿಣದ 43 ಜಲಾಶಯಗಳಲ್ಲಿ ಈ ಸಮಯದಲ್ಲಿ ಶೇ 29ರಷ್ಟು ನೀರಿತ್ತು. ಆದರೆ, ಈ ವರ್ಷ ಶೇ 17ರಷ್ಟು ಮಾತ್ರ ಇದೆ.
- ಕರ್ನಾಟಕ, ತಮಿಳುನಾಡು ಹಾಗೂ ಕೇರಳದ ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಲ್ಲಿ ಲಭ್ಯವಿರುವ ಸಂಗ್ರಹಣೆಯು ಪ್ರಸ್ತುತ ನೀರಿನ ವರ್ಷದ ಉಳಿದ ಅವಧಿಗೆ ಹಾಗೂ 2024–25ರ ನೀರಿನ ವರ್ಷದ ಆರಂಭಿಕ 30ಗಳುಗಳಿಗೆ ಸಾಕಾಗುತ್ತದೆ ಎಂದು ಸಮಿತಿ ಅಭಿಪ್ರಾಯಪಟ್ಟದೆ.

ನವದೆಹಲಿ: ನೀರಿನ ಅಭಾವದ ಪರಿಸ್ಥಿತಿ ಭೀಕರವಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕದ ಜಲಾಶಯಗಳಿಂದ 5.3 ಟಿಎಂಸಿ ಅಡಿ ಕಾವೇರಿ ನೀರನ್ನು ಬಿಡುಗಡೆ ಮಾಡಬೇಕೆಂಬ ತಮಿಳುನಾಡಿನ ಬೇಡಿಕೆಯನ್ನು ಕಾವೇರಿ ನೀರು ನಿಯಂತ್ರಣ ಸಮಿತಿ ತಿರಸ್ಕರಿಸಿದೆ.

ಸಮಿತಿಯ ಅಧ್ಯಕ್ಷ ವಿನೀತ್ ಗುಪ್ತ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ 95ನೇ ಸಭೆಯಲ್ಲಿ, 'ಜಲಾಶಯಗಳಲ್ಲಿ ನೀರು ಬಹಳ ಕಡಿಮೆ ಇದೆ. ಅದು ಸ್ಥಳೀಯ ಕುಡಿಯುವ ನೀರಿನ ಉದ್ದೇಶಗಳಿಗೆ ಮಾತ್ರ ಸಾಕಾಗುತ್ತದೆ' ಎಂದು ಅಭಿಪ್ರಾಯಪಡಲಾಯಿತು.

'ಕರ್ನಾಟಕದ ಜಲಾಶಯಗಳಲ್ಲಿ ನೀರಿನ ಪ್ರಮಾಣವು ತುಂಬಾ ಕಡಿಮೆ ಇದ್ದು, ನೈಸರ್ಗಿಕ ಹರಿವನ್ನು ಸಹ ನಿರ್ವಹಿಸುವುದು ಕಷ್ಟಕರವಾಗಿದೆ. ಕಾವೇರಿ ಜಲವಿವಾದ ನ್ಯಾಯಮಂಡಳಿಯ ಆದೇಶದ ಪ್ರಕಾರ, ತಮಿಳುನಾಡಿಗೆ ಪ್ರತಿದಿನ 1,000 ಕ್ಯೂಸೆಕ್ ನೀರು ಬಿಡಬೇಕಿದೆ. ಆದರೆ, ಜಲಾಶಯಗಳಲ್ಲಿ ನೀರಿನ ಕೊರತೆಯಿಂದಾಗಿ ಈಗ 150 ಕ್ಯೂಸೆಕ್ ನೀರು ಅಂತರರಾಜ್ಯ ಗಡಿ ಬಿಂದು ಬಿಳಿಗುಂಡ್ಲುವಿಗೆ ತಲುಪುತ್ತಿದೆ' ಎಂದು ಸಮಿತಿ ಗಮನಿಸಿತು.

ಸುಪ್ರೀಂ ಕೋರ್ಟ್ ಮಾರ್ಪಡಿಸಿದ ನ್ಯಾಯಮಂಡಳಿಯ ಅಂತಿಮ ತೀರ್ಪಿನ ಪ್ರಕಾರ ಕಾವೇರಿ ನೀರಿನ ಬಾಕಿ ಬಿಡುಗಡೆಯನ್ನು ಖಚಿತ ಪಡಿಸಿಕೊಳ್ಳಲು ಮತ್ತು ಪರಿಸರದ ಹರಿವನ್ನು ಕಾಪಾಡಿಕೊಳ್ಳಲು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂಬ ತಮಿಳುನಾಡಿನ ಬೇಡಿಕೆಯನ್ನು ಸಮಿತಿ ನಿರಾಕರಿಸಿತು.

ರಾಜ್ಯದ ನಾಲ್ಕು ಜಲಾಶಯಗಳಲ್ಲಿ ನೀರಿನ ಮಟ್ಟ ಬಹಳ ಕಡಿಮೆ ಇದೆ. ಇದು ಕುಡಿಯುವ ನೀರಿನ ಬೇಡಿಕೆ ಪೂರೈಸಲು ಸಾಕು. ಈಗ ತಮಿಳುನಾಡಿಗೆ ನೀರು ಬಿಡುಗಡೆ ಸಾಧ್ಯವಿಲ್ಲ ಎಂದು ಕರ್ನಾಟಕದ ಅಧಿಕಾರಿಗಳು ಸ್ಪಷ್ಟಪಡಿಸಿದರು. 'ಫೆಬ್ರುವರಿಯಿಂದ ಏಪ್ರಿಲ್ ವರೆಗೆ ಕರ್ನಾಟಕವು 7.3 ಟಿಎಂಸಿ ನೀರು ಹರಿಸಬೇಕಿತ್ತು. ಆದರೆ, 2 ಟಿಎಂಸಿ ನೀರು ಬಿಟ್ಟಿದೆ. ಬಾಕಿ ನೀರನ್ನು ಹರಿಸಲು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು' ಎಂದು ತಮಿಳುನಾಡು ಕೋರಿತು.

'ಫೆಬ್ರುವರಿಯಿಂದ ಏಪ್ರಿಲ್ ವರೆಗೆ ಪ್ರತಿ ತಿಂಗಳು 2.5 ಟಿಎಂಸಿ ನೀರು ಬಿಡಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು. ಆದರೆ, ಪರಿಸರ ಹರಿವನ್ನು ಕಾಪಾಡಿಕೊಳ್ಳಲು ರಾಜ್ಯವು ಪ್ರತಿ ತಿಂಗಳು ಅರ್ಧ ಟಿಎಂಸಿ ಅಡಿಯಷ್ಟು ನೀರನ್ನು ಮಾತ್ರ ಬಿಟ್ಟಿದೆ' ಎಂದು ಕರ್ನಾಟಕದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. ಸಮಿತಿಯ ಮುಂದಿನ ಸಭೆ ಮೇ 16ರಂದು ನಡೆಯಲಿದೆ.

ಕೃಷಿ ಹೊಂಡದಲ್ಲಿ ಮುಳುಗಿ ಸಾವು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ರಾಘವೇಂದ್ರ ನಗರ ಬಡಾವಣೆ ನಿವಾಸಿ ಗೌತಮ್ ಗೌಡ (26) ಕೋಲಾರ ಜಿಲ್ಲೆ ವೇಮಗಲ್ ಸಮೀಪದ ನಾಗನಾಳ ಗ್ರಾಮದಲ್ಲಿ ಕೃಷಿ ಹೊಂಡದಲ್ಲಿ ಈಜಲು ಹೋಗಿದ್ದಾಗ ಮುಳುಗಿ ಮೃತಪಟ್ಟರು.

ಅವರು ನಗರದ 'ಮಾಲ್ ಆಫ್ ಮೈಸೂರು' ವಾಣಿಜ್ಯ ಕಟ್ಟಡದಲ್ಲಿರುವ ಕೆಎಫ್‌ಸಿ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು. ತಂದೆಯ ಊರಾದ ನಾಗನಾಳ ಗ್ರಾಮಕ್ಕೆ ಹೋಗಿದ್ದಾಗ ಸ್ನೇಹಿತರೊಂದಿಗೆ ಕೃಷಿ ಹೊಂಡದಲ್ಲಿ ಈಜಲು ತೆರಳಿದ್ದರು.



ಕೆಎಎಸ್, ಪಿಡಿಒ ಇತರೆ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗಾಗಿ ಆಯೋಜಿಸಿದ್ದ ಉಚಿತ ಕಾರ್ಯಾಗಾರದಲ್ಲಿ ಬೆಂಗಳೂರು ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಅಧ್ಯಕ್ಷ ಪಿ. ರೇವಣ್ಣ, ಬೆಂಗಳೂರು ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸಿದ್ದರಾಮಣ್ಣ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಲೋಕೇಶ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ.

ಜೇವರ್ಗಿಯಲ್ಲಿ ಹೊಂಡದಲ್ಲಿ ಬಿದ್ದು ಅಕ್ಕ–ತಂಗಿ ಸಾವು

ಕಲಬುರಗಿ: ಬಟ್ಟೆ ತೊಳೆಯಲು ಹೋಗಿ ಕಾಲು ಜಾರಿ ಬಿದ್ದು ಅಕ್ಕ–ತಂಗಿ ಮೃತಪಟ್ಟಿರುವ ಘಟನೆ ಜೇವರ್ಗಿ ತಾಲ್ಲೂಕಿನ ಚನ್ನೂರು ಗ್ರಾಮದಲ್ಲಿ ಬುಧವಾರ ನಡೆದಿದೆ.

ಅದೇ ಗ್ರಾಮದ ಭಾಗಮ್ಮ ಪೂಜಾರಿ (19) ಹಾಗೂ ವಿಜಯಲಕ್ಷ್ಮಿ ಪೂಜಾರಿ (17) ಮೃತರು. ಬೆಳಿಗ್ಗೆ 10 ಗಂಟೆ ಸುಮಾರಿಗೆ ಗ್ರಾಮದ ಜಮೀನೊಂದರ ಬಳಿ ತೋಡಲಾದ ಹೊಂಡದಲ್ಲಿ ಬಟ್ಟೆ ತೊಳೆಯಲು ಹೋಗಿ ಕಾಲು ಜಾರಿಬಿದ್ದು ಮೃತಪಟ್ಟಿದ್ದಾರೆ. ಅಗ್ನಿಶಾಮಕ ದಳದವರು ಮೃತ ದೇಹಗಳನ್ನು ಹೊರ ತೆಗೆದರು. ಸ್ಥಳಕ್ಕೆ ಪಿಎಸ್‌ಐ ಸುರೇಶ ಕುಮಾರ್, ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುಪಿಎಸ್‌ಸಿ ಸಾಧಕರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕ ಎಕ್ಸ್‌ಪ್ರೆಸ್ ಮೀಡಿಯಾ ಗ್ರೂಪ್ ಬುಧವಾರ ಆಯೋಜಿಸಿದ್ದ 'ಕುರುಬ ಸಮಾಜದ ಯುಪಿಎಸ್‌ಸಿ ಸಾಧಕರಿಗೆ ಸನ್ಮಾನ ಹಾಗೂ ಕೆಎಎಸ್, ಪಿಡಿಒ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳ ಉಚಿತ ಕಾರ್ಯಾಗಾರ'ದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಡಾ.ಭಾನುಪ್ರಕಾಶ್ ಹಾಗೂ ಕೆ.ಎಲ್. ಸೂರಜ್ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಭಾನುಪ್ರಕಾಶ್, 'ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಅಭ್ಯರ್ಥಿಗಳು ಪದವಿ ಹಂತದಿಂದಲೇ ತಯಾರಿ ಮಾಡಿಕೊಳ್ಳಬೇಕು. ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಎಷ್ಟು ಮುಖ್ಯವೋ, ಮುಂದೆ ನಾವು ಸಮಾಜದಲ್ಲಿ ಯಾವ ರೀತಿಯಾಗಿ ಕೆಲಸ ಮಾಡುತ್ತೇವೆ ಎಂಬುದು ಅಷ್ಟೇ ಮುಖ್ಯ' ಎಂದು ಅವರು ಹೇಳಿದರು.

ಇಂಡಿಯಾ ಫಾರ್ ಐಎಎಸ್ ತರಬೇತಿ ಸಂಸ್ಥೆಯ ಶ್ರೀನಿವಾಸ್, 'ಯುವ ಜನತೆ ಪದವಿ ಹಂತದಲ್ಲಿಯೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಬೇಕು. ಕೇಂದ್ರ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಕರ್ನಾಟಕದವರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಬೇಕು' ಎಂದರು.

ಸನ್ಮಾನ ಕಾರ್ಯಕ್ರಮಕ್ಕೂ ಮುನ್ನ ಕೆಎಎಸ್, ಪಿಡಿಒ ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಉಚಿತ ಕಾರ್ಯಾಗಾರ ನಡೆಯಿತು.

ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಸಿದ್ಧರಾಮಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಆವಲಹಳ್ಳಿ: ಮುನೇಶ್ವರಸ್ವಾಮಿ ರಥೋತ್ಸವ

ಕೆ.ಆರ್.ಪುರ: ಬಿದರಹಳ್ಳಿ ಹೋಬಳಿಯ ಆವಲಹಳ್ಳಿ ಗ್ರಾಮದಲ್ಲಿ ಪುರಾತನ ಪ್ರಸಿದ್ಧ ಶ್ರೀ ಮುನೇಶ್ವರಸ್ವಾಮಿ ದೇವರ 224ನೇ ವಾರ್ಷಿಕೋತ್ಸವ ಮತ್ತು ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಮೂರು ದಿನಗಳಿಂದ ಗಣಪತಿ, ಬಸವೇಶ್ವರ, ಶನೇಶ್ವರ ಸ್ವಾಮಿ ದೇವರುಗಳಿಗೆ ಆರತಿ ಅಗ್ನಿ ಕುಂಡ ವಿಶೇಷ ಪೂಜೆಗಳು, ಹಾಗೂ ಮುನೇಶ್ವರಸ್ವಾಮಿ, ದೊಡ್ಡಮ್ಮ, ಸಪ್ಪಲಮ್ಮ, ಕಾಟೇರಮ್ಮ, ರೇಣುಕಾಯಲ್ಲಮ್ಮ ದೇವರುಗಳಿಗೆ ಆವಲಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಾದ ಮಂಡೂರು, ವೀರೆನಹಳ್ಳಿ, ಚೀಮಸಂದ್ರ, ಬೋಮ್ಮೆನಹಳ್ಳಿ, ಕಟ್ಟಿಗೇನಹಳ್ಳಿ, ಚಿನ್ನಾಗೆನಹಳ್ಳಿ ಗ್ರಾಮಸ್ಥರಿಂದ ಆರತಿ ನಡೆದವು.

ಬುಧವಾರ ಮಧ್ಯಾಹ್ನ ಮುನೇಶ್ವರ ದೇವರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಮೇಡಹಳ್ಳಿ, ಹೊಸಕೋಟೆ, ಕೆಆರ್‌ಪುರ, ಭಟ್ಟರಹಳ್ಳಿ, ರಾಮಮೂರ್ತಿನಗರ ಹಾಗೂ ಆವಲಹಳ್ಳಿ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದರು. ಬಾಳೆಹಣ್ಣನ್ನು ರಥದ ಮೇಲೆ ಎಸೆಯುವ ಮೂಲಕ ದೇವರಿಗೆ ಹರಕೆ ಸಲ್ಲಿಸಿದರು.

ಜಾತ್ರೆಯಲ್ಲಿ ವಿಶೇಷವಾಗಿ ಕೀಲು ಕುದುರೆ, ಡೊಳ್ಳುಕುಣಿತ, ಗೊಂಬೆಕುಣಿತ, ವೀರಗಾಸೆ ಹಾಗೂ ಹಳ್ಳಿಸೊಗಡಿನ ಆರತಿ ದೀಪಗಳು ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದಿದ್ದ ಭಕ್ತರ ಗಮನ ಸೆಳೆದವು.



ಆವಲಹಳ್ಳಿ ಗ್ರಾಮದಲ್ಲಿ ಪುರಾತನ ಪ್ರಸಿದ್ಧ ಮುನೇಶ್ವರ ಸ್ವಾಮಿ ದೇವರ 224ನೇ ವಾರ್ಷಿಕೋತ್ಸವ ಮತ್ತು ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

'ಪೆನ್ ಡ್ರೈವ್: ಎಚ್‌ಡಿಕೆ, ಮೈತ್ರಿ ನಾಯಕರ ಕೈವಾಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೆನ್ ಡ್ರೈವ್ ವಿಷಯವು ಎಚ್.ಡಿ. ಕುಮಾರಸ್ವಾಮಿ ಹಾಗೂ ಬಿಜೆಪಿ ನಾಯಕರಿಗೆ ಎಲ್ಲರಿಗಿಂತ ಮೊದಲು ಗೊತ್ತಿತ್ತು. ಪ್ರಕರಣದಿಂದ ನುಣುಚಿಕೊಳ್ಳಲು ಕಾಂಗ್ರೆಸ್ ಹಾಗೂ ಶಿವಕುಮಾರ್ ಅವರ ಮೇಲೆ ಆರೋಪ ಮಾಡುತ್ತಿದ್ದಾರೆ' ಎಂದು ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಶಿವಕುಮಾರ್ ಬಳಿ ಪೆನ್ ಡ್ರೈವ್ ಇದ್ದಿದ್ದರೆ ಇನ್ನೂ ಮುಂಚಿತವಾಗಿಯೇ ಬಿಡುಗಡೆ ಮಾಡಬಹುದಿತ್ತಲ್ಲವೇ? ಪೆನ್ ಡ್ರೈವ್ ಹಾಸನ ಜಿಲ್ಲೆಯಲ್ಲಿ ಬಿಡುಗಡೆಯಾಗಿದ್ದು, ಅಲ್ಲಿಯ ನಾಯಕರ ಕೈವಾಡ ಅದರಲ್ಲಿದೆ. ಮೈತ್ರಿಕೂಟದ ನಾಯಕರು ಹಾಗೂ ಕುಮಾರಸ್ವಾಮಿ ಅವರ ಕೈವಾಡವಿದೆ. ವಿಡಿಯೊಗಳು ನಾಲ್ಕು ವರ್ಷ ಹಳೆಯವು ಎಂದು ರೇವಣ್ಣನವರೇ ಒಪ್ಪಿಕೊಂಡಿದ್ದಾರೆ. ಅವರ ಕುಟುಂಬದ ಒಬ್ಬೊಬ್ಬರು ಒಂದೊಂದು ಹೇಳಿಕೆ ನೀಡಿದ್ದು, ಬೇರೆಯವರ ಮೇಲೆ ಯಾಕೆ ಆರೋಪ ಮಾಡಬೇಕು' ಎಂದು ಪ್ರಶ್ನಿಸಿದರು.

'ಈ ಪ್ರಕರಣದಲ್ಲಿ ಕುಮಾರಸ್ವಾಮಿ ಅವರ ಆರೋಪ ಮುಖ್ಯವೋ? ಆ ಭಾಗದ ಐನೂರಕ್ಕಿಂತ ಹೆಚ್ಚು ಸಂತ್ರಸ್ತೆಯರಿಗೆ ರಕ್ಷಣೆ, ನ್ಯಾಯ ಒದಗಿಸುವುದು ಮುಖ್ಯವೋ? ಅವರು ತಮ್ಮ ಹುಳುಕು ಮುಚ್ಚಿಕೊಳ್ಳಲು ದಿನಾ ಒಂದೊಂದು ಹೇಳಿಕೆ ನೀಡುತ್ತಲೇ ಇರುತ್ತಾರೆ' ಎಂದು ಕುಟುಕಿದರು.

ಜ. 27ರಂದು ಸೂರಜ್ ರೇವಣ್ಣ ಈ ವಿಚಾರಕ್ಕೆ ಭೇಟಿಯಾಗಿದ್ದರಂತೆ ಎಂಬ ಬಗ್ಗೆ ಪ್ರತಿಕ್ರಿಯಿಸಿದ ಸುರೇಶ್, 'ಈ ರೀತಿಯ ಚರ್ಚೆಯೇ ತಪ್ಪು. ಬೇರೆ ಕೆಲಸದ ವಿಷಯವಾಗಿ ಸೂರಜ್ ರೇವಣ್ಣ ಅವರು ಶಿವಕುಮಾರ್ ಅವರನ್ನು ಭೇಟಿ ಮಾಡಿರಬಹುದು' ಎಂದರು.

'ದೂರು ಕೊಟ್ಟರೆ ಇಕ್ಬಾಲ್ ವಿರುದ್ಧವೂ ಕ್ರಮ': 'ಸಂತ್ರಸ್ತೆ ದೂರು ನೀಡಿದರೆ ಅವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲು ಸೂಚಿಸುತ್ತೇನೆ' ಎಂದು ಸುರೇಶ್ ಹೇಳಿದರು.

ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅವರಿಗೆ ಸಂಬಂಧಿಸಿದ ವಿಡಿಯೊ ಬಿಡುಗಡೆಯಾಗಿರುವ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, ಅವರು ಹೀಗೆ ಪ್ರತಿಕ್ರಿಯಿಸಿದರು.

ನಿಮ್ಮ ಆಪ್ತರು ಎಂದು ವಿಡಿಯೊ ಹಂಚುತ್ತಿದ್ದಾರೆಯೇ ಎಂದು ಪ್ರಶ್ನಿಸಿದಾಗ, 'ಅಂತಹ ನೂರೆಂಟು ಇವೆ. ಬಾಂಬೆ ಬ್ಲೂ ಬಾಯ್ಸ್‌ಗಳದ್ದು ಆಯ್ತು. ಸಿ.ಪಿ. ಯೋಗೀಶ್ವರ್ ಅವರು ಎಲ್ಲ ಮಠಗಳ ಪ್ರವಾಸ ಮಾಡಿದ್ದು ಆಯ್ತು. ಮಠದವರು ಅವರ ಬಳಿ ಖಾಸಗಿಯಾಗಿ ಆ ಬಗ್ಗೆ ಮಾತಾಡಿರಬೇಕಲ್ಲವೇ? ಅಮಿತ್ ಶಾ ಬಳಿ ಹೋಗಿ ಕೊಟ್ಟಿದ್ದಾಯ್ತು. ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪ ಬದಲಾವಣೆಯಾಗಲು ಕಾರಣವೇನು? ಅದನ್ನು ಯೋಗೀಶ್ವರ್ ಅವರೇ ಹೇಳಿದ್ದಾರೆ' ಎಂದರು.

'ಬಯೋ ಎನ್ವಿರಾನ್ಮೆಂಟಲ್ ಟ್ರಸ್ಟ್'ನ ಜಲ ಅಭಿಯಾನದ ಯಶೋಗಾಥೆ

ನೀರಿನ ಬವಣೆ ನೀಗುತ್ತಿರುವ ತೆರೆದಬಾವಿ

● ಡಿ.ಸುರೇಶ್.



ತರೆದ ಬಾವಿಯಿಂದ ನೀರು ಸೇದುತ್ತಿರುವ ಮಹಿಳೆಯರು

ಯಲಹಂಕ: ಅಂತರ್ಜಲ ಕುಸಿತದಿಂದ ಬೆಂಗಳೂರು ನಗರದ ಹಲವೆಡೆ ಕೊಳವೆಬಾವಿಗಳು ಬತ್ತಿ ಹೋಗಿ ನೀರಿಗಾಗಿ ಪರದಾಡುತ್ತಿರುವ ಹೊತ್ತಲ್ಲಿ, ತಾಲ್ಲೂಕಿನ ಸೊಣ್ಣಪ್ಪನಹಳ್ಳಿ ಮತ್ತು ಹುಣಸಮಾರನಹಳ್ಳಿ ಗ್ರಾಮಗಳಲ್ಲಿ ತೆರೆದಬಾವಿಗಳು ನಿವಾಸಿಗಳಿಗೆ ನೀರು ಪೂರೈಸುತ್ತಿವೆ.

ಈ ಎರಡು ಗ್ರಾಮಗಳಲ್ಲಿ ಅರ್ಧ ಶತಮಾನದಷ್ಟು ಹಳೆಯದಾದ ಹಲವು ತೆರೆದಬಾವಿಗಳಿವೆ. ದಶಕದಿಂದೀಚೆಗೆ ಈ ಬಾವಿಗಳ ಬಳಕೆಯನ್ನು ನಿಲ್ಲಿಸಲಾಗಿತ್ತು. ಎರಡು ವರ್ಷಗಳ ಹಿಂದೆ ಬಯೋ ಎನ್ವಿರಾನ್ಮೆಂಟಲ್ ಟ್ರಸ್ಟ್‌ನವರು 'ದಶಲಕ್ಷ ಇಂಗು ಬಾವಿಗಳ' ಅಭಿಯಾನದ ಭಾಗವಾಗಿ ಪುರವಂಕರ ಕಂಪನಿಯ ಸಹಯೋಗದಲ್ಲಿ ತೆರೆದ ಬಾವಿಗಳನ್ನು ಪುನಶ್ಚೇತನಗೊಳಿಸಿದ್ದಾರೆ. ಆ ಬಾವಿಗಳೀಗ ನಿವಾಸಿಗಳಿಗೆ ನೀರಾಸರೆ ಆಗಿವೆ.

ಬಾವಿಗಳ ಪುನಶ್ಚೇತನ: 'ಸಹೋದ್ಯೋಗಿ ಆರ್.ಎಸ್.ಶಿವಾನಂದ್, ಶಾಲೆಗೆ ಮಳೆನೀರು ಸಂಗ್ರಹ ವ್ಯವಸ್ಥೆ ಅಳವಡಿಸಲು ಸೊಣ್ಣಪ್ಪನಹಳ್ಳಿಗೆ ಹೋಗಿದ್ದಾಗ, ಶಾಲೆಯ ಮುಖ್ಯಶಿಕ್ಷಕ ವೆಂಕಟೇಗೌಡರಿಂದ ಗ್ರಾಮದಲ್ಲಿ ತೆರೆದಬಾವಿಗಳಿರುವ ಮಾಹಿತಿ ಸಿಕ್ಕಿತು. ನಂತರ, ಪುರವಂಕರ ಕಂಪನಿಯವರ ಸಿಎಸ್‌ಆರ್ ನಿಧಿಯಡಿಯಲ್ಲಿ ಮಣ್ಣು ಒಡ್ಡರ ಸಮುದಾಯದ ಶಂಕರ್ ನೆರವಿನೊಂದಿಗೆ ಶಾಲೆಯ ಸುತ್ತಮುತ್ತಲಿನ ಮೂರು ಮತ್ತು ಹುಣಸಮಾರನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಮೂರು ಬಾವಿಗಳನ್ನು ಪುನಶ್ಚೇತನಗೊಳಿಸಿದೆವು' ಎಂದು ಬಯೋ ಎನ್ವಿರಾನ್ಮೆಂಟಲ್ ಟ್ರಸ್ಟ್‌ನ ಟ್ರಸ್ಟಿ ಎಸ್. ವಿಶ್ವನಾಥ್ ತಿಳಿಸಿದರು.

ಪುನಶ್ಚೇತನಗೊಂಡ ಮೂರು ಬಾವಿಗಳಿಗೆ ಪುರಸಭೆಯಿಂದ ಮೋಟರ್ ಪಂಪ್ ಅಳವಡಿಸಿ ಸುತ್ತಮುತ್ತಲಿನ ಬಡಾವಣೆಯ ಮನೆಗಳಿಗೆ ನಿತ್ಯ ನೀರು ಪೂರೈಸಲಾಗುತ್ತಿದೆ. 'ಉಳಿದ ಮೂರು ಬಾವಿಗಳಿಗೆ ಪಂಪ್ ಅಳವಡಿಸುವುದು ಬೇಡ. ಪಂಪ್ ಹಾಕಿದರೆ ಬೇಗ ನೀರು ಖಾಲಿಯಾಗುತ್ತದೆ. ನಾವು ಸೇದಿಕೊಂಡೇ ಬಳಸುತ್ತೇವೆ' ಎಂದು ಮಹಿಳೆಯರು ಮನವಿ ಮಾಡಿದರು. ಹೀಗಾಗಿ ಬಾವಿಗಳಿಗೆ ಗ್ರಿಲ್ ಮತ್ತು ಗಾಲಿ ಅಳವಡಿಸಲಾಗಿದೆ. ಸ್ಥಳೀಯರು ಬಾವಿಯಿಂದ ಸೇದಿಕೊಂಡು ನೀರನ್ನು ಉಪಯೋಗಿಸುತ್ತಿದ್ದಾರೆ. ಶಂಕರ್ ಅವರು ತಿಂಗಳಿಗೊಮ್ಮೆ ಬಂದು ಬಾವಿಯನ್ನು ಸ್ವಚ್ಛಗೊಳಿಸುತ್ತಿದ್ದಾರೆ ಎಂದು ತಿಳಿಸಿದರು.

ಬಾವಿಗಳ ಸಂಸ್ಕೃತಿಗೆ ಮರಳಬೇಕು. ಕೆರೆ ಮತ್ತು ಬಾವಿಗಳನ್ನು ಪುನಶ್ಚೇತನಗೊಳಿಸಿ, ಕಾಪಾಡಿಕೊಂಡರೆ ಬೆಂಗಳೂರು ನಗರದಲ್ಲಿ ಉಂಟಾಗುತ್ತಿರುವ ನೀರಿನ ಸಮಸ್ಯೆಗೆ ನಿಶ್ಚಿತವಾಗಿ ಪರಿಹಾರ ಸಿಗುತ್ತದೆ

ಎಸ್. ವಿಶ್ವನಾಥ್, ಬಯೋಮ್ ಟ್ರಸ್ಟ್

ಮನೆ ಬಳಕೆಗೆ ನೀರು: 'ನಮ್ಮ ತಂದೆಯ ಕಾಲದಿಂದಲೂ ಈ ಬಾವಿಯ ನೀರನ್ನು ಕುಡಿಯಲು ಮತ್ತು ಅಡುಗೆಗೆ ಬಳಸುತ್ತಿದ್ದೇವೆ. ನೀರು ತಿಳಿಯಾಗಿದ್ದು, ಗುಣಮಟ್ಟದಿಂದ ಕೂಡಿದೆ. ಹಲವಾರು ಕುಟುಂಬಗಳಿಗೆ ಈ ಬಾವಿಯು ಆಸರೆಯಾಗಿದ್ದು, ಬೇಸಿಗೆಯಲ್ಲಿಯೂ ನೀರಿನ ಕೊರತೆ ನೀಗಿಸಿದೆ' ಎಂದು ಸ್ಥಳೀಯ ನಿವಾಸಿ ಹೊಸಮನೆ ಕೃಷ್ಣಪ್ಪ ತಿಳಿಸಿದರು.

'ಕುಡಿಯುವುದಕ್ಕೆ ಮತ್ತು ಮನೆ ಬಳಕೆಗೆ ಈ ಬಾವಿಯ ನೀರನ್ನೇ ಉಪಯೋಗಿಸುತ್ತಿದ್ದೇವೆ. ಬಾವಿ ನೀರು ಕಲುಷಿತಗೊಳ್ಳಲು ಅವಕಾಶ ನೀಡಿಲ್ಲ. ಬಾವಿ ನೀರು ತಣ್ಣಗಿರುತ್ತದೆ. ಕುಡಿಯಲು ಯೋಗ್ಯವಾಗಿದೆ' ಎಂದು ಸೊಣ್ಣಪ್ಪನಹಳ್ಳಿಯ ಸುಧಾ ಹೇಳಿದರು.

'ಮಳೆಗಾಲದಲ್ಲಿ ಬಾವಿ ತುಂಬಿ ತುಳುಕುತ್ತದೆ. ದೇವಸ್ಥಾನ, ಮದುವೆ ಮತ್ತಿತರ ಶುಭ ಕಾರ್ಯಗಳಿಗೆ ಇದೇ ಬಾವಿಯಿಂದ ನೀರನ್ನು ಸೇದಿಕೊಂಡು ಬಳಸುತ್ತಾರೆ' ಎಂದು ವಿವರಿಸಿದರು.

ಈ ಊರುಗಳ ಸಮೀಪವಿರುವ ಬೆಟ್ಟಹಲಸೂರು ಬಂಡೆಯ ತಗ್ಗು ಪ್ರದೇಶದಲ್ಲಿ ನೀರು ಸಂಗ್ರಹವಾಗಿದೆ. ಅದರ ಜೊತೆಗೆ ಸೊಣ್ಣಪ್ಪನಹಳ್ಳಿ–ಬೆಟ್ಟಹಲಸೂರು ಕೆರೆಯಲ್ಲಿ ನೀರು ತುಂಬಿದೆ. ಹಾಗಾಗಿ ಈ ಬಾವಿಗಳಲ್ಲಿ ಅಲ್ಪ ಪ್ರಮಾಣದಲ್ಲಾದರೂ ವರ್ಷ ಪೂರ್ತಿ ನೀರು ಇರುತ್ತದೆ ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ.

ಮನೆಗಳಿಗೆ ನೀರು ಪೂರೈಕೆ

ಹುಣಸಮಾರನಹಳ್ಳಿ ಟಿಎಂಸಿಯಿಂದ ಎರಡು ತೆರೆದಬಾವಿಗಳಿಗೆ ಪಂಪ್ ಅಳವಡಿಸಿ, ಶಕ್ತಿನಗರ ಜನತಾ ಕ್ವಾರ್ಟರ್ಸ್, ಗುಡಿಸಲು ರಸ್ತೆ, ಸುಭಾಷ್ ನಗರ, ಮಾರಿಯಮ್ಮ ಕ್ಯಾಂಪ್, ಮುನೇಶ್ವರ ಕ್ಯಾಂಪ್ ಮತ್ತಿತರ ಬಡಾವಣೆಗಳ 600ಕ್ಕೂ ಹೆಚ್ಚು ಮನೆಗಳಿಗೆ ನೀರು ಪೂರೈಸಲಾಗುತ್ತಿದೆ. ಮಳೆಗಾಲದಲ್ಲಿ 30 ಅಡಿಗಳಿಷ್ಟಿದ್ದ ನೀರು, ಇಂದು 10ರಿಂದ 15 ಅಡಿಗಳಷ್ಟು ಕುಸಿದಿದೆ' ಎಂದು ವಾಟರ್‌ಮನ್ ಶಶಿಕುಮಾರ್ ತಿಳಿಸಿದರು.

ಪುರವಂಕರಕ್ಕೆ 'ವಿಶ್ವಕರ್ಮ ಪ್ರಶಸ್ತಿ'

ಬೆಂಗಳೂರು: ತೆರೆದ ಬಾವಿಗಳ ಪುನರುಜ್ಜೀವನಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಪುರವಂಕರ ಕಂಪನಿಗೆ 'ಸಿಐಡಿಸಿ ವಿಶ್ವಕರ್ಮ ಪ್ರಶಸ್ತಿ' ದೊರೆತಿದೆ.

ನಿರ್ಮಾಣ ಉದ್ಯಮ ಅಭಿವೃದ್ಧಿ ಮಂಡಳಿಯು (ಸಿಐಡಿಸಿ) ನವದೆಹಲಿಯಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ 15ನೇ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಂಸ್ಥೆಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

'ಈ ಪ್ರತಿಷ್ಠಿತ ಪ್ರಶಸ್ತಿಯು ನಮ್ಮ ಕಂಪನಿಯ ಸಾಮಾಜಿಕ ಜವಾಬ್ದಾರಿ ಮತ್ತು ಪರಿಸರ ನಿರ್ವಹಣೆಗೆ ಸಾಕ್ಷಿಯಾಗಿದೆ. 'ದಶಲಕ್ಷ ಇಂಗು ಬಾವಿಗಳ' ಅಭಿಯಾನವು ನಗರದಲ್ಲಿ ಕುಸಿಯುತ್ತಿರುವ ನೀರಿನ ಮಟ್ಟವನ್ನು ತಡೆಯುವ ಗುರಿಯನ್ನು ಹೊಂದಿದೆ' ಎಂದು ಪುರವಂಕರ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಆಶಿಶ್ ಪುರವಂಕರ ಹೇಳಿದ್ದಾರೆ.

ದುಷ್ಕರ್ಮಿಗಳಿಂದ ಅರ್ಚಕನ ಕೊಲೆ

ಪ್ರಜಾವಾಣಿ ವಾರ್ತೆ

ಲಖನೌ: ಅಂಗಡಿ ತೆರೆಯುವ ವಿಚಾರವಾಗಿ ಉಂಟಾದ ವಿವಾದದಲ್ಲಿ ಕಿಡಿಗೇಡಿಗಳ ಗುಂಪೊಂದು ಬಡಿಗೆ, ಇಟ್ಟಿಗೆಗಳಿಂದ ಥಳಿಸಿ, ಅರ್ಚಕರೊಬ್ಬರನ್ನು ಕೊಲೆ ಮಾಡಿದ ಘಟನೆ ಉತ್ತರ ಪ್ರದೇಶದ ದೇವರಿಯಾ ಜಿಲ್ಲೆಯ ತೆನುವಾ ಚೌಬೆ ಗ್ರಾಮದಲ್ಲಿ ನಡೆದಿದೆ.

60 ವರ್ಷದ ಅಶೋಕ್ ಚೌಬೆ ಕೊಲೆಯಾದವರು. ಮಂಗಳವಾರ ರಾತ್ರಿ ಈ ಘಟನೆ ನಡೆದಿದ್ದು, ಗ್ರಾಮದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದೆ.

ಅಶೋಕ್ ಅವರು ತಮ್ಮ ಊರಿನ ಸಮೀಪದ ಗ್ರಾಮ ಬಾರಿಪುರದಲ್ಲಿರುವ ಹನುಮಾನ್ ದೇವಸ್ಥಾನದಲ್ಲಿ ಅರ್ಚಕರಾಗಿದ್ದರು.

'ಅಶೋಕ್ ತಮ್ಮ ಮನೆ ಪಕ್ಕದಲ್ಲಿಯೇ ಇರುವ ಅಂಗಡಿಯನ್ನು ಮುಚ್ಚುತ್ತಿದ್ದ ವೇಳೆ ಸ್ಥಳಕ್ಕೆ ಬಂದ ಹೌಸಲಾ ಪಾಸ್ವಾನ್ ಎಂಬಾತನ ಕುಟುಂಬದ ಕೆಲವರು, ಅಂಗಡಿ ತೆರೆಯುವಂತೆ ಒತ್ತಾಯಿಸಿದ್ದರು. ಅಂಗಡಿ ಮುಚ್ಚುವ ಸಮಯವಾಗಿದೆ ಎಂದು ಹೇಳಿದ್ದ ಅಶೋಕ್, ಅವರ ಮನವಿಯನ್ನು ತಿರಸ್ಕರಿಸಿದ್ದರು. ಈ ವೇಳೆ, ಪಾಸ್ವಾನ್ ಕುಟುಂಬದವರು ಹಾಗೂ ಅಶೋಕ್ ನಡುವೆ ವಾಗ್ವಾದ ನಡೆದಿತ್ತು' ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

'ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂಬುದಾಗಿ ಪಾಸ್ವಾನ್ ಕುಟುಂಬದವರು ಬೆದರಿಕೆ ಹಾಕಿದ್ದರಿಂದ, ಈ ಕುರಿತು ಅಶೋಕ್ ಅವರು ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು. ಆದರೆ, ಪೊಲೀಸರು ಯಾವುದೇ ಕ್ರಮ ಕೈಗೊಂಡಿರಲಿಲ್ಲ' ಎಂದು ತಿಳಿಸಿದ್ದಾರೆ.

'ಮಂಗಳವಾರ ರಾತ್ರಿ ಅಶೋಕ್ ಅವರು ತೆನುವಾ ಚೌಬೆ ಗ್ರಾಮದಲ್ಲಿರುವ ತಮ್ಮ ಮನೆ ಮುಂದೆ ಕುಳಿತಿದ್ದ ವೇಳೆ, 10ಕ್ಕೂ ಹೆಚ್ಚು ದುಷ್ಕರ್ಮಿಗಳಿದ್ದ ಗುಂಪೊಂದು ಅಶೋಕ್ ಅವರ ಮೇಲೆ ಬಡಿಗೆ ಹಾಗೂ ಇಟ್ಟಿಗೆಗಳಿಂದ ದಾಳಿ ನಡೆಸಿತು' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.



❦ ಸುಭಾಷಿತ ❦

ನನಗೆ ಕಾಲ ಕಳೆಯುವುದು ಹೇಗೆಂಬ ಚಿಂತೆಗಿಂತ ಕಾಲ ಕಳೆದು ಹೋಗುತ್ತದಲ್ಲಾ ಎನ್ನುವುದೇ ಚಿಂತೆ.

-ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಸಿಇಟಿ: ಸರ್ಕಾರದ ನಿರ್ಧಾರ ಸ್ವಾಗತಾರ್ಹ ಆಗಿರುವ ಲೋಪಕ್ಕೆ ಹೊಣೆ ಯಾರು?

ಪ್ರಸಕ್ತ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಇಟಿ) ಮತ್ತೆ ನಡೆಸದೆ ಇರುವ ತೀರ್ಮಾನ ಕೈಗೊಳ್ಳುವ ಮೂಲಕ ರಾಜ್ಯ ಸರ್ಕಾರವು ಒಳ್ಳೆಯ ಕೆಲಸವನ್ನೇ ಮಾಡಿದೆ. ಮತ್ತೆ ಪರೀಕ್ಷೆ ನಡೆಸುವ ಬದಲು, ಈಚೆಗೆ ನಡೆದ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಇದ್ದ ಪಠ್ಯಕ್ರಮದ ಆಚೆಗಿನ ಪ್ರಶ್ನೆಗಳನ್ನು ಮೌಲ್ಯಮಾಪನದ ಸಂದರ್ಭದಲ್ಲಿ ಪರಿಗಣಿಸದೇ ಇರಲು ತೀರ್ಮಾನಿಸಲಾಗಿದೆ. ಆದರೆ, ಇದನ್ನು ಕಾರ್ಯರೂಪಕ್ಕೆ ತರುವುದು ಹೇಗೆ, ಇಂತಹ ಪ್ರಕ್ರಿಯೆಯು ನ್ಯಾಯಸಮ್ಮತ ಎಂದು ಪರಿಗಣಿತವಾಗುತ್ತದೆಯೇ ಎಂಬ ಪ್ರಶ್ನೆಗಳು ಉಳಿದುಕೊಂಡಿವೆ. ಅಲ್ಲದೆ, ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಆದ ಲೋಪಕ್ಕೆ ಹೊಣೆಗಾರರು ಯಾರು ಎಂಬುದನ್ನು ಗುರುತಿಸುವ, ತಪ್ಪು ಮಾಡಿದವರನ್ನು ಶಿಕ್ಷಿಸುವ ಕೆಲಸ ಬಾಕಿ ಇದೆ. ಸಿಇಟಿ ಪರೀಕ್ಷೆಯನ್ನು ಮೂರು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಬರೆದಿದ್ದರು. ಪಠ್ಯಕ್ರಮಕ್ಕೆ ಹೊರತಾದ ಪ್ರಶ್ನೆಗಳನ್ನು ಪ್ರಶ್ನೆಪತ್ರಿಕೆಯಲ್ಲಿ ಕಂಡ ಅವರು ಗೊಂದಲಕ್ಕೆ, ಆತಂಕಕ್ಕೆ ಒಳಗಾಗಿದ್ದರು. ಸಿಇಟಿ ಪರೀಕ್ಷೆಯು ರಾಜ್ಯದ ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸುವಲ್ಲಿ ವಿದ್ಯಾರ್ಥಿಗಳ ಅರ್ಹತೆಯನ್ನು ನಿರ್ಧರಿಸುತ್ತದೆ. ಬಹುತೇಕ ಪ್ರಶ್ನೆಗಳು ಸುಲಭವಾಗಿಯೇ ಇದ್ದವು ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ. ಆದರೆ ತಾವು ಓದಿದ ಪಠ್ಯದಲ್ಲಿ ಇಲ್ಲದ ವಿಷಯಗಳೂ ಪ್ರಶ್ನೆಪತ್ರಿಕೆಗಳಲ್ಲಿ ಇದ್ದಿದ್ದು ಅವರಿಗೆ ಆಘಾತ ಉಂಟುಮಾಡಿತ್ತು. ಈ ಪ್ರಶ್ನೆಗಳಿಗೆ ಉತ್ತರಿಸಲು ಹಲವರಿಗೆ ಸಾಧ್ಯವಾಗಿರಲಿಲ್ಲ. ಪರಿಸ್ಥಿತಿಯನ್ನು ಆರಂಭದಲ್ಲಿ ಇನ್ನಷ್ಟು ಸಂಕೀರ್ಣಗೊಳಿಸಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ), ಪಠ್ಯಕ್ರಮಕ್ಕೆ ಹೊರತಾದ ಪ್ರಶ್ನೆಗಳು ಇರಲಿಲ್ಲ ಎಂದು ವಾದಿಸಿತ್ತು. ಪಠ್ಯಕ್ರಮದ ಆಚೆಗಿನ ಪ್ರಶ್ನೆಗಳು ಪ್ರಶ್ನೆಪತ್ರಿಕೆಯಲ್ಲಿ ನುಸುಳಿದ್ದಕ್ಕೆ ನಿರ್ಲಕ್ಷ್ಯವೇ ಕಾರಣ. ಏಕೆಂದರೆ, ಪರಿಷ್ಕೃತ ಪಠ್ಯಕ್ರಮವು ಪದವಿಪೂರ್ವ ಶಿಕ್ಷಣ ಮಂಡಳಿಯ ವೆಬ್‌ಸೈಟ್‌ನಲ್ಲಿ ಲಭ್ಯವಿತ್ತು. ಲೋಪ ಆಗಿದೆ ಎಂಬುದನ್ನು ಕೆಇಎ ಒಪ್ಪಿಕೊಂಡ ನಂತರ ಮರುಪರೀಕ್ಷೆಯ ಸಾಧ್ಯತೆಯ ಬಗ್ಗೆ ಚರ್ಚೆ ನಡೆದಿತ್ತು. ಆದರೆ, ಹಾಗೆ ಮಾಡಿದಲ್ಲಿ ವಿದ್ಯಾರ್ಥಿಗಳ ಮೇಲೆ ಒತ್ತಡ ಇನ್ನಷ್ಟು ಹೆಚ್ಚಾಗುತ್ತದೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿತ್ತು. ಏಕೆಂದರೆ ವಿದ್ಯಾರ್ಥಿಗಳು ಇನ್ನೂ ಹಲವು ಪ್ರವೇಶ ಪರೀಕ್ಷೆಗಳಿಗೆ ಸಿದ್ಧರಾಗಬೇಕಿದೆ. ಮರುಪರೀಕ್ಷೆಯು ಶೈಕ್ಷಣಿಕ ವರ್ಷದ ಇತರ ಚಟುವಟಿಕೆಗಳ ಮೇಲೆಯೂ ಕೆಟ್ಟ ಪರಿಣಾಮ ಉಂಟುಮಾಡುತ್ತದೆ. ಕೃಪಾಂಕ ನೀಡಬೇಕು ಎಂಬ ಪ್ರಸ್ತಾವವನ್ನು ತಿರಸ್ಕರಿಸಲಾಯಿತು. ಏಕೆಂದರೆ ಹಾಗೆ ಮಾಡಿದರೆ, ಅಂತಹ ಪ್ರಶ್ನೆಗಳಿಗೆ ಉತ್ತರಿಸಲು ಯತ್ನಿಸಿದ ಹಾಗೂ ಯತ್ನಿಸದೇ ಇದ್ದ ವಿದ್ಯಾರ್ಥಿಗಳೆಲ್ಲರಿಗೂ ಸಮಾನವಾಗಿ ಕೃಪಾಂಕ ನೀಡುವುದು ನ್ಯಾಯಸಮ್ಮತ ಆಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ, ಯಾವುದೇ ವಿಷಯದಲ್ಲಿ ಗರಿಷ್ಠ ಆರು ಕೃಪಾಂಕಗಳನ್ನು ಮಾತ್ರ ನೀಡಲು ನಿಯಮಗಳಲ್ಲಿ ಅವಕಾಶ ಇದೆ.



ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಆದ ಲೋಪಕ್ಕೆ ಹೊಣೆಗಾರರು ಯಾರು ಎಂಬುದನ್ನು ಗುರುತಿಸಿ, ತಪ್ಪು ಮಾಡಿದವರನ್ನು ಶಿಕ್ಷಿಸುವ ಕೆಲಸ ಆಗಬೇಕು

ಮರುಪರೀಕ್ಷೆ ನಡೆಸದೆ ಇರುವ ಹಾಗೂ ಕೃಪಾಂಕ ನೀಡದೆ ಇರುವ ತೀರ್ಮಾನ ಕೈಗೊಳ್ಳುವ ಮೂಲಕ ಸರ್ಕಾರವು ಸರಿಯಾದ ಕೆಲಸ ಮಾಡಿದೆ. 'ತಜ್ಞರ ಸಮಿತಿಯ ವರದಿ ಪರಿಗಣಿಸಿ, ವಿದ್ಯಾರ್ಥಿಗಳ ಹಿತವನ್ನು ಕಾಯುವುದನ್ನು ಮನಸ್ಸಿನಲ್ಲಿ ಇರಿಸಿಕೊಂಡು, ಪಠ್ಯಕ್ರಮದ ಹೊರಗಿನ ಪ್ರಶ್ನೆಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸದೇ ಇರಲು, ಇನ್ನುಳಿದ ಪ್ರಶ್ನೆಗಳಿಗೆ ಉತ್ತರಗಳನ್ನು ಮಾತ್ರ ಮೌಲ್ಯಮಾಪನ ಮಾಡಲು ಕೆಇಎಗೆ ಸೂಚಿಸಲಾಗಿದೆ' ಎಂದು ಸರ್ಕಾರ ಹೊರಡಿಸಿರುವ ಅಧಿಸೂಚನೆ ಹೇಳಿದೆ. ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳಬೇಕು ಎಂದಾದರೆ, ಮೌಲ್ಯಮಾಪನದ ಸಂದರ್ಭದಲ್ಲಿ, ವಿದ್ಯಾರ್ಥಿಗಳು ಉತ್ತರಿಸಲು ಯತ್ನಿಸಿದ್ದರೂ ಯತ್ನಿಸಿರದೇ ಇದ್ದರೂ ಪಠ್ಯಕ್ರಮಕ್ಕೆ ಹೊರತಾಗಿದ್ದ ಪ್ರಶ್ನೆಗಳನ್ನು ಪರಿಗಣಿಸಲಾಗುವುದಿಲ್ಲ. ಈಗಿನ ಸಂದರ್ಭದಲ್ಲಿ ಇದೇ ಸೂಕ್ತವಾದ ಕ್ರಮ.

ಸರಿಯಾದ ನಿಗಾ ಇಲ್ಲದೆ, ಪ್ರಶ್ನೆಪತ್ರಿಕೆಗಳನ್ನು ಅದೆಷ್ಟು ನಿರುತ್ಸಾಹದಿಂದ ಸಿದ್ಧಪಡಿಸಲಾಗುತ್ತದೆ ಎಂಬುದನ್ನು ಈ ಪ್ರಕರಣವು ತೋರಿಸಿದೆ. ಪ್ರಶ್ನೆಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ ನೀಡುವ ಮೊದಲು ಹಿರಿಯ ಅಧಿಕಾರಿಗಳು ಯಾರೂ ಗಮನಿಸಿಯೇ ಇರಲಿಲ್ಲ ಎಂಬುದು ಬಹಳ ವಿಚಿತ್ರವಾದ ಸಂಗತಿ. ಮುಂದೆ ಇಂತಹ ಪ್ರಸಂಗ ಎದುರಾಗುವುದನ್ನು ತಡೆಯಲು, ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವಾಗ ಪರೀಕ್ಷಾ ಪ್ರಾಧಿಕಾರವು ಪ್ರಮಾಣಿತ ಕಾರ್ಯಾಚರಣೆ ವಿಧಾನವೊಂದನ್ನು ಅಳವಡಿಸಿಕೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ. ಇದು ಸ್ವಾಗತಾರ್ಹವೇ ಆದರೂ ಈಗ ಆಗಿರುವ ಲೋಪಕ್ಕೆ ಕಾರಣರಾದವರನ್ನು ಹೊಣೆಗಾರರನ್ನಾಗಿ ಮಾಡಬೇಕು. ಸಿಇಟಿ ಪರೀಕ್ಷೆಯು ತಮ್ಮ ಜೀವನದಲ್ಲಿ ಮಹತ್ವದ್ದು ಎಂದು ಪರಿಗಣಿಸಿದ್ದ ಲಕ್ಷಾಂತರ ವಿದ್ಯಾರ್ಥಿಗಳು, ಈ ಬೇಜವಾಬ್ದಾರಿ ನಡೆಯ ಕಾರಣದಿಂದಾಗಿ ಇನ್ನಷ್ಟು ಒತ್ತಡಕ್ಕೆ ಒಳಗಾಗಿದ್ದರು ಎಂಬುದನ್ನು ಮರೆಯುವಂತಿಲ್ಲ.

ಇಂಡಿಯಾ ಮೈತ್ರಿಕೂಟದ ಪಕ್ಷಗಳ ಭರವಸೆಗಳಲ್ಲಿ ಹೊಣೆಗಾರಿಕೆಯ ಕೊರತೆ ಕಾಣುತ್ತಿದೆ

ದೇಶದ ಹಿತ ಮರೆತ ಪ್ರಣಾಳಿಕೆಗಳು



ಸೂರ್ಯ-ನಮಸ್ಕಾರ

ಎ. ಸೂರ್ಯ ಪ್ರಕಾಶ್

'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಒಟ್ಟಾಗಿವೆ ಎಂದು ಭಾವಿಸಲಾಗಿದೆ. ಈ ಒಕ್ಕೂಟದ ಹಲವು ಪಕ್ಷಗಳು ಲೋಕಸಭಾ ಚುನಾವಣೆಗೆ ಪ್ರತ್ಯೇಕ ಪ್ರಣಾಳಿಕೆ ಬಿಡುಗಡೆ ಮಾಡಿವೆ. ಈ ಪ್ರಣಾಳಿಕೆಗಳಲ್ಲಿ ಪರಿಣಾಮಗಳನ್ನು ಲೆಕ್ಕಿಸದ ಕೆಲವು ಭರವಸೆಗಳು ಇವೆ. ಈ ಭರವಸೆಗಳು ಉದ್ದೇಶದಲ್ಲಿ ಒಗ್ಗಟ್ಟನ್ನಾಗಲಿ, ಆಡಳಿತದ ಬಗ್ಗೆ ಹೊಣೆಗಾರಿಕೆಯನ್ನಾಗಲಿ ಪ್ರತಿಫಲಿಸುತ್ತಿಲ್ಲ. ಕೆಲವು ಪಕ್ಷಗಳು ಮಾಡಿರುವ ಘೋಷಣೆಗಳು ರಾಷ್ಟ್ರದ ಭದ್ರತೆಯನ್ನು ಅಪಾಯಕ್ಕೆ ಒಡ್ಡುತ್ತವೆ, ಚೀನಾದ ಎದುರು ಬಹಳ ದುರ್ಬಲವಾಗಿದ್ದ ಸ್ಥಿತಿಗೆ, ಪಾಕಿಸ್ತಾನ ಒಡ್ಡುತ್ತಿದ್ದ ಬೆದರಿಕೆಯ ಕಾರಣಕ್ಕೆ ನಿರಂತರವಾಗಿ ಗಾಸಿಗೊಳ್ಳುತ್ತಿದ್ದ ಸ್ಥಿತಿಗೆ ದೇಶವನ್ನು ಮತ್ತೆ ಒಯ್ಯುವ ಘೋಷಣೆಗಳು ಅವು. ಇಂತಹ ಘೋಷಣೆಗಳು ಪರಿಸ್ಥಿತಿಯನ್ನು ಇನ್ನಷ್ಟು ಸಂಕೀರ್ಣಗೊಳಿಸುವಂಥವು. ಘೋಷಣೆ ಆಗಿರುವ ಕೆಲವು ಉಚಿತ ಕೊಡುಗೆಗಳು ದೇಶದ ಆರ್ಥಿಕ ಆರೋಗ್ಯವನ್ನು ಭಾರಿ ಅಪಾಯಕ್ಕೆ ಸಿಲುಕಿಸಬಲ್ಲವು.

ಕಾಂಗ್ರೆಸ್, ಸಿಪಿಎಂ, ರಾಷ್ಟ್ರೀಯ ಜನತಾದಳ, ಡಿಎಂಕೆ ಮತ್ತು ಇತರ ಕೆಲವು ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿವೆ. ಕಾಂಗ್ರೆಸ್ ಪಕ್ಷವನ್ನು ಹೊರತುಪಡಿಸಿದರೆ, ಮೈತ್ರಿಕೂಟದಲ್ಲಿ ಇರುವ ಇತರ ಎಲ್ಲವೂ ಪ್ರಾದೇಶಿಕ ಅಥವಾ ಜಾತಿ ಆಧಾರಿತ ಪಕ್ಷಗಳು. ಹೀಗಾಗಿ ಅವು ದೇಶದ ಒಟ್ಟಾರೆ ಒಳಿತಿಗಿಂತಲೂ ಹೆಚ್ಚಾಗಿ ತಮ್ಮ ರಾಜ್ಯ ಅಥವಾ ತಮ್ಮ ಪ್ರಾಬಲ್ಯದ ಕ್ಷೇತ್ರಗಳ ಬಗ್ಗೆ ತಲೆಕೆಡಿಸಿಕೊಂಡಿರುತ್ತವೆ.

ಇಂಡಿಯಾ ಮೈತ್ರಿಕೂಟದ ಪಕ್ಷಗಳ ಪ್ರಣಾಳಿಕೆಗಳನ್ನು ದೇಶದ ಸಾಮಾಜಿಕ, ಆರ್ಥಿಕ ಮತ್ತು ಇತರ ಮಹತ್ವದ ಹಿತಾಸಕ್ತಿಗಳ ಬಗ್ಗೆ ಆಳವಾದ ತಿಳಿವಳಿಕೆ ಇರುವ ವ್ಯಕ್ತಿಗಳು ಸಿದ್ಧಪಡಿಸಿರುವಂತೆ ಕಾಣುತ್ತಿಲ್ಲ. ಹಲವು ಭರವಸೆಗಳು ಮತ್ತು ಹೇಳಿಕೆಗಳಲ್ಲಿ ಬೇಜವಾಬ್ದಾರಿತನ ಕಾಣುತ್ತಿದೆ. ಸಿಪಿಎಂ ಉದಾಹರಣೆಯನ್ನು ಗಮನಿಸೋಣ. ಭಾರಿ ಪ್ರಮಾಣದಲ್ಲಿ ಅಣ್ವಸ್ತ್ರಗಳನ್ನು ಹೊಂದಿರುವ ಚೀನಾ ಮತ್ತು ಪಾಕಿಸ್ತಾನ ನಮ್ಮನ್ನು ಬೆಂಬಿಡದೆ ಕಾಡುತ್ತಿದ್ದರೂ 'ಅಣ್ವಸ್ತ್ರಗಳ ನಿರ್ಮೂಲಕ್ಕೆ ಬದ್ಧವಾಗಿದ್ದೇವೆ' ಎಂದು ಸಿಪಿಎಂ ಹೇಳಿದೆ. ಚೀನಾದ ಬಳಿ ಭಾರಿ ಪ್ರಮಾಣದಲ್ಲಿ ಅಣ್ವಸ್ತ್ರಗಳ ಸಂಗ್ರಹ ಇದೆ. ಅದು ಪಾಕಿಸ್ತಾನದ ಅಣ್ವಸ್ತ್ರ ಹಾಗೂ ಕ್ಷಿಪಣಿ ಯೋಜನೆಯಲ್ಲಿ ಬಹಳ ನಿಕಟವಾದ ಸಹಭಾಗಿತ್ವ ಹೊಂದಿದೆ. ಭಾರತದ ಹಿತಾಸಕ್ತಿಗಳ ಬಗ್ಗೆ ಅರಿವಿರುವ ಯಾರೇ ಆದರೂ ಅಣ್ವಸ್ತ್ರಗಳನ್ನು ನಿರ್ಮೂಲಗೊಳಿಸುವ ಸಲಹೆ ನೀಡುತ್ತಾರೆಯೇ?

ಇಂದಿರಾ ಗಾಂಧಿ ಅವರ ನೇತೃತ್ವದಲ್ಲಿ ಭಾರತದ ಮೊದಲ ಅಣ್ವಸ್ತ್ರ ಪರೀಕ್ಷೆಗೆ (ಪೋಖ್ರಾನ್ 1) ಆದೇಶಿಸಿದ್ದ ಕಾಂಗ್ರೆಸ್ ಪಕ್ಷವು ಸಿಪಿಎಂ ನಿಲುವಿಗೆ ಸಮ್ಮತಿ ಹೊಂದಿದೆಯೇ? ಭಾರತವು ಅಮೆರಿಕದ ಜೊತೆಗಿನ ರಕ್ಷಣಾ ಪಾಲುದಾರಿಕೆಯಿಂದ, ಕ್ವಾಡ್ ಕೂಟದಿಂದ ಹೊರಬರಬೇಕು ಎಂಬ ಸಿಪಿಎಂ ಪ್ರಸ್ತಾವ ಕೂಡ ಅಪಾಯಕಾರಿ. ಇಂಡೊ-ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ವಿಸ್ತರಣಾವಾದಿ ನಡೆಗಳನ್ನು ನಿಯಂತ್ರಣದಲ್ಲಿ ಇರಿಸುವ ವಿಚಾರದಲ್ಲಿ ಅಮೆರಿಕ, ಭಾರತ, ಜಪಾನ್ ಮತ್ತು ಆಸ್ಟ್ರೇಲಿಯಾ ಕಟ್ಟಿಕೊಂಡಿರುವ ಮಹತ್ವದ ಒಕ್ಕೂಟ ಈ 'ಕ್ವಾಡ್'. ಪೂರ್ವ, ಪಶ್ಚಿಮ ಮತ್ತು ದಕ್ಷಿಣದಲ್ಲಿ ಸಮುದ್ರ ಪ್ರದೇಶವನ್ನು ಹೊಂದಿರುವ ಭಾರತವು ಚೀನಾ ನೌಕಾದಳದ ವಿಸ್ತರಣೆಯಿಂದಾಗಿ ಬೆದರಿಕೆಗೆ ಗುರಿಯಾಗಿದೆ. ಭಾರತದ ರಾಷ್ಟ್ರೀಯ ಹಿತಾಸಕ್ತಿಗಳನ್ನು ಮನಸ್ಸಿನಲ್ಲಿ ಇರಿಸಿಕೊಂಡಿರುವ ಯಾರೇ ಆದರೂ ಕ್ವಾಡ್‌ನಿಂದ ಹೊರಬರುವ ಸಲಹೆ ನೀಡುತ್ತಾರೆಯೇ?

ಸಿಪಿಎಂ ಮುಂದಿಟ್ಟಿರುವ ಇನ್ನೊಂದು ಅಪಾಯಕಾರಿ ವಿಚಾರವೆಂದರೆ, ಸಂವಿಧಾನದ 370 ಹಾಗೂ 35(ಎ) ವಿಧಿಗಳನ್ನು ಮತ್ತೆ ಅನುಷ್ಠಾನಗೊಳಿಸುವುದು, ಆ ಮೂಲಕ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಜಮ್ಮು ಮತ್ತು ಕಾಶ್ಮೀರದ ವಿಚಾರವಾಗಿ ಕೈಗೊಂಡ ಅಸಾಮಾನ್ಯ ಕ್ರಮವನ್ನು ಸಂಪೂರ್ಣವಾಗಿ ವ್ಯರ್ಥಗೊಳಿಸುವುದು. ರಾಜಕೀಯ ಪಕ್ಷವೊಂದು ಈ ರೀತಿಯ ಪ್ರಸ್ತಾವಗಳನ್ನು ಸಿದ್ಧಪಡಿಸಿರುವುದು ದೇಶವನ್ನು ಮಿಲಿಟರಿಯ ದೃಷ್ಟಿಯಿಂದ ದುರ್ಬಲಗೊಳಿಸುವ ಹಾಗೂ ದೇಶದ ಏಕತೆ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಕ್ರಿಮಿನಲ್ ಉದ್ದೇಶವನ್ನು ಹೊಂದಿರುವಂತಿದೆ. ಈ ಮಾತುಗಳು ತೀರಾ ಕಟು ಅನ್ನಿಸಬಹುದು. ಭಾರತದ ಕಮ್ಯುನಿಸ್ಟರು ಚೀನಾ ಬಗ್ಗೆ ಹೊಂದಿರುವ ಒಲವು ನಮಗೆಲ್ಲರಿಗೂ ತಿಳಿದಿದೆ. ಆದರೆ ಆ ದೇಶವನ್ನು ಬಲಪಡಿಸಲು, ನಮ್ಮನ್ನು ದುರ್ಬಲಗೊಳಿಸಲು ಆ ಪಕ್ಷವು ಇಷ್ಟೊಂದು ಮುಂದೆ ಸಾಗಬಹುದು ಎಂದು ಯಾರೂ ಊಹಿಸಿರಲಿಕ್ಕಿಲ್ಲ.

ಭಾರತದ ಅತ್ಯಂತ ಹಳೆಯ ರಾಜಕೀಯ ಪಕ್ಷವಾಗಿರುವ ಕಾಂಗ್ರೆಸ್, ಈಗಿನ ಸಂದರ್ಭದಲ್ಲಿ ಸಿಪಿಎಂ ಜೊತೆ ಪಾಲುದಾರಿಕೆ ಹೊಂದಿರುವುದು ವಿಷಕಾರಿ. ಕಾಂಗ್ರೆಸ್ ಪಕ್ಷವು ನಿಜಕ್ಕೂ ಕೆಟ್ಟವರ ಸಹವಾಸಕ್ಕೆ ಬಿದ್ದಿದೆ. ಈ ಮೈತ್ರಿಕೂಟವು ದೇಶದಲ್ಲಿ ಅಧಿಕಾರಕ್ಕೆ ಬಂದಲ್ಲಿ ದೇಶದ ಭದ್ರತೆಯ ಕಥೆ ಏನಾಗಬಹುದು ಎಂಬುದನ್ನು ಯಾರಾದರೂ ಊಹಿಸಬಹುದು.

ದೇಶದಾದ್ಯಂತ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸುವುದಾಗಿ, ಜಾತಿ ಗಣತಿ ನಡೆಸುವುದಾಗಿ ಕಾಂಗ್ರೆಸ್ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ಹೇಳಿದೆ. ತರತಮವನ್ನು ಸರಿಪಡಿಸುವ ಕೆಲಸಗಳಿಗೆ ಈ ಸಮೀಕ್ಷೆಯ ಮೂಲಕ ದೊರೆಯುವ ದತ್ತಾಂಶವನ್ನು ಬಳಸಿಕೊಳ್ಳಲಾಗುತ್ತದೆ. ಆದರೆ ಇದರ ಅರ್ಥವೇನು? ತಮ್ಮ ಪಕ್ಷವು ದೇಶದ 'ಎಕ್ಸ್‌ರೇ' (ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ) ನಡೆಸುವುದಾಗಿ ರಾಹುಲ್ ಗಾಂಧಿ ಅವರು ಏಪ್ರಿಲ್ 6ರಂದು ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದ್ದಾರೆ. ದತ್ತಾಂಶ ಲಭ್ಯವಾದಾಗ, ತಮ್ಮ ಪಾಲು ಎಷ್ಟು ಎಂಬುದು ಅಲ್ಪಸಂಖ್ಯಾತರಿಗೆ ಗೊತ್ತಾಗುತ್ತದೆ. ಮುಂದಿನ ನಡೆಯಾಗಿ, ಹಣಕಾಸಿನ ಮತ್ತು ಸಾಂಸ್ಥಿಕ ಸಮೀಕ್ಷೆಯನ್ನು ನಡೆಸಲಾಗುತ್ತದೆ. ಅದಾದ ನಂತರದಲ್ಲಿ, 'ಒಂದು ಕ್ರಾಂತಿಕಾರಕ ಹೆಜ್ಜೆಯನ್ನು ಇರಿಸಲಾಗುತ್ತದೆ. ನಿಮಗೆ (ಅಲ್ಪಸಂಖ್ಯಾತರಿಗೆ) ನಿಮ್ಮ ಹಕ್ಕಿನ ನೆಲೆಯಲ್ಲಿ ಏನು ಸಿಗಬೇಕೋ ಅದು ಸಿಗುತ್ತದೆ' ಎಂದಿದ್ದಾರೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ರಾಹುಲ್ ಅವರ ಪಕ್ಷವು ಸಂಪತ್ತಿನ ಮರುಹಂಚಿಕೆಯ ಐತಿಹಾಸಿಕ ಹೆಜ್ಜೆಯನ್ನು ಇರಿಸಲಿದೆ. ಇನ್ನೊಂದು ಕಡೆ ಅವರು, 'ಜಾತಿ ಗಣತಿ'ಯು ಮೊದಲ ಹೆಜ್ಜೆ ಎಂದಿದ್ದಾರೆ. ನಂತರ ಪ್ರತಿ ಸಮುದಾಯಕ್ಕೂ ಅದರ ಪಾಲು ಸಿಗುತ್ತದೆ. ಮನಮೋಹನ್ ಸಿಂಗ್ ಅವರು ಹಲವು ವರ್ಷಗಳ ಹಿಂದೆ ನೀಡಿದ್ದ ಅತ್ಯಂತ ವಿಭಜನಕಾರಿ ಮತ್ತು ಅತ್ಯಂತ ಹಿಂದೂವಿರೋಧಿ ಹೇಳಿಕೆಯನ್ನು ನಾವು ಮರೆಯಬಾರದು. ದೇಶದಲ್ಲಿ 'ಸಂಪತ್ತಿನ ಮೇಲೆ ಮುಸ್ಲಿಮರಿಗೆ ಮೊದಲ ಹಕ್ಕು ಇದೆ' ಎಂದು ಅವರು ಹೇಳಿದ್ದರು.

ರಾಷ್ಟ್ರೀಯ ಜನತಾ ದಳದ (ಆರ್‌ಜೆಡಿ) ಕಥೆಯನ್ನು ಒಮ್ಮೆ ಅವಲೋಕಿಸೋಣ. ಇಂಡಿಯಾ ಮೈತ್ರಿಕೂಟವು ಅಧಿಕಾರಕ್ಕೆ ಬಂದಲ್ಲಿ ತಾನು ಬಿಹಾರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವುದಾಗಿ, ₹1.6 ಲಕ್ಷ ಕೋಟಿಯ ವಿಶೇಷ ನೆರವು ಒದಗಿಸುವುದಾಗಿ ಅದು ಹೇಳಿದೆ. ಅಲ್ಲದೆ, ಬಿಹಾರದಲ್ಲಿ ಐದು ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ ಮಾಡುವುದಾಗಿ, ಬಿಹಾರದ ಜನರಿಗೆ ತಿಂಗಳಿಗೆ 200 ಯೂನಿಟ್ ಉಚಿತ ವಿದ್ಯುತ್ ನೀಡುವುದಾಗಿಯೂ ಹೇಳಿದೆ. ಬಡ ಕುಟುಂಬಗಳ ಸಹೋದರಿಯರಿಗೆ ಪ್ರತಿವರ್ಷ ರಕ್ಷಾ ಬಂಧನದ ದಿನ ₹1 ಲಕ್ಷ ನೀಡುವ ಮಾತು ಕೂಡ ಇದೆ. ಮಹಾಲಕ್ಷ್ಮಿ ಹೆಸರಿನ ಯೋಜನೆಯೊಂದರ ಪ್ರಸ್ತಾವ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಇದೆ. ಇದು ಬಡ ಕುಟುಂಬಗಳಿಗೆ ಷರತ್ತುರಹಿತವಾಗಿ ಪ್ರತಿವರ್ಷ ₹1 ಲಕ್ಷ ನೀಡುವ ಯೋಜನೆ.

ಆರ್‌ಜೆಡಿ ಪ್ರಣಾಳಿಕೆಯಲ್ಲಿ ಬಡವರಿಗೆ ₹500ಕ್ಕೆ ಅಡುಗೆ ಅನಿಲ ಸಿಲಿಂಡರ್ ಒದಗಿಸುವ ಪ್ರಸ್ತಾವ ಇದೆ. ಮನೆಯ ಮಹಿಳೆಗೆ ತಿಂಗಳಿಗೆ ₹1,000 ನೀಡುವ, ₹500ಕ್ಕೆ ಅಡುಗೆ ಅನಿಲ ಸಿಲಿಂಡರ್ ನೀಡುವ ಪ್ರಸ್ತಾವ ಡಿಎಂಕೆ ಪ್ರಣಾಳಿಕೆಯಲ್ಲಿದೆ. ತಾನು ಅಧಿಕಾರಕ್ಕೆ ಬಂದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಲೀಟರಿಗೆ ಕ್ರಮವಾಗಿ ₹75 ಹಾಗೂ ₹65 ಆಗಲಿದೆ ಎಂದು ಅದು ಹೇಳಿದೆ.

ಈ ಭರವಸೆಗಳು ತೀರಾ ಅಪಾಯಕಾರಿ. ಒಬ್ಬರಿಗೊಬ್ಬರು ಹೊಂದಿಕೆ ಆಗದ ಹಾಗೂ ಕೆಲವು ಸಂದರ್ಭಗಳಲ್ಲಿ ಹತಾಶೆಗೆ ಒಳಗಾದಂತೆ ಕಾಣುವ ಪಕ್ಷಗಳ ಮೈತ್ರಿಕೂಟಕ್ಕೆ ಮತ ಚಲಾಯಿಸಬೇಕೇ ಎಂಬುದನ್ನು ಮತದಾರರು ತೀರ್ಮಾನಿಸಬೇಕು. ಇಂತಹ ಪಕ್ಷಗಳ ಮೈತ್ರಿಕೂಟವು ಅಧಿಕಾರಕ್ಕೆ ಬಂದಲ್ಲಿ ದೇಶವು ಸುರಕ್ಷಿತವಾಗಿ ಇರುತ್ತದೆಯೇ?



ಚುರುಮುರಿ



'ಪ್ರಜ್ವಲಿ'ಸಿದ ಪೆನ್‌ಡ್ರೈವ್

• ಆನಂದ

'ಈ ಸಲ ಚೊಂಬು ನಿಮ್ಮದೇ' ಎಂದು ಚಿಪ್ಪು ಹೇಳಿತು. ಅದಕ್ಕೆ ಚೊಂಬು 'ಇಲ್ಲಪ್ಪಾ ನಾವೇನೂ ಆರ್‌ಸಿಬಿ ಅಲ್ಲ 'ಚೊಂಬು ನಮ್ಮದೇ' ಅಂತ ಹೇಳೋದಿಕ್ಕೆ. ನಮಗೆ ಕೊಟ್ಟರೂ ಬೇಡ' ಎಂದಿತು.

ಹೀಗೆ ಚಿಪ್ಪು- ಚೊಂಬಿನ ನಡುವೆ ಜಟಾಪಟಿ ಆಫ್ ದಿ ಫೀಲ್ಡ್ ನಡೆಯುತ್ತಿತ್ತು.

ಚಿಪ್ಪು ದೊಡ್ಡದೋ ಚೊಂಬು ದೊಡ್ಡದೋ ಎಂಬ ಜಿಜ್ಞಾಸೆ ತಲೆದೋರಿತು. 'ಚಿಪ್ಪು ನ್ಯಾಚುರಲ್ ಆದರೆ ಚೊಂಬು ಆರ್ಟಿಫಿಷಿಯಲ್ ಆದ್ದರಿಂದ ಚಿಪ್ಪೇ ದೊಡ್ಡದು' ಎಂದು ಒಂದು ಚಿಂತಕರ ಚಾವಡಿ ಹೇಳಿತು. ಇನ್ನೊಂದು ಚಿಂತಕರ ಚಾವಡಿಯ ಪ್ರಕಾರ, 'ಚೊಂಬಿನ ಅಳತೆಯನ್ನು ಅಗತ್ಯಕ್ಕೆ ತಕ್ಕಂತೆ ರೂಪಿಸಿಕೊಳ್ಳಬಹುದು, ಆದರೆ ಚಿಪ್ಪಿನ ಅಳತೆ ಮೊದಲೇ ಫಿಕ್ಸ್ ಆಗಿರುವುದರಿಂದ ಆ ಸೈಜಿಗೆ ಅದನ್ನು ಹಿಡಿಯುವವರು ಅಡ್ಜಸ್ಟ್ ಆಗಬೇಕೇ ವಿನಾ ನಮಗೆ ಬೇಕಾದ ಸೈಜಿಗೆ ಚಿಪ್ಪು ಸಿಗದು' ಎಂದು ವಾದಿಸಿ, ಚಿಪ್ಪಿಗಿಂತ ಚೊಂಬೇ ವಾಸಿ ಎಂದು ಹೇಳಿತು.

ಅದಕ್ಕೆ ಚಿಪ್ಪಿನ ಬಣ, 'ಚೊಂಬು ತಯಾರಿಸ ಬೇಕಾದರೆ ಜನ ಬಲ, ನೀರಿನ ಬಲ, ವಿದ್ಯುತ್ ಬಲ, ಸಂಪನ್ಮೂಲ ಬಲ ಹೀಗೆ ಹಲವಾರು ಬಲಗಳು ಅಗತ್ಯ. ಆದರೆ ಚಿಪ್ಪಿಗೆ ಮರವೊಂದಿದ್ದರೆ ಸಾಕು ಬೇರಿನ್ನೇನೂ ಕೇಳದು, ತನ್ನಷ್ಟಕ್ಕೆ ತಾನೇ ಚಿಪ್ಪನ್ನು ಉತ್ಪಾದಿಸತೊಡಗುತ್ತದೆ. ಚೊಂಬು ಕೊಂಡರೆ ಜಿಎಸ್‌ಟಿ ಕಟ್ಟಬೇಕು, ಆದರೆ ಚಿಪ್ಪಿಗೆ ಅಂತಹ ತೆರಿಗೆಯ ಕಾಟವೇ ಇಲ್ಲ. ಆದ್ದರಿಂದ ಚಿಪ್ಪೇ ವಾಸಿ' ಎಂದು ವಾದಿಸಿತು.

ಅದಕ್ಕೆ ಚೊಂಬುವಾದಿಗಳು 'ಇದರಲ್ಲಿ ನೀರು ತುಂಬಿಡಬಹುದು, ಕೊಂಡೊಯ್ಯಬಹುದು, ಪೂರ್ಣಕುಂಭ ಸ್ವಾಗತಕ್ಕೆ ಬಳಸಬಹುದು... ನೀನಾರಿಗಾದೆಯೋ ಚಿಪ್ಪೇ' ಎಂದು ರಾಗವಾಗಿ ಜರಿಯಿತು.

ಜಟಾಪಟಿ ಮುಂದುವರಿದಾಗ ಅಲ್ಲಿಗೆ ಬಂದ ಪೆನ್‌ಡ್ರೈವ್ 'ನಿಮ್ಮಿಬ್ಬರಿಗಿಂತ ನಾನೇ ಹೆಚ್ಚು' ಎಂದು ವಾದಿಸಿತು. ಆಗ ಚೊಂಬಿಗೂ ಚಿಪ್ಪಿಗೂ ಅಚ್ಚರಿ. 'ಹೇಗೆ? ಪೇಳುವಂತವನಾಗು' ಎಂದು ಪ್ರಲಾಪಿಸಿದಾಗ ಅದು 'ನಾನು ನಿಮ್ಮಂತೆ ಕಾಣಿಸಿಕೊಳ್ಳಲೇಬೇಕಿಲ್ಲ, ಹಿಂಬದಿಯಲ್ಲಿ ನಿಂತೇ ಪ್ರಭಾವ ಬೀರುತ್ತಾ 'ಪ್ರಜ್ವಲಿ'ಸುವೆ' ಎಂದಿತು. 'ಯೆಸ್, ಯು ಆರ್ ರೈಟ್' ಎಂದು ಚೊಂಬು- ಚಿಪ್ಪು ಒಪ್ಪಿಕೊಂಡವು.

ದಿನದ ಟ್ವೀಟ್

ವಿಸ್ಮಯಕಾರಿ ಕೆಲಸ



ಕಂಪನಿಗಳು ಈಗ ₹10,000 ಮುಖಬೆಲೆಯ ಬಾಂಡ್‌ಗಳನ್ನೂ ಹೊರಡಿಸಲು ಅವಕಾಶ ಇದೆ. ಇದು ಬಾಂಡ್‌ಗಳಲ್ಲಿ ಸಣ್ಣ ಹೂಡಿಕೆದಾರರ ಪಾಲ್ಗೊಳ್ಳುವಿಕೆಯನ್ನು ಆಕರ್ಷಿಸಲು ನೆರವಾಗುವ ಒಂದು ದೊಡ್ಡ ಹೆಜ್ಜೆ. ಕಳೆದ ಕೆಲವು ವರ್ಷಗಳಲ್ಲಿ ತಂದ ಹಲವು ಕ್ರಮಗಳ ಮೂಲಕ, ಬಾಂಡ್‌ಗಳು ಸಣ್ಣ ಹೂಡಿಕೆದಾರರ ಕೈಗೆ ಎಟಕುವಂತೆ ಮಾಡುವ ಬಹಳ ವಿಸ್ಮಯಕಾರಿ ಕೆಲಸಗಳನ್ನು 'ಸೆಬಿ' ಮಾಡಿದೆ.

ನಿತಿನ್ ಕಾಮತ್, ಉದ್ಯಮಿ ಹಾಗೂ ಹೂಡಿಕೆದಾರ

ಕಿಡಿನುಡಿ



ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಹೋಗುವಾಗ ಕರ್ನಾಟಕ ಪೊಲೀಸರು, ಜಿಲ್ಲಾಧಿಕಾರಿ ಏನು ಮಾಡುತ್ತಿದ್ದರು? ಗುಪ್ತಚರ ದಳವೂ ವಿಫಲವಾಗಿದೆ. ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನೆ ಮಾಡುತ್ತಿದ್ದಾರೆ. ರಾಜ್ಯದ ಕಾನೂನು ಪಾಲನೆಯನ್ನು ಕೇಂದ್ರ ಸರ್ಕಾರ ಮಾಡಬೇಕೆ? ರಾಜ್ಯ ಸರ್ಕಾರಕ್ಕೆ ಪೊಲೀಸರ ಮೇಲೆ ಹಿಡಿತ ಇಲ್ಲವೇ?

ಆರ್. ಅಶೋಕ, ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 2-5-1999

• **'ಆರೋಪ ಹೊತ್ತ ವ್ಯಕ್ತಿಗಳಿಗೆ ಸಂಪುಟದಲ್ಲಿ ಸ್ಥಾನವಿಲ್ಲ'**

ಮುಂಬೈ, ಮೇ 1 (ಯುಎನ್‌ಐ,ಪಿಟಿಐ)- 'ನ್ಯಾಯಾಲಯಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿರುವ ಯಾವುದೇ ವ್ಯಕ್ತಿಗೆ ತಮ್ಮ ಸಂಪುಟದಲ್ಲಿ ಸ್ಥಾನವಿಲ್ಲ' ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಪ್ರಕಟಿಸಿದರು.

ಇಲ್ಲಿನ ರಾಜಭವನದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿಯವರು, 'ಆರೋಪಗಳನ್ನು ನ್ಯಾಯಾಲಯ ಸ್ಥಿರೀಕರಿಸದ ಹೊರತು ಯಾವುದೇ ವ್ಯಕ್ತಿಯನ್ನು ತಪ್ಪಿತಸ್ಥ ಎಂದು ಸಾಬೀತು ಮಾಡುವುದು ಕಷ್ಟ' ಎಂದರು.

ರಾಮಕೃಷ್ಣ ಹೆಗಡೆ ಹಾಗೂ ರಾಂಜೇಠ್ಮಲಾನಿ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂಬ ಜಯಲಲಿತಾ ಅವರ ಆಗ್ರಹದ ಬಗ್ಗೆ ಕೇಳಲಾದ ಪ್ರಶ್ನೆಗೆ, 'ಸಚಿವರಿಂದ ವಿವರಣೆ ಕೇಳಿದ್ದೇನೆ. ಅಗತ್ಯವಾದರೆ ಈ ವಿಷಯದಲ್ಲಿ ಕಾನೂನು ತಜ್ಞರ ಸಲಹೆ ಪಡೆಯಲಾಗುವುದು' ಎಂದು ಅವರು ನುಡಿದರು.

• **ಕುರ್ಲ- ಮಂಗಳೂರು ನಡುವೆ ಹೊಸ ರೈಲು ಜೂನ್ 1ರಿಂದ ಆರಂಭ**

ರತ್ನಾಗಿರಿ (ಮಹಾರಾಷ್ಟ್ರ), ಮೇ 1 (ಯುಎನ್‌ಐ, ಪಿಟಿಐ)- 'ಈ ವರ್ಷದ ಜೂನ್ ಒಂದರಿಂದಲೇ ಕುರ್ಲ- ಮಂಗಳೂರು ನಡುವೆ ಹೊಸ ರೈಲು ಸಂಚಾರ ಆರಂಭವಾಗಲಿದೆ' ಎಂದು ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಇಂದು ಇಲ್ಲಿ ಪ್ರಕಟಿಸಿದರು.

ಆರಂಭದಲ್ಲಿ ವಾರಕ್ಕೆ ಮೂರು ಬಾರಿ ಈ ರೈಲು ಸಂಚರಿಸಲಿದೆ. ರೈಲು ಮಾರ್ಗ ಕೊರತೆ ಇರುವ ಪ್ರದೇಶ ಹಾಗೂ ವಲಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಗುರುವಾರ, 2-5-1974

• **ಹೆಚ್ಚು ಕಚ್ಚಾ ಎಣ್ಣೆಯ ಸರಬರಾಜಿಗೆ ಇರಾನ್ ಸಿದ್ಧ: ಸಾಲ ಸೌಲಭ್ಯ**

ಟೆಹರಾನ್, ಮೇ 1- ಫೆಬ್ರುವರಿ ತಿಂಗಳಲ್ಲಿ ಭಾರತ- ಇರಾನ್ ಜಂಟಿ ಆಯೋಗ ನಿರ್ಧರಿಸಿದ್ದ ಕಚ್ಚಾ ಎಣ್ಣೆ ಸರಬರಾಜು ಪ್ರಮಾಣಕ್ಕಿಂತಲೂ ಹೆಚ್ಚು ಪ್ರಮಾಣದ ಕಚ್ಚಾ ಎಣ್ಣೆಯ ಸರಬರಾಜಿಗೆ ಉಭಯ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಪ್ರಸಕ್ತ ಮಾತುಕತೆಗಳಲ್ಲಿ ಒಪ್ಪಿಕೊಳ್ಳಲಾಗಿದೆ.

ಇದರಿಂದ ಮದರಾಸು ತೈಲ ಶುದ್ಧೀಕರಣಾಗಾರವನ್ನು ಮತ್ತಷ್ಟು ವಿಸ್ತರಿಸಲು ಅನುಕೂಲವಾಗುವುದು. 28 ಲಕ್ಷ ಟನ್ ಸಾಮರ್ಥ್ಯಕ್ಕೆ ಹೆಚ್ಚಿಸಲು ಜಂಟಿ ಆಯೋಗ ನಿರ್ಧರಿಸಿತ್ತು.

ಹತ್ತು ಲಕ್ಷ ಟನ್ ಕಚ್ಚಾ ಎಣ್ಣೆಗೆ ಸಾಲದ ಷರತ್ತುಗಳನ್ನು ಸಾಕಷ್ಟು ಸುಲಭಗೊಳಿಸಲು ಇರಾನ್ ತನ್ನಿಚ್ಛೆಯನ್ನು ವ್ಯಕ್ತಪಡಿಸಿದೆಯಲ್ಲದೆ ಹೆಚ್ಚಿನ ದಶಲಕ್ಷ ಟನ್ ಎಣ್ಣೆ ಸರಬರಾಜಿಗೆ ಪಾವತಿ ಮುಂದೂಡಿಕೆಗೂ ಒಪ್ಪಿದೆ.

• **ಅರಸೀಕೆರೆ ಬಳಿ ಮರಕ್ಕೆ ಜೀಪ್ ಡಿಕ್ಕಿ: 9 ಜನರ ಸಾವು**

ಅರಸೀಕೆರೆ, ಮೇ 1- ಅರಸೀಕೆರೆಯಿಂದ ಬೈರಾಂಬುಧಿ ಗ್ರಾಮಕ್ಕೆ ಹೋಗುತ್ತಿದ್ದ ಅರಸೀಕೆರೆಯ ಜೀಪ್ ಒಂದು ನಿನ್ನೆ ಮಧ್ಯರಾತ್ರಿ ಸುಮಾರಿನಲ್ಲಿ ಇಲ್ಲಿಗೆ ಮೂರು ಮೈಲಿ ದೂರದಲ್ಲಿ ಮರವೊಂದಕ್ಕೆ ಡಿಕ್ಕಿ ಹೊಡೆದು ಜೀಪ್‌ನಲ್ಲಿದ್ದ 12 ಮಂದಿಯ ಪೈಕಿ 9 ಮಂದಿ ಸತ್ತರೆಂದೂ ಮೂವರು ಗಾಯಗೊಂಡರೆಂದೂ ವರದಿಯಾಗಿದೆ.

ಸಂಗತ

ಭೂಮಿಯ ಆರೋಗ್ಯ ಕೆಡಿಸುವ 'ವಸ್ತ್ರ'

ಬಟ್ಟೆಯ ಉತ್ಪಾದನೆ, ಖರೀದಿ, ಬಳಕೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಅಗತ್ಯ

• ಗುರುರಾಜ್ ಎಸ್. ದಾವಣಗೆರೆ

ತ್ಯಾಜ್ಯ ಎಂದಾಕ್ಷಣ ಮನೆ, ಕಚೇರಿ, ಹೋಟೆಲ್, ಆಸ್ಪತ್ರೆ, ಮಾಲ್, ಅಂಗಡಿ, ಕಾರ್ಖಾನೆಗಳಿಂದ ಹೊಮ್ಮುವ ವಿವಿಧ ಬಗೆಯ ಕಸ ಕಣ್ಣಮುಂದೆ ಬರುತ್ತದೆ. ಹಸಿ-ಒಣ ಕಸ, ಪ್ಯಾಕಿಂಗ್ ಮೆಟೀರಿಯಲ್ ಮತ್ತು ಪ್ಲಾಸ್ಟಿಕ್‌ನ ಅವಾಂತರಗಳು ಕಣ್ಣ ಮುಂದೆ ಸುಳಿಯುತ್ತವೆ. ಆದರೆ ನಾವು ಸದಾ ತೊಡುವ ಬಟ್ಟೆಯು ತಯಾರಿಕೆಗೆ ಮುನ್ನ ಮತ್ತು ತೊಟ್ಟ ನಂತರ ದೊಡ್ಡ ಕಸವಾಗಿ ಹೊಮ್ಮುತ್ತಾ ಭೂಮಿಯ ಆರೋಗ್ಯವನ್ನು ಕೆಡಿಸುತ್ತಿದೆ ಎಂಬುದನ್ನು ಮರೆತುಬಿಡುತ್ತೇವೆ.

ಬೆಂಗಳೂರಿನಲ್ಲಿ ಪ್ರತಿನಿತ್ಯ 220 ಟನ್ ವಸ್ತ್ರ ಕಸ ಉತ್ಪತ್ತಿಯಾಗುತ್ತಿದೆ. ನಗರದಲ್ಲಿ ಉತ್ಪತ್ತಿಯಾಗುತ್ತಿರುವ ಒಟ್ಟು ಕಸದ ಶೇಕಡ 4ರಷ್ಟು ಬಟ್ಟೆಯ ಕಸವೇ ಇರುತ್ತದೆ. ಇದರಲ್ಲಿ ಸ್ವಲ್ಪ ಭಾಗ ಸೆಕೆಂಡ್ ಹ್ಯಾಂಡ್ ಮಾರುಕಟ್ಟೆ ಸೇರಿ ಮರುಬಳಕೆಯಾಗುತ್ತದೆ. ಇನ್ನು ಸ್ವಲ್ಪ ಭಾಗ ದಹಿಸಲ್ಪಡುತ್ತದೆ. ಉಳಿದದ್ದು ಮರುಬಳಕೆಯಾಗದೆ, ರೀಸೈಕಲ್ ಆಗದೆ, ಭೂಭರ್ತಿ ತಾಣ ಸೇರುತ್ತದೆ. ಇದನ್ನು ವಿನೂತನ ರೀತಿಯಲ್ಲಿ ಪರಿವರ್ತಿಸಿ ಮರುಬಳಕೆ ಮಾಡುವಲ್ಲಿ ಬೆಂಗಳೂರಿನ ಎರಡು ಸಂಘಟನೆಗಳು ನಿರಂತರವಾಗಿ ಶ್ರಮಿಸುತ್ತಿವೆ.

ಕಳೆದ ತಿಂಗಳು 'ಭಾರತ ಟೆಕ್ಸ್' ಆಯೋಜಿಸಿದ್ದ ವಸ್ತ್ರ ಪ್ರದರ್ಶನ ಕಾರ್ಯಕ್ರಮದಲ್ಲಿ ಹಳೆಯ ಬಟ್ಟೆಗಳನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ ಹೇಗೆ ಸಮರ್ಪಕವಾಗಿ ಮೃದುವಾದ ಮಕ್ಮಲ್ ಬಟ್ಟೆಯನ್ನಾಗಿ ಪರಿವರ್ತಿಸಿ ಮರುಬಳಕೆ ಮಾಡಬಹುದು ಎಂಬುದನ್ನು ಬೆಂಗಳೂರಿನ 'ಹಸಿರು ದಳ' ಸಂಘಟನೆಯ 'ಹಸಿರು ಬಟ್ಟೆ' ಮತ್ತು ನೆದರ್ಲೆಂಡ್ಸ್ ಮೂಲದ 'ಎನ್ವಿ ಯು' ಸಂಸ್ಥೆಯ 'ದ ಗುಡ್ ಫೆಲ್ಟ್' (ಟಿಜಿಎಫ್) ಜಂಟಿಯಾಗಿ ಪ್ರದರ್ಶಿಸಿ ತಜ್ಞರ ಮೆಚ್ಚುಗೆ ಗಳಿಸಿದವು. ಬೆಂಗಳೂರಿನ ಜೆ.ಪಿ.ನಗರ ಮತ್ತು ದೊಮ್ಮಲೂರು ಭಾಗದ ಜನರಿಂದ ಸಂಗ್ರಹಿಸಲಾಗಿದ್ದ 220 ಕೆ.ಜಿ. ಯಷ್ಟು ಬಳಸಿದ ಬಟ್ಟೆಗಳನ್ನು ನೆದರ್ಲೆಂಡ್ಸ್‌ಗೆ ತಲುಪಿಸಿ ಅಲ್ಲಿನ ಫ್ಯಾಕ್ಟರಿಯಲ್ಲಿ ಮಕ್ಮಲ್ ಬಟ್ಟೆಯನ್ನಾಗಿಸಿ ಬೆಂಗಳೂರಿಗೆ ವಾಪಸ್ ತರಿಸಿಕೊಳ್ಳಲಾಯಿತು. ಪ್ರಾರಂಭಿಕ ಪ್ರಯೋಗ ರೂಪದ ಈ ಕೆಲಸದಲ್ಲಿ ಕೇವಲ ಬಿಳಿಯ ಬಟ್ಟೆಗಳನ್ನು ಬಳಸಲಾಗಿತ್ತು. ಇದರಿಂದ ಉತ್ತೇಜಿತಗೊಂಡ ನೆದರ್ಲೆಂಡ್ಸ್ ಸರ್ಕಾರವು ಈ ಕೆಲಸವನ್ನು ದೊಡ್ಡ ರೀತಿಯಲ್ಲಿ ಮಾಡೋಣ ಎಂದು ನಮ್ಮ ಸೆಕೆಂಡ್ ಹ್ಯಾಂಡ್ ಬಟ್ಟೆಗಳ ಬೃಹತ್ ಮಾರುಕಟ್ಟೆ ಎನಿಸಿರುವ ಹರಿಯಾಣದ ಪಾಣಿಪತ್ ನಗರದ ಹಲವು ಬಟ್ಟೆ ಸಂಗ್ರಹಣ ಮಳಿಗೆಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಮಕ್ಮಲ್ ಬಟ್ಟೆಯೇ ಏಕೆ ಎಂದು ಪ್ರಶ್ನಿಸಿದರೆ ಟಿಜಿಎಫ್‌ನ ಸಿಇಒ ಅನುರಾಗ್ ಜೈನ್ 'ಹಳೆಯ ಬಟ್ಟೆಗಳನ್ನು ಮಕ್ಮಲ್ ಬಟ್ಟೆಯನ್ನಾಗಿ ಪರಿವರ್ತಿಸುವುದು ತುಂಬಾ ಸುಲಭ, ಅದಕ್ಕೆ ಯಾವುದೇ ನೇಯ್ಗೆಯೂ ಬೇಕಾಗುವುದಿಲ್ಲ ಮತ್ತು ಸುಲಭವಾಗಿ ರೀಸೈಕಲ್ ಆಗುತ್ತದೆ' ಎನ್ನುತ್ತಾರೆ. ದ ಗುಡ್ ಫೆಲ್ಟ್ ಕಂಪನಿಯವರು ಪಾಣಿಪತ್‌ನಲ್ಲಿ ಕಾರ್ಯಾರಂಭ ಮಾಡಿರುವುದು ವರದಾನದಂತಿದೆ ಎನ್ನುವ ಹಸಿರು ದಳದ ರೀಸೈಕ್ಲಿಂಗ್ ವಿಭಾಗದಲ್ಲಿ ಮ್ಯಾನೇಜರ್ ಆಗಿರುವ ಇನಾ ಬಹುಗುಣ, 'ಪಾಣಿಪತ್‌ನಲ್ಲಿ ಟಿಜಿಎಫ್ ಸ್ಥಾಪಿಸಿರುವ ಫ್ಯಾಕ್ಟರಿಗೆ ಬೆಂಗಳೂರಿನ ಮನೆಗಳಿಂದ ಸಂಗ್ರಹಿಸಲಾಗಿರುವ ಬಿಳಿಯ ಬಟ್ಟೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತಲುಪಿಸುವ ಜವಾಬ್ದಾರಿ ನಮ್ಮ ಮುಂದಿದೆ' ಎನ್ನುತ್ತಾರೆ. ಫ್ಯಾಕ್ಟರಿ ಪ್ರಾರಂಭವಾದಂದಿನಿಂದ ಇಲ್ಲಿಯವರೆಗೆ ಸುಮಾರು 2,200 ಟನ್ ಹಳೆಯ ಬಟ್ಟೆಯು ಪಾಣಿಪತ್ ತಲುಪಿದೆ. ಸಾವಿರಾರು ಟನ್ ಬಟ್ಟೆ ಮತ್ತು ಇತರ ಜವಳಿ ಉತ್ಪನ್ನಗಳು ಭೂಭರ್ತಿಯಾಗುವುದನ್ನು ತಡೆದರೆ ಜನ ಬಳಸುವ ಟೋಪಿ, ಜರ್ಕಿನ್, ಕೋಟು, ತಲೆದಿಂಬಿನ ಕವರ್, ಕೈಚೀಲ, ವ್ಯಾನಿಟಿ ಬ್ಯಾಗ್, ಮಕ್ಕಳಾಟಿಕೆ, ನೆಲಹಾಸು, ದೂಳು ತೆಗೆಯುವ ಬ್ರಷ್ ಹೀಗೆ ಹತ್ತು ಹಲವು ಮಕ್ಮಲ್ ಉತ್ಪನ್ನಗಳನ್ನು ಹಳೆಯ ವಿವಿಧ ಬಣ್ಣದ ಬಟ್ಟೆಗಳಿಂದ ಅತ್ಯಂತ ಕಡಿಮೆ ವೆಚ್ಚದಲ್ಲಿ ತಯಾರಿಸುವ ವಿಪುಲ ಅವಕಾಶಗಳಿವೆ.

ಒಂದೆಡೆ ಪ್ಲಾಸ್ಟಿಕ್ ತ್ಯಾಜ್ಯವು ಭೂಮಿಯ ಆರೋಗ್ಯವನ್ನು ಆಪೋಶನ ತೆಗೆದುಕೊಳ್ಳುತ್ತಿದೆ. ಇನ್ನೊಂದೆಡೆ ಮನುಷ್ಯನ ಸೌಂದರ್ಯ ವೃದ್ಧಿಸುವ ಬಟ್ಟೆಯು ಭೂಮಿಯ ಅಂದ ಕೆಡಿಸುತ್ತಿದೆ. ಲಭ್ಯ ಅಂಕಿ ಅಂಶಗಳ ಪ್ರಕಾರ ಒಟ್ಟು ಜವಳಿ ಉತ್ಪನ್ನಗಳಲ್ಲಿ ಶೇಕಡ 10ರಷ್ಟು ಮಾತ್ರ ಮರುಬಳಕೆಆಗುತ್ತವೆ ಇಲ್ಲವೇ ರೀಸೈಕಲ್ ಆಗುತ್ತವೆ. ನಮ್ಮ ದೇಶದ ಪ್ರಜೆ ಒಬ್ಬ ವರ್ಷಕ್ಕೆ 12 ಕೆ.ಜಿ. ತೂಕದಷ್ಟು ಬಟ್ಟೆಗಳನ್ನು ಬಳಸುತ್ತಾನೆ. ಒಂದು ಕೆ.ಜಿ. ಹತ್ತಿ ಬೆಳೆಯಲು 22,000 ಲೀಟರ್‌ಗೂ ಹೆಚ್ಚು ನೀರು ಬೇಕಾಗುತ್ತದೆ. ಒಂದು ಕಾಟನ್ ಶರ್ಟ್ ತಯಾರಿಸಲು 700 ಗ್ಯಾಲನ್ ನೀರು ಬೇಕಾಗುತ್ತದೆ. ವಿಶ್ವದಲ್ಲಿ ಪ್ರತಿ ಸೆಕೆಂಡಿಗೆ 20 ಟನ್ ಬಟ್ಟೆ ಕಸದ ಗುಂಡಿ ಸೇರುತ್ತದೆ. ಒಂದು ಕೆ.ಜಿ. ಬಟ್ಟೆ ತಯಾರಾಗುವಾಗ 23 ಕೆ.ಜಿ. ಶಾಖವರ್ಧಕ ಅನಿಲಗಳು ಭೂಮಿಯ ವಾತಾವರಣ ಸೇರುತ್ತವೆ. ಬಟ್ಟೆ ತಯಾರಿಕಾ ಕಾರ್ಖಾನೆಗಳಿಂದ ವಾರ್ಷಿಕ 4.2 ಕೋಟಿ ಟನ್ ಪ್ಲಾಸ್ಟಿಕ್ ಕಸವೂ ಹೊಮ್ಮುತ್ತದೆ.



ಸಮೀಕ್ಷೆಯೊಂದರ ಪ್ರಕಾರ ಜನರು ಅಗತ್ಯವಿರುವುದಕ್ಕಿಂತ ಶೇಕಡ 40ರಷ್ಟು ಬಟ್ಟೆಗಳನ್ನು ಹೆಚ್ಚಾಗಿ ಖರೀದಿಸುತ್ತಾರೆ ಎಂಬ ಲೆಕ್ಕ ಸಿಕ್ಕಿದೆ. ಕುಡಿಯುವ ಮತ್ತು ಬಳಸುವ ನೀರಿಗಾಗಿ ಈಗಾಗಲೇ ಪರದಾಡುತ್ತಿರುವ ನಾವು ಬಟ್ಟೆಯ ಉತ್ಪಾದನೆ, ಖರೀದಿ ಮತ್ತು ಬಳಕೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ವಿಶ್ವದಲ್ಲಿ ವಾರ್ಷಿಕ 130 ಕೋಟಿ ಟನ್ ಜವಳಿ ತ್ಯಾಜ್ಯ ಉತ್ಪಾದನೆ ಆಗುತ್ತದೆ. ಇದರ ಮುಕ್ಕಾಲು ಭಾಗ ಯಾವುದೇ ಬಗೆಯ ಸಂಸ್ಕರಣೆ, ರೀಸೈಕ್ಲಿಂಗ್‌ಗೆ ಒಳಗಾಗದೆ ನೀರಿನ ಮೂಲ, ಭೂಮಿಯ ಆಳ ಸೇರುತ್ತದೆ ಇಲ್ಲವೇ ದಹಿಸಲ್ಪಡುತ್ತದೆ. ಇದರ ಕಾಲು ಭಾಗವನ್ನು ಸರಿಯಾಗಿ ಬಳಸಿಕೊಂಡಲ್ಲಿ ಬಹುದೊಡ್ಡ ಆರ್ಥಿಕ ಆದಾಯ ಗಳಿಸುವುದರ ಜೊತೆಗೆ ತ್ಯಾಜ್ಯ ವಸ್ತ್ರಗಳನ್ನು ಆಯ್ದು ತರುವವರ ಬದುಕನ್ನು ಮತ್ತಷ್ಟು ಹಸನಾಗಿಸಬಹುದು.

ವಾಚಕರ ವಾಣಿ

ಚುನಾವಣೆ ಸಂದರ್ಭ: ಮಾತಿಗೆ ಇರುವುದಿಲ್ಲ 'ಕಿಮ್ಮತ್ತು'

'ಕಾಂಗ್ರೆಸ್ ಗ್ಯಾರಂಟಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ' ಎಂದಿದ್ದಾರೆ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ (ಪ್ರ.ವಾ., ಮೇ 1). ಗೃಹಲಕ್ಷ್ಮಿ ಯೋಜನೆಯಿಂದ ಬಂದ ಹಣವನ್ನು ಕೂಡಿಟ್ಟುಕೊಂಡು, ಹಲವು ಹೆಣ್ಣುಮಕ್ಕಳು ಎಮ್ಮೆ ಕೊಂಡು, ಹೊಲಿಗೆ ಯಂತ್ರ ಖರೀದಿಸಿ ತಮ್ಮ ಕಷ್ಟಕ್ಕೊಂದು ಪರಿಹಾರ ಕಂಡುಕೊಂಡಿದ್ದಾರೆ. ಈಚೆಗೆ ಪಿಯುಸಿ ಫಲಿತಾಂಶದಲ್ಲಿ ಅತ್ಯುತ್ತಮ ಸಾಧನೆಗೈದ ಕೆಲವು ವಿದ್ಯಾರ್ಥಿಗಳು ವಿದ್ಯುತ್ ಉಚಿತವಾಗಿ ಸಿಗುತ್ತಿರುವುದರಿಂದ ಉಳಿತಾಯವಾಗುತ್ತಿರುವ ಹಣವನ್ನು ಪುಸ್ತಕ ಕೊಳ್ಳಲು ಬಳಸಿರುವುದಾಗಿ ಸ್ಮರಿಸಿದ್ದಾರೆ. ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಕರ್ಯ ಇರುವುದರಿಂದ ನಮ್ಮ ಗ್ರಾಮೀಣ ಮಹಿಳೆಯರಲ್ಲಿ ಹಲವರು ಮೊದಲ ಸಲ ಪ್ರವಾಸ ಹೋಗಿಬಂದಿದ್ದಾರೆ. ಈ ರೀತಿಯ ಹಲವು ಆರ್ಥಿಕ ಸಂಚಲನಗಳು ಮಾಧ್ಯಮದಲ್ಲಿ ವರದಿಯಾಗುತ್ತಲೇ ಇವೆ. ಆದರೆ, ಅವು ಯಡಿಯೂರಪ್ಪ ಅವರಿಗೆ ಕಾಣುವುದಿಲ್ಲ. ಏಕೆಂದರೆ ಇದು ಚುನಾವಣಾ ಕಾಲ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ನೀರಿಗೆ ಇಳಿಯುವ ಮುನ್ನ ಯೋಚಿಸಿ

ಮೇಕೆದಾಟುಗೆ ಈಚೆಗೆ ಪ್ರವಾಸಕ್ಕೆ ಹೋಗಿದ್ದ ಬೆಂಗಳೂರಿನ ಐವರು ವಿದ್ಯಾರ್ಥಿಗಳು ನದಿಯಲ್ಲಿ ಈಜುವಾಗ ಮುಳುಗಿ ಮೃತಪಟ್ಟಿದ್ದಾರೆ. ಈ ರೀತಿಯ ಅವಘಡಗಳು ಮರುಕಳಿಸುತ್ತಲೇ ಇವೆ. ಈಜಲು ಬಾರದಿದ್ದರೂ ಕೆರೆ-ಕಟ್ಟೆ, ನದಿಗಳಲ್ಲಿ ಈಜಲು ಹೋಗಿ ನೀರುಪಾಲಾದವರಲ್ಲಿ ಹದಿಹರೆಯದವರೇ ಹೆಚ್ಚಿನ ಸಂಖ್ಯೆಯಲ್ಲಿರುವುದು ದುರದೃಷ್ಟಕರ.

ಬೇಸಿಗೆ ಬಂದೊಡನೆ ನೀರಿಗಿಳಿದು ಬೇಗೆ ತಣಿಸಿಕೊಳ್ಳಲು ಮನಸ್ಸು ಹಾತೊರೆಯುವುದು ಸಹಜ. ಆದರೆ ನೀರಿಗೆ ಇಳಿಯುವ ಮುನ್ನ ಎಚ್ಚರಿಕೆ ವಹಿಸುವುದು ಅಗತ್ಯ. ಬಿಸಿಲು ಚುರುಕಾಗುತ್ತಿದ್ದಂತೆಯೇ ಮಕ್ಕಳಲ್ಲಿ ನೀರಿನ ಸೆಳೆತ ಹೆಚ್ಚಾಗುತ್ತದೆ. ಮಕ್ಕಳು ಮನೆಯಲ್ಲಿ ಪೋಷಕರಿಗೆ ಏನೋ ಒಂದು ಕಾರಣ ಹೇಳಿ ಸ್ನೇಹಿತರೊಂದಿಗೆ ಪ್ರವಾಸ ಹೊರಡುತ್ತಾರೆ. ಈಜು ಬಾರದಿದ್ದರೂ ಸ್ನೇಹಿತರ ಬಲವಂತಕ್ಕೆ ಮಣಿದು ಕೆರೆ-ನದಿಗೆ ಇಳಿಯುತ್ತಾರೆ. ಅಂತಹ ಸಂದರ್ಭಗಳಲ್ಲಿ ಈ ಬಗೆಯ ಅವಘಡಗಳು ಸಂಭವಿಸಿದಾಗ ಹೆತ್ತವರು ಜೀವನಪರ್ಯಂತ ದುಃಖ ಅನುಭವಿಸಬೇಕಾಗುತ್ತದೆ.

ಆಳ-ಅಗಲ ಗೊತ್ತಿರದ ಕೆರೆ- ಕಟ್ಟೆ, ಬಾವಿ, ಹೊಂಡದಲ್ಲಿ ಈಜಾಡುವುದು ಸೂಕ್ತವಲ್ಲ ಎಂಬುದನ್ನು ಯುವಕ-ಯುವತಿಯರು ಅರಿತರೆ ಒಳ್ಳೆಯದು. ಯುವ ಪೀಳಿಗೆಯು ಮೋಜು ಮಸ್ತಿಯ ನೆಪದಲ್ಲಿ ಮೈಮರೆತು ಜೀವಕ್ಕೆ ಕುತ್ತು ತಂದುಕೊಳ್ಳಬಾರದು. ಮಕ್ಕಳಿಗೆ ಪಾಲಕರು ಈ ಕುರಿತು ತಿಳಿವಳಿಕೆ ನೀಡಬೇಕು ಮತ್ತು ಅವರ ಮೇಲೆ ನಿಗಾ ಇಡಬೇಕು.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಭ್ರಷ್ಟಾಚಾರ ಪೋಷಣೆಗೆ ಕೈಜೋಡಿಸುವುದು ಬೇಡ

ಪ್ರಿಯಾಂಕಾ ಲಾಹಿರಿ ಅವರು ದಿನದ ಟ್ವೀಟ್‌ನಲ್ಲಿ (ಪ್ರ.ವಾ., ಮೇ 1) 'ಭಾರತದ ಮಧ್ಯಮ ವರ್ಗಕ್ಕೆ ಭ್ರಷ್ಟಾಚಾರ ಕಡಿಮೆಯಾಗುವುದು ನಿಜಕ್ಕೂ ಬೇಕಿಲ್ಲ...' ಎಂಬ ಮಾರ್ಮಿಕ ನುಡಿಗಳನ್ನು ಆಡಿದ್ದಾರೆ. ನಿಜ, ರಾಜಕಾರಣಿಗಳನ್ನು ಭ್ರಷ್ಟರು ಎಂದು ಜರಿಯುವ ನಾವು, ಚುನಾವಣೆ ಸಂದರ್ಭದಲ್ಲಿ ಅವರು ಮನೆ ಮನೆಗೆ ಹಂಚುವ ದುಡ್ಡು, ಮದ್ಯ, ಕುಕ್ಕರ್, ಬೆಳ್ಳಿ, ಬಂಗಾರವನ್ನು ನಾಚಿಕೆ ಇಲ್ಲದೆ ಪಡೆಯುತ್ತೇವೆ. ಈ ಮೂಲಕ ಭ್ರಷ್ಟ ವ್ಯವಸ್ಥೆಯನ್ನು ಪೋಷಿಸುತ್ತಿದ್ದೇವೆ. ಮತದಾರರಿಗೆ ಹಣ ಹಂಚುವುದು ರಾಜಾರೋಷವಾಗಿಯೇ ನಡೆಯುತ್ತಿದೆ.

ದೇವರ ದರ್ಶನದ ಸರತಿ ಸಾಲಿನಲ್ಲಿ, ಕ್ರಿಕೆಟ್ ಮತ್ತು ಸಿನಿಮಾ ನೋಡಲು ಟಿಕೆಟ್ ಕೌಂಟರ್‌ನಲ್ಲಿ, ಕೊನೆಗೆ ದೊಡ್ಡ ದೊಡ್ಡವರ ವಿವಾಹ ಆರತಕ್ಷತೆ ಕ್ಯೂನಲ್ಲಿ 'ಅಡ್ಡದಾರಿ' ಮೂಲಕ ತ್ವರಿತವಾಗಿ ಕೆಲಸ ಸಾಧಿಸುವ ಮನಃಸ್ಥಿತಿ ಎಲ್ಲೆಡೆಯೂ ಗೋಚರಿಸುತ್ತದೆ. 'ಭ್ರಷ್ಟಾಚಾರ' ನಮ್ಮ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿದೆ ಮತ್ತು ಅದು ಗಾಳಿ-ನೀರಿನಂತೆ ನಮ್ಮ ಸುತ್ತ ಆವರಿಸಿದೆ. ರಾಜಕಾರಣಿಗಳ ಕೃಪೆಗೆ ಒಳಗಾಗಲು ಹಾತೊರೆಯುತ್ತೇವೆ. ಈ ಕಾರಣದಿಂದಲೇ ಅವರ ಎಲ್ಲ ಅನಾಚಾರಗಳನ್ನೂ ಸಹಿಸಿಕೊಳ್ಳುತ್ತೇವೆ. ಕೊನೇಪಕ್ಷ ಚುನಾವಣೆ ಸಂದರ್ಭದಲ್ಲಿ ರಾಜಕಾರಣಿಗಳು ಒಡ್ಡುವ ಆಮಿಷಗಳನ್ನಾದರೂ ನಿರಾಕರಿಸುವ ಮನಃಸ್ಥಿತಿ ನಮ್ಮ ಜನರಲ್ಲಿ ಮೂಡಬೇಕು.

ರವಿಚಂದ್ರ ಎಂ., ಬೆಂಗಳೂರು

ಯೋಗ್ಯರಲ್ಲದವರ ಆಯ್ಕೆ ಸಲ್ಲದು

ಪ್ರಜಾಪ್ರಭುತ್ವದ ಆಶಯಗಳು ಫಲಿಸಬೇಕಾದರೆ ಶಾಸನಸಭೆಗಳಲ್ಲಿ ಯೋಗ್ಯ ಜನಪ್ರತಿನಿಧಿಗಳು ಇರಬೇಕಾಗುತ್ತದೆ. ಅಂಥವರನ್ನು ಆರಿಸುವುದು ಮತದಾರರ ಆದ್ಯ ಕರ್ತವ್ಯ. ಅಮೂಲ್ಯವಾದ ಮತವನ್ನು ಪ್ರತಿಯೊಬ್ಬರೂ ವಿವೇಚನೆಯಿಂದ ಚಲಾಯಿಸಬೇಕು. ಮೂರು ಕಾಸಿಗೆ, ಉಡುಗೊರೆಗಳಿಗೆ ಮರುಳಾಗಿ ಅಪಾತ್ರರನ್ನು ಆರಿಸಿದರೆ ಅದರ ಪರಿಣಾಮಗಳು ಭೀಕರವಾಗಿರುತ್ತವೆ. ಐದು ವರ್ಷಗಳವರೆಗೆ ಪಶ್ಚಾತ್ತಾಪಪಡಬೇಕಾಗುತ್ತದೆ.

ಆದಕಾರಣ ಅಭ್ಯರ್ಥಿಯ ನಡೆ-ನುಡಿ, ಸಾಮರ್ಥ್ಯ, ಸಮಾಜದ ಬಗೆಗಿನ ಕಳಕಳಿ ಮತ್ತು ಬದ್ಧತೆಯನ್ನು ಒರೆಗೆ ಹಚ್ಚಿ ಮತ ನೀಡಬೇಕು. ಸದೃಢ ರಾಷ್ಟ್ರ ನಿರ್ಮಾಣಕ್ಕೆ ಇದೇ ಬುನಾದಿ. ಮತದಾರ ಯಾವುದೇ ಕಾರಣಕ್ಕೂ ಇದನ್ನು ಮರೆಯಬಾರದು. ಆಗಮಾತ್ರ ಜನತಂತ್ರದ ಬೇರುಗಳು ಗಟ್ಟಿಗೊಳ್ಳುತ್ತವೆ.

ಎಸ್.ಜಿ. ಹವಾಲದಾರ, ಬಾಗಲಕೋಟೆ

ಜನತಂತ್ರದ ಘನತೆ ಎತ್ತಿಹಿಡಿಯಬೇಕಿದೆ

ಗುಜರಾತಿನ ಸೂರತ್ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯು ಎದುರಾಳಿಗಳೇ ಇಲ್ಲದೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇದೀಗ ಮಧ್ಯಪ್ರದೇಶದ ಇಂದೋರ್ ಕ್ಷೇತ್ರದಲ್ಲಿಯೂ ಇದೇ ರೀತಿ ಆಗಿದೆ. ಒಂದು ಪಕ್ಷದಿಂದ ಟಿಕೆಟ್ ಪಡೆದು ಕೊನೇ ಕ್ಷಣದಲ್ಲಿ ಏನೋ ಕಾರಣ ನೀಡಿ ಕಣದಿಂದ ಹಿಂದಕ್ಕೆ ಸರಿದು ಎದುರಾಳಿ ಪಕ್ಷದ ಅಭ್ಯರ್ಥಿಯ ಅವಿರೋಧ ಆಯ್ಕೆಗೆ ಅನುವು ಮಾಡಿಕೊಡುವುದು ಆ ಕ್ಷೇತ್ರದ ಮತದಾರರಿಗೆ ಮಾಡುವ ದೊಡ್ಡ ದ್ರೋಹ, ಕ್ಷಮೆ ಇಲ್ಲದ ನಡೆ. ಇಂತಹ ನಡೆ ಬಗ್ಗೆ ಅನುಮಾನ ಹುಟ್ಟುವುದು ಸಹಜ. ಆಮಿಷ, ಒತ್ತಡಗಳೇನಾದರೂ ಇದರ ಹಿಂದೆ ಕೆಲಸ ಮಾಡಿವೆಯೇ ಎಂಬುದರ ಬಗ್ಗೆ ಕೂಲಂಕಷ ತನಿಖೆ ಆಗಬೇಕು. ಅಂಥವುಗಳು ಇದ್ದದ್ದು ಸಾಬೀತಾದಲ್ಲಿ ಅಂತಹ ವ್ಯಕ್ತಿ-ಪಕ್ಷದ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಪ್ರಜಾಪ್ರಭುತ್ವದ ಘನತೆಯನ್ನು ಎತ್ತಿಹಿಡಿಯುವಂತಹ ಕೆಲಸವನ್ನು ಚುನಾವಣಾ ಆಯೋಗ ಮಾಡಬೇಕು.

ಗಿರಿಯಪ್ಪ ಕೊಳ್ಳಣ್ಣವರ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪ್ರಧಾನಿಗೆ ದೇಶೀಯ ಲಸಿಕೆ



ಪ್ರಧಾನಿ ನರೇಂದ್ರ ಮೋದಿ ಅವರು 2021ರ ಮಾರ್ಚ್ 1ರಂದು ದೆಹಲಿಯ ಏಮ್ಸ್‌ನಲ್ಲಿ ಕೋವಿಡ್ ಲಸಿಕೆ ಪಡೆದುಕೊಂಡಿದ್ದರು. ತಾನು ದೇಶೀಯವಾಗಿ ಅಭಿವೃದ್ಧಿ ಪಡಿಸಿ, ತಯಾರಿಸಿದ ಲಸಿಕೆ ಹಾಕಿಸಿಕೊಂಡಿದ್ದೇನೆ ಎಂದು ಪ್ರಧಾನಿ ಹೇಳಿದ್ದಾರೆ ಎಂದು ಪಿಟಿಐ ವರದಿ ಮಾಡಿತ್ತು

–ಎಎಫ್‌ಪಿ ಚಿತ್ರ

ಕೋವಿಶೀಲ್ಡ್‌ನ ಗಂಭೀರ ಅಡ್ಡಪರಿಣಾಮ

ಕೇಂದ್ರ ಸರ್ಕಾರಕ್ಕೆ ಮಾಹಿತಿ ಇರಲಿಲ್ಲವೇ...

ಪ್ರಜಾವಾಣಿ ವಾರ್ತೆ

ಕೋವಿಶೀಲ್ಡ್‌ನಿಂದ ಟಿಟಿಎಸ್ (ರಕ್ತಹೆಪ್ಪುಗಟ್ಟುವ ಮತ್ತು ಪ್ಲೇಟ್‌ಲೆಟ್‌ಗಳ ಇಳಿಕೆ ಒಟ್ಟಿಗೇ ಸಂಭವಿಸುವ ಗಂಭೀರ ಆರೋಗ್ಯದ ಸಮಸ್ಯೆ) ತಲೆದೋರುತ್ತದೆ ಎಂಬ ಮಾಹಿತಿ 2021ರ ಆರಂಭದಲ್ಲೇ ಬಹುತೇಕ ದೇಶಗಳಿಗೆ ಲಭ್ಯವಾಗಿತ್ತು. ಲಸಿಕೆ ಹಾಕಿಸಿಕೊಂಡ ಸರಾಸರಿ ಪ್ರತಿ 50,000 ಜನರಲ್ಲಿ ಒಬ್ಬರಿಗೆ ಮಾತ್ರ ಟಿಟಿಎಸ್ ತಲೆದೋರುವ ಸಂಭವವಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಸಹ ಆಗಲೇ ಹೇಳಿತ್ತು. ಈ ಲಸಿಕೆ ಹಾಕಿಸಿಕೊಳ್ಳುವುದರಿಂದ ಇಂತಹ ಗಂಭೀರ ಮತ್ತು ಮಾರಣಾಂತಿಕ ಸಮಸ್ಯೆ ತಲೆದೋರುತ್ತದೆ ಎಂಬುದರ ಮಾಹಿತಿಯನ್ನು ಸರ್ಕಾರಗಳು ಲಸಿಕೆ ಹಾಕಿಸಿಕೊಳ್ಳುವ ಜನರಿಗೆ ನೀಡಬೇಕು ಎಂದೂ ವಿಶ್ವ ಆರೋಗ್ಯ ಸಂಸ್ಥೆ ಹೇಳಿತ್ತು. ಆದರೆ ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಳ್ಳುವುದರಿಂದ ಇಂತಹ ಗಂಭೀರ ಆರೋಗ್ಯದ ಸಮಸ್ಯೆ ಉಂಟಾಗುತ್ತದೆ ಎಂಬ ಮಾಹಿತಿಯನ್ನು ಕೇಂದ್ರ ಸರ್ಕಾರವು ಬಹಿರಂಗಪಡಿಸಿಯೇ ಇರಲಿಲ್ಲ. ಬದಲಿಗೆ ಅಂತಹ ಸಮಸ್ಯೆ ಇಲ್ಲವೇ ಇಲ್ಲ ಎಂದೇ ಪ್ರತಿಪಾದಿಸಿತ್ತು.

ವಿಶ್ವ ಆರೋಗ್ಯ ಸಂಸ್ಥೆಯು, 'ಸರ್ಕಾರಗಳು ಟಿಟಿಎಸ್ ಬಗ್ಗೆ ತಮ್ಮ ವೈದ್ಯಕೀಯ ಸಿಬ್ಬಂದಿಗೂ ಮಾಹಿತಿ ನೀಡಬೇಕು. ಟಿಟಿಎಸ್‌ನಂತಹ ಅಡ್ಡಪರಿಣಾಮ ತಲೆದೋರಿದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತರಬೇತಿ ನೀಡಿರಬೇಕು' ಎಂದು ಶಿಫಾರಸು ಮಾಡಿತ್ತು.

ಆಸ್ಟ್ರಾಜೆನೆಕಾ ಅಭಿವೃದ್ಧಿಪಡಿಸಿರುವ ಈ ಲಸಿಕೆಯನ್ನು ಭಾರತದ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಕಂಪನಿ ತಯಾರಿಸುತ್ತದೆ. 2021ರ ಫೆಬ್ರುವರಿಯಲ್ಲಿ ತಯಾರಿಸಲಾದ ಕೋವಿಶೀಲ್ಡ್ ಲಸಿಕೆಗಳ ಕಾರ್ಟನ್‌ಗಳ ಜತೆಗೆ ಒಂದು ಸೂಚನಾ ಪತ್ರವನ್ನೂ ನೀಡಲಾಗಿತ್ತು. ಅದರಲ್ಲಿ, 'ಅತಿ ಅಪರೂಪದ ಸಂದರ್ಭದಲ್ಲಿ ಟಿಟಿಎಸ್ ತಲೆದೋರುವ ಸಾಧ್ಯತೆ ಇರುತ್ತದೆ. ರಕ್ತಸ್ರಾವದ ಅಪಾಯವೂ ಇದೆ. ಮಿದುಳು, ಅನ್ನಾಂಗ ಮತ್ತು ರಕ್ತನಾಳಗಳಲ್ಲಿ ರಕ್ತಹೆಪ್ಪುಗಟ್ಟುವ ಅಪಾಯವಿರುತ್ತದೆ. ಇವುಗಳ ಜತೆಯಲ್ಲಿ ಪ್ಲೇಟ್‌ಲೆಟ್‌ಗಳು ಅಪಾಯಕಾರಿ ಮಟ್ಟಕ್ಕೆ ಇಳಿಕೆ ಯಾಗುತ್ತವೆ. ಹಲವು ಪ್ರಕರಣಗಳಲ್ಲಿ ಸಾವೂ ಸಂಭವಿಸುತ್ತದೆ' ಎಂದು ಉಲ್ಲೇಖಿಸಲಾಗಿತ್ತು.

ಇದಕ್ಕೆ ಸಂಬಂಧಿಸಿದ ದಾಖಲಾತಿಯನ್ನು ವಿಶ್ವ ಆರೋಗ್ಯ ಸಂಸ್ಥೆಗೆ ನೀಡಲಾಗಿತ್ತು. ಭಾರತದಲ್ಲಿ ಕೇಂದ್ರ ಸರ್ಕಾರಕ್ಕೆ ಈ ಮಾಹಿತಿ ಸಲ್ಲಿಸಲಾಗಿತ್ತೇ? ಭಾರತದಲ್ಲಿ ಪೂರೈಕೆಯಾದ ಕೋವಿಶೀಲ್ಡ್ ಲಸಿಕೆಗಳ ಕಾರ್ಟನ್‌ಗಳಲ್ಲಿ ಈ ಸೂಚನಾಪತ್ರವನ್ನೂ ನೀಡಲಾಗಿತ್ತೇ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಲಸಿಕೆ ಅಭಿವೃದ್ಧಿಪಡಿಸಿದ ಆಸ್ಟ್ರಾಜೆನೆಕಾ ಕಂಪನಿಯು ಕೋವಿಶೀಲ್ಡ್‌ನಿಂದ ಮಾರಣಾಂತಿಕ ಅಡ್ಡಪರಿಣಾಮ ಉಂಟಾಗುತ್ತದೆ ಎಂದು ನ್ಯಾಯಾಲಯದಲ್ಲಿ ಒಪ್ಪಿಕೊಂಡ ಬಗ್ಗೆ ಕೇಂದ್ರ ಸರ್ಕಾರವಾಗಲೀ, ಎಸ್‌ಐಐ ಆಗಲೀ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ ಈ ಬಗ್ಗೆ ಸರ್ಕಾರ ಮತ್ತು ಕಂಪನಿ ಪ್ರತಿಕ್ರಿಯೆ ನೀಡಬೇಕು ಎಂದು ವಿರೋಧ ಪಕ್ಷಗಳು ಮತ್ತು ಕೆಲವು ಸಾಮಾಜಿಕ ಕಾರ್ಯಕರ್ತರು ಒತ್ತಾಯಿಸುತ್ತಿದ್ದಾರೆ. ಸರ್ಕಾರಕ್ಕೆ ಈ ಬಗ್ಗೆ ಮಾಹಿತಿಯೇ ಇರಲಿಲ್ಲವೇ ಅಥವಾ ಮಾಹಿತಿ ಇದ್ದರೂ ಸರ್ಕಾರ ಅದನ್ನು ಮುಚ್ಚಿಟ್ಟಿತೇ ಎಂದು ಹಲವರು ಪ್ರಶ್ನಿಸುತ್ತಿದ್ದಾರೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕೇಂದ್ರ ಸರ್ಕಾರವು, ಕೋವಿಶೀಲ್ಡ್‌ನಿಂದ ಯಾವುದೇ ಮಾರಣಾಂತಿಕ ಅಡ್ಡಪರಿಣಾಮ ಇಲ್ಲ ಎಂದೇ ಪ್ರತಿಪಾದಿಸಿತ್ತು. ಬೇರೆ ಬೇರೆ ದೇಶಗಳಲ್ಲಿ ಕೋವಿಶೀಲ್ಡ್ ಪಡೆದುಕೊಂಡ ನಂತರ ಜನರು ಮೃತಪಟ್ಟ ಪ್ರಕರಣಗಳು ವರದಿಯಾದಾಗ, ಅಲ್ಲಿನ ಸರ್ಕಾರಗಳು ಲಸಿಕೆಯ ಬಳಕೆಯನ್ನು ನಿಲ್ಲಿಸಿದ್ದವು. ಆದರೆ ಭಾರತದಲ್ಲಿ ಕೇಂದ್ರ ಸರ್ಕಾರವು, ಲಸಿಕಾ ಕಾರ್ಯಕ್ರಮವನ್ನು ಮುಂದುವರಿಸಿತು ಮತ್ತು ಮಾರಣಾಂತಿಕ ಅಡ್ಡಪರಿಣಾಮ-ಗಳು ಇಲ್ಲ ಎಂದು ಪದೇ–ಪದೇ ಪ್ರತಿಪಾದಿಸಿತು. ಕೇಂದ್ರ ಆರೋಗ್ಯ ಸಚಿವಾಲಯವು 2021ರ ಜನವರಿ 15ರಂದು ಹೊರಡಿಸಿದ್ದ ಪ್ರಕಟಣೆಯಲ್ಲಿ, 'ಕೋವಿಶೀಲ್ಡ್ ಲಸಿಕೆಯಿಂದ ಯಾವುದೇ ಗಂಭೀರ ಅಡ್ಡಪರಿಣಾಮಗಳು ಇಲ್ಲ' ಎಂದು ಹೇಳಿತ್ತು. ಗಂಭೀರ ಮತ್ತು ಮಾರಣಾಂತಿಕ ಅಡ್ಡಪರಿಣಾಮ-ಗಳ ಬಗ್ಗೆ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಪ್ರಶ್ನೆ ಕೇಳಿದಾಗಲೂ, ಸರ್ಕಾರ ಇದೇ ರೀತಿಯ ಉತ್ತರ ನೀಡಿತ್ತು.

2021ರ ಜುಲೈ 30ರಂದು ಲೋಕಸಭೆಗೆ ಈ ಬಗ್ಗೆ ಉತ್ತರ ನೀಡಿದ್ದ ಆರೋಗ್ಯ ಸಚಿವಾಲಯವು, 'ಎಲ್ಲಾ ಲಸಿಕೆಗಳಲ್ಲೂ ಅಡ್ಡಪರಿಣಾಮಗಳಿರುತ್ತವೆ. ಆದರೆ ಇವೆಲ್ಲಾ ಸಣ್ಣ ಅಡ್ಡಪರಿಣಾಮ-ಗಳು. ಎಲ್ಲೋ ಕೆಲವೊಮ್ಮೆ ಮಾತ್ರ ಚಿಕಿತ್ಸೆ ಬೇಕಾಗುತ್ತದೆ. ಗಂಭೀರ ಅಡ್ಡಪರಿಣಾಮಗಳು ಇರುವ ಲಸಿಕಾ ಮಾದರಿಗಳನ್ನು ಪರೀಕ್ಷೆಯ ಹಂತದಲ್ಲೇ ಕೈಬಿಡಲಾಗಿದೆ' ಎಂದೇ ಹೇಳಿತ್ತು.

ಲಸಿಕಾ ಕಾರ್ಯಕ್ರಮದ ನಂತರ ದೇಶದಲ್ಲಿ ಯುವಜನರು ಹಠಾತ್ ಕುಸಿದುಬಿದ್ದು ಮೃತಪಡುವ ಘಟನೆಗಳು ಹೆಚ್ಚಾದವು. ಈ ಬಗ್ಗೆ ಹಲವು ವೈದ್ಯರು, ತಜ್ಞರು ಸಂದೇಹ ವ್ಯಕ್ತಪಡಿಸಿದ್ದರು. ಕೋವಿಡ್ ಲಸಿಕೆಗೂ ಇಂತಹ ಸಾವುಗಳಿಗೂ ಸಂಬಂಧವಿದೆಯೇ ಎಂಬುದನ್ನು ಪರಿಶೀಲಿಸಬೇಕು ಎಂದು ಒತ್ತಾಯಿಸಿದ್ದರು. ಈ ಬಗ್ಗೆ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ ನೇತೃತ್ವದಲ್ಲಿ ಸಂಶೋಧನೆ ನಡೆಸಲು ಕೇಂದ್ರ ಸರ್ಕಾರವು ಆದೇಶಿಸಿತು. 'ಕೋವಿಡ್ ಲಸಿಕೆಗೂ ಹಠಾತ್ ಕುಸಿದುಬಿದ್ದು ಸಾವು ಸಂಭವಿಸುವ ಘಟನೆಗಳಿಗೂ ಸಂಬಂಧವಿಲ್ಲ. ಅನುವಂಶಿಕವಾಗಿ ಇಂತಹ ಸಮಸ್ಯೆ ಇದ್ದ ಕುಟುಂಬದವ-ರಲ್ಲಿ ಇಂತಹ ಸಾವು ಸಂಭವಿಸಬಹುದು' ಎಂದು ಪರಿಷತ್ತು ವರದಿ ನೀಡಿತು. ಈ ಫೆಬ್ರುವರಿ 2ರಂದು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಇದೇ ಹೇಳಿಕೆಯನ್ನು ನೀಡಿತು. ಆದರೆ ಈಗ ಕೋವಿಶೀಲ್ಡ್‌ನಿಂದ ಮಾರಣಾಂತಿಕ ಅಡ್ಡಪರಿಣಾಮ ಉಂಟಾಗುತ್ತದೆ ಎಂದು ಕಂಪನಿಯೇ ಹೇಳಿಕೊಂಡಿದೆ. ಈ ಬಗ್ಗೆ ಕೇಂದ್ರ ಸರ್ಕಾರವು ಮತ್ತೆ ವೈಜ್ಞಾನಿಕ ಪರಿಶೀಲನೆ ನಡೆಸುತ್ತದೆಯೇ ಎಂದು ಸಾಮಾಜಿಕ ಜಾಲತಾಣ-ಗಳಲ್ಲಿ, ಸಾರ್ವಜನಿಕ ವೇದಿಕೆಗಳಲ್ಲಿ ಹಲವರು ಪ್ರಶ್ನಿಸುತ್ತಿದ್ದಾರೆ.

ಯಾವುದೇ ರೋಗವನ್ನು ನಿಯಂತ್ರಿಸುವ ಸಲುವಾಗಿ ಲಸಿಕೆಗಳನ್ನು ಅಭಿವೃದ್ಧಿಪಡಿಸಿದಾಗ ಅಡ್ಡಪರಿಣಾಮಗಳು ಇದ್ದೇ ಇರುತ್ತವೆ. ಸರ್ಕಾರಗಳು ಲಸಿಕೆಯಿಂದಾಗುವ ಲಾಭ ಮತ್ತು ಅಪಾಯ ಎರಡನ್ನೂ ಪರಿಶೀಲಿಸಿದ ನಂತರ ಲಸಿಕೆ ನೀಡಬೇಕು. ಆದರೆ ಅದಕ್ಕೂ ಮುನ್ನ ಲಸಿಕೆಯಲ್ಲಿನ ಅಪಾಯಗಳ ಬಗ್ಗೆ ಜನರಿಗೆ ಮಾಹಿತಿ ನೀಡಲೇಬೇಕು ಎಂದು ಕೋವಿಶೀಲ್ಡ್‌ಗೆ ಸಂಬಂಧಿಸಿದ ಶಿಫಾರಸಿನಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಸೂಚಿಸಿತ್ತು. ಆದರೆ ಭಾರತದಲ್ಲಿ ಕೋವಿಶೀಲ್ಡ್ ಬಳಕೆ ವೇಳೆ ಜನರಿಗೆ ಈ ಬಗ್ಗೆ ಮಾಹಿತಿ ನೀಡಿರಲಿಲ್ಲ...



ಎಲ್ಲರೂ ಹೆದರಬೇಕಿಲ್ಲ...

ಕೋವಿಶೀಲ್ಡ್ ಲಸಿಕೆಯನ್ನು ಪಡೆದುಕೊಂಡವರಲ್ಲಿ ಟಿಟಿಎಸ್ (ರಕ್ತಹೆಪ್ಪುಗಟ್ಟುವಿಕೆ ಮತ್ತು ಪ್ಲೇಟ್‌ಲೆಟ್‌ಗಳ ಇಳಿಕೆ) ಅಡ್ಡಪರಿಣಾ-ಮದ ಸಾಧ್ಯತೆ ತೀರಾ ಕಡಿಮೆ. ಜತೆಗೆ ಟಿಟಿಎಸ್ ಬಂದ ಪ್ರಕರಣಗಳೆಲ್ಲಾ ಸಾವು ಸಂಭವಿಸುವುದಿಲ್ಲ. ಹೀಗಾಗಿ ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡವರು ತಮಗೆ ಏನಾಗುತ್ತದೋ ಎಂದು ಹೆದರುವ ಅವಶ್ಯಕತೆ ಇಲ್ಲ ಎಂದು ವೈದ್ಯರು ಹೇಳಿದ್ದಾರೆ.

ಟಿಟಿಎಸ್ ಮಾರಣಾಂತಿಕ ಅಡ್ಡಪರಿಣಾಮದ ಬಗ್ಗೆ ಅಸ್ಟ್ರಾಜೆನೆಕಾ ಕಂಪನಿಯು ನ್ಯಾಯಾಲಯಕ್ಕೆ ಮಾಹಿತಿ ನೀಡಿದ ನಂತರ, ಜನರಲ್ಲಿ ಈ ಬಗ್ಗೆ ಕಳವಳ ಉಂಟಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲೂ ಈ ಬಗ್ಗೆ ಚರ್ಚೆಯಾಗುತ್ತಿತ್ತು. ಇದೇ ಸಂದರ್ಭದಲ್ಲಿ ಹಲವು ವೈದ್ಯರು ತಮ್ಮ ಬ್ಲಾಗ್‌ಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಬರೆದು, ಜನರು ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ.

ಲಸಿಕೆ ಪಡೆದುಕೊಂಡವರೆಲ್ಲಾ ಟಿಟಿಎಸ್ ಬರುತ್ತದೆ ಎಂದು ಹೆದರಬೇಕಿಲ್ಲ. ಜತೆಗೆ ಈ ಅಡ್ಡಪರಿಣಾಮ ತಲೆದೋರುವುದು ಲಸಿಕೆ ಪಡೆದುಕೊಂಡ 3 ದಿನದಿಂದ 45 ದಿನಗಳ ಅವಧಿಯಲ್ಲಿ. ಕೋವಿಶೀಲ್ಡ್‌ನಿಂದ ತಲೆದೋರಿದ ಎಲ್ಲ ಟಿಟಿಎಸ್ ಪ್ರಕರಣಗಳು ಸಾವಿನಲ್ಲೇ ಅಂತ್ಯವಾಗಬೇಕಿಲ್ಲ. ಆದರೆ ಅಲ್ಪಾವಧಿಯ ಅನಾರೋಗ್ಯದಿಂದ ಶಾಶ್ವತ ಅನಾರೋಗ್ಯಕ್ಕೆ ಟಿಟಿಎಸ್ ಕಾರಣ-ವಾಗಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆಯು 2021ರಲ್ಲಿ, 2022ರ ಡಿಸೆಂಬರ್‌ನಲ್ಲಿ ಮತ್ತು 2023ರ ಏಪ್ರಿಲ್‌ನಲ್ಲಿ ಹೊರಡಿಸಿದ್ದ ಪ್ರಕಟಣೆಯಲ್ಲಿ ತಿಳಿಸಿತ್ತು.

ಟಿಟಿಎಸ್, ಸಾವು ಸಂಭವಿಸುವಷ್ಟು ತೀವ್ರವಾಗಿ ಇದ್ದರೆ ತಕ್ಷಣವೇ ಸಾವು ಸಂಭವಿಸುತ್ತದೆ. ಹೀಗಾಗಿ ವರ್ಷಗಳ ಹಿಂದೆ ಲಸಿಕೆ ಪಡೆದುಕೊಂಡವರು ಈಗ ಹೆದರಬೇಕಿಲ್ಲ. ಆದರೆ ಟಿಟಿಎಸ್ ಪರಿಣಾಮಗಳು ಹಲವು ವರ್ಷಗಳವರೆಗೆ ಇರಬಹುದು. ಕೆಲವು ಸಮಸ್ಯೆಗಳು ಶಾಶ್ವತ ಸ್ವರೂಪದ್ದಾಗಿ ಇರಬಹುದು. ಇಂತಹ ಅಡ್ಡಪರಿಣಾಮಕ್ಕೆ ತುತ್ತಾದವರೇ ಪರಿಹಾರ ಕೇಳಿ ಆಸ್ಟ್ರಾಜೆನೆಕಾ ವಿರುದ್ಧ ಲಂಡನ್ ನ್ಯಾಯಾಲಯ-ದಲ್ಲಿ ದಾವೆ ಹೂಡಿರುವುದು.

ಅಡ್ಡಪರಿಣಾಮಕ್ಕೆ ಪರಿಹಾರ ನೀಡಲು ನಿರ್ದೇಶಿಸಿ: 'ಸುಪ್ರೀಂ'ಗೆ ಅರ್ಜಿ



'ಕೋವಿಡ್ ಲಸಿಕೆಯ ಅಡ್ಡಪರಿಣಾಮದಿಂದಾಗಿ ಅಂಗವಿಕಲತೆಗೆ ಒಳಗಾದವರಿಗಾಗಿ ಬ್ರಿಟನ್ ಸೇರಿದಂತೆ ಹಲವು ದೇಶಗಳಲ್ಲಿ ಪರಿಹಾರ ಒದಗಿಸುವ ವ್ಯವಸ್ಥೆ ಯೊಂದನ್ನು ರೂಪಿಸಲಾಗಿದೆ. ಇದೇ ರೀತಿಯ ವ್ಯವಸ್ಥೆಯನ್ನು ಭಾರತದಲ್ಲಿಯೂ ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ಕೋರಿ ವಕೀಲ ವಿಶಾಲ್ ತಿವಾರಿ ಎಂಬುವವರು ಸುಪ್ರೀಂ ಕೋರ್ಟ್‌ಗೆ ಬುಧವಾರ ಅರ್ಜಿ ಸಲ್ಲಿಸಿದ್ದಾರೆ.

ಜೊತೆಗೆ, 'ಕೋವಿಶೀಲ್ಡ್ ಲಸಿಕೆಯ ಅಡ್ಡಪರಿಣಾಮಗಳು ಹಾಗೂ ಅಪಾಯದ ಕುರಿತು ಪರಿಶೀಲನೆ ನಡೆಯಬೇಕು. ಇದಕ್ಕಾಗಿ ದೆಹಲಿ ಏಮ್ಸ್‌ನ ಮುಖ್ಯಸ್ಥರನ್ನು ಒಳಗೊಂಡ ತಜ್ಞರ ತಂಡವೊಂದನ್ನು ರಚಿಸಬೇಕು. ಇದರ ನೇತೃತ್ವವನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರು ವಹಿಸಬೇಕು' ಎಂದೂ ಕೋರಿದ್ದಾರೆ. 'ಕೇಂದ್ರ ಸರ್ಕಾರವು ಈ ಲಸಿಕೆಯು ಸುರಕ್ಷಿತ ಎಂದು ಜನರಿಗೆ ವಾಗ್ದಾನ ನೀಡಿತ್ತು. ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ಈ ಲಸಿಕೆಯನ್ನೇ ಜನರಿಗೆ ನೀಡಲಾಗಿದೆ. ಇತ್ತೀಚಿನ ದಿನಗಳಲ್ಲಿ, ಹೃದಯಾಘಾತದಿಂದ ಹಾಗೂ ಕುಸಿತು ಬಿದ್ದು ತಕ್ಷಣ ದಲ್ಲಿಯೇ ಮೃತಪಡುತ್ತಿರುವವರ ಸಂಖ್ಯೆ ಅಧಿಕಗೊಂಡಿದೆ. ಈಗ ನೋಡಿದರೆ, 'ಟಿಟಿಎಸ್ ಎನ್ನುವ ವಿರಳವಾಗಿರುವ ಅಡ್ಡಪರಿಣಾಮಗಳು ಲಸಿಕೆಯಿಂದ ಉಂಟಾಗುತ್ತದೆ' ಎಂದು ಈ ಲಸಿಕೆಯನ್ನು ಅಭಿವೃದ್ಧಿ-ಪಡಿಸಿದ ಕಂಪನಿಯೇ ಲಂಡನ್ ನ್ಯಾಯಾಲಯದಲ್ಲಿ ಒಪ್ಪಿಕೊಂಡಿದೆ' ಎಂದು ತಿವಾರಿಯವರ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಕೋವಿಶೀಲ್ಡ್‌ನಿಂದಾಗುವ ಅಡ್ಡಪರಿಣಾಮಗಳ ಲಕ್ಷಣಗಳನ್ನು ಹೇಗೆ ಗುರುತಿಸಬೇಕು ಎನ್ನುವ ಮಾಹಿತಿಯನ್ನು ಜನರಿಗೆ ನೀಡುವ ಸಲುವಾಗಿ ಲಸಿಕೆ ತಯಾರಿಕಾ ಕಂಪನಿ, ವೈದ್ಯರು ಹಾಗೂ ವಿಜ್ಞಾನಿಗಳ ಜೊತೆಗೆ ಕೇಂದ್ರ ಸರ್ಕಾರವು ಮಾತುಕತೆಯನ್ನು ಕೂಡಲೇ ನಡೆಸಬೇಕಿತ್ತು. ಆದರೆ, ಕೇಂದ್ರವು ನಿದ್ರಿಸುತ್ತಿದೆ. 2021ರಲ್ಲಿಯೇ ಯುರೋಪಿನ ಹಲವು ದೇಶಗಳು ಈ ಲಸಿಕೆಯ ಬಳಕೆಯನ್ನು ರದ್ದು ಮಾಡಿದ್ದವು. ಆದರೆ, ಕೇಂದ್ರ ಸರ್ಕಾರ ಮಾತ್ರ ಈ ಲಸಿಕೆಯನ್ನು ಪ್ರಚಾರ ಮಾಡುತ್ತಿತ್ತು

ಸೌರವ್ ಭಾರಧ್ವಾಜ್, ದೆಹಲಿಯ ಆರೋಗ್ಯ ಸಚಿವ

ಲಸಿಕೆ ತಯಾರಕ ಕಂಪನಿಯಿಂದ ಚುನಾವಣಾ ದೇಣಿಗೆಯನ್ನು ಸುಲಿಗೆ ಮಾಡುವ ಭರದಲ್ಲಿ ದೇಶದ ಜನರ ಜೀವವನ್ನು ಒತ್ತೆ ಇಟ್ಟಿರಿ. ಮಾರಕ ಔಷಧಗಳಿಗೆ ಒಪ್ಪಿಗೆ ನೀಡುವುದು ಎನ್ನುವುದು ವ್ಯಕ್ತಿಯೊಬ್ಬರನ್ನು ಕೊಲೆ ಮಾಡುವುದಕ್ಕೆ ಸಮ. ಆದ್ದರಿಂದ, ಯಾರು ಈ ಎಲ್ಲದಕ್ಕೂ ಹೊಣೆಗಾರರೊ ಅವರನ್ನು ಶಿಕ್ಷಿಸಬೇಕು ಮತ್ತು ಈ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಜನರ ಜೀವದ ಜೊತೆ ಆಟವಾಡಿದವರನ್ನು ಈ ನೆಲದ ಕಾನೂನು ಮತ್ತು ಜನರು ಯಾವ ಕಾರಣಕ್ಕೂ ಕ್ಷಮಿಸುವುದಿಲ್ಲ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ಮಿಸ್ಟರ್ ಪ್ರೈಮ್ ಮಿನಿಸ್ಟರ್, ಹೃದಯಾಘಾತದಿಂದ ಲಕ್ಷಾಂತರ ಸಾವು ಸಂಭವಿಸಿದೆ. ಮುಂದೆಯೂ ಲಸಿಕೆಯ ಅಡ್ಡಪರಿಣಾಮದಿಂದಾಗಿ ಸಾವು ಸಂಭವಿಸಬಹುದು. ಈ ಎಲ್ಲ ಸಾವಿಗೆ ಯಾರು ಹೊಣೆ? ಚುನಾವಣಾ ಬಾಂಡ್ ಮೂಲಕ ದೇಣಿಗೆ ಪಡೆದುಕೊಳ್ಳಲು, ಅಪಾಯಕಾರಿ ಲಸಿಕೆಯನ್ನು ಬಿಜೆಪಿಯು ದೇಶದ ಕೋಟ್ಯಂತರ ಜನರಿಗೆ ನೀಡಿದೆ

ಆರ್‌ಜೆಡಿ

ಆಧಾರ: ದಿ ಡೈಲಿ ಟೆಲಿಗ್ರಾಫ್ ವರದಿಗಳು, ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಟಣೆಗಳು, ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆಗಳು ಮತ್ತು ಸಂಸತ್ತಿಗೆ ನೀಡಿದ ಲಿಖಿತ ಉತ್ತರಗಳು, ಪಿಟಿಐ

'ರಂಗಸ್ಥಳ'ದಲ್ಲಿ ಮನೋಜ್ ಜಯನ್

ಬಹುತೇಕ ಹೊಸಬರಿಂದಲೇ ಕೂಡಿರುವ 'ರಂಗಸ್ಥಳ' ಚಿತ್ರದೊಂದಿಗೆ ಮಲಯಾಳಂನ ಖ್ಯಾತ ನಟ ಮನೋಜ್ ಕೆ.ಜಯನ್ ಖಳನಾಯಕನಾಗಿ ಸ್ಯಾಂಡಲ್‌ವುಡ್‌ಗೆ ಮತ್ತೆ ಬಂದಿದ್ದಾರೆ. ಮಲಯಾಳಂ, ತಮಿಳು, ತೆಲುಗು ಸೇರಿದಂತೆ ಸುಮಾರು 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿರುವ ಮನೋಜ್, 2005ರಲ್ಲಿ ಕನ್ನಡದ 'ಉಗ್ರ ನರಸಿಂಹ' ಚಿತ್ರದಲ್ಲಿ ನಟಿಸಿದ್ದರು.

ಅಘೋರ್ ಮೋಶನ್ ಪಿಕ್ಚರ್ಸ್ ಅಡಿಯಲ್ಲಿ ರೇವಣ್ಣ ನಿರ್ಮಿಸುತ್ತಿರುವ ಚಿತ್ರಕ್ಕೆ ಈಶ್ವರ್ ನಿತಿನ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. 'ಈಗಾಗಲೇ ಚಿತ್ರೀಕರಣ ಶುರುವಾಗಿದೆ. ನಮಗೆ ಲಾಭ ಬೇಡ, ಹಾಕಿದ ಹಣ ಬಂದರೆ ಸಾಕು. ನಮ್ಮ ಸಂಸ್ಥೆಯಿಂದ ಮುಂದೆಯೂ ಹೊಸಬರಿಗೆ ಅವಕಾಶ ಕೊಡುವ ಉದ್ದೇಶವಿದೆ. ನಾನು ರಾಜ್ಯಮಟ್ಟದ ವಾಲಿಬಾಲ್ ಆಟಗಾರನಾಗಿದ್ದು, ವಾಲಿಬಾಲ್‌ಗೆ ಸಂಬಂಧಪಟ್ಟ ಚಿತ್ರವನ್ನು ನಿರ್ಮಿಸುವ ಆಸೆಯೂ ನನಗಿದೆ' ಎಂದರು ನಿರ್ಮಾಪಕ ರೇವಣ್ಣ.



ಶಿಲ್ಪ ಕಾಮತ್, ವಿಲೋಕ್ ರಾಜ್

ಈ ಹಿಂದೆ 'ಗಿರ್ಕಿ' ಚಿತ್ರದಲ್ಲಿ ನಟಿಸಿದ್ದ ವಿಲೋಕ್ ರಾಜ್ ಈ ಚಿತ್ರದ ನಾಯಕ. ಶಿಲ್ಪ ಕಾಮತ್ ನಾಯಕಿ. 'ಇದೊಂದು ಗ್ರಾಮೀಣ ಸೊಗಡಿನ ಕಥೆಯಾಗಿದ್ದು, ಪುತ್ತೂರು, ಸುಳ್ಯ ಭಾಗದ ಭಾಷೆ, ಸೊಗಡು, ಆಚಾರ, ವಿಚಾರ, ಕಲೆ, ಬದುಕಿನ ಸುತ್ತಲಿನ ಕಥೆ. 'ರಂಗಸ್ಥಳ' ಎಂದರೆ ಒಂದು ವೇದಿಕೆ. ರಂಗ ಕಲೆಗಳ ಪ್ರದರ್ಶನ ನಡೆಯುವ ಸ್ಥಳ. ಇಲ್ಲಿ ಬರುವ ಪಾತ್ರಧಾರಿಗಳು ಒಬ್ಬೊಬ್ಬರದು ಒಂದೊಂದು ರೀತಿಯ ಮನಸ್ಥಿತಿ. ಅದು ಹೇಗೆ, ಯಾವ ರೀತಿ, ಏನೆಲ್ಲಾ ತೊಂದರೆಗಳನ್ನು ನೀಡುತ್ತದೆ. ಈ ರಂಗ ಮಂಟಪದಲ್ಲಿ ಏನೆಲ್ಲಾ ನಡೆಯುತ್ತದೆ ಎಂಬುದನ್ನು ಹೇಳುವ ಪ್ರಯತ್ನ ಮಾಡಿದ್ದೇನೆ' ಎನ್ನುತ್ತಾರೆ ನಿರ್ದೇಶಕ ಈಶ್ವರ್ ನಿತಿನ್.

ಎನಾಷ್ ಒಲಿವೇರ ಛಾಯಾಚಿತ್ರಗ್ರಹಣ ಮಾಡುತ್ತಿದ್ದು, ಜೂಡೋ ಸ್ಯಾಂಡಿ ಆರು ಹಾಡುಗಳಿಗೆ ಸಂಗೀತ ಸಂಯೋಜಿಸಿದ್ದಾರೆ.

'JC' ಫಸ್ಟ್‌ಲುಕ್ ಬಿಡುಗಡೆ

ನಟ ಡಾಲಿ ಧನಂಜಯ ತಮ್ಮ 'ಡಾಲಿ ಪಿಕ್ಚರ್ಸ್'ನಡಿ ನಿರ್ಮಾಣ ಮಾಡುತ್ತಿರುವ ಐದನೇ ಸಿನಿಮಾ 'JC'ಯ ಶೂಟಿಂಗ್ ಭರದಿಂದ ಸಾಗಿದೆ. ಈ ನಡುವೆ ಚಿತ್ರತಂಡವು ನಾಯಕನ ಫಸ್ಟ್‌ಲುಕ್ ಬಿಡುಗಡೆ ಮಾಡಿದೆ.



ಪ್ರಖ್ಯಾತ್

2018ರಲ್ಲಿ ಬಿಡು-ಗಡೆಯಾಗಿದ್ದ 'ನಡುವೆ ಅಂತರವಿರಲಿ' ಸಿನಿಮಾ ಮೂಲಕ ನಾಯಕನಾಗಿ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದ ಪ್ರಖ್ಯಾತ್ ನಟನೆಯ ಎರಡನೇ ಸಿನಿಮಾ ಇದಾಗಿದೆ. ಸುಮಾರು 5 ವರ್ಷಗಳ ಬಳಿಕ ಪ್ರಖ್ಯಾತ್ ನಾಯಕನಾಗಿ ಮತ್ತೆ ತೆರೆ ಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ. ಸಿನಿಮಾದ ಮೊದಲ ಹಂತದ ಚಿತ್ರೀಕರಣ ಬೆಂಗಳೂರಿನಲ್ಲಿ ಪೂರ್ಣಗೊಂಡಿದೆ. 'JC' ಎಂದರೆ ಜ್ಯುಡಿಷಿಯಲ್ ಕಸ್ಟಡಿ. ಜೈಲಿನಿಂದ ಹೊರಬಂದ ಯುವಕನ ಕಥೆ ಇದಾಗಿದೆ. ಚಿತ್ರದ ಶೀರ್ಷಿಕೆಗೆ 'ದಿ ಯೂನಿವರ್ಸಿಟಿ' ಎಂಬ ಅಡಿಬರಹ-ವಿದ್ದು, ಚೇತನ್ ಜೈರಾಮ್ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಚೇತನ್ ಅವರಿಗೆ ಇದು ಚೊಚ್ಚಲ ಸಿನಿಮಾ. ಪಕ್ಕಾ ಮಾಸ್ ಸಿನಿಮಾ ಇದಾಗಿದ್ದು ಚಿತ್ರಕ್ಕೆ ಮಾಸ್ತಿ ಸಂಭಾಷಣೆ ಬರೆದಿದ್ದಾರೆ. ಕಾರ್ತಿಕ್ ಛಾಯಾ-ಚಿತ್ರಗ್ರಹಣ, ರೋಹಿತ್ ಸೋವರ್ ಸಂಗೀತ ಸಿನಿಮಾಗಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಮೇ 2, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣನವಮಿ ಗಂ. 25-54 ನಕ್ಷತ್ರ ಧನಿಷ್ಠ ಗಂ. 25-49 ಯೋಗ: ಶುಕ್ಲ (ಶುಕ್ರ) ಗಂ. 17-19 ಕರಣ: ತೈತಿಲ ಗಂ. 15-00, ಮೇಷ ಮಾಸದ 20 ನೇ ದಿನ, ಮಳೆನಕ್ಷತ್ರ: ಭರಣಿ 2.

ರಾಹುಕಾಲ : ಮಧ್ಯಾಹ್ನ 01-30 - 03-00

ಸೂರ್ಯೋದಯ : 06-12 ಸೂರ್ಯಾಸ್ತ : 06-43

ಮುಸ್ಲಿಂ ದಿನಾಂಕ : 22 ಶವ್ವಾಲ್

ಅದೃಷ್ಟ ಸಂಖ್ಯೆ : 5, 3

ಮೇಷ: ಎಂದೋ ಹುಡುಗಾಟಿಕೆಯಲ್ಲಿ ಮಾಡಿಕೊಂಡ ಕೆಲವು ಕಾರ್ಯಗಳು ಬಹುವಾಗಿ ಕಾಡುವ ಸಾಧ್ಯತೆ ಇದೆ. ತಿಳಿವಳಿಕೆ ಇಲ್ಲದವರಂತೆ ವರ್ತಿಸಿ ಮೂರ್ಖ-ರೆನ್ನಿಸಬೇಡಿ. ಆದಾಯ ಎಂದಿನಂತೆ ಇರುತ್ತದೆ.

ವೃಷಭ: ಅಗತ್ಯಕ್ಕಿಂತ ಹೆಚ್ಚು ಅಲಂಕಾರವನ್ನು ಮಾಡಿಕೊಂಡು ಬರುವ ನಿಮ್ಮನ್ನು ಕಂಡು ಆಡಿಕೊಳ್ಳುವ ಜನರಿರುವರು, ಗಮನವಿರಲಿ. ಮುಕ್ತ ಮಾತುಕತೆಯಿಂದ ಕಾರ್ಮಿಕರ ಸಮಸ್ಯೆಗಳನ್ನು ಪೂರ್ಣಗೊಳಿಸಿ.

ಮಿಥುನ: ಸಭೆಯಲ್ಲಿ ಮಾತನಾಡುವಾಗ ದಾಕ್ಷಿಣ್ಯ ಮಾಡಿಕೊಳ್ಳದೆ ಬುದ್ಧಿವಂತಿಕೆಯಿಂದ ಮತ್ತು ಮನಸ್ಸಿನ ಆಲೋಚನೆಯಂತೆ ಮಾತನಾಡಿದಲ್ಲಿ ಬೇಕಾದ ಸೌಲಭ್ಯಗಳು ದೊರೆಯಲಿವೆ. ಪ್ರಯಾಣ ಮಾಡಬೇಕಾಗಬಹುದು.

ಕರ್ಕಾಟಕ: ಸಂಗ್ರಹಿಸಿದ ಸಂತ್ರಸ್ತರ ನಿಧಿಯು ಉತ್ತಮವಾಗಿ ವಿನಿಯೋಗ-ವಾಗುವುದು ಹಾಗೂ ಅಭಿನಂದನಾರ್ಹವಾಗಿರುವುದು. ಮನೆಗೆ ಬರುವ ಅತಿಥಿಗಳು ಸತ್ಕಾರದಿಂದ ಸಂತೃಪ್ತಿ ಹೊಂದುವರು.

ಸಿಂಹ: ವಿದ್ಯಾರ್ಥಿಗಳು ಶಿಕ್ಷಕರ ಒತ್ತಾಯಕ್ಕಾಗಿ ಕಾಟಾಚಾರಕ್ಕೆ ಶಾಲಾ ಕಾಲೇಜುಗಳ ಕೆಲಸಗಳನ್ನು ಮಾಡುವುದು ಬೇಡ. ಸಿಹಿ ಖಾದ್ಯ ತಯಾರಕರಿಗೆ ಬೇಡಿಕೆಗಳು ಹೆಚ್ಚಲಿವೆ. ಗೃಹಾಲಂಕಾರ ವಸ್ತುಗಳ ಖರೀದಿಗೆ ಉತ್ತಮ ದಿನ.

ಕನ್ಯಾ: ಸ್ನೇಹಿತನ ಮಾತನ್ನು ಅಗತ್ಯಕ್ಕಿಂತ ಹೆಚ್ಚಾಗಿ ಕೇಳುವುದರಿಂದ ಆಜ್ಞಾನು-ವರ್ತಿಯನ್ನಾಗಿಸಬಹುದು. ಹೊಸ ದಾರಿಯನ್ನು ಹಿಡಿಯಲು ಯೋಚಿಸುತ್ತಿರುವ ವಿದ್ಯಾರ್ಥಿಗಳಿಗೆ ಗ್ರಹಗತಿಯ ಬೆಂಬಲ ಇದೆ.

ತುಲಾ: ಮಾಡಬೇಕಾದ ಕೆಲಸಗಳನ್ನು ತುರಾತುರಿಯಿಂದ ಮುಗಿಸಿದಲ್ಲಿ ಬೇಕಾದ ಫಲಿತಾಂಶ ಸಿಗದಿರಬಹುದು. ಸಾವಕಾಶವಾಗಿ ವ್ಯವಹರಿಸಿ. ಕರಿದ ತಿಂಡಿಗಳು ಹಾಗೂ ನಂಜಿನ ಪದಾರ್ಥಗಳಿಂದ ದೂರವಿರಿ.

ವೃಶ್ಚಿಕ: ವೃತ್ತಿಗೆ ಸಂಬಂಧಪಟ್ಟಂತೆ ಎಷ್ಟೇ ಎಚ್ಚರವಹಿಸಿ ವ್ಯಕ್ತಿಗಳನ್ನು ನಂಬಿದರೂ ಕಡಿಮೆಯಾಗುತ್ತದೆ. ಮಾತೃ ಸಂಬಂಧಿ ವ್ಯಾಜ್ಯಗಳನ್ನು ಪರಿಹರಿಸಿ-ಕೊಳ್ಳಲು ಸ್ನೇಹಿತನ ಮೊರೆ ಹೋಗಬೇಕಾಗುವುದು.

ಧನು: ಹರಡುತ್ತಿರುವ ಸೋಂಕಿನಿಂದ ನಿಮ್ಮನ್ನು ನೀವು ರಕ್ಷಿಸಿಕೊಳ್ಳಿ. ಇಂದು ನಡೆಯುವ ಘಟನೆಯಿಂದ ನಿಮ್ಮ ಸಂಗಾತಿಗೆ ಸಂತೋಷವಾಗುವುದು. ಕೋಪವನ್ನು ನಿಯಂತ್ರಣ ಮಾಡಿಕೊಳ್ಳಿ.

ಮಕರ: ಸಾಧನೆಯ ಪರ್ವತದ ಶೃಂಗದಲ್ಲಿರುವವರು ಅನಿವಾರ್ಯ ಕಾರಣಗಳಿಂದ ಅಭಿನಂದನಾ ಕಾರ್ಯಕ್ರಮಗಳನ್ನು ತಪ್ಪಿಸಿಕೊಳ್ಳುತ್ತೀರಿ. ನಿಮ್ಮ ನಿಯತ್ತಿನ ಮುಂದೆ ಯಾರ ಕುತಂತ್ರಗಳು ನಡೆಯುವುದಿಲ್ಲ.

ಕುಂಭ: ಕುಟುಂಬದಲ್ಲಿ ನಡೆಯುವ ಶುಭಕಾರ್ಯಗಳು ಸಂಭ್ರಮವನ್ನು ಉಂಟುಮಾಡುತ್ತದೆ. ಬ್ಯಾಂಕ್ ಸಂಬಂಧಿ ಕೆಲಸಗಳು ಸಮಯಕ್ಕೆ ಸರಿಯಾಗಿ ಆಗದೆಯೇ ಇರಬಹುದು. ಎಚ್ಚರವಿರಲಿ.

ಮೀನ: ಮಾತು ಬಲ್ಲವನಿಗೆ ಜಗಳವಿಲ್ಲ ಎಂಬಂತೆ ನಿಮ್ಮ ಮಾತಿನಿಂದ ದೊಡ್ಡ ಪ್ರಮಾಣದ ಜಗಳ ನಿಂತು ಹೋಗುತ್ತದೆ. ನಿಷ್ಠೆಯಿಂದ ಮಾಡಿದ ಕೆಲಸಕ್ಕೆ ಆತ್ಮತೃಪ್ತಿ ದೊರೆಯುತ್ತದೆ. ಮಧ್ಯವರ್ತಿಗಳ ಮಾತಿಗೆ ಮರುಳಾಗದಿರಿ.

ಮಾದರಿ ನಾಯಕತ್ವ

ನುಡಿ ಬೆಳಗು



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಫುಟ್‌ಬಾಲ್‌ನಲ್ಲಿ ವಿಶ್ವಕಪ್‌ನಷ್ಟೇ ಮಹತ್ವದ ಮತ್ತೊಂದು ಪಂದ್ಯಾವಳಿಯೆಂದರೆ ಯೂರೋಪಿಯನ್ ಕಪ್. 2012ರ ಸೆಮಿಫೈನಲ್ ನಲ್ಲಿ ಪೋರ್ಚುಗಲ್ ಮತ್ತು ಸ್ಪೇನ್ ಎದುರಾಳಿ ಗಳಾಗಿದ್ದವು. ಪೆನಾಲ್ಟಿ ಕಿಕ್‌ನಲ್ಲಿ ಪಂದ್ಯದ ಫಲಿತಾಂಶ ನಿರ್ಧಾರವಾಗಿ ಪಂದ್ಯಾವಳಿಯಿಂದ ಪೋರ್ಚುಗಲ್ ಹೊರಬಿದ್ದಿತ್ತು.

ನಾಲ್ಕು ವರ್ಷಗಳ ನಂತರ ಇದೇ ಪಂದ್ಯಾವಳಿಯ ಕ್ವಾರ್ಟರ್ ಫೈನಲ್ ಪಂದ್ಯ ಪೋಲೆಂಡ್ ಮತ್ತು ಪೋರ್ಚುಗಲ್ ನಡುವೆ ನಡೆಯಿತು. ನಿಗದಿತ ಅವಧಿಯಲ್ಲಿ ಎರಡೂ ತಂಡಗಳು ತಲಾ ಒಂದೊಂದು ಗೋಲ್ ಗಳಿಸಿದ ಕಾರಣ ಫಲಿತಾಂಶಕ್ಕಾಗಿ ಪೆನಾಲ್ಟಿ ಕಿಕ್ ಮೊರೆ ಹೋಗಬೇಕಾಯಿತು. ಬಹು ಒತ್ತಡದ ಸನ್ನಿವೇಶ. 2012ರಲ್ಲಿ ಸ್ಪೇನ್ ವಿರುದ್ಧ ಪೆನಾಲ್ಟಿ ಕಿಕ್ ಅನ್ನು ಗೋಲ್ ಆಗಿ ಪರಿವರ್ತಿಸಲು ವಿಫಲರಾದ ಪೋರ್ಚಗಲ್ ಆಟಗಾರರಲ್ಲಿ ಯುವಾ ಮಾಟಿನ್ಹೋ ಕೂಡ ಒಬ್ಬ. ಮಾಟಿನ್ಹೋಗೆ ನಾಲ್ಕು ವರ್ಷಗಳ ಹಿಂದಿನ ಕೆಟ್ಟ ಕನಸು ಕಾಡುತ್ತಿತ್ತು. ಮಹತ್ವದ ಕ್ಷಣದಲ್ಲಿ ವಿಫಲನಾಗಿದ್ದ ಪರಿಣಾಮ ತನ್ನ ದೇಶ ಯೂರೋಕಪ್‌ನಿಂದ ಹೊರಬಿದ್ದಿದ್ದನ್ನು ಆತ ಮರೆತಿರಲಿಲ್ಲ. ಹಾಗಾಗಿ ಆತ ತನ್ನ ನಾಯಕ ಕರೆದಾಗ ಪೆನಾಲ್ಟಿ ಕಿಕ್‌ಗೆ ನಿರಾಕರಿಸಿದ.

ಆದರೆ ಕ್ಯಾಪ್ಟನ್ ಬೇರೆ ಯಾರೂ ಅಲ್ಲ! ಅದು ರೊನಾಲ್ಡೋ! 'ನಿನ್ನ ಮೇಲೆ ನನಗೆ ನಂಬಿಕೆ ಇದೆ ಮಾರಾಯ ನೀನೇ ಹೋಗಬೇಕು, ಸೋತರೆ ಏನು ಮಾಡುವುದೆಂದು ಚಿಂತಿಸಬೇಡ, ಸೋತರೆ ಸೋಲು ಅಷ್ಟೇ' ಎಂದು ಮಾಟಿನ್ಹೋನನ್ನು ಕಳಿಸಿದ. ಮಾಟಿನ್ಹೋ ಒದ್ದ ಚೆಂಡು ಎದುರಾಳಿ ತಂಡದ ಗೋಲ್‌ಕೀಪರ್‌ಗೆ ಚಳ್ಳೆಹಣ್ಣು ತಿನ್ನಿಸಿ ಗೋಲು-ಪೆಟ್ಟಿಗೆಯೊಳಗೆ ಹೋಯಿತು! ಆ ಪಂದ್ಯ ಗೆದ್ದ ಪೋರ್ಚುಗಲ್ 2016ರ ಯೂರೋಪಿಯನ್ ಕಪ್ ಎತ್ತಿತು!

ಗೆದ್ದವರನ್ನು ಎಲ್ಲರೂ ಅಭಿನಂದಿಸುವುದು ಸರ್ವೇಸಾಮಾನ್ಯ. ಆದರೆ ಸೋತವರಿಗೆ ಧೈರ್ಯ ತುಂಬುವ ಕೆಲಸವೂ ಅಷ್ಟೇ ಮುಖ್ಯ. ಒಂದು ವೈಫಲ್ಯ ಕೆಲವರನ್ನು ಚಿಪ್ಪಿನೊಳಗೆ ಸೇರಿಕೊಳ್ಳುವಂತೆ ಮಾಡಬಹುದು. ಮರಳಿ ಪ್ರಯತ್ನಿಸುವ ಆತ್ಮವಿಶ್ವಾಸವನ್ನೇ ಕಳೆದುಕೊಳ್ಳುವಂತೆ ಮಾಡ ಬಹುದು. ಸೋತಾಗ ಅವರನ್ನು ಮೂಲೆಗೊತ್ತಿದರೆ ಮತ್ತೆಂದೂ ಅವರು ಸಾಮಾನ್ಯ ಬದುಕಿಗೆ ಮರಳುವುದು ಸಾಧ್ಯವಿಲ್ಲ.

ಹಾಗಾಗಿ ಬದುಕಿನ ಯಾವ ಸಂದರ್ಭದಲ್ಲಿ ಯಾದರೂ ಸೈ, ಸೋಲು ಸೋಲಲ್ಲ, ಸೋತರೆ ಪ್ರಯತ್ನವನ್ನು ನಿಲ್ಲಿಸುವುದೇ ನಿಜವಾದ ಸೋಲು ಎಂಬ ಮಾತನ್ನು ಮನದಟ್ಟು ಮಾಡಬೇಕು. ರೊನಾಲ್ಡೋ ಮಾಡಿದ್ದೂ ಅದನ್ನೇ. ಅತ್ಯಂತ ಸೂಕ್ಷ್ಮ ಸಂದರ್ಭದಲ್ಲಿ ರಿಸ್ಕ್ ತೆಗೆದುಕೊಂಡು ತನ್ನ ತಂಡದ ಸದಸ್ಯನಲ್ಲಿ ಆತ್ಮವಿಶ್ವಾಸವನ್ನು ತುಂಬಿ, ಆತನನ್ನು ಗೆಲ್ಲಿಸಿದ ರೋನಾಲ್ಡೋ, ತಂಡವನ್ನೂ ಗೆಲ್ಲಿಸುವುದರ ಜತೆಗೆ ನಾಯಕನಾಗಿ ತಾವೂ ಗೆದ್ದರು. ಮಾದರಿ ನಾಯಕತ್ವಕ್ಕೆ ಉದಾಹರಣೆಯಾದರು.

ಪದಬಂಧ 5668


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತಿಂಗಳ ಕೊನೆಗೆ ಒಂದಾಗಿ ಸೇರಿಸಿದುದು (3)
3.ಅವಸರದಲ್ಲಿ ರಾಜನನ್ನು ಹುಡುಕಿ! (3)
6.ಈತ ಕರುಣಾಳು (3)
7.ಮಣಿ ಧರಿಸಿರುವ ನಲ್ಲೆ (3)
8.ಟಾರ ರಸ್ತೆ ಬದಿಯಲ್ಲಿನ ಚರಂಡಿ (3)
10.ಮುದ್ದು ಮಾಡುತ್ತಾ ಕುಡಿಸಿದ ಔಷಧ (2)
11.ಕನ್ನ ಕೊರೆದಾಗ ಕಾಣಿಸಿರುವ ದರ್ಪಣ (3)
13.ಹಣವೆಂದಾಗ ಬಾಯ್ಬಿಡುವ ಶವ (2)
14.ಧನ ಕನಕಗಳಿಗಾಗಿ ನಡೆದ ಯುದ್ಧ (3)
15.ಗೆಲುವು ಹೀಗೆ ದೊರಕಿದೆ (3)
16.ಹಾರ ಧರಿಸಿರುವ ಬ್ರಾಹ್ಮಣ (3)
17.ಈ ರೀತಿ ಕೆಳಕ್ಕೆ ಬೀಳಿಸು (3)
18.ಇದು ಹೊಸದು (3)

ಮೇಲಿಂದ ಕೆಳಕ್ಕೆ

1.ಮಧುರವಾದ ಸ್ವಪ್ನ (5)
2.ಸರ ಕೊಟ್ಟದ್ದಕ್ಕೇ ಈ ಸಲಿಗೆ! (3)
3.ಅಗಲು ನುಂಗುವಾಗ ದುಃಖ ಬಂದಿದೆಯಲ್ಲಾ! (2)
4. ಹದ್ದು ಕುಳಿತಿರುವ ಜಾಗವೇ ಎಲ್ಲೆ (4)
5.ಹಂಗಿಗೆ ಒಳಗಾಗದವನು (2)
9.ಪತ್ರಿಕೆಯಲ್ಲಿನ ಉದ್ದ ಸಾಲು (3)
10.ಮಡಿವಂತೆಯ ಉಡಿ (3)
12.ಲೋಹದ ಹಕ್ಕಿಯಲ್ಲಿನ ಪಯಣ (5)
13.ಮಹತ್ವಾಕಾಂಕ್ಷೆಯಿದು (4)
14.ವನದ ಬಗ್ಗೆ ಬರೆದಿರುವ ಪದ್ಯ (3)
15.ಅಡ್ಡಿಗೊಂದು ಪರ್ಯಾಯ ಪದ (2)
16.ಹಾವುಗೆ ಬಿಟ್ಟಿರುವ ಜಾಗದಲ್ಲಿರುವ ಉರಗ (2)



5667ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಅಭಿಭವ 3.ಬುದ್ಧಿವಾದ 5.ನೆಮ್ಮದಿ 6.ತವಕ 8.ಪಾಮರ 9.ವಿಯೋಗ 10.ಗುಲಾಮ 12.ಕುಣಿಕೆ 14.ಕಳೇಬರ 15.ಕವಾಡಿಗ

ಮೇಲಿಂದ ಕೆಳಕ್ಕೆ:

1.ಅಭಿಜಾತ 2.ವರ್ತನೆ 3.ಬುನಾದಿ 4.ದರಕಾರ 7.ಕರಗ 8.ಪಾರಾಗು 9.ವಿನಾಯಕ 11.ಮದುಮಗ 12.ಕುಠಾರ 13.ಕೆಡುಕ

ಸುಡೊಕು 6053

		1		8				5
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				7
1		8	5			3		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6052 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7



ಪ್ರಜಾ ಮತ 2024

ಜನತಂತ್ರದ ಹಬ್ಬ



ಮೊದಲ ಮತದ ಸಂಭ್ರಮ



ಅಶ್ವಿನಿ.ಎಚ್, ಬಳ್ಳಾರಿ

ಮತ ಚಲಾಯಿಸುವುದು ದೇಶದ ಸಾಂವಿಧಾನ ನಮಗೆ ನೀಡಿದ ಹಕ್ಕು. ನಾನು ಕಡ್ಡಾಯವಾಗಿ ಮತದಾನ ಮಾಡುವೆ. ಭವ್ಯ ಪ್ರಜಾಪ್ರಭುತ್ವದ ಉತ್ತಮ ಭವಿಷ್ಯಕ್ಕಾಗಿ ನಾನು ಉತ್ತಮ ನಾಯಕರನ್ನು ಆರಿಸುವೆ. ಈ ಮೂಲಕ ನನ್ನ ಜವಾಬ್ದಾರಿಯನ್ನು ನಿಷ್ಠೆಯಿಂದ ನಿಭಾಯಿಸುವೆ. ಎಲ್ಲರೂ ಮತದಾನ ಮಾಡಿ, ಉತ್ತಮ ಪ್ರಜೆಗಳಾಗಬೇಕು.



ಪ್ರಾರ್ಥನಾ ಎಂ.ಕೂರಗುಂದಮಠ,
ರಾಣೆಬೆನ್ನೂರು, ಹಾವೇರಿ

'ಚುನಾವಣೆಯಲ್ಲಿ ಸೂಕ್ತ ಜನಪ್ರತಿನಿಧಿ ಆಯ್ಕೆ ಮಾಡಲು ಸಂವಿಧಾನವು ನಮಗೆ ಮತದಾನದ ಹಕ್ಕು ನೀಡಿದೆ. ಆ ಹಕ್ಕನ್ನು ವ್ಯರ್ಥವಾಗಲು ಬಿಡಲ್ಲ. ಮೊದಲ ಬಾರಿಗೆ ಮತದಾನದ ಅವಕಾಶ ಸಿಕ್ಕಿದ್ದಕ್ಕೆ ದೇಶಾಭಿಮಾನ ಇಮ್ಮಡಿಗೊಂಡಿದೆ. ನನ್ನೆಲ್ಲ ಸಹಪಾಠಿಗಳೊಂದಿಗೆ ಮತಗಟ್ಟೆಗೆ ತೆರಳಿ ಮತ ಚಲಾಯಿಸುವೆ. ಅಭಿವೃದ್ಧಿಗೆ ಆದ್ಯತೆ ಕೊಡುವ ಪ್ರಾಮಾಣಿಕ ಅಭ್ಯರ್ಥಿ ಪರ ಮತ ಚಲಾಯಿಸುವೆ. ಮತಯಂತ್ರ ಹೇಗಿರುತ್ತದೆ ಎಂಬುದನ್ನು ನೋಡಲು, ಮತ ಚಲಾಯಿಸಲು ಕಾತರದಲ್ಲಿ ಇದ್ದೇನೆ.

ಮತ ಆಮಿಷ: ಆಯೋಗದ ವಶ

₹96.70 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹81.19 ಕೋಟಿ
ಮದ್ಯ	₹179.01 ಕೋಟಿ (1.47 ಕೋಟಿ ಲೀ)
ಮಾದಕವಸ್ತು	₹11.55 ಕೋಟಿ (616.67 ಕೆ.ಜಿ.)
ಚಿನ್ನ	₹77.85 ಕೋಟಿ (138.94 ಕೆ.ಜಿ.)
ಬೆಳ್ಳಿ	₹1.18 ಕೋಟಿ (302.37 ಕೆ.ಜಿ.)

ಎಂಥಾ ಮಾತು!



ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು ಹೋದಲೆಲ್ಲ ಮಂಗಳಸೂತ್ರದ ಬಗ್ಗೆ ಮಾತನಾಡುತ್ತಾರೆ. ಮಂಗಳಸೂತ್ರ ಏನು ಎನ್ನುವುದು ಗೊತ್ತೆ? ಅವರು ಎಂದಾದರೂ ಅದನ್ನು ಧರಿಸಿದ್ದಾರೆಯೇ? ಅದರ ಬೆಲೆ ಅವರಿಗೆ ಹೇಗೆ ಗೊತ್ತಾಗಬೇಕು? ಅವರ ಸಹೋದರ ರಾಹುಲ್ ಗಾಂಧಿ ಸಂಸತ್ತಿನಲ್ಲಿ ಉಡಾಳರಂತೆ ಕಣ್ಣು ಹೊಡೆಯುತ್ತಾರೆ. ಅದಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬೇಸರದಿಂದ ಓಟು ಹಾಕದಿದ್ದರೂ ನಾನು ಸತ್ತಾಗ ಬನ್ನಿ ಎಂದು ನೋವಿನಿಂದ ಹೇಳಿದ್ದಾರೆ

ನಾರಾಯಣ ಭಾಂಡಗೆ, ರಾಜ್ಯಸಭೆ ಸದಸ್ಯ



ಬಿಜೆಪಿಯವರು ಮಹಿಳಾ ವಿರೋಧಿಗಳು. ಮಣಿಪುರದಲ್ಲಿ ಮಹಿಳೆಯನ್ನು ನಗ್ನಗೊಳಿಸಿ ಮೆರವಣಿಗೆ ಮಾಡಿದಾಗ, ಹತ್ಯೆಯಾದಾಗ, ಹಾಸನದ ಎನ್‌ಡಿಎ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ನೊಂದ ಮಹಿಳೆಯ ಪರವಾಗಿ ಧ್ವನಿ ಎತ್ತದ ಅಮಿತ್ ಶಾ ಅವರ 'ಮಾತೃ ಶಕ್ತಿ' ಎಲ್ಲಿ ಹೋಯಿತು? ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರು ಬಾಂಬ್ ಸ್ಫೋಟದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ, ಅವರದೇ ಪಕ್ಷದ ಯಡಿಯೂರಪ್ಪ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯದಲ್ಲಿ ಒಟ್ಟು ಆರು ಬಾರಿ ಬಾಂಬ್ ಸ್ಫೋಟ ಆಗಿದೆ. ಈ ಬಗ್ಗೆ ಮೋದಿ ಅವರು ಏಕೆ ಬಾಯಿ ಬಿಡುತ್ತಿಲ್ಲ?


ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

ಕರ್ನಾಟಕದಲ್ಲಿರೋದು ಕಾಂಗ್ರೆಸ್ 'ವಿಶ್ವಾಸದ ಅಲೆ'

ಲೋಕಸಭಾ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜಕುಮಾರ್ ಪರ ಅವರ ಸಹೋದರ ಮಧು ಬಂಗಾರಪ್ಪ ಪ್ರಚಾರ ಕೈಗೊಂಡಿದ್ದಾರೆ. ಲೋಕಸಭೆ ಚುನಾವಣೆ, ಕಾಂಗ್ರೆಸ್ ಗೆಲುವಿನ ಅನಿವಾರ್ಯದ ಬಗ್ಗೆ 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

ಪ್ರಜಾವಾಣಿ ಸಂದರ್ಶನ
ಮಧು ಬಂಗಾರಪ್ಪ

• ವೆಂಕಟೇಶ ಜಿ.ಎಚ್.



• **ಕರ್ನಾಟಕದಲ್ಲಿ ಕಾಂಗ್ರೆಸ್ ಏಕೆ ಗೆಲ್ಲಬೇಕು? ಜನರು ಏಕೆ ಮತ ಹಾಕಬೇಕು?**

ರಾಜಕೀಯ ಅಂದರೆ ಬರೀ ಮಾತಿನಲ್ಲಿ ಮರುಳು ಮಾಡಿ ತಲೆಯಲ್ಲಿ ವಿಷ ತುಂಬಿ ಪ್ರಜೆಗಳನ್ನು ಭಿಕಾರಿ ಮಾಡುವುದಲ್ಲ. ಕಾಂಗ್ರೆಸ್‌ನದ್ದು ಮನುಷ್ಯತ್ವದ ರಾಜಕಾರಣ. ಜನಕಲ್ಯಾಣವೇ ಪಕ್ಷದ ಪರಂಪರೆ. ಬಡತನ ನಿರ್ಮೂಲನೆಗೆ ಇಂದಿರಾಗಾಂಧಿ 20 ಅಂಶಗಳ ಕಾರ್ಯಕ್ರಮ ಕೊಟ್ಟರು. ರಾಜ್ಯದಲ್ಲಿ ದೇವರಾಜ ಅರಸು ಅವರು ಭೂಮಿಯ ಹಕ್ಕು ಕೊಟ್ಟರು. ಬಗರ್ ಹುಕುಂ ಮೂಲಕ ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಅದನ್ನು ವಿಸ್ತರಿಸಿದರು. ಸಿದ್ದರಾಮಯ್ಯ–ಡಿ.ಕೆ.ಶಿವಕುಮಾರ್ ಗ್ಯಾರಂಟಿಗಳ ಮೂಲಕ ಜನರ ಮನ ಗೆದ್ದಿದ್ದಾರೆ.

ಇದೆಲ್ಲದರ ಜೊತೆಗೆ ಕರ್ನಾಟಕವನ್ನು ಸರ್ವ ಜನಾಂಗದ ಶಾಂತಿಯ ತೋಟವಾಗಿಸಲು ಜನರು ಕಾಂಗ್ರೆಸ್‌ಗೆ ಮತ ಹಾಕಬೇಕು.

• **ಇದು ಲೋಕಸಭೆಗೆ ನಡೆಯುವ ಚುನಾವಣೆ. ಮೋದಿ ಅಲೆ, ಕಾಂಗ್ರೆಸ್‌ನ ಗ್ಯಾರಂಟಿ ಅಲೆ ಮಧ್ಯೆ ಪ್ರಭಾವಿ ಅಲೆ ಯಾವುದು?**

ಶೇ 100ರಷ್ಟು ಹೇಳುತ್ತೇನೆ. ಕರ್ನಾಟಕದಲ್ಲಿ ಮೋದಿ ಅಲೆಯೇ ಇಲ್ಲ. ಅದು ಇದ್ದರೆ ಮತದಾರರು ನಮ್ಮನ್ನು (ಕಾಂಗ್ರೆಸ್) ಮನೆಯೊಳಗೆ ಬಿಟ್ಟುಕೊಳ್ಳುತ್ತಿರಲಿಲ್ಲ. ಮೋದಿಯವರ ಸುಳ್ಳುಗಳು ಜನರಿಗೆ ಅರ್ಥವಾಗುತ್ತಿವೆ. ಈಗ ಇರುವುದು ಕಾಂಗ್ರೆಸ್‌ನ 'ವಿಶ್ವಾಸದ ಅಲೆ'. ಕೊಟ್ಟ ಮಾತಿಗೆ ತಪ್ಪದೇ ನಾವು ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಿದ್ದೇವೆ. ಮೋದಿ ಅಲೆ ಇದ್ದಿದ್ದರೆ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ 'ಮಿಷನ್ 150' ತಂತ್ರಗಾರಿಕೆ ಏಕೆ ವಿಫಲವಾಗುತ್ತಿತ್ತು. ಬಿಜೆಪಿ 65 ಸ್ಥಾನಗಳಿಗೇ ಏಕೆ ಸೀಮಿತಗೊಳ್ಳುತ್ತಿತ್ತು. ಮೋದಿ ಅವರನ್ನು ಬಿಜೆಪಿಯವರು ವಿಶ್ವಗುರು ಮಾಡಲು ಹೊರಟಿದ್ದಾರೆ. ಆದರೆ, ಅವರನ್ನು ರಾಷ್ಟ್ರ ಕವಿ ಕುವೆಂಪು ಅವರ ಆಶಯದ ವಿಶ್ವಮಾನವ ಆಗಿಸಬೇಕಿದೆ.

• **ಪ್ರಣಾಳಿಕೆ ಸಮಿತಿ ಉಪಾಧ್ಯಕ್ಷರಾಗಿ 'ಗ್ಯಾರಂಟಿ' ಯೋಜನೆಗಳನ್ನು ರೂಪಿಸಿದವರಲ್ಲಿ ನೀವೂ ಒಬ್ಬರು. ಲೋಕಸಭಾ ಚುನಾವಣೆಯಲ್ಲಿ ಅದರ ಫಲ ಸಿಗಲಿದೆಯೇ?**

ಖಂಡಿತವಾಗಲೂ 'ಗ್ಯಾರಂಟಿ' ಅನುಷ್ಠಾನ ನಮಗೆ ನೆರವಾಗಲಿದೆ. ನಾವು (ಕಾಂಗ್ರೆಸ್) ಆಗ ಬರೀ ಮತ ಪಡೆಯಲು ಗ್ಯಾರಂಟಿ ಕೊಟ್ಟಿರಲಿಲ್ಲ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕಷ್ಟದಲ್ಲಿದ್ದ ಜನರಿಗೆ ನೆರವಾಗಬೇಕು ಎಂದು ಕೊಟ್ಟಿದ್ದೆವು. ಬಿಜೆಪಿ ಕಾರ್ಯಕರ್ತರು, ಮುಖಂಡರ ಮನೆಯಲ್ಲಿ ಕೆಲಸ ಮಾಡುವವರೂ ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಿದ್ದಾರೆ. 'ಸಹಾಯ ಮಾಡಿದ್ದೇವೆ. ಸಹಕಾರ ಕೊಡಿ' ಎಂದು ಅವರನ್ನೂ ಕೇಳುತ್ತಿದ್ದೇವೆ. ಬಿಜೆಪಿ ಅಂದರೆ 'ಖಾಲಿ ಚೊಂಬು' ಎಂಬುದು ಎಲ್ಲರಿಗೂ ಗೊತ್ತಾಗಿದೆ.

• **ಲೋಕಸಭೆ ಚುನಾವಣೆ ಬಳಿಕ ರಾಜ್ಯದ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರಲ್ಲ?**

ಕಾಂಗ್ರೆಸ್‌ನಲ್ಲಿ ಒಡಕಿದೆ ಎಂದು ಹೇಳುವ ಬದಲು ಬಿಜೆಪಿಯವರು ತಮ್ಮ ಪಕ್ಷದಲ್ಲಿನ ಆಂತರಿಕ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳಲಿ. ಇದು ಪ್ರಜೆಗಳ ಸರ್ಕಾರ. ಅವರೇ ಆಯ್ಕೆ ಮಾಡಿರುವುದು. ಸರ್ಕಾರ ಬೀಳುವ ಪ್ರಶ್ನೆಯೇ ಇಲ್ಲ.

• **ಈ ಬಾರಿ ಕಾಂಗ್ರೆಸ್‌ನ ಚುನಾವಣೆ ತಂತ್ರಗಾರಿಕೆ ಬದಲಾಗಿದೆಯೇ?**

ಹೌದು. ಬಿಜೆಪಿ ಸುಳ್ಳು ಹಾಗೂ ದುಡ್ಡು ಎರಡರಲ್ಲೇ ಉಸಿರಾಡುತ್ತಿದೆ. ಹೀಗಾಗಿ ಪಕ್ಷವು 2023ರ ವಿಧಾನಸಭಾ ಚುನಾವಣೆಯಲ್ಲಿ ಸೊರಬ ಸೇರಿದಂತೆ ರಾಜ್ಯದ ಕೆಲವು ಆಯ್ದ ಕ್ಷೇತ್ರಗಳಲ್ಲಿ ಪ್ರಾಯೋಗಿಕವಾಗಿ ಭಿನ್ನ ಕಾರ್ಯತಂತ್ರ ಅನುಸರಿಸಿತ್ತು. ಅದು ಆಗ ಫಲ ನೀಡಿತ್ತು. ಈ ಚುನಾವಣೆಯಲ್ಲೂ ಅದು ಚೆನ್ನಾಗಿ ವರ್ಕ್ ಔಟ್ ಆಗುತ್ತಿದೆ. ಮತದಾರರು ಈಗ ಬಹಳ ಸೂಕ್ಷ್ಮವಾಗಿದ್ದಾರೆ. ಚುನಾವಣೆಯಲ್ಲಿ ದುಡ್ಡು ಕೊಟ್ಟು ಮತ ಖರೀದಿಸಲು ಸಾಧ್ಯವಿಲ್ಲ.

• **ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನುಷ್ಠಾನಗೊಳಿಸದೇ ಶಿಕ್ಷಣ ಕ್ಷೇತ್ರದಲ್ಲೂ ರಾಜಕೀಯ ಮಾಡುತ್ತಿದೆ ಎಂದು ಪ್ರಧಾನಿ ದೂರಿದ್ದಾರಲ್ಲ?**

ಶಿಕ್ಷಣವನ್ನು ಕೇಸರೀಕರಣಗೊಳಿಸುವ ಅಜೆಂಡಾ ಎನ್‌ಇಪಿ ಹಿಂದಿದೆ. ಕರ್ನಾಟಕದಲ್ಲಿ ಎನ್‌ಇಪಿ ಬದಲಿಗೆ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಜಾರಿ ಮಾಡುತ್ತೇವೆ ಎಂದು ವಿಧಾನಸಭೆ ಚುನಾವಣೆಗೂ ಮುನ್ನ ಪಕ್ಷದ ಪ್ರಣಾಳಿಕೆಯಲ್ಲಿಯೇ ಹೇಳಿದ್ದೆವು. ಅದನ್ನು ಒಪ್ಪಿ ಜನರು ನಮಗೆ ಮತ ಹಾಕಿದ್ದಾರೆ. ಜನರಿಗೆ ಕೊಟ್ಟ ಮಾತಿನಂತೆ ಎಸ್‌ಇಪಿ ಅಳವಡಿಸಿದ್ದೇವೆ. ಇದರಲ್ಲಿ ರಾಜಕೀಯದ ಪ್ರಶ್ನೆಯೇ ಇಲ್ಲ.

• **ಶಿವಮೊಗ್ಗದಲ್ಲಿ ಗೀತಾ ಶಿವರಾಜಕುಮಾರ್ ಕಣದಲ್ಲಿದ್ದರೂ ಮಧು ಬಂಗಾರಪ್ಪ ಸ್ಪರ್ಧೆಯಲ್ಲಿರುವಂತೆ ತೋರುತ್ತಿದೆ?**

ಖಂಡಿತ ಇದು ಗೀತಕ್ಕನ ಚುನಾವಣೆ. ಅವರೇ ನಿಂತಿರುವುದು. ಗೆದ್ದು ಬರುತ್ತಾರೆ. ಅವರೇ ಸ್ವತಂತ್ರವಾಗಿ ಕೆಲಸ ಮಾಡುತ್ತಾರೆ.

• **ಕೆ.ಎಸ್. ಈಶ್ವರಪ್ಪ ಸ್ಪರ್ಧೆಯನ್ನು ಕಾಂಗ್ರೆಸ್ ಹೇಗೆ ಪರಿಗಣಿಸುತ್ತದೆ. ಪಕ್ಷಕ್ಕೆ ಲಾಭವಾಗಲಿದೆಯೇ?**

ಬಿಜೆಪಿಯೊಳಗಿನ ಆಂತರಿಕ ಸಂಘರ್ಷದ ಲಾಭ ಪಡೆಯುವುದು ನಮಗೆ ಇಷ್ಟವಿಲ್ಲ. ಜನರು ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಚುನಾವಣೆಯಲ್ಲಿ ಉತ್ತರ ಕೊಡಲಿದ್ದಾರೆ. ಈಶ್ವರಪ್ಪ ಅವರ ಸ್ಪರ್ಧೆಯಿಂದ ಕಾಂಗ್ರೆಸ್‌ಗೆ ಯಾವುದೇ ತೊಂದರೆ ಆಗದು.

• **ನಿಮ್ಮ ಅಕ್ಕ ಗೀತಾ ಅವರಿಗೆ ಏಕೆ ಮತ ನೀಡಬೇಕು?**

ಜಿಲ್ಲೆಯ ವಿಚಾರಕ್ಕೆ ಸಂಬಂಧಿಸಿದಂತೆ ದೆಹಲಿ ಮಟ್ಟದಲ್ಲಿ ನಾಯಕತ್ವದ ಕೊರತೆ ಇದೆ. ಮಲೆನಾಡಿನ ಜ್ವಲಂತ ವಿಚಾರಗಳಾದ ಶರಾವತಿ ಸಂತ್ರಸ್ತರು, ಬಗರ್‌ಹುಕುಂ ಸಮಸ್ಯೆಗಳ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆಯಬೇಕಿದೆ. ಹೀಗಾಗಿ ಕೇಂದ್ರದಲ್ಲಿ ನಮ್ಮ ಧ್ವನಿಯಾಗಿ ಗೀತಕ್ಕ ಇರಬೇಕು. ಈವರೆಗೆ ಅಪ್ಪ (ಯಡಿಯೂರಪ್ಪ) ಮುಖ್ಯಮಂತ್ರಿಯಾಗಿದ್ದರೂ ಮಗ (ಬಿ.ವೈ.ರಾಘವೇಂದ್ರ) ಆ ಕೆಲಸಗಳನ್ನು ಮಾಡಲಿಲ್ಲ. ಭದ್ರಾವತಿಯ ವಿಐಎಸ್‌ಎಲ್ ಕಾರ್ಖಾನೆ ಉಳಿಸಬೇಕಿದೆ. ಗೀತಕ್ಕ ಗೆದ್ದು ರಾಷ್ಟ್ರ ಮಟ್ಟದಲ್ಲಿ ನಮ್ಮ ಸರ್ಕಾರ ಬಂದರೆ ಆ ಕೆಲಸ ಮಾಡಲಿದ್ದಾರೆ. ಎಂಪಿಎಂ ಕಾರ್ಖಾನೆ ಪುನರಾರಂಭಿಸುವ ಜವಾಬ್ದಾರಿಯನ್ನು ನಾನೇ ತೆಗೆದುಕೊಳ್ಳುತ್ತೇನೆ.

• **ಗೀತಾ ಅನನುಭವಿ. ಇಲ್ಲಿ ವಾಸವಾಗಿಲ್ಲ ಎಂಬ ಬಿಜೆಪಿ ಮುಖಂಡರ ವಾದ ಮುಂದಿಡುತ್ತಿದ್ದಾರೆ?**

ಬಿಜೆಪಿಯವರು ಹತಾಶರಾಗಿ ವ್ಯಕ್ತಿಗತವಾಗಿ ಗೀತಕ್ಕನ ತೇಜೋವಧೆ ಮಾಡುತ್ತಿದ್ದಾರೆ. ರಾಘವೇಂದ್ರ ಚುನಾವಣೆಗೆ ಬರುವಾಗ ಹಳಬರಾಗಿ ಬಂದಿದ್ದರಾ? ಮೋದಿ ವಾರಾಣಸಿಯಿಂದ ಗೆದ್ದಿದ್ದಾರೆ. ಅಲ್ಲಿಯೇ ವಾಸವಿದ್ದಾರಾ? ಗೀತಕ್ಕ ಇಲ್ಲಿ ಇರುವುದಿಲ್ಲ ಎಂದು ಅಪಪ್ರಚಾರ ಮಾಡುವವರು 15 ವರ್ಷ ಇಲ್ಲಿದ್ದುಕೊಂಡು ಏನು ಸಾಧನೆ ಮಾಡಿದ್ದಾರೆ. ಜನರು ಮೂರ್ಖರಲ್ಲ. ಒಳ್ಳೆಯ ತೀರ್ಮಾನ ತೆಗೆದುಕೊಳ್ಳುತ್ತಾರೆ.

'ಭ್ರಷ್ಟರ ತೊಳೆಯುವ ವಾಷಿಂಗ್ ಮಿಷನ್ ಬಿಜೆಪಿ'

ಪ್ರಜಾವಾಣಿ ವಾರ್ತೆ

ಯಾದಗಿರಿ: 'ಭ್ರಷ್ಟಾಚಾರ ಮಾಡಿದವರನ್ನು ಬಿಜೆಪಿಯವರು ಕರೆದುಕೊಳ್ಳುತ್ತಾರೆ. ಪ್ರಧಾನಿ ನರೇಂದ್ರ ಮೋದಿಯವರ ತೊಡೆಯ ಮೇಲೆ ಭ್ರಷ್ಟರು ಬಂದು ಕುಳಿತಿದ್ದಾರೆ. ಬಿಜೆಪಿ ಭ್ರಷ್ಟರನ್ನು ತೊಳೆಯುವ ವಾಷಿಂಗ್ ಮಿಷನ್ ಆಗಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವ್ಯಂಗ್ಯವಾಡಿದರು.

ನಗರದಲ್ಲಿ ಬುಧವಾರ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಮಾತನಾಡಿದ ಅವರು, 'ಭ್ರಷ್ಟಾಚಾರಿಗಳನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ರಾಜ್ಯಸಭಾ ಸದಸ್ಯರು, ಸಚಿವರನ್ನಾಗಿ ಮಾಡಿದ್ದಾರೆ. ಕಳಂಕ ಇದ್ದ ಮನುಷ್ಯ ಬಿಜೆಪಿ ಸೇರಿದ ಬಳಿಕ ಬೆಳ್ಳಗಾಗಿ ಹೋಗುತ್ತಾರೆ. ಮೋದಿ ಅವರು, ಬೆರಳು ಕೊಟ್ಟರೆ ಮನುಷ್ಯನನ್ನು ನುಂಗುವವರಾಗಿದ್ದಾರೆ' ಎಂದು ದೂರಿದರು.

ಮೋದಿ ಪೂಜಾರಿನಾ?: 'ರಾಮ ಮಂದಿರ ಉದ್ಘಾಟನೆಗೆ ಆಹ್ವಾನ ನೀಡಿದ್ದರೂ ಮಲ್ಲಿಕಾರ್ಜುನ ಖರ್ಗೆಯವರು ಬಂದಿಲ್ಲ ಎಂದು ಮೋದಿ ದೂರುತ್ತಿದ್ದಾರೆ. ಮೋದಿಯವರು ಪೂಜಾರಿನಾ' ಎಂದು ಖರ್ಗೆ ಪ್ರಶ್ನಿಸಿದರು.

'ತಾವೇ ಮುಂದೆ ನಿಂತು ಪೂಜೆ ಸಲ್ಲಿಸಿದರು. ವೋಟ್‌ಗಾಗಿ ರಾಮನ ಹೆಸರು ಬಳಕೆ ಮಾಡಿಕೊಂಡವರು ಬಿಜೆಪಿಯವರು' ಎಂದು ಟೀಕಿಸಿದರು.



ಮಲ್ಲಿಕಾರ್ಜುನ ಖರ್ಗೆ

'ನಿಜಾಮನ ಕಾಲದಲ್ಲೂ ಮಹಿಳೆಯರ ಮಂಗಳಸೂತ್ರ ತೆಗೆಯಲು ಆಗಲಿಲ್ಲ. ಈಗ ಪ್ರಜಾಪ್ರಭುತ್ವವಿದೆ. ಮೋದಿಯವರ ಸರ್ವಾಧಿಕಾರಿ ಧೋರಣೆ ನಡೆಯಲ್ಲ. ಅವರಿಗೆ ಬುದ್ಧಿಭ್ರಮಣೆ ಆಗಿದೆ' ಎಂದು ಖರ್ಗೆ ವಾಗ್ದಾಳಿ ನಡೆಸಿದರು.

'ಅಕ್ಕಿ ಕೊಡಿ ಎಂದರೆ, ಅಂಗಡಿಯಲ್ಲಿ ಕೇಕ್ ಜಾಸ್ತಿ ಇದೆ. ಅದನ್ನು ತಿನ್ನಿ ಎನ್ನುವ ಮಾತುಗಳನ್ನು ಪ್ರಧಾನಿ ಆಡುತ್ತಿದ್ದಾರೆ' ಎಂದು ದೂರಿದರು.

'ಮೋದಿ ಆಡಳಿತಕ್ಕೆ ಬಿಜೆಪಿಗೆ ಮತ ಹಾಕಿ'

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು: 'ಪ್ರಧಾನಿ ನರೇಂದ್ರ ಮೋದಿ ಈ ದೇಶವನ್ನು ಶಕ್ತಿಶಾಲಿಯನ್ನಾಗಿ ಮಾಡಲು ಶ್ರಮಿಸುತ್ತಿದ್ದಾರೆ. ಈ ಬಾರಿ ಕೇಂದ್ರದಲ್ಲಿ 400 ಸ್ಥಾನ ಗೆಲ್ಲುವ ಗುರಿ ಹಾಕಿಕೊಂಡಿದ್ದೇವೆ. ದೇಶದ ಅಭಿವೃದ್ಧಿ ದೃಷ್ಟಿಯಿಂದ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ತರಲು ಬಿಜೆಪಿಗೆ ಮತ ಹಾಕಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದರು.

ರಾಣೆಬೆನ್ನೂರಿನಲ್ಲಿ ಬುಧವಾರ ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಪರ ಬೃಹತ್ ರೋಡ್ ಶೋ ನಡೆಸಿ ನೆರೆದಿದ್ದ ಜನರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಬಸವರಾಜ ಬೊಮ್ಮಾಯಿ ಒಳ್ಳೆಯ ನಾಯಕರು. ದೇಶಕ್ಕೆ ಅವರ ಸೇವೆ ಅಗತ್ಯವಿದ್ದು, ಅವರನ್ನು ಗೆಲ್ಲಿಸಿ' ಎಂದು ಕೋರಿದರು.

ಇದಕ್ಕೂ ಮೊದಲು ರಾಣೆಬೆನ್ನೂರಿನ ಕುರುಬಗೇರಿ ಕ್ರಾಸ್‌ನಿಂದ ಎಂ.ಜಿ. ರಸ್ತೆ ಮಾರ್ಗವಾಗಿ ಅಶೋಕ್ ಸರ್ಕಲ್‌ವರೆಗೂ ನಡೆದ ಬೃಹತ್ ರೋಡ್ ಶೋನಲ್ಲಿ ಶಾ ಪಾಲ್ಗೊಂಡರು. ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿತು. ಕಣ್ಣು ಹಾಯಿಸಿದ ಕಡೆಗೆಲ್ಲಾ ಬಿಜೆಪಿ - ಜೆಡಿಎಸ್ ಬಾವುಟ ಹಿಡಿದ ಕಾರ್ಯಕರ್ತರು, ಅಭಿಮಾನಿಗಳು ಕಂಡು ಬಂದರು. ಇಡೀ ರಸ್ತೆ ಕೇಸರಿ ಬಾವುಟಗಳಿಂದ ರಾರಾಜಿಸುತ್ತಿತ್ತು.



ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ಬುಧವಾರ ನಡೆದ ರೋಡ್ ಶೋನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾತನಾಡಿದರು. ಮಾಜಿ ಸಚಿವ ಬಿ.ಸಿ.ಪಾಟೀಲ ಮತ್ತು ಬಸವರಾಜ ಬೊಮ್ಮಾಯಿ ಪಾಲ್ಗೊಂಡಿದ್ದರು

ಕ್ಷೇತ್ರ ಸಮೀಕ್ಷೆ

ಮೋದಿ ಪ್ರೀತಿ, ಗ್ಯಾರಂಟಿಯ ಆಸೆ

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **56.15%**

9,48,282 ಪುರುಷರು
9,55,725 ಮಹಿಳೆಯರು
19,04,099 ಒಟ್ಟು ಮತದಾರರ ಸಂಖ್ಯೆ
92 ಲಿಂಗತ್ವ ಅಲ್ಪಸಂಖ್ಯಾತರು



ಜಗದೀಶ ಶೆಟ್ಟರ್ (ಬಿಜೆಪಿ)



ಮೃಣಾಲ್ ಹೆಬ್ಬಾಳಕರ (ಕಾಂಗ್ರೆಸ್)

ಜಗದೀಶ ಶೆಟ್ಟರ್: ಹುಬ್ಬಳ್ಳಿ ನನ್ನ ಜನ್ಮಭೂಮಿ, ಬೆಳಗಾವಿ ಕರ್ಮಭೂಮಿ. ಜಿಲ್ಲೆ ಜೊತೆ 30 ವರ್ಷದ ನಂಟಿದೆ. ಜನ ನನ್ನ ಮರೆತಿಲ್ಲ ಎಂಬ ನಂಬಿಕೆ ಇದೆ

- 👍 ಪ್ರಬಲ ಲಿಂಗಾಯತ ಸಮುದಾಯದ ರಾಜಕಾರಣಿ
- 👍 ಮುಖ್ಯಮಂತ್ರಿ, ಎರಡು ಬಾರಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೆಲಸ ನಿರ್ವಹಿಸಿದ್ದರಿಂದ ಲಭಿಸಿರುವ ಕ್ಷೇತ್ರ ಪರಿಚಯ
- 👎 ಜಿಲ್ಲೆಯ ಹೊರಗಿನ ವ್ಯಕ್ತಿ ಎಂಬ ಅಪವಾದ, ಸ್ವಪಕ್ಷೀಯರ ಒಳೇಟು
- 👎 ಕಾಂಗ್ರೆಸ್‌ಗೆ ಹೋಗಿ, ಬಿಜೆಪಿಗೆ ವಾಪಸ್ ಆಗಿದ್ದರಿಂದ ಆಗಿರುವ ಹಿನ್ನಡೆ

ಮೃಣಾಲ್ ಹೆಬ್ಬಾಳಕರ: ಮೋದಿ ಅಲೆ ಮೀರಿ ಹೊಸ ಗಾಳಿ ಬೀಸುತ್ತಿದೆ. ತಾಯಿಯ ಅಭಿವೃದ್ಧಿ ಕೆಲಸಗಳೇ ಶ್ರೀರಕ್ಷೆ. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರಿಗೆ ನೆರವಾಗಿವೆ

- 👍 ಪಂಚ ಗ್ಯಾರಂಟಿ ಯೋಜನೆಗಳನ್ನು ಮನೆಮನೆಗೆ ತಲುಪಿಸಿದ್ದು
- 👍 ಸಚಿವರಾದ ಲಕ್ಷ್ಮಿ ಹೆಬ್ಬಾಳಕರ ಮತ್ತು ಸತೀಶ ಜಾರಕಿಹೊಳಿ ವರ್ಚಸ್ಸು
- 👎 ಅಮ್ಮ ಸಚಿವೆ, ಮಾವ ಪರಿಷತ್ ಸದಸ್ಯರಾಗಿರುವುದರಿಂದ ಕುಟುಂಬ ರಾಜಕಾರಣದ ಅಪವಾದ
- 👎 ಲಿಂಗಾಯತ ಪಂಚಮಸಾಲಿ ಜಾತಿ ವಿಚಾರದಲ್ಲಿ ನಡೆದ ವಾಗ್ವಾದ

ಕ್ಷೇತ್ರವನ್ನು ಕಾಡುವ ವಿಷಯಗಳು

- ಈಡೇರದ ಕೈಗಾರಿಕಾ ವಸಾಹತು
- ಗಡಿ ಪ್ರದೇಶದ ಕನ್ನಡ ಶಾಲೆಗಳಿಗೆ ಸಿಗದ ಸೌಕರ್ಯ
- ಸುವರ್ಣ ವಿಧಾನಸೌಧಕ್ಕೆ ಬಾರದ ರಾಜ್ಯಮಟ್ಟದ ಕಚೇರಿಗಳು
- ನಿರಂತರ ನಡೆಯುವ ಎಂಇಎಸ್‌ನ ಗಡಿ ತಂಟೆ
- ಯಲ್ಲಮ್ಮನಗುಡ್ಡ ಸೇರಿದಂತೆ ಧಾರ್ಮಿಕ ಕ್ಷೇತ್ರಗಳಿಗೆ ಇಲ್ಲ ಸೌಕರ್ಯ
- ಪ್ರವಾಸೋದ್ಯಮಕ್ಕೆ ಸಿಗದ ಆದ್ಯತೆ



ಬೆಳಗಾವಿ

• ಸಂತೋಷ ಈ. ಚಿನಗುಡಿ

ಬೆಳಗಾವಿ: 2004ರ ಚುನಾವಣೆ ಬಳಿಕ ಬೆಳಗಾವಿ ಲೋಕಸಭಾ ಕ್ಷೇತ್ರ ಬಿಜೆಪಿಯ ಭದ್ರಕೋಟೆ ಆಗಿದೆ. ಸುರೇಶ ಅಂಗಡಿ ಸತತ ನಾಲ್ಕು ಸಲ, ಅವರ ಪತ್ನಿ ಮಂಗಲಾ ಒಂದು ಸಲ ಸಂಸದರಾಗಿದ್ದಾರೆ. ಆದರೆ, ಈ ಬಾರಿ ಜಗದೀಶ ಶೆಟ್ಟರ್ ಪ್ರವೇಶದಿಂದ ಚುನಾವಣೆಯ ದಿಕ್ಕೇ ಬದಲಾಗಿದೆ. ಇಪ್ಪತ್ತು ವರ್ಷಗಳಿಂದ ಕಟ್ಟಿದ ಕೋಟೆ ಭೇದಿಸಲು ಕಾಂಗ್ರೆಸ್‌ನವರು ಒಟ್ಟಾಗಿ ಮುಗಿಬಿದ್ದಿದ್ದಾರೆ.

ಇಬ್ಬರೂ ಅಭ್ಯರ್ಥಿಗಳು ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಮೊದಲ ಬಾರಿ ಕಣಕ್ಕಿಳಿದಿದ್ದಾರೆ. ವೈಯಕ್ತಿಕ ಸಾಮರ್ಥ್ಯಕ್ಕಿಂತ ತಮ್ಮ ಪಕ್ಷದ ನಾಯಕರ ವರ್ಚಸ್ಸು, ಪಕ್ಷಗಳ ಕೊಡುಗೆ ಅವಲಂಬಿಸಿದ್ದಾರೆ. ಮೋದಿ ಅಲೆಯನ್ನು ಬಿಜೆಪಿ ಮತ್ತು ಗ್ಯಾರಂಟಿ ಯೋಜನೆಗಳನ್ನು ಕಾಂಗ್ರೆಸ್ ನೆಚ್ಚಿಕೊಂಡಿದೆ.

ಜಗದೀಶ ಶೆಟ್ಟರ್ ಮುಖ್ಯಮಂತ್ರಿ ಆಗಿ, ಎರಡು ಬಾರಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೆಲಸ ಮಾಡಿದವರು. ಅದಾಚೆಗೆ ಮೋದಿ ವರ್ಚಸ್ಸನ್ನೇ ಅವರು ಬಲವಾಗಿ ಅವಲಂಬಿಸಿದ್ದಾರೆ. ಬಿಜೆಪಿಯ ರಾಷ್ಟ್ರಪ್ರೇಮ, ರಾಮ ಮಂದಿರ ನಿರ್ಮಾಣ, ಹಿಂದೂ ಧರ್ಮದ ಅಸ್ತಿತ್ವಗಳನ್ನು ಬಾಣಗಳಾಗಿ ಹೂಡಿದ್ದಾರೆ.

ಆರಂಭದಲ್ಲಿ 'ಗೋ ಬ್ಯಾಕ್' ಅಭಿಯಾನ ನಡೆಸಿದವರು ಈಗ ಪ್ರಚಾರದಲ್ಲಿ ಜೊತೆಯಾಗಿದ್ದಾರೆ. ಬೈಲಹೊಂಗಲದಲ್ಲಿ ಮೂರು ದಿಕ್ಕಾಗಿದ್ದ ಜಗದೀಶ ಮೆಟಗುಡ್ಡ, ಡಾ.ವಿಶ್ವನಾಥ ಪಾಟೀಲ, ಜೆಡಿಎಸ್‌ನ ಶಂಕರ ಮಾಡಲಗಿ ಒಂದಾಗಿದ್ದಾರೆ. ಗೋಕಾಕದಲ್ಲಿ ರಮೇಶ ಜಾರಕಿಹೊಳಿ, ಅರಬಾವಿಯಲ್ಲಿ ಬಾಲಚಂದ್ರ ಜಾರಕಿಹೊಳಿ, ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅಭಯ ಪಾಟೀಲ ಲೀಡ್ ಕೊಡಿಸುವಷ್ಟು ಸಮರ್ಥರು.

'ಜಗದೀಶ ಶೆಟ್ಟರ್ ಹೊರಗಿನವರಲ್ಲ' ಎಂಬ ಮಾತನ್ನು ಜನರ ಮನದಾಳಕ್ಕೆ ಇಳಿಸುವ ಹೊಣೆ ಬಿಜೆಪಿಗರದ್ದು. ಅವರು ಎಷ್ಟರಮಟ್ಟಿಗೆ ನಿಭಾಯಿಸುತ್ತಾರೆ ಎಂಬುದೂ ಮುಖ್ಯ.

2014ರಲ್ಲಿ ಲಕ್ಷ್ಮಿ ಹೆಬ್ಬಾಳಕರ ಅವರು ಸುರೇಶ ಅಂಗಡಿ ವಿರುದ್ಧ ಸೋಲುಂಡಿದ್ದರು. ದಶಕದ ಬಳಿಕ ಅವರ ಪುತ್ರ ಮೃಣಾಲ್ ಕಣಕ್ಕಿಳಿದರೂ ತಾವೇ ಅಭ್ಯರ್ಥಿ ಎಂಬಷ್ಟು ಓಡಾಟ ನಡೆಸಿದ್ದಾರೆ. 2021ರ ಉಪಚುನಾವಣೆಯಲ್ಲಿ ಸತೀಶ ಜಾರಕಿಹೊಳಿ ಕೂಡ ಸೋಲುಂಡರು. ಈಗ ಸತೀಶ ಅವರೇ ಬೆಳಗಾವಿ ಕ್ಷೇತ್ರದ ಉಸ್ತುವಾರಿ. ಇಬ್ಬರೂ ನಾಯಕರು ತಮ್ಮ ಸೋಲಿನ ಕಾರಣ ಮನಗಂಡಿದ್ದಾರೆ. ಈ ಬಾರಿ ದುಪ್ಪಟ್ಟು ಶಕ್ತಿಯೊಂದಿಗೆ ಧುಮುಕಿದ್ದಾರೆ. ಈ ಭಾಗದ ಪ್ರಭಾವಿ ರಾಜಕಾರಣಿ, ಶಾಸಕ ಲಕ್ಷ್ಮಣ ಸವದಿ ಕಾಂಗ್ರೆಸ್‌ನಲ್ಲಿರುವುದು, ಮೃಣಾಲ್‌ಗೆ ಹೆಚ್ಚಿನ ಧೈರ್ಯ ತಂದಂತಿದೆ.

ಐದು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರಿದ್ದು, ಮೃಣಾಲ್‌ಗೆ ಆನೆಬಲ ತಂದಿದೆ. ಎಲ್ಲ ಗ್ಯಾರಂಟಿಗಳು ಮಹಿಳಾ ಕೇಂದ್ರಿತ ಆಗಿದ್ದು, ಅವುಗಳ ಕ್ರೆಡಿಟ್ ಬಾಚಿಕೊಳ್ಳುವಲ್ಲಿ ಲಕ್ಷ್ಮಿ ಹೆಬ್ಬಾಳಕರ ಸಿದ್ಧಹಸ್ತರು.

'ಮನೆಮಗಳು' ಎಂಬ ಬ್ರ್ಯಾಂಡ್ ಬೆಳೆಸಿಕೊಂಡು ಗೆದ್ದ ಲಕ್ಷ್ಮಿ, ಈಗ 'ಮನೆಮಗ' ಬ್ರ್ಯಾಂಡ್ ಹುಟ್ಟುಹಾಕಿದ್ದಾರೆ.

'ಜಿಲ್ಲೆಯ ಜನ ಪಕ್ಕಾ ಸ್ವಾಭಿಮಾನಿಗಳು. ನಾನು ಮನೆ ಮಗ. ನನ್ನನ್ನು ಬಿಟ್ಟುಕೊಡುವುದಿಲ್ಲ' ಎಂಬ ವಿಶ್ವಾಸ ಮೃಣಾಲ್ ಹೆಬ್ಬಾಳಕರ ಅವರದ್ದು.

ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ, ದಲಿತ ಮಹಿಳೆ ಮತಾಂತರ ಯತ್ನದ ಪ್ರಕರಣಗಳೂ ಪ್ರಭಾವ ಬೀರಲಿವೆ. 'ಲವ್ ಜಿಹಾದ್' ಸಂಗತಿಯ ಮೂಲಕ ಮತದಾರನ ಮನಸ್ಸನ್ನು ಘಾಸಿಗೊಳಿಸಿ ವಾಲಿಸಿಕೊಳ್ಳುವ ಯತ್ನವನ್ನು ಬಿಜೆಪಿ ನಡೆಸಿದೆ.

ಕ್ಷೇತ್ರದ ಬಹಳಷ್ಟು ಪುರುಷರು 'ರಾಜ್ಯದಲ್ಲಿ ಯಾವ ಸರ್ಕಾರವಾದರೂ ಬರಲಿ. ಆದರೆ, ದೇಶಕ್ಕೆ ಮೋದಿ ಬೇಕು' ಎನ್ನುತ್ತಾರೆ. ಬಹಳಷ್ಟು ಮಹಿಳೆಯರು 'ಗ್ಯಾರಂಟಿಗಳಿಂದ ನಮ್ಮ ಸಂತಿ–ಪ್ಯಾಟಿ ನಡೀತದ. ಗ್ಯಾರಂಟಿಗೇ ಮತ' ಎನ್ನುತ್ತಾರೆ.

'ಕಮಲ' ಕೋಟೆ ವಶಕ್ಕೆ 'ಕೈ' ಶತಪ್ರಯತ್ನ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಸತತ ನಾಲ್ಕು ಬಾರಿ ಬಾಗಲಕೋಟೆ ಲೋಕಸಭೆ ಕ್ಷೇತ್ರವನ್ನು ಪ್ರತಿನಿಧಿಸಿರುವ ಪಿ.ಸಿ. ಗದ್ದಿಗೌಡರ್, ಐದನೇ ಬಾರಿ ಬಿಜೆಪಿ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಸತತ ಸೋಲಿನಿಂದ ಕಂಗೆಟ್ಟಿದ್ದ ಕಾಂಗ್ರೆಸ್ ಈ ಚುನಾವಣೆಯಲ್ಲಿ ಯುವ ಮುಖ ಸಂಯುಕ್ತಾ ಪಾಟೀಲ ಅವರನ್ನು ಅಖಾಡಕ್ಕಿಳಿಸಿದೆ.

ಇಲ್ಲಿ 2004ರಲ್ಲಿ ಮೊದಲ ಬಾರಿಗೆ ಕಮಲ ಅರಳಿಸಿದ ಕೀರ್ತಿ ಪಿ.ಸಿ. ಗದ್ದಿಗೌಡರದ್ದು. ಐದನೇ ಬಾರಿ ವಿಜಯಪತಾಕೆ ಹಾರಿಸುವ ಉಮೇದಿನಲ್ಲಿ ಅವರು ಇದ್ದಾರೆ. ಬಾದಾಮಿ ತಾಲ್ಲೂಕಿನಲ್ಲಿ ಮಾಜಿ ಶಾಸಕ ಪಿ.ಕೆ. ಪಟ್ಟಣಶೆಟ್ಟಿ, ಮಹಾಂತೇಶ ಮಮದಾಪುರ ಅಸಮಾಧಾನ ಶಮನವಾಗಿದ್ದು, ಪ್ರಚಾರದಲ್ಲಿ ಭಾಗಿಯಾಗಿದ್ದಾರೆ. ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮಾಜಿ ಶಾಸಕ ವೀರಣ್ಣ ಚರಂತಿಮಠ, ಮಾಜಿ ಸಚಿವ ಮುರುಗೇಶ ನಿರಾಣಿ ಸೇರಿ ಹಲವರ ಮಧ್ಯದ ಮುನಿಸಿನ ಪರಿಣಾಮ ಸೋಲಾಗಿತ್ತು. ಈಗಲೂ ಅದು ಮುಂದುವರಿದಿದ್ದು, ಶಮನವಾಗದಿದ್ದರೆ ಫಲಿತಾಂಶದ ಮೇಲೆ ಪರಿಣಾಮ ಬೀರಲಿದೆ.

ಜೆಡಿಎಸ್ ಜೊತೆಗಿನ ಮೈತ್ರಿ ಫಲಕಾರಿ ಆಗಬಹುದು ಎಂಬ ನಿರೀಕ್ಷೆ ಬಿಜೆಪಿಯಲ್ಲಿದೆ. ಜನತಾ ಪರಿವಾರದ ಹಿನ್ನೆಲೆಯ ಗದ್ದಿಗೌಡರಿಗೆ ಜಿಲ್ಲೆಯಲ್ಲಿ ಹಲವು ನಾಯಕರೊಂದಿಗೆ ಉತ್ತಮ ಸ್ನೇಹ ಸಂಬಂಧ ಇರುವುದು ಕೂಡ ನೆರವಿಗೆ ಬರಬಹುದು ಎಂಬ ಆಶಾಭಾವವೂ ಇದೆ.

ಸಂಯುಕ್ತಾ ಪಾಟೀಲ ಅವರ ಗೆಲುವಿಗೆ ತಂದೆ, ಸಚಿವ ಶಿವಾನಂದ ಪಾಟೀಲರು ಶ್ರಮಿಸುತ್ತಿದ್ದಾರೆ.

ಸಂಯುಕ್ತಾ ಪಾಟೀಲ ಜಿಲ್ಲೆಯ ಹೊರಗಿನವರು ಎಂದು ಬಿಂಬಿಸುವುದನ್ನು ತಡೆಯಲು ಶ್ರಮಿಸುತ್ತಿದ್ದಾರೆ. ಗೆಲುವು ದಾಖಲಿಸಲು ರಣತಂತ್ರ ರೂಪಿಸುತ್ತಿದ್ದಾರೆ.

ಬಾಗಲಕೋಟೆ

2019ರ ಲೋಕಸಭಾ ಚುನಾವಣೆಯ ಉಸ್ತುವಾರಿಯನ್ನು ಅಂದು ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಶಿವಾನಂದ ಪಾಟೀಲರೇ ವಹಿಸಿಕೊಂಡಿದ್ದರು. ಆ ಅನುಭವ ಅವರಿಗೆ ನೆರವಾಗಲಿದೆ. ಜಿಲ್ಲೆಯಲ್ಲಿ ನೇಕಾರರ ಸಂಖ್ಯೆ ಹೆಚ್ಚಿದೆ. ಅವರಿಗೆ 10 ಎಚ್‌ಪಿವರೆಗೆ ಉಚಿತ ವಿದ್ಯುತ್ ನೀಡುತ್ತಿರುವುದು ಪ್ರಭಾವ ಬೀರಬಹುದು. ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಹೆಚ್ಚಿದ್ದು, ಸಕ್ಕರೆ ಸಚಿವರಾಗಿರುವುದು ನೆರವಿಗೆ ಬರಬಹುದು ಎಂಬ ಅಂದಾಜು ಕಾಂಗ್ರೆಸ್‌ನವರದ್ದು.

ಕಳೆದ ಬಾರಿ ಸ್ಪರ್ಧಿಸಿ ಸೋತಿದ್ದ ಕಾಂಗ್ರೆಸ್‌ನ ವೀಣಾ ಕಾಶಪ್ಪನವರ (ಶಾಸಕ ವಿಜಯಾನಂದ ಕಾಶಪ್ಪನವರ ಪತ್ನಿ) ಮುನಿಸು ಸಂಪೂರ್ಣವಾಗಿ ಶಮನವಾಗಿಲ್ಲ. ನಾಮಪತ್ರ ಸಲ್ಲಿಕೆಯ ದಿನ ಬರಲಿಲ್ಲ. ಪ್ರಚಾರ ಸಭೆಗಳಲ್ಲೂ ಕಾಣಿಸಿಕೊಂಡಿಲ್ಲ. ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಗಳಾಗಿದ್ದ ತೇರದಾಳದ ಡಾ.ಪದ್ಮಜಿತ್ ನಾಡಗೌಡ, ಮುಧೋಳದ ಸತೀಶ ಬಂಡಿವಡ್ಡರ ಸೇರ್ಪಡೆಗೆ ವಿರೋಧ ವ್ಯಕ್ತವಾಗಿತ್ತು. ಅದು ಇನ್ನೂ ಪೂರ್ಣವಾಗಿ ಬಗೆಹರಿದಿಲ್ಲ. ಬಾದಾಮಿ, ಜಮಖಂಡಿಯಲ್ಲಿ ಎರಡು ಬಣಗಳಾಗಿದ್ದು, ಬಣಗಳ ಒಗ್ಗೂಡಿಸುವಿಕೆ ಯತ್ನ ಮುಂದುವರಿದಿದೆ.

ಕ್ಷೇತ್ರ ವ್ಯಾಪ್ತಿಯಲ್ಲಿ ಐವರು ಕಾಂಗ್ರೆಸ್ ಶಾಸಕರಿದ್ದು, ಅವರ ಬಲವೂ ಪಕ್ಷಕ್ಕೆ ವರವಾಗಲಿದೆ ಎಂಬ ನಿರೀಕ್ಷೆಯಲ್ಲಿ ಶಿವಾನಂದ ಪಾಟೀಲರಿದ್ದಾರೆ.


ಕ್ಷೇತ್ರದಲ್ಲಿ ಅಭ್ಯರ್ಥಿಗಳ ವರ್ಚಸ್ಸಿಗಿಂತ ಬಿಜೆಪಿಯವರು ಮೋದಿಯ ಅಲೆ ನೆಚ್ಚಿಕೊಂಡರೆ, ಕಾಂಗ್ರೆಸ್‌ನವರು ಗ್ಯಾರಂಟಿ ಯೋಜನೆಗಳ ಪ್ರಭಾವದಲ್ಲಿ ಮಹಿಳೆಯರ ಮತಗಳ ನಿರೀಕ್ಷೆಯಲ್ಲಿದ್ದಾರೆ. ಕ್ಷೇತ್ರದ ಜನರು 'ಕೈ' ಹಿಡಿಯುವರೇ ಅಥವಾ 'ಕಮಲ' ಅರಳಿಸುವರೇ ಎಂಬುದು ನಿಗೂಢವಾಗಿಯೇ ಇದೆ.

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **70.63%**

8,95,432 ಪುರುಷರು
9,10,650 ಮಹಿಳೆಯರು
18,06,183 ಒಟ್ಟು ಮತದಾರರ ಸಂಖ್ಯೆ
101 ಲಿಂಗತ್ವ ಅಲ್ಪಸಂಖ್ಯಾತರು



ಸಂಯುಕ್ತಾ ಪಾಟೀಲ (ಕಾಂಗ್ರೆಸ್)



ಪಿ.ಸಿ. ಗದ್ದಿಗೌಡರ (ಬಿಜೆಪಿ)

ಸಂಯುಕ್ತಾ ಪಾಟೀಲ: ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿಗಳು ಮತ್ತು ಬರ ಪರಿಹಾರ ಸೇರಿ ವಿವಿಧ ವಿಷಯಗಳಲ್ಲಿ ಕೇಂದ್ರದ ರಾಜ್ಯ ವಿರೋಧಿ ಧೋರಣೆ ಗೆಲುವಿಗೆ ಪೂರಕವಾಗಲಿದೆ


- 👍 ತಂದೆ, ಸಚಿವ ಶಿವಾನಂದ ಪಾಟೀಲರ ವರ್ಚಸ್ಸು
- 👍 ಪಂಚ ಗ್ಯಾರಂಟಿಗಳ ಪ್ರತಿಫಲ ಹಾಗೂ ಐವರು ಕಾಂಗ್ರೆಸ್ ಶಾಸಕರ ಬಲ
- 👎 ಹೊರ ಜಿಲ್ಲೆಯ ಅಭ್ಯರ್ಥಿ (ವಿಜಯಪುರ ಜಿಲ್ಲೆ)
- 👎 ಪಕ್ಷದ ನಾಯಕರೊಳಗಿನ ಅಸಮಾಧಾನ, ಒಳೇಟಿನ ಭೀತಿ

ಪಿ.ಸಿ. ಗದ್ದಿಗೌಡರ: 10 ವರ್ಷಗಳಲ್ಲಿ ಪ್ರಧಾನಿ ಮೋದಿ ಸರ್ಕಾರ ದೇಶದ ಹಿರಿಮೆ ವಿಶ್ವಮಟ್ಟಕ್ಕೆ ಹೆಚ್ಚಿಸಿರುವುದು. ಕ್ಷೇತ್ರದಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳು ಗೆಲುವಿಗೆ ಸಹಕಾರಿ ಆಗಲಿವೆ

- 👍 ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾಗಬೇಕೆಂಬ ವಿಷಯ ಅಲೆಯಾಗುವ ನಿರೀಕ್ಷೆ
- 👍 ಹಿರಿತನ ಹಾಗೂ ನಾಲ್ಕು ಬಾರಿ ಗೆದ್ದರೂ ಸಂಸದರು ಉಳಿಸಿಕೊಂಡಿರುವ ಸರಳತೆ
- 👎 ನಾಲ್ಕು ಬಾರಿ ಗೆದ್ದರೂ ನಿರೀಕ್ಷಿತ ಮಟ್ಟದಲ್ಲಿ ಆಗದ ಕೆಲಸ
- 👎 ಜನರೊಂದಿಗೆ ನೇರ ಸಂಪರ್ಕ ಕೊರತೆ

ಕ್ಷೇತ್ರವನ್ನು ಕಾಡುವ ವಿಷಯಗಳು

- ಕೈಗಾರಿಕೆಗಳು ಸ್ಥಾಪನೆಯಾಗಿಲ್ಲ, ಗುಳೆ ಹೋಗುವುದು ನಿಂತಿಲ್ಲ
- ಘೋಷಣೆಯಾಗಿರುವ ಜವಳಿ ಪಾರ್ಕ್‌ಗಳ ಆರಂಭ ಆಗಬೇಕಿದೆ
- ಕೃಷ್ಣಾ ಮೇಲ್ದಂಡೆ ಯೋಜನೆ ಅಪೂರ್ಣ
- ಬಾದಾಮಿಯ ಅಭಿವೃದ್ಧಿಗೆ ಬೇಕಿದೆ ಕಾಯಕಲ್ಪ



ತವರು ರಾಜ್ಯದಲ್ಲಿ ಮೋದಿ– ಅಮಿತ್ ಶಾಗೆ ಸವಾಲು • 'ಹಿಂದುತ್ವದ ಪ್ರಯೋಗ ಶಾಲೆ'ಯಲ್ಲಿ ಹೋರಾಟದ ಕಿಚ್ಚು

ತಿರುಗಿಬಿದ್ದ ಕ್ಷತ್ರಿಯರು; ಬಿಜೆಪಿಗೆ ತಲೆಬಿಸಿ

• ಮಂಜುನಾಥ ಹೆಬ್ಬಾರ್



ಗುಜರಾತ್ ರಾಜ್ಯದ 26 ಲೋಕಸಭಾ ಕ್ಷೇತ್ರಗಳಲ್ಲಿ ಈ ಸಲವೂ ಗೆಲುವು ಖಚಿತ ಎಂದು ಬಿಜೆಪಿ ನಾಯಕರು ಬೀಗುತ್ತಿದ್ದಾರೆ. ಆದರೆ, ರಜಪೂತರು (ಕ್ಷತ್ರಿಯರು) ಮುನಿಸಿಕೊಂಡಿರುವುದು ಪಕ್ಷಕ್ಕೆ ತಲೆಬಿಸಿ ತಂದೊಡ್ಡಿದೆ. ಲೋಕಸಭಾ ಚುನಾವಣೆಯ ಮೂರನೇ ಹಂತದ ಮತದಾನಕ್ಕೆ ಕೆಲವೇ ದಿನಗಳು ಉಳಿದಿರುವ ಹೊತ್ತಿನಲ್ಲಿ ಕ್ಷತ್ರಿಯರ ಹೋರಾಟದ ನೆಲೆ ವಿಸ್ತರಿಸುತ್ತಿರುವುದು ಬಿಜೆಪಿಗೆ ಸವಾಲಾಗಿದೆ

ನವದೆಹಲಿ: 'ಹಿಂದುತ್ವದ ಪ್ರಯೋಗ ಶಾಲೆ' ಎಂದೇ ಹೆಸರು ಗಳಿಸಿರುವ ರಾಜ್ಯ ಗುಜರಾತ್. ನರೇಂದ್ರ ಮೋದಿ ಅವರು ದೇಶದ ಜನರ ಹೃದಯದಲ್ಲಿ 'ಗುಜರಾತ್ ಮಾದರಿ' ಎಂಬ ಕನಸನ್ನು ಬಿತ್ತಿದ್ದು ಇಲ್ಲಿಯೇ. 2014 ಹಾಗೂ 2019ರ ಲೋಕಸಭಾ ಚುನಾವಣೆಗಳಲ್ಲಿ ರಾಜ್ಯದ ಎಲ್ಲ 26 ಕ್ಷೇತ್ರಗಳನ್ನು ಬಿಜೆಪಿ ಗೆದ್ದುಕೊಂಡಿತ್ತು. 2022ರ ವಿಧಾನಸಭಾ ಚುನಾವಣೆಯಲ್ಲೂ ಪ್ರಚಂಡ ದಿಗ್ವಿಜಯ ಸಾಧಿಸಿತ್ತು. ಪ್ರಮುಖ ನಾಯಕರ ವಲಸೆ, ನಾಯಕರ ಒಳ ಜಗಳ, ತಳಮಟ್ಟದ ಸಂಘಟನೆ ಕೊರತೆ ಹಾಗೂ ಕೋಮು ಆಧಾರದ ಧ್ರುವೀಕರಣ ರಾಜಕಾರಣದಿಂದ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಅಕ್ಷರಶಃ ನೆಲೆ ಕಳೆದುಕೊಂಡಿದೆ. ಬಿಜೆಪಿ ಕೂಡ ಸಮಸ್ಯೆಗಳಿಂದ ಮುಕ್ತವಾಗಿಲ್ಲ.

ರಾಜ್‌ಕೋಟ್ ಕ್ಷೇತ್ರದ ಅಭ್ಯರ್ಥಿಯೂ ಆಗಿರುವ ಕೇಂದ್ರ ಸಚಿವ ಪರಷೋತ್ತಮ್ ರೂಪಾಲಾ ಅವರು ಕಟ್ಟಾ ಪಾಟೀದಾರರು. ರಜಪೂತ ದೊರೆಗಳ ವಿರುದ್ಧ ರೂಪಾಲಾ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂಬುದು ಕ್ಷತ್ರಿಯರ ಕೋಪಕ್ಕೆ ಕಾರಣ. ರಾಜ್‌ಕೋಟ್‌ನಲ್ಲಿ ಮಾರ್ಚ್ 22ರಂದು ನಡೆದ ಸಭೆಯಲ್ಲಿ ರೂಪಾಲಾ, 'ರಜಪೂತ ದೊರೆಗಳು ಬ್ರಿಟಿಷರಿಗೆ ಸಹಕರಿಸಿದ್ದರು ಮತ್ತು ಅವರಿಗೆ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟಿದ್ದರು' ಎಂದು ಹೇಳಿಕೆ ನೀಡಿದ್ದರು.

ರೂಪಾಲಾ ವಿರುದ್ಧ ಸಿಡಿದೆದ್ದಿರುವ ಕ್ಷತ್ರಿಯ ಸಮುದಾಯದವರು ಕರ್ಣಿ ಸೇನಾ ನೇತೃತ್ವದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿಭಟನೆ ನಡೆಸಿದ್ದಾರೆ. ತಮ್ಮ ಮಾತಿಗೆ ರೂಪಾಲಾ ಎರಡು ಬಾರಿ ಕ್ಷಮೆಯನ್ನೂ ಯಾಚಿಸಿದ್ದಾರೆ. ಅವರಿಗೆ ನೀಡಿರುವ ಟಿಕೆಟ್ ಅನ್ನು ವಾಪಸ್ ಪಡೆಯಬೇಕು ಎಂದು ಕರ್ಣಿ ಸೇನಾ ಪಟ್ಟು ಹಿಡಿದಿದೆ. ಗುಜರಾತ್ ಮುಖ್ಯಮಂತ್ರಿ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ರಜಪೂತ ನಾಯಕರ ಸಮಾಧಾನ ಪಡಿಸಲು ಯತ್ನಿಸಿದ್ದಾರೆ. ಆದರೂ ಸಮುದಾಯದ ಕೋಪ ತಣ್ಣಗಾಗಿಲ್ಲ. ರಾಜ್ಯದ ವಿವಿಧ ಭಾಗಗಳಿಗೆ ಹೋರಾಟವನ್ನು ವಿಸ್ತರಿಸಿದ್ದಾರೆ. ಪ್ರತಿಭಟನಾ ರ‍್ಯಾಲಿಗಳಿಗೆ ಸಾವಿರಾರು ಜನರು ಸೇರುತ್ತಿದ್ದಾರೆ. ಬಿಜೆಪಿ ವಿರುದ್ಧ ಪ್ರಚಾರಕ್ಕಾಗಿ ಎಲ್ಲ 26 ಲೋಕಸಭಾ ಕ್ಷೇತ್ರಗಳಲ್ಲಿ 'ಧರ್ಮ ರಥ' ಹೋರಾಟ ನಡೆಸಲಾಗುವುದು ಎಂದು ಕ್ಷತ್ರಿಯ ಸಂಘಟನೆಗಳು ಎಚ್ಚರಿಕೆ ನೀಡಿದ್ದವು.

ಕ್ಷತ್ರಿಯರು ಭೂಮಾಲೀಕರು. ರಾಜ್ಯದ ಮತದಾರರಲ್ಲಿ ಸಮುದಾಯದ ಪಾಲು ಶೇ 7ರಷ್ಟಿದೆ. ಈಚಿನ ದಶಕಗಳಿಂದ ಈ ಸಮುದಾಯದವರು ಬಿಜೆಪಿಯ ಬೆನ್ನಿಗೆ ನಿಂತಿದ್ದಾರೆ. 'ರೂಪಾಲಾ ಅವರು ಕ್ಷಮೆ ಯಾಚಿಸಿದ್ದರಿಂದ ವಿವಾದ ಮುಕ್ತಾಯಗೊಂಡಿದೆ. ರಾಜ್‌ಕೋಟ್‌ನಲ್ಲಿ ಅಭ್ಯರ್ಥಿಯನ್ನು ಬದಲಿಸಿದರೆ ತಪ್ಪು ಸಂದೇಶ ರವಾನೆಯಾಗುತ್ತದೆ' ಎಂಬುದು ಬಿಜೆಪಿ ನಾಯಕರ ವಾದ. 'ಜತೆಗೆ, ರಜಪೂತರಲ್ಲಿ ಒಗ್ಗಟ್ಟಿಲ್ಲ. ಸಮುದಾಯದ ಒಂದು ಪಂಗಡದ ವರಷ್ಟೇ ಹೋರಾಟ ನಡೆಸುತ್ತಿದ್ದಾರೆ. ರಾಜ್ಯದ ಎರಡು ಕ್ಷೇತ್ರಗಳಲ್ಲಿ ಒಬಿಸಿ ಕ್ಷತ್ರಿಯರಿಗೆ ಪಕ್ಷ ಟಿಕೆಟ್ ನೀಡಿದೆ. ಅಲ್ಲದೆ, ಹೋರಾಟಕ್ಕೆ ಮಣಿದರೆ ಪಾಟೀದಾರರು ಮುನಿಸಿಕೊಳ್ಳುವ ಸಾಧ್ಯತೆ ಇದೆ. ಈ ಪ್ರತಿಭಟನೆಯು ಚುನಾವಣೆ ಮೇಲೆ ಭಾರಿ ಪರಿಣಾಮ ಬೀರುವುದಿಲ್ಲ. ಮೋದಿ ಅಲೆಯಲ್ಲಿ ಇದೆಲ್ಲ ತೇಲಿ ಹೋಗುತ್ತದೆ. ಹಾಗಾಗಿ, ಪಕ್ಷದ ವರಿಷ್ಠರು ಹೆಚ್ಚು ಚಿಂತಿಸುತ್ತಿಲ್ಲ' ಎಂಬುದು ಬಿಜೆಪಿ ನಾಯಕರ ಅಭಿಪ್ರಾಯ.

'2011ರಲ್ಲಿ ವಂಕನೇರ್ ರಾಜ ಮನೆತನದವರು ನರೇಂದ್ರ ಮೋದಿ ಅವರನ್ನು ಅಭಿನಂದಿಸಿದ್ದರು. ಮುಂದಿನ ಪ್ರಧಾನಿಯವರಿಗೆ ದೇಶ ಕಾಯುತ್ತಿದೆ ಎಂದೂ ಶ್ಲಾಘಿಸಿದ್ದರು. 18 ರಾಜವಂಶಸ್ಥರು ಮೋದಿ ಅವರನ್ನು ಬೆಂಬಲಿಸಿದ್ದರು. ಬಿಜೆಪಿಯ ಇತ್ತೀಚಿನ ಗೆಲುವಿನಲ್ಲಿ ಸಮುದಾಯದ ಪಾತ್ರವೂ ದೊಡ್ಡದು. ಆದರೆ, ಈಚಿನ ವರ್ಷಗಳಲ್ಲಿ ಕ್ಷತ್ರಿಯರನ್ನು ಬಿಜೆಪಿ ಕಡೆಗಣಿಸುತ್ತಿದೆ. ಪಕ್ಷದಲ್ಲಿ ಪಾಟೀದಾರರಿಗೆ ಅನಗತ್ಯ ಪ್ರಾತಿನಿಧ್ಯ ನೀಡಲಾಗುತ್ತಿದೆ' ಎಂಬುದು ಕ್ಷತ್ರಿಯ ನಾಯಕರ ಆರೋಪ.

ರಕ್ತಸಿಕ್ತ ಅಧ್ಯಾಯದ ಸುತ್ತ

ಗುಜರಾತ್ ರಾಜಕಾರಣವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದ ಪಟೇಲರ (ಪಾಟೀದಾರರ) ಪ್ರಾಬಲ್ಯವನ್ನು ಮೊದಲ ಬಾರಿಗೆ ಮುರಿದವರು ಕಾಂಗ್ರೆಸ್‌ನ ಮಾಧವ ಸಿಂಗ್ ಸೋಲಂಕಿ ಅವರು. 1980 ಹಾಗೂ 1985ರ ವಿಧಾನಸಭಾ ಚುನಾವಣೆಗಳಲ್ಲಿ 'ಖಾಮ್' (ಕ್ಷತ್ರಿಯ–ದಲಿತ–ಆದಿವಾಸಿ–ಮುಸ್ಲಿಂ) ಸೂತ್ರದ ಅಳವಡಿಕೆಯಿಂದ ಕಾಂಗ್ರೆಸ್ ಅನ್ನು ಅಧಿಕಾರದ ಗದ್ದುಗೆಗೆ ಏರಿಸಿದ್ದರು. ಆದರೆ, ಪಟೇಲರು ಮತ್ತಿತರ ಸಮುದಾಯಗಳನ್ನು ಪಕ್ಷ ದೂರ ಮಾಡಿಕೊಂಡಿತ್ತು ಕೂಡಾ.

ರಾಜ್ಯದಲ್ಲಿ ಪಾಟೀದಾರರು ಶೇ 18ರಷ್ಟು ಇದ್ದಾರೆ. ಕಾಂಗ್ರೆಸ್‌ನಲ್ಲಿ ಕ್ಷತ್ರಿಯರಿಗೆ ಹೆಚ್ಚಿನ ಮನ್ನಣೆ ನೀಡಲಾಗುತ್ತಿದೆ ಎಂಬ ಕಾರಣಕ್ಕೆ ಪಟೇಲರು ಮುನಿಸಿಕೊಂಡಿದ್ದರು. ಇದರಿಂದಾಗಿ, ಪಟೇಲರು ಬಿಜೆಪಿ ಕಡೆಗೆ ವಾಲಿದ್ದರು. ಈ ಸಮುದಾಯದ ಮತಗಳ ಕ್ರೋಡೀಕರಣದ ನೆರವಿನಿಂದ ಬಿಜೆಪಿಯು 1995ರಲ್ಲಿ ಮೊದಲ ಬಾರಿಗೆ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಅಂದಿನಿಂದ ಪಾಟೀದಾರರು ರಾಜ್ಯದಲ್ಲಿ ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಪ್ರಭಾವಶಾಲಿ ಸಮುದಾಯವಾಗಿ ಹೊರಹೊಮ್ಮಿದ್ದಾರೆ. ಸರ್ಕಾರ ಹಾಗೂ ಪಕ್ಷದ ಮೇಲೆ ಹಿಡಿತ ಹೊಂದಿದ್ದಾರೆ. ಇನ್ನೊಂದೆಡೆ, ಪಕ್ಷ ಹಾಗೂ ಸರ್ಕಾರದಲ್ಲಿ ಕ್ಷತ್ರಿಯರ ಪ್ರಾತಿನಿಧ್ಯ ನಿಧಾನವಾಗಿ ಕಡಿಮೆಯಾಗುತ್ತಾ ಬಂತು. ಇದು ಸಹ ಕ್ಷತ್ರಿಯರ ಅಸಮಾಧಾನಕ್ಕೆ ಕಾರಣ. ರೂಪಾಲಾ ಹೇಳಿಕೆಯನ್ನು ಮುಂದಿಟ್ಟುಕೊಂಡು ಸಮುದಾಯದವರು ಬಿಜೆಪಿ ವಿರುದ್ಧ ಸಮರ ಸಾರಿದ್ದಾರೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಡುತ್ತಾರೆ.

ಪಾಟೀದಾರರು ಹಾಗೂ ಕ್ಷತ್ರಿಯರು ಒಕ್ಕಲುತನವನ್ನು ನೆಚ್ಚಿಕೊಂಡವರು. 1950ರ ದಶಕದಲ್ಲಿ ಭೂಸುಧಾರಣೆಯಿಂದಾಗಿ ಹೆಚ್ಚಿನ ಲಾಭ ಪಡೆದವರು ಪಾಟೀದಾರರು. ರಜಪೂತರಿಗೆ ಹೆಚ್ಚಿನ ಅನುಕೂಲವಾಗಲಿಲ್ಲ. ಅಂದಿನಿಂದ ಜಾತಿಗಳ ಪೈಪೋಟಿ ಬೆಳೆದು 80ರ ದಶಕದಲ್ಲಿ ಹಿಂಸಾಚಾರಕ್ಕೆ ತಿರುಗಿತ್ತು. ಅದು ಆಗಾಗ ವಿಕೋಪಕ್ಕೆ ಹೋಗುತ್ತಿದೆ.

ಐದು ರಾಜ್ಯಗಳ ಮೇಲೆ ಪರಿಣಾಮ?

ಉತ್ತರ ಪ್ರದೇಶದ ಪಶ್ಚಿಮ ಭಾಗ, ರಾಜಸ್ಥಾನ, ಗುಜರಾತ್, ಬಿಹಾರ ಹಾಗೂ ಹಿಮಾಚಲ ಪ್ರದೇಶದ ಕೆಲವೊಂದು ಪ್ರದೇಶಗಳಲ್ಲಿ ರಜಪೂತರು ಗಣನೀಯ ಸಂಖ್ಯೆಯಲ್ಲಿದ್ದಾರೆ. ರಜಪೂತರ ಪ್ರತಿಭಟನೆ ಬಗ್ಗೆ ಬಿಜೆಪಿಯ ಉನ್ನತ ನಾಯಕರು ಪ್ರತಿಕ್ರಿಯೆಯನ್ನೇ ನೀಡಿಲ್ಲ. ಇದು ಸಮುದಾಯದ ಅಸಮಾಧಾನ ಹೆಚ್ಚಲು ಕಾರಣವಾಗಿದೆ. ಜತೆಗೆ, ಪಕ್ಷದಲ್ಲಿ ತಮ್ಮನ್ನು ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿ ರಾಜಸ್ಥಾನ ಹಾಗೂ ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಕ್ಷತ್ರೀಯ ಸಮುದಾಯದವರು ಪ್ರತಿಭಟನೆಗಳನ್ನು ನಡೆಸಿದ್ದಾರೆ.


ನರೇಂದ್ರ ಮೋದಿ


ಪರಷೋತ್ತಮ್ ರೂಪಾಲಾ

ಮೀಸಲಾತಿ ಬಗ್ಗೆ ಪ್ರಶ್ನಿಸಿದ್ದಕ್ಕೆ ಮೋದಿ ಪ್ರತೀಕಾರ: ರೇವಂತ್ ರೆಡ್ಡಿ



ಹೈದರಾಬಾದ್ (ಪಿಟಿಐ): ಮೀಸಲಾತಿ ರದ್ದುಪಡಿಸುವ ಪಿತೂರಿಯ ಬಗ್ಗೆ ಪ್ರಶ್ನಿಸಿದ್ದಕ್ಕೆ ತನ್ನ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪ್ರತೀಕಾರದ ಮನೋಭಾವ ಪ್ರದರ್ಶಿಸುತ್ತಿದ್ದಾರೆ ಎಂದು ತೆಲಂಗಾಣದ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಆರೋಪಿಸಿದ್ದಾರೆ.


ನಿಜಾಮಾಬಾದ್ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಗೃಹ ಸಚಿವಾಲಯದ ದೂರಿನ ಆಧಾರದ ಮೇಲೆ ತನ್ನ ವಿರುದ್ಧ ದೆಹಲಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದರು.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದ ಅಮಿತ್ ಶಾ ಅವರ ತಿರುಚಿದ ವಿಡಿಯೊ ಸಂಬಂಧ ಮೇ ಒಂದರಂದು ವಿಚಾರಣೆಗೆ ಹಾಜರಾಗುವಂತೆ ರೇವಂತ್ ರೆಡ್ಡಿ ಅವರಿಗೆ ದೆಹಲಿ ಪೊಲೀಸರು ಸಮನ್ಸ್ ಜಾರಿ ಮಾಡಿದ್ದರು.

ಲೋಕಸಭಾ ಚುನಾವಣೆಯನ್ನು 'ತೆಲಂಗಾಣದ ಹೆಮ್ಮೆ ಮತ್ತು ಗುಜರಾತ್‌ನ ಪ್ರಾಬಲ್ಯ'ದ ನಡುವಿನ ಸ್ಪರ್ಧೆ ಎಂದು ಪ್ರತಿಪಾದಿಸಿದ ಅವರು, 'ನಾನು ಮೋದಿ ಅವರನ್ನು ಗೌರವಿಸುತ್ತೇನೆ. ಆದರೆ, ಅವರು ಗುಜರಾತ್‌ನ ಒಬ್ಬ ವ್ಯಕ್ತಿಯಂತೆ ಬಂದರು, ನಮ್ಮನ್ನು ನಿಂದಿಸಿದರು' ಎಂದು ಹೇಳಿದರು.

ಚುನಾವಣಾ ಕಣದಲ್ಲಿ...

'ಕೆಸಿಆರ್ ಪ್ರಚಾರಕ್ಕೆ 48 ಗಂಟೆ ನಿರ್ಬಂಧ'



ನವದೆಹಲಿ (ಪಿಟಿಐ): ಕಾಂಗ್ರೆಸ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಅಧ್ಯಕ್ಷ ಕೆ. ಚಂದ್ರಶೇಖರ್ ರಾವ್ ಅವರು 48 ಗಂಟೆಗಳ ಪ್ರಚಾರ ನಡೆಸದಂತೆ ಚುನಾವಣಾ ಆಯೋಗವು ಬುಧವಾರ ನಿರ್ಬಂಧ ಹೇರಿದೆ.

ಏಪ್ರಿಲ್ 5ರಂದು ಸಿರ್ಸಿಲ್ಲಾದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಕೆಸಿಆರ್ ಅವರು ನೀಡಿದ ಹೇಳಿಕೆಯು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ. ಹೀಗಾಗಿ, ಬುಧವಾರ ರಾತ್ರಿ 8 ಗಂಟೆಯಿಂದ ಜಾರಿಗೆ ಬರುವಂತೆ ಅವರು 48 ಗಂಟೆಗಳ ಕಾಲ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲು ನಿರ್ಬಂಧ ಹೇರಲಾಗಿದೆ ಎಂದು ಆಯೋಗ ಹೇಳಿಕೆ ಬಿಡುಗಡೆ ಮಾಡಿದೆ.

'ಕಾಂಗ್ರೆಸ್‌ನಿಂದ ಸಂಸ್ಕೃತಿ ಅವಹೇಳನ ಯತ್ನ'



ಲಖನೌ (ಪಿಟಿಐ): ಕಾಂಗ್ರೆಸ್ ಮುಖಂಡರು ಭಾರತದ ನಾಗರಿಕತೆ ಮತ್ತು ಸಂಸ್ಕೃತಿಗೆ ಅವಹೇಳನ ಮಾಡಲು ಯತ್ನಿಸಿದ್ದರು ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಬುಧವಾರ ಆರೋಪಿಸಿದರು.

ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಪಕ್ಷಕ್ಕೆ ದಿಕ್ಕಿಲ್ಲದಂತಾಗಿತ್ತು ಈಗ ಅದಕ್ಕೆ ನಾಯಕರಿಲ್ಲದಂತಾಗಿದೆ ಎಂದೂ ಲೇವಡಿ ಮಾಡಿದರು. ಯುಪಿಎ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್‌ನ ಹಿರಿಯ ಮುಖಂಡರು 'ಕೇಸರಿ ಭಯೋತ್ಪಾದನೆ'ಯ ಹೆಸರಿನಲ್ಲಿ ಭಾರತದ ಸನಾತನ ಸಂಸ್ಕೃತಿಗೆ ಅಪಮಾನ ಮಾಡಲು ಯತ್ನಿಸಿದ್ದರು ಎಂದು ಹೇಳಿದರು.

ಮೀಸಲಾತಿ ನೀಡುವುದಿಲ್ಲ ಎಂದು ಕಾಂಗ್ರೆಸ್ ಬರೆದುಕೊಡಲಿ: ಮೋದಿ

ಬನಾಸ್ಕಾಂತ/ಹಿಮ್ಮತ್‌ನಗರ (ಗುಜರಾತ್) (ಪಿಟಿಐ): ಕಾಂಗ್ರೆಸ್ ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲು ಹೊರಟಿದೆ ಎಂದು ಪುನರುಚ್ಚರಿಸಿದ ಪ್ರಧಾನಿ ಮೋದಿ, ಎಂದೂ ಹಾಗೆ ಮಾಡುವುದಿಲ್ಲ ಎಂದು ಕಾಂಗ್ರೆಸ್ ಮತ್ತು 'ಇಂಡಿಯಾ' ಕೂಟವು ಬರೆದುಕೊಡಲಿ ಎಂದು ಬುಧವಾರ ಸವಾಲು ಹಾಕಿದರು.

ಗುಜರಾತ್‌ನ ಡೀಸಾ ಪಟ್ಟಣದಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, 'ಬಿಜೆಪಿ ಮತ್ತು ನಾನು ಇರುವವರೆಗೆ, ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಆರ್ಥಿಕ ದುರ್ಬಲ ವರ್ಗಗಳಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ನೀಡುತ್ತಿರುವ ಮೀಸಲಾತಿಯನ್ನು ರಕ್ಷಣೆ ಮಾಡಲಾಗುವುದು. ನಾನು ಯಾರಿಗೂ 'ಮೀಸಲಾತಿಯ ಆಟ' ಆಡಲು ಬಿಡುವುದಿಲ್ಲ' ಎಂದು ಹೇಳಿದರು.

ಹಿಮ್ಮತ್‌ನಗರದಲ್ಲಿ ರ‍್ಯಾಲಿ ನಡೆಸಿ ಮಾತನಾಡಿದ ಪ್ರಧಾನಿ ಮೋದಿ, 'ಕಾಂಗ್ರೆಸ್ 70 ವರ್ಷಗಳ ದೀರ್ಘ ಅವಧಿಗೆ ಅಧಿಕಾರ ನಡೆಸಿದರೂ ದೇಶದಾದ್ಯಂತ ಸಂವಿಧಾನವನ್ನು ಜಾರಿ ಮಾಡಲು ಸಾಧ್ಯವಾಗಿರಲಿಲ್ಲ' ಎಂದು ಟೀಕಿಸಿದರು.

'ಸಂವಿಧಾನ ಅಪಾಯದಲ್ಲಿದೆ ಮತ್ತು ಮೀಸಲಾತಿ ರದ್ದುಪಡಿಸಲಾಗುತ್ತದೆ ಎಂದು ಕಾಂಗ್ರೆಸ್ ನಾಯಕರು ಈಗ ಹೇಳುತ್ತಿದ್ದಾರೆ. ವಾಸ್ತವದಲ್ಲಿ, ನಮ್ಮ ಸಂವಿಧಾನವು ಕಾಶ್ಮೀರದಲ್ಲಿ ಜಾರಿಯಾಗಿದೆ ಮತ್ತು ಅದನ್ನು ಮಾಡಿದ್ದು ಮೋದಿ. ಏಕೆಂದರೆ, ಮೋದಿ ಸಂವಿಧಾನಕ್ಕೆ ಬದ್ಧ' ಎಂದು ಪ್ರತಿಪಾದಿಸಿದರು.

'ಮೀಸಲಾತಿ ಮಿತಿ ಹೆಚ್ಚಳ: ಪ್ರಧಾನಿ ನಿಲುವೇನು?'



ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ಜಾತಿಗಳ ಮೀಸಲಾತಿಯ ಶೇ 50ರ ಮಿತಿಯನ್ನು ತೆಗೆದುಹಾಕುವ ಸಂಬಂಧ ತಮ್ಮ ನಿಲುವೇನು ಎನ್ನುವುದನ್ನು ಸ್ಪಷ್ಟಪಡಿಸಲಿ ಎಂದು ಕಾಂಗ್ರೆಸ್ ಬುಧವಾರ ಪ್ರಶ್ನಿಸಿದೆ.

ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಬಿಜೆಪಿ ಮತ್ತು ಆರ್‌ಎಸ್‌ಎಸ್ ಜಾತ್ಯತೀತತೆ ಮತ್ತು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿರುವುದರಿಂದ ಸಂವಿಧಾನ ಬದಲಿಸುವ ಅವಕಾಶ ಪಡೆಯಲು 400ಕ್ಕೂ ಹೆಚ್ಚು ಸ್ಥಾನ ಗಳಿಸುವ ಬಗ್ಗೆ ಮಾತನಾಡುತ್ತಿವೆ' ಎಂದು ಆರೋಪಿಸಿದರು.

ತಮ್ಮ ಆರೋಪಕ್ಕೆ ಪೂರಕವಾಗಿ ಜೈರಾಮ್ ರಮೇಶ್ ಅವರು ಆರ್‌ಎಸ್‌ಎಸ್ ಮುಖವಾಣಿ 'ಆರ್ಗನೈಸರ್'ನಲ್ಲಿ ಪ್ರಕಟವಾಗಿದ್ದ ಲೇಖನ ಸೇರಿದಂತೆ ಮನುಸ್ಮೃತಿ, ಆರ್‌ಎಸ್‌ಎಸ್ ಹೇಳಿಕೆಗಳನ್ನು ಉಲ್ಲೇಖಿಸಿದ್ದಾರೆ. ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳ ಮೀಸಲಾತಿಯ ಶೇ 50ರ ಮಿತಿಯನ್ನು ಹೆಚ್ಚಿಸಲು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಗ್ಯಾರಂಟಿ ನೀಡಲಾಗಿದೆ ಎಂದು ಹೇಳಿದರು.


ರೋಡ್ ಶೋ
ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಅಸ್ಸಾಂನ ಧುಬ್ರಿ ಜಿಲ್ಲೆಯಲ್ಲಿ ಪಕ್ಷದ ಅಭ್ಯರ್ಥಿಯ ಪರ ರ‍್ಯಾಲಿ ನಡೆಸಿದರು –ಪಿಟಿಐ ಚಿತ್ರ

'10 ವರ್ಷದಲ್ಲಿ ಜಗತ್ತಿನ ಶ್ರೀಮಂತ ಪಕ್ಷವಾದ ಬಿಜೆಪಿ'

ಧುಬ್ರಿ (ಪಿಟಿಐ): ಅಸ್ಸಾಂನಲ್ಲಿ ಮಾಫಿಯಾ ರಾಜ್ ಜಾರಿಯಲ್ಲಿದ್ದು, ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಹಲವು ಹಗರಣಗಳಲ್ಲಿ ಭಾಗಿಯಾಗಿದ್ದಾರೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಬುಧವಾರ ಆರೋಪಿಸಿದ್ದಾರೆ.

ಧುಬ್ರಿಯಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ತೆಲಂಗಾಣದಲ್ಲಿ ಬಿಜೆಪಿ ಮತ್ತು ಅಸಾದುದ್ದೀನ್ ಒವೈಸಿ ನಡುವೆ ಇರುವಂತೆ ಇಲ್ಲಿ ಎಐಯುಡಿಎಫ್ ಜತೆ ಗುಪ್ತ ಒಪ್ಪಂದ ಇದ್ದು, ಅವರ ಗುರಿ ಕಾಂಗ್ರೆಸ್ ಸೋಲಿಸುವುದಾಗಿದೆ' ಎಂದು ಅಭಿಪ್ರಾಯಪಟ್ಟರು.

'ಪ್ರಧಾನಿ ಮೋದಿ ಅವರು ಪ್ರಜ್ವಲ್ ರೇವಣ್ಣ ಪರವಾಗಿ ಮತ ಯಾಚನೆ ಮಾಡಿದರು ಮತ್ತು ವಿದೇಶಕ್ಕೆ ಪಲಾಯನ ಮಾಡುವುದನ್ನು ತಡೆಯಲಿಲ್ಲ' ಎಂದು ಆರೋಪಿಸಿದರು.

ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದಂತೆ ವಾಗ್ದಾಳಿ ನಡೆಸಿದ ಅವರು, 'ಬಿಜೆಪಿಯು ಕೇವಲ 10 ವರ್ಷಗಳಲ್ಲಿ ಜಗತ್ತಿನ ಅತ್ಯಂತ ಶ್ರೀಮಂತ ರಾಜಕೀಯ ಪಕ್ಷವಾಯಿತು. ಆದರೆ, ಕಾಂಗ್ರೆಸ್ 70 ವರ್ಷಗಳಲ್ಲಿ ಅಷ್ಟು ಗಳಿಸಲಿಲ್ಲ' ಎಂದು ಹೇಳಿದರು.

ಗುಜರಾತ್: ಸುನೀತಾ ರೋಡ್ ಶೋ ಇಂದು

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಪತ್ನಿ ಸುನೀತಾ ಕೇಜ್ರಿವಾಲ್ ಅವರು ಇದೇ 2ರಂದು ಗುಜರಾತ್‌ನಲ್ಲಿ ಎಎಪಿ ಅಭ್ಯರ್ಥಿಗಳ ಪರವಾಗಿ ಚುನಾವಣಾ ಪ್ರಚಾರ ನಡೆಸುವರು ಎಂದು ಪಕ್ಷದ ಮೂಲಗಳು ಬುಧವಾರ ತಿಳಿಸಿವೆ.

'ಇಂಡಿಯಾ' ಒಕ್ಕೂಟದ ಜೊತೆಗಿರುವ ಎಎಪಿಯು ಗುಜರಾತ್‌ನ ಭರೂಚ್ ಮತ್ತು ಭಾವನಗರದಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

ಅಭ್ಯರ್ಥಿಗಳ ಪರವಾಗಿ ಹಮ್ಮಿಕೊಳ್ಳುವ ರೋಡ್ ಶೋಗಳಲ್ಲಿ ಸುನಿತಾ ಅವರು ಪಾಲ್ಗೊಳ್ಳುವರು ಎಂದೂ ಮೂಲಗಳು ಹೇಳಿವೆ.

400 ಸ್ಥಾನಗಳಲ್ಲಿ ಸ್ಪರ್ಧಿಸದ ಬಿಜೆಪಿ ಅಷ್ಟು ಸ್ಥಾನ ಗೆಲ್ಲುವುದಾದರೂ ಹೇಗೆ: ಕೀರ್ತಿ ಆಜಾದ್

'ಹಿಂದೂಗಳಿಗೆ ಅಪಾಯ ಎದುರಾಗಿದ್ದು ಹೇಗೆ?'

ಕೋಲ್ಕತ್ತ (ಪಿಟಿಐ): ಬಿಜೆಪಿಯ 'ಹಿಂದೂ ರಾಷ್ಟ್ರೀಯತೆ'ಯನ್ನು ಟೀಕಿಸಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಅಭ್ಯರ್ಥಿ ಹಾಗೂ ಭಾರತದ ಮಾಜಿ ಕ್ರಿಕೆಟ್ ಆಟಗಾರ ಕೀರ್ತಿ ಆಜಾದ್, ಹತ್ತು ವರ್ಷಗಳ ಆಡಳಿತದ ನಂತರವೂ ಬಿಜೆಪಿ 'ಹಿಂದೂಗಳು ಅಪಾಯದಲ್ಲಿದ್ದಾರೆ' ಎನ್ನುವ ಸಂಕಥನವನ್ನು ಬಳಸುತ್ತಿದ್ದರೆ, ಇದು ಆ ಪಕ್ಷ ಮತ್ತೆ ಅಧಿಕಾರಕ್ಕೆ ಬರಬೇಕೇ ಎನ್ನುವ ಅನುಮಾನ ಮೂಡಿಸುತ್ತದೆ ಎಂದು ಹೇಳಿದ್ದಾರೆ.

ಪಿಟಿಐ ಜೊತೆಗಿನ ಸಂದರ್ಶನದಲ್ಲಿ ಮಾತನಾಡಿದ ಅವರು, 'ಮೊಘಲರ ಆಡಳಿತದಲ್ಲಿ ಹಿಂದೂಗಳಿಗೆ ಬೆದರಿಕೆ ಇರಲಿಲ್ಲ. ಬ್ರಿಟಿಷರ ಕಾಲದಲ್ಲಿಯೂ ಅವರಿಗೆ ಗಂಡಾಂತರ ಇರಲಿಲ್ಲ. ಸ್ವಾತಂತ್ರ್ಯಾನಂತರದ ವಿವಿಧ ಸರ್ಕಾರಗಳ ಆಳ್ವಿಕೆಯಲ್ಲಿಯೂ ಅವರು ಯಾವುದೇ ಅಪಾಯ ಎದುರಿಸಲಿಲ್ಲ. ಆದರೆ, ಹಿಂದೂ ರಾಷ್ಟ್ರೀಯ ಪಕ್ಷ 10 ವರ್ಷಗಳಿಂದ ಆಡಳಿತ ನಡೆಸುತ್ತಿರುವಾಗ ಹಿಂದೂಗಳಿಗೆ ದಿಢೀರ್ ಅಪಾಯ ಎದುರಾಗಿದ್ದು ಹೇಗೆ' ಎಂದು ಪ್ರಶ್ನಿಸಿದರು.

ಹಿಂದೆ ಬಿಜೆಪಿಯಲ್ಲಿದ್ದು ನಂತರ ಅದನ್ನು ತ್ಯಜಿಸಿ, ಈಗ ಟಿಎಂಸಿಯ ಬರ್ಧಮಾನ್–ದುರ್ಗಾಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿರುವ ಆಜಾದ್, 'ಬಿಜೆಪಿಗೆ ಹೇಳಿಕೊಳ್ಳುವಂಥ ಸಾಧನೆಗಳೇ ಇಲ್ಲದಿರುವುದರಿಂದ ಚುನಾವಣೆಯಲ್ಲಿ ಕೋಮುವಾದವನ್ನು ಉದ್ದೀಪಿಸಲು ಅದು ಯುಸಿಸಿ ಅನ್ನು ಒಂದು ತಂತ್ರವನ್ನಾಗಿಬಳಸುತ್ತಿದೆ'ಎಂದುಆರೋಪಿಸಿದರು.

'ವಿಭಿನ್ನ ಸಮುದಾಯಗಳ, ಹಿನ್ನೆಲೆಯ ಮತ್ತು ಧರ್ಮಗಳ ಜನ ಇಲ್ಲಿದ್ದಾರೆ. ನೀವು ದೇಶದ ಯಾವುದೇ ಭಾಗಕ್ಕೆ ಹೋದರೂ, ವಿಭಿನ್ನವಾಗಿ ಹಬ್ಬಗಳನ್ನು ಆಚರಿಸುವುದನ್ನು ನೋಡುವಿರಿ' ಎಂದ ಅವರು, 'ಯುಸಿಸಿ ಜರ್ಮನಿಯಂಥ ಒಂದೇ ಜನಾಂಗ ಇರುವ ದೇಶಗಳಿಗೆ ಸೂಕ್ತ' ಎಂದು ಅಭಿಪ್ರಾಯಪಟ್ಟರು.

'ಕೆಲವರು 'ಇಂಡಿಯಾ' ಕೂಟದಿಂದ ಹೊರನಡೆದಿರಬಹುದು. ಆದರೆ, ಬಿಜೆಪಿ 200 ಸ್ಥಾನ ಪಡೆಯಲು ವಿಫಲವಾದರೆ, ನಿತೀಶ್ ಕುಮಾರ್ ಅವರಂಥ ನಾಯಕರು ಮತ್ತೆ ವಾಪಸ್ ಬರುತ್ತಾರೆ. ನಾವು ಇದನ್ನು ಹಿಂದೆ ನೋಡಿದ್ದೇವೆ. ಅದು ಮತ್ತೆ ಘಟಿಸುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಬಿಜೆಪಿ ಇತರೆ ಪಕ್ಷಗಳಿಂದ ಅಭ್ಯರ್ಥಿಗಳನ್ನು ಎರವಲು ಪಡೆದಿದೆ. 400 ಸ್ಥಾನಗಳನ್ನು ದಾಟುವುದಾಗಿ ಆ ಪಕ್ಷದವರು ಹೇಳುತ್ತಿದ್ದಾರೆ. ಅಚ್ಚರಿಯ ವಿಚಾರವೇನೆಂದರೆ, ಅಷ್ಟು ಕ್ಷೇತ್ರಗಳಲ್ಲಿ ಅವರು ಸ್ಪರ್ಧಿಸಿಯೇ ಇಲ್ಲ' ಎಂದು ಲೇವಡಿ ಮಾಡಿದರು.

'ವಿಶ್ವಕಪ್ ಗೆದ್ದ ತಂಡದಲ್ಲಿ ಎಲ್ಲರೂ ಇದ್ದರು'



ಕೀರ್ತಿ ಆಜಾದ್

1983ರಲ್ಲಿ ಕ್ರಿಕೆಟ್ ವಿಶ್ವಕಪ್ ಗೆದ್ದ ಭಾರತ ತಂಡದ ಭಾಗವಾಗಿದ್ದ ಕೀರ್ತಿ ಆಜಾದ್, ಕೋಮು ಸಾಮರಸ್ಯವೇ ಆಗ ತಂಡದ ಬೆನ್ನೆಲುಬಾಗಿತ್ತು ಎಂದು ಅಭಿಪ್ರಾಯಪಟ್ಟರು.

'ನಾವು ಕಪ್ ಗೆದ್ದಾಗ, ತಂಡದಲ್ಲಿ ಹಿಂದೂ ಆಟಗಾರರಿದ್ದರು, ಮುಸ್ಲಿಂ ಆಗಿದ್ದ ಸೈಯದ್ ಕಿರ್ಮಾನಿ, ಸಿಖ್ ಆಗಿದ್ದ ಬಲ್ವಿಂದರ್ ಸಿಂಗ್ ಸಂಧು ಮತ್ತು ಕ್ರಿಶ್ಚಿಯನ್ ಆಗಿದ್ದ ರೋಜರ್ ಬಿನ್ನಿ ಇದ್ದರು. ನಾವೆಲ್ಲ ಒಟ್ಟಿಗೇ ಹೋರಾಡಿದೆವು, ಭಾರತಕ್ಕೆ ಮೊದಲ ವಿಶ್ವಕಪ್ ಗೆದ್ದೆವು. ಈ ಎಲ್ಲ ಸಮುದಾಯಗಳು ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಿದವು. ಬಿಜೆಪಿ ನೋಡಿದರೆ, ಹಿಂದೂಗಳು ಬೆದರಿಕೆ ಎದುರಿಸುತ್ತಿದ್ದಾರೆ ಎನ್ನುತ್ತಿದೆ' ಎಂದು ಹೇಳಿದರು.

ಚುಟುಕು

ಧರ್ಮದ ಆಧಾರದಲ್ಲಿ ದೇಶ ವಿಭಜಿಸಬೇಡಿ: ಫಾರೂಕ್ ಅಬ್ದುಲ್ಲಾ



ರಜೌರಿ/ಜಮ್ಮು (ಪಿಟಿಐ): ಪ್ರಧಾನಿ ಮೋದಿ ಧರ್ಮದ ಆಧಾರದಲ್ಲಿ ದೇಶ ವಿಭಜಿಸಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿರುವ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಅಧ್ಯಕ್ಷ ಫಾರೂಕ್ ಅಬ್ದುಲ್ಲಾ, ಮುಸ್ಲಿಮರು ಯಾರ ಹಕ್ಕುಗಳನ್ನೂ ಕಸಿದುಕೊಳ್ಳುವುದಿಲ್ಲ ಎಂದು ಹೇಳಿದರು.

'ಧರ್ಮದ ಆಧಾರದಲ್ಲಿ ವಿಭಜಿಸುವುದರಿಂದ ಬಿರುಗಾಳಿ ಉಂಟಾಗಿ ದೇಶದ ಅಸ್ತಿತ್ವಕ್ಕೆ ತೊಡಕುಂಟಾಗಲಿದೆ. ಜನರನ್ನು ವಿಭಜಿಸುವುದಕ್ಕಿಂತ ದೇಶವನ್ನು ಒಗ್ಗೂಡಿಸುವ ಬಗ್ಗೆ ಮಾತನಾಡುವುದು ಉತ್ತಮ' ಎಂದು ತಿಳಿಸಿದರು.

ರಜೌರಿ ಜಿಲ್ಲೆಯ ತನಮಂಡಿಯಲ್ಲಿ ಚುನಾವಣೆ ಪ್ರಚಾರ ನಡೆಸಿದ ಅವರು, 'ನಾವು ಮುಸ್ಲಿಮರು, ಅಲ್ಲಾ ನಮಗೆ ಇತರ ಧರ್ಮಗಳನ್ನು ಗೌರವಿಸುವಂತೆ ಹೇಳಿದ್ದಾರೆ' ಎಂದರು.

'ಮುಸ್ಲಿಂ ಪ್ರಾಬಲ್ಯದ ಜಮ್ಮು ಮತ್ತು ಕಾಶ್ಮೀರದ ಜನ 1947ರಲ್ಲಿ ಪಾಕಿಸ್ತಾನದ ಬದಲು ಭಾರತವನ್ನು ಆಯ್ಕೆ ಮಾಡಿಕೊಂಡರು. ಏಕೆಂದರೆ ಹಿಂದೂಗಳು, ಮುಸ್ಲಿಮರು, ಸಿಖ್ಖರು, ಬೌದ್ಧರು ಮತ್ತು ಕ್ರಿಶ್ಚಿಯನ್ನರು ಎಲ್ಲರೂ ಭಾರತದ ಸಂವಿಧಾನದ ಪ್ರಕಾರ ಸಮಾನರು' ಎಂದು ಅಭಿಪ್ರಾಯಪಟ್ಟರು.

ಜಿಗಿ–ನೆಗೆದಾಟ

ಪಂಜಾಬ್: ಮಾಜಿ ಶಾಸಕ ಎಎಪಿಗೆ

ಚಂಡೀಗಢ (ಪಿಟಿಐ): ಕಾಂಗ್ರೆಸ್ ತೊರೆದಿದ್ದ ಮಾಜಿ ಶಾಸಕ ದಲ್ವೀರ್ ಸಿಂಗ್ ಗೋಲ್ಡಿ ಅವರು ಬುಧವಾರ ಎಎಪಿಗೆ ಸೇರ್ಪಡೆಗೊಂಡರು.

ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು ದಲ್ವೀರ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಸಂಗ್ರೂರ್ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ನೀಡದ್ದಕ್ಕೆ ದಲ್ವೀರ್ ಅವರು ಕಾಂಗ್ರೆಸ್ ತೊರೆದಿದ್ದರು.


ಸಂಗ್ರೂರ್ ಕ್ಷೇತ್ರದಿಂದ ಸುಖಪಾಲ್ ಖೈರಾ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ.

ಎಂಥಾ ಮಾತು!



ಸಂವಿಧಾನದ 370 ವಿಧಿಯ ಅಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿರುವುದಕ್ಕೆ ಹಾಗೂ ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿರುವುದಕ್ಕೆ, ಈ ಚುನಾವಣೆಯಲ್ಲಿ ಜನರು ಕೇಂದ್ರ ಸರ್ಕಾರಕ್ಕೆ ಉತ್ತರ ನೀಡಲಿದ್ದಾರೆ. ಮೇ 7ರಂದು ನಡೆಯಬೇಕಿದ್ದ ಅನಂತನಾಗ್–ರಜೌರಿ ಕ್ಷೇತ್ರದ ಮತದಾನವನ್ನು ಚುನಾವಣಾ ಆಯೋಗವು ಮೇ 25ಕ್ಕೆ ಮುಂದೂಡುವ ಮೂಲಕ ತೊಂದರೆ ಉಂಟುಮಾಡಿದೆ

ಮೆಹಬೂಬಾ ಮುಫ್ತಿ, ಪಿಡಿಪಿ ಅಧ್ಯಕ್ಷೆ



ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಬೇಕು ಎಂದು ಮಹಾತ್ಮ ಗಾಂಧಿ ಹೇಳಿದ್ದರು. ಅವರ ಇಚ್ಛೆಯನ್ನು ದೇಶದ ಜನರು ಪೂರ್ಣಗೊಳಿಸಲಿದ್ದಾರೆ. ದೇಶದ ರಾಜಕೀಯದಲ್ಲಿ ಕಾಂಗ್ರೆಸ್ ಇಲ್ಲವಾಗಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ದೇಶವು ಮುನ್ನಡೆಯುತ್ತಿದೆ. ಇಂದು ಭಾರತವು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಮಾತನಾಡುತ್ತಿದೆ ಮತ್ತು ಜಗತ್ತು ಅದನ್ನು ತಲ್ಲೀನತೆಯಿಂದ ಕೇಳುತ್ತಿದೆ

ರಾಜನಾಥ್ ಸಿಂಗ್, ಕೇಂದ್ರ ರಕ್ಷಣಾ ಸಚಿವ

ಕ್ಷೇತ್ರ ಮಹಾತ್ಮೆ



ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಅವರ ಕುಟುಂಬದ ಪ್ರಾಬಲ್ಯವಿರುವ ಮೈನ್‌ಪುರಿ ಲೋಕಸಭಾ ಕ್ಷೇತ್ರದಿಂದ ಈ ಬಾರಿಯೂ ಅವರ ಸೊಸೆ ಡಿಂಪಲ್ ಯಾದವ್ ಅವರು ಸಮಾಜವಾದಿ ಪಕ್ಷದಿಂದ (ಎಸ್‌ಪಿ) ಕಣಕ್ಕಿಳಿದಿದ್ದಾರೆ. 2019ರ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಮುಲಾಯಂ ಅವರು ಗೆದ್ದಿದ್ದರು. ಅವರ ನಿಧನಾನಂತರ 2022ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಡಿಂಪಲ್ ಅವರು 2,88,461 ಮತಗಳ ಅಂತರದಿಂದ ಬಿಜೆಪಿಯ ರಘುರಾಜ್ ಸಿಂಗ್ ಶಾಕ್ಯಾ ಅವರನ್ನು ಸೋಲಿಸಿದ್ದರು. 2019ರ ಲೋಕಸಭಾ ಚುನಾವಣೆಯ ವೇಳೆ ಉತ್ತರ ಪ್ರದೇಶದಾದ್ಯಂತ ಬಿಜೆಪಿ ಪರ ಅಲೆ ಇದ್ದಾಗಲೂ ಮೈನ್‌ಪುರಿ ಕ್ಷೇತ್ರದ ಜನರು ಮುಲಾಯಂ ಅವರ ಕೈಬಿಟ್ಟಿರಲಿಲ್ಲ. ಡಿಂಪಲ್ ಅವರ ಗೆಲುವಿನ ಓಟಕ್ಕೆ ಕಡಿವಾಣ ಹಾಕಲು ಬಿಜೆಪಿಯು ಈ ಸಲ ರಾಜ್ಯ ಸಚಿವ ಜೈವೀರ್ ಸಿಂಗ್ ಅವರನ್ನು ಅಖಾಡಕ್ಕಿಳಿಸಿದೆ. ಬಿಎಸ್‌ಪಿಯು ಶಿವಪ್ರಸಾದ್ ಯಾದವ್ ಅವರನ್ನು ಸ್ಪರ್ಧಿಯಾಗಿಸಿದೆ. ಕಳೆದ ಚುನಾವಣೆಯಲ್ಲಿ ಬಿಎಸ್‌ಪಿಯು ಎಸ್‌ಪಿಯ ಜೊತೆಗೆ ಮೈತ್ರಿ ಮಾಡಿಕೊಂಡಿತ್ತು. ಈ ಬಾರಿ ಬಿಎಸ್‌ಪಿಯು ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ಎಸ್‌ಪಿಯ ಮತಗಳು ವಿಭಜನೆಯಾಗುವ ಸಾಧ್ಯತೆ ಇದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಈ ಕ್ಷೇತ್ರವು ಮೂರು ದಶಕಗಳಿಂದಲೂ ಎಸ್‌ಪಿಯ ಕೈವಶದಲ್ಲಿದೆ. ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರ ಪತ್ನಿ ಡಿಂಪಲ್ ಅವರು ಈ ಕ್ಷೇತ್ರದಲ್ಲಿ ಪ್ರಭಾವಿ ನಾಯಕಿಯಾಗಿದ್ದಾರೆ. ಎಸ್‌ಪಿಯು 'ಇಂಡಿಯಾ' ಒಕ್ಕೂಟದ ಜೊತೆಗಿರುವುದು ಅವರ ಗೆಲುವಿನ ವಿಶ್ವಾಸವನ್ನು ಇನ್ನಷ್ಟು ಹೆಚ್ಚಿಸಿದೆ.

ಮುಖಾಮುಖಿ

ರತ್ನಗಿರಿ–ಸಿಂಧುದುರ್ಗ


ನಾರಾಯಣ ರಾಣೆ
(ಬಿಜೆಪಿ)


ವಿನಾಯಕ ರಾವುತ್
(ಶಿವಸೇನಾ ಉದ್ಧವ್ ಠಾಕ್ರೆ ಬಣ)

V/S

ಮಹಾರಾಷ್ಟ್ರದ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ರತ್ನಗಿರಿ–ಸಿಂಧುದುರ್ಗ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯು ಕೇಂದ್ರ ಸಚಿವ ನಾರಾಯಣ ರಾಣೆ ಅವರನ್ನು ಅಖಾಡಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ನಾರಾಯಣ ರಾಣೆ ಅವರ ಪುತ್ರ ನಿಲೇಶ್ ರಾಣೆ ಅವರು ಮಹಾರಾಷ್ಟ್ರ ಸ್ವಾಭಿಮಾನ ಪಕ್ಷದಿಂದ ಸ್ಪರ್ಧಿಸಿ ಸೋತಿದ್ದರು. ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ನಾರಾಯಣ ರಾಣೆ ಅವರು ಲೋಕಸಭಾ ಚುನಾವಣೆಗೆ ಇದೇ ಮೊದಲ ಬಾರಿ ಸ್ಪರ್ಧಿಸುತ್ತಿದ್ದಾರೆ. ಬಾಳಾ ಠಾಕ್ರೆ ಅವರ ಶಿವಸೇನಾದ ಮೂಲಕ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿದ್ದ ರಾಣೆ ಅವರು ಹಲವು ವರ್ಷಗಳ ಕಾಲ ಈ ಪಕ್ಷದಲ್ಲಿ ಕಾರ್ಯನಿರ್ವಹಿಸಿದ್ದರು. 2005ರಲ್ಲಿ ಉದ್ಧವ್ ಠಾಕ್ರೆ ಮತ್ತು ಅವರ ನಡುವೆ ಒಡಕು ಮೂಡಿತ್ತು. ಅನಂತರ ಅವರನ್ನು ಶಿವಸೇನಾದಿಂದ ಉಚ್ಚಾಟಿಸಲಾಗಿತ್ತು. ಬಳಿಕ ಅವರು ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದರು. 2017ರಲ್ಲಿ ಮಹಾರಾಷ್ಟ್ರ ಸ್ವಾಭಿಮಾನ ಪಕ್ಷವನ್ನು ಸ್ಥಾಪಿಸಿದ್ದರು. ಅನಂತರ ಅದನ್ನು ಬಿಜೆಪಿ ಜೊತೆಗೆ ವಿಲೀನಗೊಳಿಸಿದ್ದರು.

ರತ್ನಗಿರಿ–ಸಿಂಧುದುರ್ಗ ಲೋಕಸಭಾ ಕ್ಷೇತ್ರದಿಂದ ಕಳೆದೆರಡು ಚುನಾವಣೆಗಳಲ್ಲಿ ಗೆದ್ದಿದ್ದ ವಿನಾಯಕ ರಾವುತ್ ಅವರನ್ನೇ ಶಿವಸೇನಾ ಉದ್ಧವ್ ಠಾಕ್ರೆ ಬಣವು ಈ ಬಾರಿ ಕಣಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ವಿನಾಯಕ ಅವರು 1,78,322 ಮತಗಳ ಅಂತರದಿಂದ ಮಹಾರಾಷ್ಟ್ರ ಸ್ವಾಭಿಮಾನ ಪಕ್ಷದಿಂದ ಸ್ಪರ್ಧಿಸಿದ್ದ ನಿಲೇಶ್ ರಾಣೆ ಅವರನ್ನು ಪರಾಭವಗೊಳಿಸಿದ್ದರು. ಉದ್ಧವ್ ಠಾಕ್ರೆ ಅವರ ಆಪ್ತರಾಗಿರುವ ವಿನಾಯಕ ಅವರು ಈ ಹಿಂದೆ ವಿಲೇಪಾರ್ಲೆ ಕ್ಷೇತ್ರದ ಶಾಸಕರಾಗಿಯೂ ಆಯ್ಕೆಯಾಗಿದ್ದರು. ಮಹಾರಾಷ್ಟ್ರದ ವಿಧಾನ ಪರಿಷತ್ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಶಿವಸೇನಾ ಉದ್ಧವ್ ಠಾಕ್ರೆ ಬಣವು 'ಇಂಡಿಯಾ' ಒಕ್ಕೂಟದ ಜೊತೆಗಿರುವುದು ವಿನಾಯಕ ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ. ಶಿವಸೇನಾವು ಇಬ್ಭಾಗವಾಗಿರುವುದರಿಂದ ಕ್ಷೇತ್ರದ ಜನರು ಯಾರ ಕೈ ಹಿಡಿಯಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ವಾಣಿಜ್ಯ ಸಿಲಿಂಡರ್ ದರ ₹19 ಇಳಿಕೆ



ನವದೆಹಲಿ (ಪಿಟಿಐ): ವಾಣಿಜ್ಯ ಬಳಕೆಯ ಸಿಲಿಂಡರ್ ದರವನ್ನು ಬುಧವಾರ ₹19 ಕಡಿತಗೊಳಿಸಲಾಗಿದ್ದು, 19 ಕೆ.ಜಿ ತೂಕದ ಸಿಲಿಂಡರ್ ದರವು ₹1,745.50 ಆಗಿದೆ.

ಒಂದು ತಿಂಗಳ ಅವಧಿಯಲ್ಲಿ ಎರಡನೇ ಬಾರಿಗೆ ಸಿಲಿಂಡರ್ ಬೆಲೆಯಲ್ಲಿ ಕಡಿತ ಮಾಡಲಾಗಿದೆ. ಫೆಬ್ರುವರಿ 1ರಂದು ₹14 ಹಾಗೂ ಮಾರ್ಚ್ 1ರಂದು ₹25.5 ದರ ಹೆಚ್ಚಿಸಲಾಗಿತ್ತು. ಬಳಿಕ ಏಪ್ರಿಲ್ 1ರಂದು ₹30.5 ದರ ಕಡಿತಗೊಳಿಸಲಾಗಿತ್ತು. ಅಂತರರಾಷ್ಟ್ರೀಯ ಮಟ್ಟದಲ್ಲಿನ ಕಚ್ಚಾ ತೈಲದ ದರ ಹಾಗೂ ವಿದೇಶಿ ವಿನಿಮಯ ದರದ ಆಧಾರದ ಮೇಲೆ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು, ಎಟಿಎಫ್ ಹಾಗೂ ಸಿಲಿಂಡರ್ ಬೆಲೆಯನ್ನು ಪರಿಷ್ಕರಿಸುತ್ತವೆ.


ಆದರೆ, ಅಡುಗೆ ಅನಿಲ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಸದ್ಯ 14.2 ಕೆ.ಜಿ ತೂಕದ ಸಿಲಿಂಡರ್ ದರವು ₹803 ಆಗಿದೆ. ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿಯೂ ಬದಲಾವಣೆ ಆಗಿಲ್ಲ.

ಎಟಿಎಫ್ ದರ ಏರಿಕೆ: ವಿಮಾನಗಳಲ್ಲಿ ಬಳಸುವ ಇಂಧನದ (ಎಟಿಎಫ್) ಬೆಲೆಯನ್ನು ಶೇ 0.7ರಷ್ಟು ಏರಿಕೆ ಮಾಡಲಾಗಿದೆ. ಸದ್ಯ ನವದೆಹಲಿಯಲ್ಲಿ ಪ್ರತಿ ಕಿಲೋ ಲೀಟರ್‌ಗೆ ₹749.25 ದರ ಹೆಚ್ಚಳವಾಗಿದೆ (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್). ಪ್ರತಿ ಕಿಲೋ ಲೀಟರ್ ದರವು ₹1.01 ಲಕ್ಷ ಆಗಿದೆ ಎಂದು ಕಂಪನಿಗಳು ತಿಳಿಸಿವೆ. ಸ್ಥಳೀಯ ತೆರಿಗೆ ಆಧಾರದ ಮೇಲೆ ರಾಜ್ಯಗಳವಾರು ಎಟಿಎಫ್ ಬೆಲೆಯಲ್ಲಿ ವ್ಯತ್ಯಾಸವಾಗಲಿದೆ. ಮುಂಬೈನಲ್ಲಿ ಪ್ರತಿ ಕಿಲೋ ಲೀಟರ್ ದರವು ₹94,466ರಿಂದ ₹95,173ಕ್ಕೆ ಮುಟ್ಟಿದೆ.

ವಿನಿಮಯ ದರ

$ ಡಾಲರ್	83.50
£ ಪೌಂಡ್	104.26
€ ಯುರೊ	89.18
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹470
12 ಕ್ಕೆ	₹65
ಮೈಸೂರು	
100ಕ್ಕೆ	₹475

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹915 (917)
ಸೂರ್ಯಕಾಂತಿ (ರಿಫೈನ್ಡ್)	₹905 (910)
ಪಾಮೊಲಿನ್	₹892 (895)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಕೆ.ಜಿ)	₹333-469
ದ್ವಿತಳಿ (ಬಿ.ವಿ)	₹333-588

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹170
ಗುಡ್ ಲಾಟ್	₹160

(ಪ್ರತಿ ಕೆ.ಜಿಗೆ)

ಏಪ್ರಿಲ್‌ನಲ್ಲಿ ₹2.10 ಲಕ್ಷ ಕೋಟಿ ಸಂಗ್ರಹ • ದೇಶೀಯ ವಹಿವಾಟು, ರಫ್ತು ಏರಿಕೆ

ಜಿಎಸ್‌ಟಿ ಸಂಗ್ರಹ: ಹೊಸ ಮೈಲಿಗಲ್ಲು

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಏಪ್ರಿಲ್‌ನಲ್ಲಿ ₹2.10 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದ್ದು, ಹೊಸ ಮೈಲಿಗಲ್ಲು ಸ್ಥಾಪಿಸಿದೆ.

ದೇಶೀಯ ವಹಿವಾಟು (ಶೇ13.4ರಷ್ಟು) ಮತ್ತು ರಫ್ತು ಪ್ರಮಾಣದಲ್ಲಿನ (ಶೇ8.3ರಷ್ಟು) ಏರಿಕೆಯಿಂದಾಗಿ ಮೊದಲ ಬಾರಿಗೆ ವರಮಾನ ಸಂಗ್ರಹವು ₹2 ಲಕ್ಷ ಕೋಟಿ ದಾಟಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 12.4ರಷ್ಟು ಏರಿಕೆಯಾಗಿದೆ ಎಂದು ಹಣಕಾಸು ಸಚಿವಾಲಯವು ಬುಧವಾರ ತಿಳಿಸಿದೆ.

ತೆರಿಗೆ ಸಂಗ್ರಹದಲ್ಲಿನ ಈ ಏರಿಕೆಯಿಂದಾಗಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಹೊಸ ಸರ್ಕಾರವು, ಜಿಎಸ್‌ಟಿ ಸ್ವರೂಪದಲ್ಲಿ ಮತ್ತಷ್ಟು ಸುಧಾರಣೆ ತರುವ ಬಗ್ಗೆ ನಿರೀಕ್ಷೆಗಳು ಗರಿಗೆದರಿವೆ.

ಮಾರ್ಚ್‌ನಲ್ಲಿ ₹1.78 ಲಕ್ಷ ಕೋಟಿ ಸಂಗ್ರಹವಾಗಿತ್ತು. 2023ರ ಏಪ್ರಿಲ್‌ನಲ್ಲಿ ₹1.87 ಲಕ್ಷ ಕೋಟಿ ಸಂಗ್ರಹವಾಗಿತ್ತು.

ಏಪ್ರಿಲ್‌ನಲ್ಲಿ ಕೇಂದ್ರ ಜಿಎಸ್‌ಟಿ ₹43,846 ಕೋಟಿ ಹಾಗೂ ರಾಜ್ಯ ಜಿಎಸ್‌ಟಿ ₹53,538 ಕೋಟಿ ಸಂಗ್ರಹವಾಗಿದೆ. ಸಮಗ್ರ ಜಿಎಸ್‌ಟಿ ₹99,623 ಕೋಟಿ (ಆಮದು ಸರಕುಗಳ ಮೇಲಿನ ತೆರಿಗೆ ₹37,826 ಕೋಟಿ ಸೇರಿ) ಹಾಗೂ ಪರಿಹಾರ ಸೆಸ್ ₹13,260 ಕೋಟಿ ಸಂಗ್ರಹವಾಗಿದೆ.

'ಸಮಗ್ರ ಜಿಎಸ್‌ಟಿ ವಿತರಣೆಯಲ್ಲಿ ಯಾವುದೇ ರಾಜ್ಯಗಳಿಗೆ ಪಾವತಿಯನ್ನು ಬಾಕಿ ಉಳಿಸಿಕೊಂಡಿಲ್ಲ' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 'ಎಕ್ಸ್‌'ನಲ್ಲಿ ತಿಳಿಸಿದ್ದಾರೆ.


ಮರುಪಾವತಿ ಬಳಿಕ ಏಪ್ರಿಲ್‌ನಲ್ಲಿ ಸಂಗ್ರಹವಾಗಿರುವ ಒಟ್ಟು ಜಿಎಸ್‌ಟಿ ₹1.92 ಲಕ್ಷ ಕೋಟಿ ಆಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 15.5ರಷ್ಟು ಏರಿಕೆಯಾಗಿದೆ.


'ಜಿಎಸ್‌ಟಿ ಸಂಗ್ರಹದಲ್ಲಿ ಹೊಸ ದಾಖಲೆ ಸೃಷ್ಟಿಯಾಗಿರುವುದು ಆರ್ಥಿಕತೆಯ ಸದೃಢತೆಗೆ ಕನ್ನಡಿ ಹಿಡಿದಿದೆ. ಸಚಿವಾಲಯವು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದರಿಂದ ಈ ಸಾಧನೆಯಾಗಿದೆ' ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

'ಎಟಿಎಫ್ ಮತ್ತು ನೈಸರ್ಗಿಕ ಅನಿಲವನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ಬಗ್ಗೆಯೂ ಹೊಸ ಸರ್ಕಾರ ನಿರ್ಧರಿಸಬಹುದಾಗಿದೆ' ಎಂದು ಹೇಳಿದ್ದಾರೆ.

'2017ರ ಜುಲೈನಲ್ಲಿ ಸರ್ಕಾರವು ಜಿಎಸ್‌ಟಿಯನ್ನು ಜಾರಿಗೊಳಿಸಿತು. ಆ ವೇಳೆ ಮಾಸಿಕ ವರಮಾನ ಸಂಗ್ರಹವು ₹90 ಲಕ್ಷವಿತ್ತು. ಈಗ ₹2 ಲಕ್ಷ ಕೋಟಿ ದಾಟಿದೆ. ವಾರ್ಷಿಕ ಸಂಗ್ರಹವು ಶೇ13ರಷ್ಟು ಏರಿಕೆಯಾಗಿದೆ' ಎಂದು ಹೇಳಿದ್ದಾರೆ.

'ಈ ಏರಿಕೆಯಿಂದಾಗಿ ಹೊಸ ಸರ್ಕಾರವು ಜಿಎಸ್‌ಟಿ ಸುಧಾರಣೆಗೆ ಮುಂದಾಗುವ ನಿರೀಕ್ಷೆಯಿದೆ' ಎಂದು ಪಿಡಬ್ಲ್ಯುಸಿ ಇಂಡಿಯಾದ ಪಾಲುದಾರ ಪ್ರತೀಕ್ ಜೈನ್ ಹೇಳಿದ್ದಾರೆ.





ಕರ್ನಾಟಕಕ್ಕೆ 2ನೇ ಸ್ಥಾನ

ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕವು ಎರಡನೇ ಸ್ಥಾನವನ್ನು ಕಾಯ್ದುಕೊಂಡಿದೆ. ಏಪ್ರಿಲ್‌ನಲ್ಲಿ ₹15,978 ಕೋಟಿ ವರಮಾನ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ತೆರಿಗೆ ಸಂಗ್ರಹದಲ್ಲಿ ಶೇ 9ರಷ್ಟು ಏರಿಕೆಯಾಗಿದೆ.

ಮಹಾರಾಷ್ಟ್ರದಲ್ಲಿ ₹37,671 ಕೋಟಿ ಸಂಗ್ರಹವಾಗಿದ್ದು, ಮೊದಲ ಸ್ಥಾನದಲ್ಲಿದೆ.

ಕದನ ವಿರಾಮಕ್ಕೆ ಸಕಾಲ: ಬ್ಲಿಂಕನ್

ಟೆಲ್ ಅವಿವ್ (ಇಸ್ರೇಲ್) (ಎಪಿ): ಇಸ್ರೇಲ್–ಹಮಾಸ್ ನಡುವೆ ಕದನ ವಿರಾಮ ಘೋಷಿಸುವ ಸಂಬಂಧ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಬುಧವಾರವೂ ಇಸ್ರೇಲ್ ನಾಯಕರೊಂದಿಗೆ ಸಭೆ ನಡೆಸಿದರು.

ಈ ವೇಳೆ ಅವರು, ಏಳು ತಿಂಗಳಿನಿಂದ ನಡೆಯುತ್ತಿರುವ ಯುದ್ಧಕ್ಕೆ ವಿರಾಮ ಘೋಷಿಸಲು ಮತ್ತು ಒತ್ತೆಯಾಳುಗಳ ಬಿಡುಗಡೆಗೆ ಇದು ಸಕಾಲ ಎಂದು ಒತ್ತಿ ಹೇಳಿದರು.

ಸದ್ಯ, ಕದನ ವಿರಾಮ ಕುರಿತು ಗಂಭೀರ ಮಾತುಕತೆ ನಡೆಯುತ್ತಿದ್ದು, ಯುದ್ಧ ಅಂತ್ಯವಾಗಬೇಕೇ ಅಥವಾ ಇಲ್ಲವೇ ಎಂಬ ಬಗ್ಗೆ ಒಮ್ಮತದ ಅಭಿಪ್ರಾಯ ವ್ಯಕ್ತವಾಗುತ್ತಿಲ್ಲ. ಒಪ್ಪಂದದಿಂದ ಗಾಜಾಕ್ಕೆ ಆಹಾರ, ಔಷಧ ಮತ್ತು ನೀರು ಲಭ್ಯವಾಗುತ್ತದೆ ಎಂದು ಹೇಳಿದರು.

ಹೊಸ ಮಾದರಿ ವಾಹನ ಬಿಡುಗಡೆಯಿಂದ ವಹಿವಾಟು ಹೆಚ್ಚಳ

ಸಗಟು ವಾಹನ ಮಾರಾಟ ಏರಿಕೆ



ನವದೆಹಲಿ (ಪಿಟಿಐ): ಟೊಯೊಟ, ಟಿವಿಎಸ್, ಟಾಟಾ ಮೋಟರ್ಸ್, ಹುಂಡೈ, ಮಾರುತಿ ಸುಜುಕಿ ವಾಹನಗಳ ಸಗಟು ಮಾರಾಟವು ಏಪ್ರಿಲ್‌ನಲ್ಲಿ ಏರಿಕೆಯಾಗಿದೆ. ಆದರೆ, ವಿಇಸಿವಿ ಮತ್ತು ಎಂ.ಜಿ ಮೋಟರ್ ವಾಹನಗಳ ಮಾರಾಟದಲ್ಲಿ ಇಳಿಕೆಯಾಗಿದೆ.

ಮಾರುಕಟ್ಟೆಗೆ ಹೊಸ ಮಾದರಿಯ ವಾಹನಗಳ ಬಿಡುಗಡೆ ಹಾಗೂ ಗ್ರಾಹಕರ ಬೇಡಿಕೆಗೆ ತಕ್ಕಂತೆ ವಾಹನಗಳನ್ನು ತಯಾರಿಸುತ್ತಿರುವುದೇ ಮಾರಾಟದ ವಹಿವಾಟು ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಕಂಪನಿಗಳು ತಿಳಿಸಿವೆ.

ಟೊಯೊಟ ಮಾರಾಟ ಶೇ32ರಷ್ಟು ಹೆಚ್ಚಳ: ಟೊಯೊಟ ಕಿರ್ಲೋಸ್ಕರ್ ಮೋಟರ್‌ನ 20,494 ವಾಹನಗಳು ಮಾರಾಟವಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 15,510 ಮಾರಾಟವಾಗಿದ್ದವು. ಇದಕ್ಕೆ ಹೋಲಿಸಿದರೆ ಶೇ32ರಷ್ಟು ಏರಿಕೆಯಾಗಿದೆ. ದೇಶೀಯವಾಗಿ 18,700 ಮಾರಾಟವಾಗಿದ್ದರೆ, 1,794 ವಾಹನಗಳು ರಫ್ತಾಗಿವೆ.

3.83 ಲಕ್ಷ ಟಿವಿಎಸ್ ಮಾರಾಟ: ಟಿವಿಎಸ್ ಮೋಟರ್ ವಾಹನಗಳ ಮಾರಾಟದಲ್ಲಿ ಶೇ 25ರಷ್ಟು ಏರಿಕೆ ಆಗಿದೆ. 3.83 ಲಕ್ಷ ವಾಹನಗಳು ಮಾರಾಟವಾಗಿವೆ. ದ್ವಿಚಕ್ರ ವಾಹನ ವಿಭಾಗದಲ್ಲಿ 3.74 ಲಕ್ಷ ಮಾರಾಟವಾಗಿವೆ. ತ್ರಿಚಕ್ರ ವಾಹನ ಮಾರಾಟವು 11,438ರಿಂದ 9,023ಕ್ಕೆ ಇಳಿದಿದೆ.

ಟಾಟಾ ಮೋಟರ್ಸ್: ಟಾಟಾ ಮೋಟರ್ಸ್‌ನ 77,521 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 69,599 ಮಾರಾಟವಾಗಿದ್ದವು. ಇದಕ್ಕೆ ಹೋಲಿಸಿದರೆ ಮಾರಾಟದಲ್ಲಿ ಶೇ 11.5ರಷ್ಟು ಏರಿಕೆ ಆಗಿದೆ. ಪ್ರಯಾಣಿಕ ವಾಹನಗಳ ಮಾರಾಟದಲ್ಲಿ ಶೇ 2ರಷ್ಟು ಏರಿಕೆ ಆಗಿದ್ದು, 47,983 ಮಾರಾಟವಾಗಿವೆ. ವಾಣಿಜ್ಯ ವಾಹನ ಮಾರಾಟದಲ್ಲಿ ಶೇ31ರಷ್ಟು ಹೆಚ್ಚಳವಾಗಿದೆ. ಒಟ್ಟು 29,538 ವಾಹನಗಳು ಮಾರಾಟವಾಗಿವೆ.

ಹುಂಡೈ ಮಾರಾಟ ಏರಿಕೆ: ಹುಂಡೈ ಮೋಟರ್ ಇಂಡಿಯಾ ವಾಹನಗಳ ಮಾರಾಟದಲ್ಲಿ ಶೇ9.5ರಷ್ಟು ಹೆಚ್ಚಳವಾಗಿದ್ದು, 63,701 ಮಾರಾಟವಾಗಿವೆ. ದೇಶೀಯವಾಗಿ 50,201 ವಾಹನ ಮಾರಾಟವಾಗಿವೆ.

ಮಾರುತಿ ಸುಜುಕಿ: ಮಾರುತಿ ಸುಜುಕಿ ಇಂಡಿಯಾದ 1.68 ಲಕ್ಷ ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 1.60 ಲಕ್ಷ ಮಾರಾಟವಾಗಿದ್ದವು. ಇದಕ್ಕೆ ಹೋಲಿಸಿದರೆ ಶೇ 5ರಷ್ಟು ಏರಿಕೆಯಾಗಿವೆ.

ವಿಇಸಿವಿ ಮಾರಾಟ ಶೇ18ರಷ್ಟು ಕುಸಿತ: ಐಷರ್ ಮೋಟರ್ಸ್‌ನ ಅಂಗ ಸಂಸ್ಥೆಯಾದ ವಿಇಸಿವಿ ವಾಹನಗಳ ಮಾರಾಟವು ಶೇ 18ರಷ್ಟು ಕುಸಿತವಾಗಿದೆ. ವಾಣಿಜ್ಯ ವಾಹನಗಳ ಮಾರಾಟದಲ್ಲಿ ಏರಿಕೆಯಾಗಿದೆ.

ಎಂ.ಜಿ ಮೋಟರ್ ಇಂಡಿಯಾದ ವಾಹನಗಳ ಚಿಲ್ಲರೆ ಮಾರಾಟವು ಶೇ1.45ರಷ್ಟು ಕುಸಿದಿದ್ದು, 4,485 ವಾಹನಗಳು ಮಾರಾಟವಾಗಿವೆ.

ವಿಮಾನ ಸಾಗಣೆ ದರ ದುಬಾರಿ: ಮಾವು ರಫ್ತಿಗೆ ಅಡ್ಡಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ (ಜುಲೈನಿಂದ ಜೂನ್‌ವರೆಗೆ) ಮಾವಿನ ಇಳುವರಿ ಕುಂಠಿತವಾಗಿರುವ ಬೆನ್ನಲ್ಲೇ, ಕೆಂಪು ಸಮುದ್ರದ ಬಿಕ್ಕಟ್ಟು ಮಾವಿನ ಹಣ್ಣುಗಳ ರಫ್ತಿಗೆ ಅಡ್ಡಿಯಾಗಿದೆ.

ಬಿಕ್ಕಟ್ಟಿನಿಂದಾಗಿ ಹಡಗಿನ ಮೂಲಕ ವಿದೇಶಗಳಿಗೆ ಮಾವಿನ ಹಣ್ಣುಗಳನ್ನು ರವಾನೆ ಮಾಡಲು ಸಾಧ್ಯವಾಗುತ್ತಿಲ್ಲ. ವಿಮಾನದ ಮೂಲಕವೇ ರವಾನಿಸುವುದು ಅನಿವಾರ್ಯವಾಗಿದೆ. ಆದರೆ, ವಿಮಾನ ಸಾಗಣೆ ದರ ಏರಿಕೆಯಾಗಿದ್ದು, ರಫ್ತುದಾರರು ಮತ್ತು ಬೆಳೆಗಾರರನ್ನು ಅಡಕತ್ತರಿಗೆ ಸಿಲುಕಿಸಿದೆ.

ಯೂರೋಪ್ ದೇಶಗಳಿಗೆ ಭಾರತದ ರಫ್ತು ಹಾಗೂ ಆಮದು ವಹಿವಾಟು ಕೆಂಪು ಸಮುದ್ರದ ಮಾರ್ಗವಾಗಿಯೇ ನಡೆಯುತ್ತಿದೆ. ಆದರೆ, ಅಲ್ಲಿ ತಲೆದೋರಿರುವ ಬಿಕ್ಕಟ್ಟು ಇನ್ನೂ ಶಮನಗೊಂಡಿಲ್ಲ. ಇದರಿಂದ ಸರಕು ಸಾಗಣೆ ಹಡಗುಗಳ ಸಂಚಾರಕ್ಕೆ ಅಡ್ಡಿಯಾಗಿದೆ.

'ವಿಮಾನದ ಮೂಲಕ ವಿದೇಶಗಳಿಗೆ ಮಾವಿನ ಹಣ್ಣುಗಳ ರವಾನೆಗೆ ಕಳೆದ ವರ್ಷ ಪ್ರತಿ ಕೆ.ಜಿಗೆ ₹250 ಸಾಗಣೆ ದರ ಇತ್ತು. ಈ ವರ್ಷ ₹450ರಿಂದ ₹500ಕ್ಕೆ ಮುಟ್ಟಿದೆ. ಇದರಿಂದ ರಫ್ತುದಾರರು ಹಿಂದೇಟು ಹಾಕುತ್ತಿದ್ದಾರೆ' ಎಂದು ಮಾವು ಬೆಳೆಗಾರರು ಹೇಳುತ್ತಾರೆ.

ಮಾವಿನ ಹಣ್ಣುಗಳನ್ನು ದೀರ್ಘಕಾಲದವರೆಗೆ ಸಂಗ್ರಹಿಸಿಡಲು ಆಗುವುದಿಲ್ಲ. ಕೊಯ್ಲು ಮಾಡಿದ 8ರಿಂದ 10 ವಾರದೊಳಗೆ ರಫ್ತು ಮಾಡಬೇಕಿದೆ. ಸಾಗಣೆ ದರ ದುಬಾರಿಯಾಗಿರುವುದರಿಂದ ರಫ್ತುದಾರರು, ಮಾವಿನ ಹಣ್ಣುಗಳನ್ನು ಬೆಳೆಗಾರರಿಗೆ ಹಿಂದಿರುಗಿಸುತ್ತಿದ್ದಾರೆ ಎಂದು ವಿವರಿಸುತ್ತಾರೆ.

ಕೆಲವು ರೈತರು ಗುಣಮಟ್ಟದ ಮಾವು ಬೆಳೆದಿದ್ದು, ಇದಕ್ಕೆ ಸಾಕಷ್ಟು ಹಣ ಖರ್ಚು ಮಾಡಿದ್ದಾರೆ. ಸ್ಥಳೀಯ ಮಾರುಕಟ್ಟೆಯಲ್ಲಿ ಈ ಹಣ್ಣುಗಳನ್ನು ಮಾರಾಟ ಮಾಡಿದರೆ ಅವರಿಗೆ ಲಾಭ ಸಿಗುವುದಿಲ್ಲ. ರಫ್ತು ಮಾಡಿದರಷ್ಟೇ ಲಾಭ ಸಿಗುತ್ತದೆ.

'ವಿಮಾನದಲ್ಲಿ ಮಾವು ಸಾಗಣೆ ವೆಚ್ಚವು ದುಬಾರಿಯಾಗಿರುವ ಬಗ್ಗೆ ಸಾಕಷ್ಟು ದೂರುಗಳನ್ನು ಸ್ವೀಕರಿಸಲಾಗಿದೆ. ಬೆಳೆಗಾರರು ಮತ್ತು ರಫ್ತುದಾರರಿಗೆ ಅನುಕೂಲವಾಗುವಂತೆ ಸಾಗಣೆ ದರ ನಿಗದಿಪಡಿಸುವ ಬಗ್ಗೆ ಕೇಂದ್ರ ವಾಣಿಜ್ಯ ಸಚಿವಾಲಯವು ನಾಗರಿಕ ವಿಮಾನಯಾನ ಸಚಿವಾಲಯದ ಜೊತೆಗೆ ಶೀಘ್ರವೇ ಚರ್ಚಿಸಲಿದೆ' ಎಂದು ಕೇಂದ್ರದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರದ (ಎಪಿಇಡಿಎ) ಪ್ರತಿನಿಧಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಗೋದ್ರೇಜ್ ಕಂಪನಿ ಆಸ್ತಿ ಇಬ್ಭಾಗ

ನವದೆಹಲಿ (ಪಿಟಿಐ): ದೇಶದಲ್ಲಿ ಸುಮಾರು 127 ವರ್ಷಗಳಷ್ಟು ಇತಿಹಾಸ ಹೊಂದಿರುವ ಗೋದ್ರೇಜ್ ಕಂಪನಿಯ ಆಸ್ತಿಯು ಎರಡು ಕುಟುಂಬಗಳ ನಡುವೆ ಸರ್ವಸಮ್ಮತ ಒಪ್ಪಿಗೆ ಮೇರೆಗೆ ಹಂಚಿಕೆಯಾಗಿದೆ.

ಆದಿ ಗೋದ್ರೇಜ್ ಮತ್ತು ಅವರ ಸಹೋದರ ನಾದಿರ್ ಕುಟುಂಬವು ಒಂದು ಪಾಲು ಪಡೆದರೆ, ಅವರ ಸೋದರ ಸಂಬಂಧಿಗಳಾದ ಜಮ್ಶಿದ್ ನೌರೋಜಿ ಗೋದ್ರೇಜ್ ಮತ್ತು ಸ್ಮಿತಾ ಕೃಷ್ಣ ಗೋದ್ರೇಜ್ ಕುಟುಂಬವು ಮತ್ತೊಂದು ಪಾಲು ಪಡೆದಿದೆ.

ಇನ್ನು ಮುಂದೆ ಗೋದ್ರೇಜ್ ಇಂಡಸ್ಟ್ರೀಸ್ ಮತ್ತು ಗೋದ್ರೇಜ್ ಎಂಟರ್‌ಪ್ರೈಸಸ್ ಎಂಬ ಎರಡು ಪ್ರತ್ಯೇಕ ಕಂಪನಿಗಳಾಗಿ ಕಾರ್ಯ ನಿರ್ವಹಿಸಲಿವೆ ಎಂದು ಷೇರುಪೇಟೆಗೆ ತಿಳಿಸಲಾಗಿದೆ.

ಎರಡೂ ಕುಟುಂಬಗಳು ಗೋದ್ರೇಜ್ ಬ್ರ್ಯಾಂಡ್ ಹೆಸರು ಬಳಕೆಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಂಡಿವೆ. ಈ ಸಂಬಂಧ ಆರು ವರ್ಷದವರೆಗೆ ಸ್ಪರ್ಧಾತ್ಮಕವಲ್ಲದ ಒಪ್ಪಂದಕ್ಕೆ ಸಹಿ ಹಾಕಿವೆ. ಈ ಅವಧಿಯಲ್ಲಿ ಒಬ್ಬರ ವ್ಯಾಪಾರದ ವ್ಯಾಪ್ತಿಗೆ ಮತ್ತೊಬ್ಬರ ಪ್ರವೇಶಿಸುವಂತಿಲ್ಲ. ಅವಧಿ ಮುಗಿದ ಬಳಿಕ ಪ್ರವೇಶಿಸಬಹುದಾಗಿದೆ. ಆದರೆ, ಅದಕ್ಕೆ ಗೋದ್ರೇಜ್ ಹೆಸರನ್ನು ಬಳಸುವಂತಿಲ್ಲ ಎಂಬ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜಮ್ಶಿದ್ ಮತ್ತು ಅವರ ಸಹೋದರಿ ಸ್ಮಿತಾ ಅವರ ಸುಪರ್ದಿಗೆ ಗೋದ್ರೇಜ್ ಆ್ಯಂಡ್ ಬಾಯ್ಸ್ ಕಂಪನಿ ಹಾಗೂ ಮುಂಬೈನಲ್ಲಿರುವ 3 ಸಾವಿರ ಎಕರೆ ಜಮೀನು ಸೇರಲಿದೆ ಎಂದು ತಿಳಿಸಿವೆ.

ಮುಂಬೈ ಧಾರಣೆ (ಶೇಂಗಾ)

01-5-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	865 (870)
ಪಾಮ್ ವಾರದ ಡೆಲಿವರಿ	890 (893)
ಸೂರ್ಯಕಾಂತಿ ಎಣ್ಣೆ ಕಚ್ಚಾ	855 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹71,100 (71,130)
ಬೆಳ್ಳಿ ಕೆ.ಜಿ ₹79,000 (79,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚೀನಾ: ಹೆದ್ದಾರಿ ಕುಸಿತ –24 ಮಂದಿ ಸಾವು

ಬೀಜಿಂಗ್(ಎಪಿ): ಚೀನಾದ ದಕ್ಷಿಣದ ಗುವಾಂಗ್‌ಡಾಂಗ್ ಪ್ರಾಂತ್ಯದಲ್ಲಿ ಬುಧವಾರ ಹೆದ್ದಾರಿಯಲ್ಲಿ ಕೆಲ ಭಾಗ ಕುಸಿದ ಪರಿಣಾಮ ಕನಿಷ್ಠ 24 ಮಂದಿ ಮೃತಪಟ್ಟಿದ್ದಾರೆ.

ರಕ್ಷಣಾ ಕಾರ್ಯ ಕೈಗೊಂಡಿರುವ ಸಿಬ್ಬಂದಿ, 30 ಜನರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಮಿಜೌ–ದಾಬು ಎಕ್ಸ್‌ಪ್ರೆಸ್‌ವೇನಲ್ಲಿ 58 ಅಡಿ ಉದ್ದದಷ್ಟು ಭಾಗ ಕುಸಿದಿದ್ದರಿಂದ 18 ಕಾರುಗಳು ಉರುಳಿ ಬಿದ್ದಿರುವುದಾಗಿ ಪ್ರಾಂತ್ಯದ ಮಿಜೌ ನಗರದಲ್ಲಿರುವ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ ಎಂದು ಸರ್ಕಾರಿ ಒಡೆತನದ ಮಾಧ್ಯಮ ಷಿನ್‌ಹುವಾ ನ್ಯೂಸ್ ವರದಿ ಮಾಡಿದೆ.

ಹೆದ್ದಾರಿಯ ಭಾಗವೊಂದು ಕುಸಿದಿರುವ ಕುರಿತ ವಿಡಿಯೊ ಹಾಗೂ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಅವಘಡದ ಪರಿಣಾಮ ಕೆಲವು ವಾಹನಗಳು ಹೊತ್ತಿ ಉರಿದಿವೆ. ಸುಟ್ಟು ಕರಕಲಾದ ಕಾರುಗಳ ಚಿತ್ರಗಳು ಸಹ ಹರಿದಾಡಿವೆ.

ಗುವಾಂಗ್‌ಡಾಂಗ್ ಪ್ರಾಂತ್ಯದಲ್ಲಿ ಎರಡು ವಾರಗಳ ಹಿಂದೆ ಭಾರಿ ಮಳೆಯಾಗಿದ್ದು, ಪ್ರವಾಹದಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ.



ಚೀನಾದ ದಕ್ಷಿಣದ ಗುವಾಂಗ್‌ಡಾಂಗ್ ಪ್ರಾಂತ್ಯದಲ್ಲಿ ಭಾರಿ ಮಳೆ ಬಿದ್ದ ಪರಿಣಾಮ ಮಿಜೌ–ದಾಬು ಎಕ್ಸ್‌ಪ್ರೆಸ್‌ವೇನಲ್ಲಿ ಕುಸಿತ ಉಂಟಾಗಿದೆ –ಎಪಿ ಚಿತ್ರ

ಅಂಬುಜಾ ಸಿಮೆಂಟ್ಸ್‌ಗೆ ಲಾಭ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಅಂಬುಜಾ ಸಿಮೆಂಟ್ಸ್ ಲಿಮಿಟೆಡ್ (ಎಸಿಎಲ್) 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹1,525 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರ ಇದೇ ಅವಧಿಯಲ್ಲಿ ₹763 ಕೋಟಿ ಲಾಭಗಳಿಸಿತ್ತು. ವರಮಾನವು ₹7,965 ಕೋಟಿಯಿಂದ ₹8,894 ಕೋಟಿಗೆ ಏರಿಕೆಯಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಕಂಪನಿಯ ವೆಚ್ಚವು ಮಾರ್ಚ್ ತ್ರೈಮಾಸಿಕದಲ್ಲಿ ₹7,741 ಕೋಟಿಯಾಗಿದೆ. ತೆರಿಗೆ ನಂತರದ ಲಾಭವು ₹502 ಕೋಟಿಯಿಂದ ₹532 ಕೋಟಿಗೆ ಹೆಚ್ಚಳವಾಗಿದೆ ಎಂದು ತಿಳಿಸಿದೆ. ಎಸಿಸಿ ಸೇರಿ ಅಂಬುಜಾ ಕಂಪನಿಯ ಸಿಮೆಂಟ್ ಮಾರಾಟವು 1.66 ಕೋಟಿ ಟನ್‌ನಷ್ಟು ಆಗಿದೆ ಎಂದು ಹೇಳಿದೆ.

ಅದಾನಿ ವಿಲ್ಮರ್ ಲಾಭ ಹೆಚ್ಚಳ: ಮಾರ್ಚ್ ತ್ರೈಮಾಸಿಕದಲ್ಲಿ ಅದಾನಿ ವಿಲ್ಮರ್ ಕಂಪನಿಯ ನಿವ್ವಳ ಲಾಭದಲ್ಲಿ ಶೇ 67ರಷ್ಟು ಏರಿಕೆಯಾಗಿದೆ. ಲಾಭವು ₹93 ಕೋಟಿಯಿಂದ ₹156 ಕೋಟಿಗೆ ಹೆಚ್ಚಳವಾಗಿದೆ. ವರಮಾನವು ₹14,185 ಕೋಟಿಯಿಂದ ₹13,342 ಕೋಟಿಗೆ ಏರಿಕೆಯಾಗಿದೆ.

ಎನರ್ಜಿ ಸಲ್ಯೂಷನ್ಸ್ ಲಾಭ ಇಳಿಕೆ: ವೆಚ್ಚದ ಪ್ರಮಾಣ ಹೆಚ್ಚಳದಿಂದಾಗಿ ಅದಾನಿ ಎನರ್ಜಿ ಸಲ್ಯೂಷನ್ಸ್ ಲಾಭದಲ್ಲಿ ಶೇ 13ರಷ್ಟು ಇಳಿಕೆಯಾಗಿದೆ. ₹381 ಕೋಟಿ ನಿವ್ವಳ ಲಾಭ ದಾಖಲಿಸಿದೆ. ವರಮಾನವು ₹3,494 ಕೋಟಿಯಿಂದ ₹4,855 ಕೋಟಿಗೆ ಏರಿಕೆಯಾಗಿದೆ.

ಅದಾನಿ ಪೋರ್ಟ್ಸ್‌ಗೆ ಎಎಎ ರೇಟಿಂಗ್: ಅದಾನಿ ಬಂದರು ಮತ್ತು ವಿಶೇಷ ಆರ್ಥಿಕ ವಲಯವು (ಎಪಿಎಸ್‌ಇಝಡ್) ಕೇರ್ ರೇಟಿಂಗ್ಸ್‌ನಿಂದ ಎಎಎ ರೇಟಿಂಗ್ ಪಡೆದುಕೊಂಡಿದೆ.

ಪಾಕ್: ತೆರಿಗೆ ಪಾವತಿಸದವರ ಸಿಮ್ ಸ್ಥಗಿತ!



ಇಸ್ಲಾಮಾಬಾದ್ (ಪಿಟಿಐ): ತೆರಿಗೆ ವಂಚಿಸಿದವರ ವಿರುದ್ಧ ಕ್ರಮ ಜರುಗಿಸುವ ಭಾಗವಾಗಿ ಪಾಕಿಸ್ತಾನದಲ್ಲಿ ಐದು ಲಕ್ಷಕ್ಕೂ ಹೆಚ್ಚು ಮಂದಿಯ ಮೊಬೈಲ್ ಫೋನ್ ಸಿಮ್ ಕಾರ್ಡ್‌ಗಳ ಕಾರ್ಯಾಚರಣೆ ಸ್ಥಗಿತಗೊಳಿಸಲು ಪಾಕಿಸ್ತಾನದ ಅಧಿಕಾರಿಗಳು ತೀರ್ಮಾನಿಸಿದ್ದಾರೆ.

2023ರಲ್ಲಿ ತೆರಿಗೆ ವಿವರ ಸಲ್ಲಿಸಲು ವಿಫಲರಾದ ಒಟ್ಟು 5.06 ಲಕ್ಷ ಮಂದಿಯ ಸಿಮ್ ಕಾರ್ಡ್‌ಗಳನ್ನು ಸ್ಥಗಿತ ಮಾಡಲಾಗುತ್ತದೆ ಎಂದು ಪಾಕಿಸ್ತಾನದ ಅಧಿಕಾರಿಗಳು ಹೇಳಿದ್ದಾರೆ. ಸಿಮ್ ಕಾರ್ಡ್ ಸ್ಥಗಿತದ ಆದೇಶವನ್ನು ತಕ್ಷಣದಿಂದ ಜಾರಿಗೆ ತರಲು ದೂರಸಂಪರ್ಕ ಸೇವಾ ಕಂಪನಿಗಳಿಗೆ ಮತ್ತು ಪಾಕಿಸ್ತಾನ ದೂರಸಂಪರ್ಕ ಪ್ರಾಧಿಕಾರಕ್ಕೆ ಸೂಚಿಸಲಾಗಿದೆ ಎಂದು ಇಲ್ಲಿ 'ಡಾನ್ ನ್ಯೂಸ್' ವರದಿ ಮಾಡಿದೆ.

ತೆರಿಗೆ ಪಾವತಿಸಬೇಕಿದ್ದ, ಆದರೆ ತೆರಿಗೆದಾರರ ಪಟ್ಟಿಯಲ್ಲಿ ಇಲ್ಲವಾಗಿದ್ದ 24 ಲಕ್ಷ ಮಂದಿಯ ಹೆಸರನ್ನು ಗುರುತಿಸಲಾಗಿದೆ. ಇವರ ಪೈಕಿ 5 ಲಕ್ಷಕ್ಕೂ ಹೆಚ್ಚು ಮಂದಿಯ ಸಿಮ್ ಸ್ಥಗಿತಕ್ಕೆ ಆದೇಶಿಸಲಾಗಿದೆ ಎಂದು ಮೂಲವೊಂದು ಹೇಳಿದೆ. ಕಳೆದ ಮೂರು ವರ್ಷಗಳ ಪೈಕಿ ಯಾವುದಾದರೂ ಒಂದು ವರ್ಷದಲ್ಲಿ ತೆರಿಗೆಗೆ ಪರಿಗಣಿಸುವ ಆದಾಯವನ್ನು ಘೋಷಿಸಬೇಕಿದ್ದ ಹಾಗೂ 2023ರ ತೆರಿಗೆ ವರ್ಷದಲ್ಲಿ ತೆರಿಗೆ ವಿವರ ಸಲ್ಲಿಸದ ವ್ಯಕ್ತಿಗಳನ್ನು ಗುರುತಿಸಿ ಅವರ ಸಿಮ್ ಸ್ಥಗಿತಕ್ಕೆ ಸೂಚನೆ ನೀಡಲಾಗಿದೆ.

ಪಾಕಿಸ್ತಾನದ ಸಕ್ರಿಯ ತೆರಿಗೆ ಪಾವತಿದಾರರ ಪಟ್ಟಿಯ ಪ್ರಕಾರ, 2024ರ ತೆರಿಗೆ ವರ್ಷದಲ್ಲಿ 42 ಲಕ್ಷ ತೆರಿಗೆ ವಿವರಗಳ ಸಲ್ಲಿಕೆಯಾಗಿದೆ. ಇದು ಹಿಂದಿನ ವರ್ಷದಲ್ಲಿ ಸಲ್ಲಿಕೆಯಾಗಿದ್ದ 38 ಲಕ್ಷ ತೆರಿಗೆ ವಿವರಗಳಿಗೆ ಹೋಲಿಸಿದರೆ ತುಸು ಹೆಚ್ಚು. ಆದರೆ 2022ರ ತೆರಿಗೆ ವರ್ಷದಲ್ಲಿ 59 ಲಕ್ಷ ಆದಾಯ ತೆರಿಗೆ ವಿವರಗಳು ಸಲ್ಲಿಕೆಯಾಗಿದ್ದವು.

2023ರ ತೆರಿಗೆ ವರ್ಷದ, ತೆರಿಗೆ ವಿವರ ಸಲ್ಲಿಸುವವರ ಸಿಮ್ ಕಾರ್ಡ್‌ಗಳು ಪುನಃ ಸಕ್ರಿಯಗೊಳ್ಳಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಡಿಮೆ ಆದಾಯ ಇರುವ ಜನರು ತಮ್ಮ ಆದಾಯ ತೆರಿಗೆ ವಿವರ ಸಲ್ಲಿಸುವುದನ್ನು ಪ್ರೋತ್ಸಾಹಿಸಲು ಪಾಕಿಸ್ತಾನದ ಅಧಿಕಾರಿಗಳು ಸುಲಭದ ಮಾರ್ಗವಾಗಿ ಸಿಮ್ ಕಾರ್ಡ್ ಸ್ಥಗಿತ ಮೊರೆ ಹೋಗಿದ್ದಾರೆ.

ಹಿಂದೂ ವಿವಾಹವು ಒಂದು ಸಂಸ್ಕಾರ; ಕೇವಲ ಹಾಡು, ನೃತ್ಯಕ್ಕಾಗಿರುವ ಕಾರ್ಯಕ್ರಮ ಅಲ್ಲ: ಸುಪ್ರೀಂ ಕೋರ್ಟ್

‘ವಿಧಿಬದ್ಧವಲ್ಲದ ಮದುವೆಗೆ ಮಾನ್ಯತೆ ಇಲ್ಲ’

ನವದೆಹಲಿ (ಪಿಟಿಐ): ಹಿಂದೂ ವಿವಾಹ ಎಂಬುದು ಹಾಡು ಮತ್ತು ನೃತ್ಯಕ್ಕಾಗಿ, ಒಳ್ಳೆಯ ಭೋಜನ ಸವಿಯಲು ಅಥವಾ ವಾಣಿಜ್ಯ ವಹಿವಾಟು ನಡೆಸಲು ಇರುವ ಕಾರ್ಯಕ್ರಮ ಅಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಹಿಂದೂ ವಿವಾಹ ಕಾಯ್ದೆಗೆ ಅನುಗುಣವಾಗಿ ವಿವಾಹ ಆಗದೆ ಇದ್ದಲ್ಲಿ ಅದನ್ನು ಮಾನ್ಯ ಮಾಡಲು ಆಗದು ಎಂದು ಸ್ಪಷ್ಟಪಡಿಸಿದೆ.

ಹಿಂದೂ ವಿವಾಹವು ಒಂದು ಸಂಸ್ಕಾರ. ಅದಕ್ಕೆ ಭಾರತೀಯ ಸಮಾಜದಲ್ಲಿ ಬಹಳ ಮೌಲ್ಯಯುತವಾದ ಸಂಪ್ರದಾಯದ ಸ್ಥಾನ ನೀಡಬೇಕಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇದ್ದ ವಿಭಾಗೀಯ ಪೀಠ ಹೇಳಿದೆ.

ಇಬ್ಬರು ವಾಣಿಜ್ಯ ಪೈಲಟ್‌ಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಈಚೆಗೆ ನೀಡಿರುವ ತೀರ್ಪಿನಲ್ಲಿ ಪೀಠವು,



‘ಯುವಕ, ಯುವತಿಯರು ಮದುವೆಗೆ ಮೊದಲೇ ಆ ಸಂಪ್ರದಾಯವು ಅದೆಷ್ಟು ಪವಿತ್ರ ಎಂಬ ಬಗ್ಗೆ ಆಳವಾಗಿ ಆಲೋಚನೆ ಮಾಡಬೇಕು’ ಎಂದು ಕಿವಿಮಾತು ಹೇಳಿದೆ. ಹಿಂದೂ ವಿವಾಹ ಸಂಪ್ರದಾಯಕ್ಕೆ ಅನುಗುಣವಾಗಿ ಮದುವೆ ನಡೆದಿಲ್ಲದಿದ್ದರೂ ಈ ಪೈಲಟ್‌ಗಳು ವಿಚ್ಛೇದನ ಕೋರಿದ್ದರು.

‘ಇದು ಪುರುಷ ಮತ್ತು ಮಹಿಳೆಯ ನಡುವೆ ಸಂಬಂಧವನ್ನು ರೂಪಿಸಲು ಆಚರಿಸುವ ವಿಧ್ಯುಕ್ತ ಕಾರ್ಯಕ್ರಮ. ಆ ಪುರುಷ ಮತ್ತು ಮಹಿಳೆಯು ಮುಂದೆ ವಿಕಾಸಗೊಳ್ಳುವ ಕುಟುಂಬದಲ್ಲಿ ಪತಿ, ಪತ್ನಿಯ ಸ್ಥಾನ ಪಡೆದುಕೊಳ್ಳುತ್ತಾರೆ. ಕುಟುಂಬವು ಭಾರತೀಯ ಸಮಾಜದ ಮೂಲಭೂತ ಘಟಕ’ ಎಂದು ಪೀಠವು ಹೇಳಿದೆ.

> **ವಿವಾಹದ ನೋಂದಣಿಯು ವಿವಾದಕ್ಕೆ ಈಡಾದಲ್ಲಿ ಮದುವೆಯು ಸಾಕ್ಷ್ಯವನ್ನು ಒದಗಿಸಿಕೊಡುತ್ತದೆ. ಆದರೆ, ಹಿಂದೂ ವಿವಾಹ ಕಾಯ್ದೆಯ ಸೆಕ್ಷನ್ 7ಕ್ಕೆ ಅನುಗುಣವಾಗಿ ವಿವಾಹ ಆಗದೆ ಇದ್ದರೆ ಅಂತಹ ಮದುವೆಗೆ ವಿವಾಹ ನೋಂದಣಿಯು ಕಾನೂನಿನ ಮಾನ್ಯತೆಯನ್ನು ನೀಡುವುದಿಲ್ಲ**
>
> **ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠ**
>
> (ಸೆಕ್ಷನ್ 7 ಸಪ್ತಪದಿಯ ಮಹತ್ವವನ್ನು ಹೇಳುತ್ತದೆ)

ಮದುವೆಯು ಪವಿತ್ರವಾದುದು. ಅದು ಜೀವನಪರ್ಯಂತ ಇರುವಂಥದ್ದು, ಘನತೆಯನ್ನು ಖಚಿತಪಡಿಸುವಂಥದ್ದು, ಸಮಾನವಾದುದು, ಇಬ್ಬರು ವ್ಯಕ್ತಿಗಳ ನಡುವೆ ಒಪ್ಪಿತ ಹಾಗೂ ಆರೋಗ್ಯಕರವಾದ ಸಮಾಗಮಕ್ಕೆ ಅವಕಾಶ ಕಲ್ಪಿಸುವಂಥದ್ದು ಎಂದು ಪೀಠವು ಹೇಳಿದೆ.

‘ಪತಿ, ಪತ್ನಿಯ ಸ್ಥಾನವನ್ನು ಪಡೆಯಲು ಯುವಕ, ಯುವತಿಯರು ಹಿಂದೂ ವಿವಾಹ ಕಾಯ್ದೆಯ ಅಡಿಯಲ್ಲಿ ಮಾನ್ಯವಾದ ವಿವಾಹ ಆಚರಣೆ ಇಲ್ಲದಿದ್ದರೂ, ವಿವಾಹ ಆಗಿದೆ ಎಂಬಂತೆ ತೋರಿಸಿಕೊಳ್ಳುವ ಕ್ರಮವನ್ನು ನಾವು ಒಪ್ಪುವುದಿಲ್ಲ’ ಎಂದು ಪೀಠವು ಹೇಳಿದೆ. ಹಿಂದೂ ವಿವಾಹವು ಸೂಕ್ತವಾದ ಆಚರಣೆಗಳು ಇಲ್ಲದೆಯೇ ಆಗಿದ್ದಲ್ಲಿ, ಅಂತಹ ವಿವಾಹವನ್ನು ‘ಹಿಂದೂ ವಿವಾಹವೆಂದು ಪರಿಗಣಿಸಲಾಗದು’ ಎಂದು ಏಪ್ರಿಲ್ 19ರ ಆದೇಶದಲ್ಲಿ ನ್ಯಾಯಪೀಠ ಹೇಳಿತ್ತು.

‘ಹಿಂದೂ ವಿವಾಹದಲ್ಲಿ ಸಪ್ತಪದಿ ಅಂದರೆ ಋಗ್ವೇದದ ಪ್ರಕಾರ, ಏಳನೆಯ ಹೆಜ್ಜೆಯನ್ನು ಪೂರ್ಣಗೊಳಿಸಿದ ನಂತರ ವರನು ವಧುವಿಗೆ ‘ಏಳು ಹೆಜ್ಜೆಗಳ ಮೂಲಕ ನಾವು ಸಖರಾಗಿದ್ದೇವೆ. ನಾನು ನಿನ್ನ ಸ್ನೇಹಿತ ಆಗಬಹುದೇ, ನಿನ್ನ ಸ್ನೇಹದಿಂದ ಪ್ರತ್ಯೇಕವಾಗುವ ಸಂದರ್ಭ ಬರದೆ ಇರಲಿ’ ಎಂದು ಹೇಳುತ್ತಾನೆ. ಪತ್ನಿಯು ಪತಿಯ ಅರ್ಧಾಂಗಿ ಎಂದು, ಆಕೆಯನ್ನು ಆಕೆಯದೇ ಆದ ಅಸ್ಮಿತೆಯೊಂದಿಗೆ ಒಪ್ಪಿಕೊಳ್ಳಬೇಕು, ಮದುವೆಯಲ್ಲಿ ಸಮಾನ ಪಾಲುದಾರೆಯಾಗಿ ಪರಿಗಣಿಸಬೇಕು ಎಂದು ಹೇಳಲಾಗಿದೆ’ ಎನ್ನುವ ಮಾತನ್ನು ಪೀಠವು ಹೇಳಿದೆ.

ಈ ಕಾಯ್ದೆಯನ್ನು ಜಾರಿಗೆ ತಂದ-ನಂತರದಲ್ಲಿ, ಪತಿ ಮತ್ತು ಪತ್ನಿಯ ನಡುವೆ ಕಾನೂನಿನ ಮಾನ್ಯತೆ ಇರುವ ಸಂಬಂಧವೆಂದರೆ ಅದು ಏಕಸಾಂಗತ್ಯ ಮಾತ್ರ ಎಂದು ಪೀಠವು ನೆನಪಿಸಿದೆ. ‘ಹಿಂದೂ ವಿವಾಹ ಕಾಯ್ದೆಯು ಬಹು-ಪತ್ನಿತ್ವವನ್ನು ಒಪ್ಪುವುದಿಲ್ಲ’ ಎಂದು ಹೇಳಿದೆ.

‘ಅಗತ್ಯವಿರುವ ಆಚರಣೆ-ಗಳನ್ನು ಕೈಗೊಳ್ಳದೆ ಇದ್ದಾಗ, ಪ್ರಾಧಿಕಾರವೊಂದು ಮದುವೆಯ ಪ್ರಮಾಣಪತ್ರ ನೀಡಿದೆ ಎಂದ ಮಾತ್ರಕ್ಕೆ, ಮದುವೆ ಆಗಿದೆ ಎನ್ನಲಾಗದು’ ಎಂದು ಪೀಠವು ಸ್ಪಷ್ಟಪಡಿಸಿದೆ.

ಹಿಂದೂ ವಿವಾಹ ಕಾಯ್ದೆಯ ಅಡಿಯಲ್ಲಿ, ಸೆಕ್ಷನ್ 5ರಲ್ಲಿ ಹೇಳಿರುವ ನಿಬಂಧನೆಗಳನ್ನು ಪೂರೈಸಬೇಕು, ಸೆಕ್ಷನ್ 7ರಲ್ಲಿ ಹೇಳಿರುವಂತೆ ವಿಧಿಬದ್ಧವಾಗಿ ಮದುವೆ ನಡೆದಿರಬೇಕು ಎಂದು ತಿಳಿಸಿದೆ. ಈ ಇಬ್ಬರು ಕಾನೂನಿಗೆ ಅನುಗುಣವಾಗಿ ಮದುವೆ ಆಗಿರಲಿಲ್ಲ ಎಂದು ಹೇಳಿರುವ ಪೀಠವು, ಅವರಿಗೆ ನೀಡಲಾಗಿದ್ದ ವಿವಾಹ ನೋಂದಣಿ ಪ್ರಮಾಣ ಪತ್ರವು ಅಮಾನ್ಯ ಎಂದು ಸಾರಿದೆ.

ಕಸ್ಟಡಿಯಲ್ಲಿ ಆರೋಪಿ ಆತ್ಮಹತ್ಯೆ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಅವರ ನಿವಾಸದ ಹೊರಗೆ ನಡೆದ ಗುಂಡಿನ ದಾಳಿ ಪ್ರಕರಣದಲ್ಲಿ ಶೂಟರ್‌ಗಳಿಗೆ ಪಿಸ್ತೂಲ್ ಮತ್ತು ಮದ್ದುಗುಂಡು ಪೂರೈಸಿದ ಆರೋಪದಲ್ಲಿ ಮುಂಬೈ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದ ಆರೋಪಿಯೊಬ್ಬ ಬುಧವಾರ ಪೊಲೀಸ್ ಕಸ್ಟಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಅನೂಜ್ ತಪನ್ (23) ಆತ್ಮಹತ್ಯೆ ಮಾಡಿಕೊಂಡ ಆರೋಪಿ. ಪೊಲೀಸ್ ಕಸ್ಟಡಿಯಲ್ಲಿದ್ದ ಈತ ಶೌಚಾಲಯದಲ್ಲಿ ನೇಣು ಬಿಗಿದುಕೊಂಡಿದ್ದ. ಇದನ್ನು ಗಮನಿಸಿದ ಪೊಲೀಸರು ತಕ್ಷಣವೇ ಆತನನ್ನು ಆಸ್ಪತ್ರೆಗೆ ಸಾಗಿಸಿದ್ದರು. ಚಿಕಿತ್ಸೆ ನೀಡುವಷ್ಟರಲ್ಲಿ ಆತ ಮೃತಪಟ್ಟಿರುವು-ದಾಗಿ ವೈದ್ಯರು ದೃಢಪಡಿಸಿದರು ಎಂದು ಅಧಿಕಾರಿಗಳು ಹೇಳಿದ್ದಾರೆ.

ದಕ್ಷಿಣ ಮುಂಬೈನ ಆಜಾದ್ ಮೈದಾನ ಪೊಲೀಸ್ ಠಾಣೆಯಲ್ಲಿ ಆಕಸ್ಮಿಕ ಸಾವು ಪ್ರಕರಣ ದಾಖಲಾಗಿದೆ. ಶೂಟರ್‌ಗಳಾದ ಸಾಗರ್ ಪಾಲ್ ಮತ್ತು ವಿಕಿ ಗುಪ್ತಾ ಅವರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸಿದ್ದ ಆರೋಪದ ಮೇಲೆ ಇನ್ನೊಬ್ಬ ಆರೋಪಿ ಸೋನು ಕುಮಾರ್ ಬಿಷ್ಣೋಯಿ ಜತೆಗೆ ಅನೂಜ್ ತಪನ್‌ನನ್ನು ಪಂಜಾಬ್‌ನಿಂದ ಬಂಧಿಸಲಾಗಿತ್ತು.

ಎಸ್‌ಎಲ್‌ಯು ಇರಿಸಲು ಹೊಸ ನಿಯಮ

ನವದೆಹಲಿ (ಪಿಟಿಐ): ಚುನಾವಣಾ ಕಣದಲ್ಲಿ ಇರುವ ಅಭ್ಯರ್ಥಿಗಳ ಕ್ರಮಸಂಖ್ಯೆ, ಅವರ ಚಿಹ್ನೆ, ಚಿತ್ರ ಇರುವ ‘ಇಮೇಜ್’ಅನ್ನು ವಿವಿ–ಪ್ಯಾಟ್ ಯಂತ್ರಗಳಿಗೆ ಲೋಡ್ ಮಾಡಲು ಬಳಸುವ ‘ಸಿಂಬಲ್ ಲೋಡಿಂಗ್ ಯೂನಿಟ್’ಗಳ (ಎಸ್‌ಎಲ್‌ಯು) ನಿರ್ವಹಣೆಗೆ ಸಂಬಂಧಿಸಿದ ಹೊಸ ನಿಯಮಗಳನ್ನು ಕೇಂದ್ರ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್ ಸೂಚನೆ ಅನುಗುಣವಾಗಿ ರೂಪಿಸಿದೆ.

ಎಸ್‌ಎಲ್‌ಯುಗಳನ್ನು ಸೀಲ್ ಮಾಡಿ, ಫಲಿತಾಂಶ ಪ್ರಕಟವಾದ ಕನಿಷ್ಠ 45 ದಿನಗಳ ವರೆಗೆ ಇವಿಎಂ ಜೊತೆ ಸ್ಟ್ರಾಂಗ್ ರೂಂನಲ್ಲಿ ಇರಿಸಬೇಕು ಎಂದು ಕೋರ್ಟ್ ಸೂಚಿಸಿದೆ. ಎಸ್‌ಎಲ್‌ಯು ನಿರ್ವಹಣೆಗೆ, ಅವುಗಳನ್ನು ಇರಿಸಿಕೊಳ್ಳಲು ಹೊಸ ನಿಯಮಗಳನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ಮೂಲಸೌಕರ್ಯ ಸೃಷ್ಟಿಸಲು ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಆಯೋಗ ತಿಳಿಸಿದೆ.

ದೆಹಲಿ: 130 ಶಾಲೆಗಳಿಗೆ ಬಾಂಬ್ ಬೆದರಿಕೆ

ರಷ್ಯಾದಿಂದ ಸಂದೇಶ ಕಳುಹಿಸಿರುವ ಶಂಕೆ • ಆತಂಕದಿಂದ ಶಾಲೆಗಳತ್ತ ದೌಡಾಯಿಸಿದ ಪೋಷಕರು

ನವದೆಹಲಿ (ಪಿಟಿಐ): ದೆಹಲಿ ಎನ್‌ಸಿಆರ್ ಪ್ರದೇಶದ ಸುಮಾರು 130 ಶಾಲೆಗಳಿಗೆ ಬುಧವಾರ ಇ–ಮೇಲ್ ಮೂಲಕ ಬಂದ ಬಾಂಬ್ ಬೆದರಿಕೆಯ ಸಂದೇಶವು ಪೋಷಕರು ಮತ್ತು ಮಕ್ಕಳಲ್ಲಿ ಆತಂಕ ಸೃಷ್ಟಿಸಿತು.

ಬುಧವಾರ ನಸುಕಿನಲ್ಲಿ ಈ ಶಾಲೆಗಳಿಗೆ ಒಂದೇ ರೀತಿಯಾಗಿ ಏಕ ಕಾಲಕ್ಕೆ ಬೆದರಿಕೆ ಸಂದೇಶ ಬಂದಿದ್ದರಿಂದ ಪೋಷಕರು ತಮ್ಮ ಮಕ್ಕಳನ್ನು ಮನೆಗೆ ಕರೆದುಕೊಂಡು ಹೋಗಲು ಆತಂಕದಿಂದ ಶಾಲೆಗಳತ್ತ ದೌಡಾಯಿಸಿದರು. ಅಲ್ಲದೆ, ಪೊಲೀಸರು ಕೂಡ ಬಾಂಬ್ ಪತ್ತೆಗೆ ಶಾಲೆಗಳತ್ತ ಶ್ವಾನ ದಳದೊಂದಿಗೆ ದೌಡಾಯಿಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ಅಗ್ನಿಶಾಮಕ ದಳದ ವಾಹನಗಳು ಕೂಡ ಸೈರನ್ ಶಬ್ದ ಮೊಳಗಿಸುತ್ತಾ ಶಾಲೆಗಳ ಆವರಣದಲ್ಲಿ ಜಮಾಯಿಸಿದವು.

ಶೋಧದ ವೇಳೆ ಯಾವುದೇ ಅನುಮಾನಾಸ್ಪದ ವಸ್ತುಗಳು ಮತ್ತು ಸ್ಫೋಟಕಗಳು ಪತ್ತೆಯಾಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆಯ ಸಂದೇಶವೆಂದು ಪೊಲೀಸರು ಸ್ಪಷ್ಟಪಡಿಸಿದರು.

‘ಶಾಲೆಗಳಿಗೆ ಬಂದಿರುವ ಬೆದರಿಕೆಯ ಸಂದೇಶಗಳ ಮೂಲ ಒಂದೇ ಆಗಿದ್ದು, ಭೀತಿಯನ್ನು ಸೃಷ್ಟಿಸುವ ಉದ್ದೇಶದಿಂದ



ನವದೆಹಲಿಯ ’ಮದರ್ ಮೇರಿ‘ ಶಾಲೆಯ ಆವರಣದಲ್ಲಿ ಆತಂಕಗೊಂಡಿದ್ದ ಪೋಷಕರು, ಮಕ್ಕಳು, ಶಿಕ್ಷಕರು – ಪಿಟಿಐ ಚಿತ್ರ

ಈ ಸಂದೇಶಗಳನ್ನು ರಷ್ಯಾದಿಂದ ಕಳುಹಿಸಿರುವ ಶಂಕೆ ಇದೆ.ದುಷ್ಕರ್ಮಿಗಳು ಡಾರ್ಕ್ ನೆಟ್ ಬಳಸಿ ತಮ್ಮ ಗುರುತನ್ನು ಮರೆಮಾಚಿರುವ ಸಾಧ್ಯತೆಯೂ ಇದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಘಟನೆಯು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ್ದು, ದೆಹಲಿ ಪೊಲೀಸರು ಐಪಿಸಿಯ ಕಠಿಣ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸ-ಲಿದ್ದಾರೆ. ದೆಹಲಿ ಅಗ್ನಿಶಾಮಕ ಸೇವೆ (ಡಿಎಫ್‌ಎಸ್) ಪ್ರಕಾರ, ಬಾಂಬ್ ಬೆದರಿಕೆ ಸಂದೇಶ ಸಂಬಂಧ ಬುಧವಾರ ಮಧ್ಯಾಹ್ನ 12 ಗಂಟೆಯವರೆಗೆ ವಿವಿಧ ಶಾಲೆಗಳಿಂದ ಕನಿಷ್ಠ 97 ಕರೆಗಳನ್ನು ಸ್ವೀಕರಿಸಲಾಗಿದೆ. ಬೆಳಿಗ್ಗೆ 6 ಗಂಟೆಗೆ ಕರೆಗಳು ಬರಲಾರಂಭಿಸಿದವು. ಮಧ್ಯಾಹ್ನದ ನಂತರವೂ ಶಾಲೆಗಳಿಂದ ಕರೆ ಬಂದಿದ್ದು, ಸ್ಥಳಗಳಲ್ಲಿ ಅಗ್ನಿಶಾಮಕ ಸಿಬ್ಬಂದಿ ವಾಹನ ಸಮೇತ ಬೀಡುಬಿಟ್ಟಿದ್ದಾರೆ ಎಂದು ಅಧಿ-ಕಾರಿಯೊಬ್ಬರು ತಿಳಿಸಿದ್ದಾರೆ.

ನೊಯ್ಡಾ, ಗ್ರೇಟರ್ ನೊಯ್ಡಾ, ಗಾಜಿಯಾಬಾದ್ ಮತ್ತು ಗುರುಗ್ರಾಮದ ಅನೇಕ ಖಾಸಗಿ ಶಾಲೆಗಳಿಗೂ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಆದರೆ, ಸ್ಥಳೀಯ ಪೊಲೀಸರು ಅವುಗಳನ್ನು ಹುಸಿ ಸಂದೇಶವೆಂದು ಎಂದು ತಳ್ಳಿಹಾಕಿದ್ದಾರೆ.

ಐಎಸ್ ನಂಟು ಶಂಕೆ

> ದೆಹಲಿಯ 100ಕ್ಕೂ ಅಧಿಕ ಶಾಲೆಗಳಿಗೆ ಬಾಂಬ್ ಬೆದರಿಕೆ ಸಂದೇಶ ಕುರಿತು ತನಿಖೆ ಆರಂಭಿಸಿರುವ ದೆಹಲಿ ಪೊಲೀಸರು, ಈ ಕೃತ್ಯಕ್ಕೆ ಇಸ್ಲಾಮಿಕ್ ಸ್ಟೇಟ್ (ಐಎಸ್) ನಂಟಿರುವ ಶಂಕೆ ವ್ಯಕ್ತಪಡಿಸಿದ್ದಾರೆ.
>
> ‘ಲೋಕಸಭಾ ಚುನಾವಣೆ ಹೊತ್ತಿನಲ್ಲಿ ವಿಧ್ವಂಸಕ ಕೃತ್ಯ ನಡೆಸುವುದಕ್ಕಾಗಿ ಭಯೋತ್ಪಾದಕ ಸಂಘಟನೆ ಸಂಚು ರೂಪಿಸಿರುವ ಆಯಾಮದಲ್ಲಿಯೂ ತನಿಖೆ ನಡೆಸಲಾಗುತ್ತದೆ. ಇದು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಚಾರವಾದ ಕಾರಣ ಸಮಗ್ರ ತನಿಖೆ ಅಗತ್ಯ ಇದೆ’ ಎಂದು ದೆಹಲಿ ಪೊಲೀಸ್‌ನ ಭಯೋತ್ಪಾದನೆ ನಿಗ್ರಹ ಘಟಕದ ಅಧಿಕಾರಿಗಳು ಹೇಳಿದ್ದಾರೆ.
>
> **ಅಗ್ನಿಪರೀಕ್ಷೆ:** ಶಾಲೆಗಳಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಬೆದರಿಕೆ ಸಂದೇಶ ದೆಹಲಿ ಪೊಲೀಸರನ್ನು ಅಗ್ನಿಪರೀಕ್ಷೆಗೆ ಒಡ್ಡಿತ್ತು.
>
> ನಿಯಂತ್ರಣ ಕೊಠಡಿಗೆ ದೂರವಾಣಿ ಕರೆಗಳು ಬಂದ ಬೆನ್ನಲ್ಲೇ, ಶ್ವಾನ ಹಾಗೂ ಬಾಂಬ್ ನಿಷ್ಕ್ರಿಯ ದಳದೊಂದಿಗೆ ಕಾರ್ಯಾಚರಣೆಗಿಳಿದ ಪೊಲೀಸರು, ಒಂದರ ನಂತರ ಒಂದು ಶಾಲೆಗೆ ತೆರಳಿ, ಪರಿಶೀಲನೆ ಕೈಗೊಂಡರು.

ಪೂರ್ವ ದೆಹಲಿಯ 24 ಖಾಸಗಿ ಶಾಲೆಗಳು, ದಕ್ಷಿಣ ದೆಹಲಿಯ 18 ಶಾಲೆಗಳು, ಪಶ್ಚಿಮ ದೆಹಲಿಯ 21 ಶಾಲೆಗಳು, ಶಹದಾರದ 22, ನೈಋತ್ಯದಲ್ಲಿ 30, ಹೊರವಲಯದಲ್ಲಿ 16 ಶಾಲೆಗಳಿಗೆ ಬಾಂಬ್ ಬೆದರಿಕೆ ಬಂದಿತ್ತು ಎಂದು ತಿಳಿಸಿದ್ದಾರೆ.

ಪೋಷಕರು ಮಕ್ಕಳನ್ನು ಕರೆದೊಯ್ಯಲು ಶಾಲೆಗಳ ಹೊರಗೆ ಜಮಾ-ಯಿಸುತ್ತಿದ್ದರು. ಮಕ್ಕಳನ್ನು ಕರೆದೊಯ್ಯುವಂತೆ ಪೋಷಕರಿಗೆ ಶಾಲೆಯ ಆಡಳಿತ ಮಂಡಳಿಯವರು ಧ್ವನಿವರ್ಧಕಗಳಲ್ಲಿ ಮನವಿ ಮಾಡುತ್ತಿರುವ ದೃಶ್ಯಗಳು ಸಾಮಾನ್ಯವಾಗಿದ್ದವು.

ಬೆದರಿಕೆ ಸಂದೇಶ ಹುಸಿಯಾಗಿದ್ದು, ಭಯಪಡುವ ಅಗತ್ಯವಿಲ್ಲ. ದೆಹಲಿ ಪೊಲೀಸರು ಮತ್ತು ಭದ್ರತಾ ಏಜೆನ್ಸಿಗಳು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದಾರೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ಇ–ಮೇಲ್‌ಗಳನ್ನು ನಿಯಮಿತವಾಗಿ ಪರಿಶೀಲಿಸುವಂತೆ ದೆಹಲಿ ಸರ್ಕಾರವು ಶಾಲೆಗಳಿಗೆ ಸಲಹೆ ನೀಡಿದೆ.



ಬಾಲರಾಮನಿಗೆ ನಮನ ಅಯೋಧ್ಯೆಯ ರಾಮಮಂದಿರದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಧವಾರ ಬಾಲರಾಮನ ದರ್ಶನ ಪಡೆದರು –ಪಿಟಿಐ ಚಿತ್ರ

ವರ್ಚುವಲ್ ಪ್ರಚಾರಕ್ಕೆ ಅನುಮತಿ ಕೋರಿದ್ದ ಅರ್ಜಿ ವಜಾ

‘ದಾವೂದ್ ಕೂಡ ಪ್ರಚಾರಕ್ಕಿಳಿಯುತ್ತಾನೆ’

ನವದೆಹಲಿ(ಪಿಟಿಐ): ವಿವಿಧ ಆರೋಪಗಳಡಿ ಬಂಧಿತರಾಗಿರುವ ರಾಜಕೀಯ ನಾಯಕರು ಪ್ರಸಕ್ತ ಲೋಕಸಭಾ ಚುನಾವಣೆ ವೇಳೆ ವರ್ಚುವಲ್ ವಿಧಾನದ ಮೂಲಕ ಪ್ರಚಾರ ಕಾರ್ಯ ನಡೆಸಲು ಅನುಮತಿ ನೀಡುವಂತೆ ಕೋರಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಬುಧವಾರ ವಜಾಗೊಳಿಸಿದೆ.

‘ಈ ರೀತಿಯ ಪ್ರಚಾರ ಕಾರ್ಯಕ್ಕೆ ಅನುಮತಿ ನೀಡಿದರೆ, ದಾವೂದ್ ಇಬ್ರಾಹಿಂ ಸೇರಿದಂತೆ ಘೋರ ಪಾತಕಿಗಳು ರಾಜಕೀಯ ಪಕ್ಷಗಳೊಂದಿಗೆ ನೋಂದಣಿ ಮಾಡಿಕೊಂಡು, ಪ್ರಚಾರಕ್ಕಿ-ಳಿಯುತ್ತಾರೆ’ ಎಂದು ಹೈಕೋರ್ಟ್ ಅಭಿ-ಪ್ರಾಯಪಟ್ಟಿದೆ.

ಕಾನೂನು ವಿದ್ಯಾರ್ಥಿ ಅಮರ್ಜೀತ್ ಗುಪ್ತ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಹಾಗೂ ನ್ಯಾಯಮೂರ್ತಿ ಮನ್ಮೀತ್



ಪಿ.ಎಸ್.ಅರೋರ ಅವರಿದ್ದ ನ್ಯಾಯಪೀಠ ನಡೆಸಿತು.

‘ಈ ಅರ್ಜಿ ಅತ್ಯಂತ ಅಪಾಯಕಾರಿಯಾಗಿದ್ದು, ಕಾನೂನಿನ ಮೂಲಭೂತ ತತ್ವಕ್ಕೆ ವಿರುದ್ಧವೂ ಆಗಿದೆ’ ಎಂದು ಅಭಿಪ್ರಾಯಪಟ್ಟ ನ್ಯಾಯಪೀಠ, ‘ನ್ಯಾಯಾಲಯಗಳು ನೀತಿ ನಿರೂಪಣೆಗೆ ಸಂಬಂಧಿಸಿದ ನಿರ್ಧಾರಗಳನ್ನು ಕೈಗೊ-ಳ್ಳುವುದಿಲ್ಲ. ಇಂತಹ ವಿಷಯಗಳ ಕುರಿತು ಸಂಸತ್ ಮಾತ್ರ ನಿರ್ಧಾರ ತೆಗೆದುಕೊಳ್ಳು-ತ್ತದೆ’ ಎಂದಿತು.

‘ಕಸ್ಟಡಿಯಲ್ಲಿರುವ ಒಬ್ಬ ವ್ಯಕ್ತಿಗೆ ಚುನಾವಣಾ ಪ್ರಚಾರ ನಡೆಸಲು ಅನುಮತಿ ನೀಡುವುದಿಲ್ಲ. ಇದಕ್ಕೆ ಅವಕಾಶ ನೀಡಿದಲ್ಲಿ, ಅತ್ಯಾಚಾರಿಗಳು, ಕೊಲೆಗಡುಕರು ಸೇರಿದಂತೆ ಎಲ್ಲ ಅಪರಾಧಿಗಳು ಚುನಾವಣೆ ಘೋಷಣೆ ಹಾಗೂ ಮಾದರಿ ನೀತಿ ಸಂಹಿತೆ ಜಾರಿಗೂ ಮುನ್ನ ರಾಜಕೀಯ ಪಕ್ಷಗಳನ್ನು ಸ್ಥಾಪಿಸುತ್ತಾರೆ’ ಎಂದು ಪೀಠ ಹೇಳಿತು.

ಅರ್ಜಿದಾರ ಮೊಕದ್ದಮೆ ವೆಚ್ಚ ಭರಿಸುವಂತೆ ಸೂಚಿಸುವುದಾಗಿಯೂ ಪೀಠ ಎಚ್ಚರಿಸಿತು. ಆದರೆ, ಅರ್ಜಿದಾರ ವಿದ್ಯಾರ್ಥಿ ಎಂಬ ಆತನ ಪರ ವಕೀಲರ ಮನವಿಯನ್ನು ಪರಿಗಣಿಸಿದ ನ್ಯಾಯಪೀಠ, ಅಂತಹ ಆದೇಶ ನೀಡದಿರಲು ಒಪ್ಪಿತು.

‘ನಿಮ್ಮ ಮನವಿಯಂತೆ, ಅರ್ಜಿದಾರನಿಗೆ ಯಾವುದೇ ವೆಚ್ಚವನ್ನು ವಿಧಿಸುವುದಿಲ್ಲ. ಆದರೆ, ಅಧಿಕಾರಗಳ ವಿಭಜನೆ ಕುರಿತು ನಿಮ್ಮ ಅರ್ಜಿದಾರನಿಗೆ ತಿಳಿವಳಿಕೆ ಹೇಳಿ’ ಎಂದು ಗುಪ್ತ ಪರ ವಕೀಲರಿಗೆ ಸೂಚಿಸಿದ ಪೀಠ, ‘ಇಂತಹ ಕ್ರಮದಿಂದಾಗುವ ದೂರಗಾಮಿ ಪರಿಣಾಮದ ಬಗ್ಗೆ ಅರ್ಜಿದಾರಗೆ ಅರಿವಿಲ್ಲ’ ಎಂದು ಹೇಳಿತು.

ಕಾಂಗ್ರೆಸ್ ಅಧ್ಯಕ್ಷರಿಗೆ ನೋಟಿಸ್

ರಾಂಚಿ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯ ತಿರುಚಿದ ವಿಡಿಯೊ ಹಂಚಿದ ಆರೋಪದ ಮೇರೆಗೆ ಜಾರ್ಖಂಡ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಠಾಕೂರ್ ಅವರಿಗೆ ದೆಹಲಿ ಪೊಲೀಸರು ಸಮನ್ಸ್ ಜಾರಿ ಮಾಡಿದ್ದಾರೆ.

ದೆಹಲಿ ಪೊಲೀಸ್ ವಿಶೇಷ ಘಟಕವು ಏಪ್ರಿಲ್ 28ರಂದು ದಾಖಲಿಸಿದ ಎಫ್‌ಐಆರ್‌ಗೆ ಸಂಬಂಧಿಸಿದ ವಿಚಾರಣೆಗೆ ಮೇ 2ರಂದು ಹಾಜರಾಗಬೇಕು ಎಂದು ಸೂಚಿಸಿದ್ದಾರೆ.

‘ನೋಟಿಸ್ ಸ್ವೀಕರಿಸಿದ್ದೇನೆ. ಏಕೆ ನೋಟಿಸ್ ನೀಡಲಾಗಿದೆ ಎನ್ನುವುದು ಅರ್ಥವಾಗುತ್ತಿಲ್ಲ. ಇದು ಅವ್ಯವಸ್ಥೆ ಅಲ್ಲದೆ ಮತ್ತೇನೂ ಅಲ್ಲ’ ಎಂದು ಠಾಕೂರ್ ಅವರು ಪ್ರತಿಕ್ರಿಯಿಸಿದ್ದಾರೆ.

‘ದೂರು ದಾಖಲಾಗಿದ್ದರೆ ಮೊದಲು ನನ್ನ ‘ಎಕ್ಸ್’ ಖಾತೆ ಪರಿಶೀಲಿಸಬೇಕು. ಚುನಾವಣಾ ಪ್ರಚಾರದ ತೀವ್ರತೆ ಹೆಚ್ಚಾಗಿದೆ. ಅದರಲ್ಲಿ ನನ್ನ ಭಾಗ-ವಹಿಸುವಿಕೆಯ ಅಗತ್ಯದ ಬಗ್ಗೆಯೂ ತಿಳಿದಿದೆ. ಹೀಗಿದ್ದೂ ನನ್ನ ಲ್ಯಾಪ್‌ಟಾಪ್ ಮತ್ತು ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ಕೇಳಿದ್ದಾರೆ. ಪರಿಶೀಲನೆ ನಡೆಸದೆ ನೋಟಿಸ್ ಕಳುಹಿಸುವುದು ಸರಿಯಾದ ಕ್ರಮ ಅಲ್ಲ’ ಎಂದು ಅವರು ಹೇಳಿದ್ದಾರೆ.

ವ್ಯಕ್ತಿ ವಿರುದ್ಧ ದೂರು ದಾಖಲು (ಶ್ರೀನಗರ ವರದಿ): ಅಮಿತ್ ಶಾ ಅವರ ಹೇಳಿಕೆಯ ನಕಲಿ ವಿಡಿಯೊವನ್ನು ಹಂಚಿದ ಆರೋಪದ ಮೇಲೆ ಬುದ್ಗಾಂ ನಿವಾಸಿಯೊಬ್ಬರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಜೆಪಿ ನಾಯಕ ಅಲ್ತಾಫ್ ಠಾಕೂರ್ ಅವರು ದೂರು ನೀಡಿದ ಬೆನ್ನಲ್ಲೇ, ಮಹಮ್ಮದ್ ಇಲ್ಯಾಸ್ ಹುಸೇನ್ ಮಿರ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

> ### ರೇವಂತ್ ರೆಡ್ಡಿ ಪರ ವಕೀಲರು ಹಾಜರು
>
> **ನವದೆಹಲಿ:** ಅಮಿತ್ ಶಾ ಅವರ ಹೇಳಿಕೆಯ ತಿರುಚಿದ ವಿಡಿಯೊ ಹಂಚಿಕೆ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆಯ ಭಾಗವಾಗಿ ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಪರ ವಕೀಲರು ಬುಧವಾರ ದೆಹಲಿ ಪೊಲೀಸರ ಎದುರು ಹಾಜರಾದರು.
>
> ರೇವಂತ ರೆಡ್ಡಿ ಅವರಿಗೆ ದೆಹಲಿ ಪೊಲೀಸರು ಸಿಆರ್‌ಪಿಸಿ ಸೆಕ್ಷನ್ 160/91ನ ಅಡಿಯಲ್ಲಿ ನೋಟಿಸ್ ಜಾರಿ ಮಾಡಿದ್ದರು.
>
> ‘ವಿಡಿಯೊ ಹಂಚಿಕೊಂಡಿರುವ ಸಾಮಾಜಿಕ ಜಾಲತಾಣ ಖಾತೆಯು ರೇವಂತ ರೆಡ್ಡಿ ಅವರಿಗೆ ಸಂಬಂಧಿಸಿದ್ದಲ್ಲ’ ಎಂದು ವಕೀಲೆ ಸೌಮ್ಯಾ ಗುಪ್ತಾ ಅವರು ಮಾಧ್ಯಮಗಳಿಗೆ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಹೂಡಿಕೆ ವಂಚನೆ: 30 ಸ್ಥಳಗಳಲ್ಲಿ ಸಿಬಿಐ ಶೋಧ

ನವದೆಹಲಿ (ಪಿಟಿಐ): ಎಚ್‌ಪಿಜೆಡ್ ಟೋಕನ್ ಹೆಸರಿನ ಆ್ಯಪ್‌ಗೆ ಸಂಬಂಧಿಸಿದ ವಂಚನೆಯ ಹೂಡಿಕೆ ಯೋಜನೆಯ ವಿಚಾರವಾಗಿ ಪ್ರಕರಣ ದಾಖಲಿಸಿಕೊಂಡಿರುವ ಸಿಬಿಐ, 30 ಸ್ಥಳಗಳಲ್ಲಿ ಶೋಧ ನಡೆಸಿದೆ. 10 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಶೋಧ ಕಾರ್ಯ ನಡೆದಿದೆ. ಬೆಂಗಳೂರಿನಲ್ಲಿಯೂ ಶೋಧ ನಡೆದಿದೆ.

ಈ ಯೋಜನೆಯ ಮೂಲಕ, ಅಸ್ತಿತ್ವದಲ್ಲೇ ಇಲ್ಲದ ಕ್ರಿಪ್ಟೊ ಕರೆನ್ಸಿ ಮೈನಿಂಗ್ ಯಂತ್ರಗಳಲ್ಲಿ ಹೂಡಿಕೆ ಮಾಡುವಂತೆ ಸಾರ್ವಜನಿಕರನ್ನು ವಂಚಿಸಲಾಗಿತ್ತು ಎಂದು ಸಿಬಿಐ ಆರೋಪಿಸಿದೆ. ಶೋಧ ಕಾರ್ಯವು ಮಂಗಳವಾರ ರಾತ್ರಿ ಪೂರ್ಣಗೊಂಡಿದೆ.

ಶಿಗೂ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಮತ್ತು ಲಿಲಿಯನ್ ಟೆಕ್ನೊಕ್ಯಾಬ್ ಪ್ರೈವೇಟ್ ಲಿಮಿಟೆಡ್ ಹೆಸರಿನ ಎರಡು ಕಂಪನಿಗಳು ಹಾಗೂ ಅವುಗಳ ನಿರ್ದೇಶಕರ ವಿರುದ್ಧ ಭಾರತೀಯ ದಂಡ ಸಂಹಿತೆ ವಿವಿಧ ಸೆಕ್ಷನ್ನುಗಳ ಅಡಿ ಕ್ರಿಮಿನಲ್ ಪಿತೂರಿ, ವಂಚನೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66(ಡಿ) ಅಡಿಯಲ್ಲಿಯೂ ಪ್ರಕರಣ ದಾಖಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ದೆಹಲಿ, ಮುಂಬೈ, ರಾಜಸ್ಥಾನದ ಜೋಧಪುರ, ತಮಿಳುನಾಡು, ಆಂಧ್ರಪ್ರದೇಶ, ಉತ್ತರಪ್ರದೇಶ, ಬಿಹಾರ, ಒಡಿಶಾ ಮತ್ತು ಮಧ್ಯಪ್ರದೇಶದ ಕೆಲವೆಡೆ ಶೋಧ ನಡೆದಿದೆ. ಸಿಬಿಐ ಅಧಿಕಾರಿಗಳು ಲ್ಯಾಪ್‌ಟಾಪ್, ಎಟಿಎಂ ಕಾರ್ಡ್‌ಗಳು, ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಕ್ಷಿಪಣಿ ನೆರವಿನಿಂದ ಟಾರ್ಪಿಡೊ ಉಡ್ಡಯನ ಪರೀಕ್ಷೆ ಯಶಸ್ವಿ

ಬಾಲೇಶ್ವರ(ಒಡಿಶಾ)(ಪಿಟಿಐ): ‘ಸೂಪರ್‌ಸಾನಿಕ್ ಕ್ಷಿಪಣಿಗಳ ಸಹಾಯದಿಂದ ಟಾರ್ಪಿಡೊ ಉಡ್ಡಯನ ವ್ಯವಸ್ಥೆ’ (ಎಸ್‌ಎಂಎಆರ್‌ಟಿ–ಸ್ಮಾರ್ಟ್)ಯ ಪರೀಕ್ಷಾರ್ಥ ಪ್ರಯೋಗ ಇಲ್ಲಿಗೆ ಸಮೀಪದ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ದ್ವೀಪದಲ್ಲಿ ಬುಧವಾರ ಯಶಸ್ವಿಯಾಗಿ ನೆರವೇರಿಸಲಾಯಿತು.

ಬೆಳಿಗ್ಗೆ 8.30ರ ವೇಳೆಗೆ, ಸಂಚಾರ ಲಾಂಚರ್‌ನ ಸಹಾಯದಿಂದ ಈ ವ್ಯವಸ್ಥೆಯ ಪರೀಕ್ಷೆಯನ್ನು ನೆರವೇರಿ-ಸಲಾಯಿತು ಎಂದು ರಕ್ಷಣಾ ಸಚಿವಾಲಯ ಅಧಿಕಾರಿಗಳು ತಿಳಿಸಿದ್ದಾರೆ.

‘ಕ್ಷಿಪಣಿ ವ್ಯವಸ್ಥೆಯ ಎಲ್ಲ ಭಾಗಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದನ್ನು ಈ ಪರೀಕ್ಷೆ ದೃಢಪಡಿಸಿದೆ. ಇದು ಭಾರತೀಯ ನೌಕಾಪಡೆಯ ಜಲಾಂತರ್ಗಾಮಿ ನಿಗ್ರಹ ಸಾಮರ್ಥ್ಯವನ್ನು ಹೆಚ್ಚಿಸಲಿದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮುಂದಿನ ತಲೆಮಾರಿನ, ಟಾರ್ಪಿಡೊ ಚಿಮ್ಮುವಂತೆ ಮಾಡುವ ಕಡಿಮೆ ತೂಕದ ಈ ‘ಸ್ಮಾರ್ಟ್’ ಕ್ಷಿಪಣಿ ವ್ಯವಸ್ಥೆಯನ್ನು ಡಿಆರ್‌ಡಿಒ ಅಭಿವೃದ್ಧಿಪಡಿಸಿದೆ.

ಟಿಎಂಸಿ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಘೋಷ್ ವಜಾ

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಕುನಾಲ್ ಘೋಷ್ ಅವರನ್ನು ಬುಧವಾರ ವಜಾಗೊಳಿಸಲಾಗಿದೆ.

ಬಿಜೆಪಿಯ ಲೋಕಸಭಾ ಅಭ್ಯರ್ಥಿಯೊಬ್ಬರ ಕಾರ್ಯಕ್ರಮಕ್ಕೆ ಹಾಜರಾಗಿ ಅವರನ್ನು ಹೊಗಳಿದ ಬೆನ್ನಲ್ಲೇ, ಘೋಷ್ ವಿರುದ್ಧ ಟಿಎಂಸಿ ಈ ಕ್ರಮ ಕೈಗೊಂಡಿದೆ.

‘ಕುನಾಲ್ ಅವರು ನೀಡುತ್ತಿದ್ದ ಹೇಳಿಕೆಗಳು ಪಕ್ಷದ ಸಿದ್ಧಾಂತಗಳಿಗೆ ಒಪ್ಪಿತವಾಗಿರಲಿಲ್ಲ’ ಎಂದು ಟಿಎಂಸಿ ಹೇಳಿದೆ.

‘ಈ ಮುನ್ನ ಕುನಾಲ್ ಅವರನ್ನು ಪಕ್ಷದ ವಕ್ತಾರ ಸ್ಥಾನದಿಂದ ಬಿಡುಗಡೆಗೊಳಿಸಲಾಗಿತ್ತು. ಈಗ ಅವರನ್ನು ರಾಜ್ಯ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ತೆಗೆದುಹಾಕಲಾಗುತ್ತಿದೆ’ ಎಂದು ಪಕ್ಷದ ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಯಾನ್ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಭಾರತೀಯ ಹವಾಮಾನ ಇಲಾಖೆಯಿಂದ ಎಚ್ಚರಿಕೆ

‘ಮೇನಲ್ಲಿ ಬಿಸಿಗಾಳಿ ದಿನಗಳು ಇನ್ನೂ ಅಧಿಕ’

ನವದೆಹಲಿ(ಪಿಟಿಐ): ಮೇ ತಿಂಗಳಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ವಾಡಿಕೆಯ ಗರಿಷ್ಠ ಮಟ್ಟಕ್ಕಿಂತ ಅಧಿಕ ತಾಪಮಾನ ಇರಲಿದೆ. ಅಲ್ಲದೇ, ಉತ್ತರದ ಬಯಲು ಪ್ರದೇಶಗಳು ಮತ್ತು ಕೇಂದ್ರೀಯ ಪ್ರದೇಶದಲ್ಲಿ ಬಿಸಿಗಾಳಿ ಬೀಸುವ ದಿನಗಳ ಸಂಖ್ಯೆಯೂ ಅಧಿಕವಿರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಬುಧವಾರ ಹೇಳಿದೆ.

ದೇಶದ ಪೂರ್ವ, ಈಶಾನ್ಯ ಹಾಗೂ ದಕ್ಷಿಣ ಪ್ರದೇಶಗಳಲ್ಲಿ ಏಪ್ರಿಲ್‌ನಲ್ಲಿ ಬಿಸಿಗಾಳಿ ಜನರನ್ನು ಹೈರಾಣಾಗಿಸಿದೆ. ಆರೋಗ್ಯ ಸಮಸ್ಯೆಗಳು ಎದುರಾಗುವ ಕುರಿತು ಸರ್ಕಾರ ಜನರಿಗೆ ಎಚ್ಚರಿಕೆ ನೀಡಿತ್ತು. ಹಲವು ರಾಜ್ಯಗಳ ಶಾಲೆಗಳಲ್ಲಿ ಭೌತಿಕ ತರಗತಿಗಳನ್ನು ರದ್ದುಗೊಳಿಸಲಾಗಿತ್ತು. ಈಗ, ಮೇನಲ್ಲಿ ಸಹ ಬಿಸಿಗಾಳಿ ದಿನಗಳು ಎದುರಾಗಲಿವೆ ಎಂಬ ಮುನ್ಸೂಚನೆ ಎಚ್ಚರಿಕೆ ಗಂಟೆಯಾಗಿದೆ.

ಬಿಸಿಗಾಳಿ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಇಲಾಖೆಯ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ, ‘ಕರ್ನಾಟಕದ ಉತ್ತರ ಒಳನಾಡು ಮತ್ತು ತೆಲಂಗಾಣದಲ್ಲಿ ಈ ತಿಂಗಳು 5–7 ದಿನಗಳಷ್ಟು ಕಾಲ ಬಿಸಿಗಾಳಿ ಬೀಸಲಿದೆ’



ಉತ್ತರ ಪ್ರದೇಶದ ಮೀರಠ್‌ನ ಬಾಲಕಿಯೊಬ್ಬಳು ಬಿಸಿಲಿನ ಧಗೆ ತಾಳಲಾರದೇ ನೀರು ಸುರಿದುಕೊಳ್ಳುತ್ತಿರುವುದು –ಪಿಟಿಐ ಚಿತ್ರ

> **1980ರ ನಂತರ ದಕ್ಷಿಣ ಭಾರತದಲ್ಲಿ ವಾಡಿಕೆಯ ಗರಿಷ್ಠ ತಾಪಮಾನಕ್ಕಿಂತ ಹೆಚ್ಚು ಉಷ್ಣಾಂಶ ದಾಖಲಾಗುವುದು ಪುನರಾವರ್ತನೆಯಾಗುತ್ತಿದೆ**
>
> **ಮೃತ್ಯುಂಜಯ ಮಹಾಪಾತ್ರ**
>
> ಮಹಾನಿರ್ದೇಶಕ, ಐಎಂಡಿ

ಎಂದರು.

‘ರಾಜಸ್ಥಾನದ ದಕ್ಷಿಣ ಭಾಗ, ಮಧ್ಯಪ್ರದೇಶದ ಪಶ್ಚಿಮ ಭಾಗ, ಮಹಾರಾಷ್ಟ್ರದ ವಿದರ್ಭ, ಮರಾಠವಾಡ ಹಾಗೂ ಗುಜರಾತ್‌ನಲ್ಲಿ ಈ ತಿಂಗಳು 8–11 ದಿನಗಳಷ್ಟು ಕಾಲ ಬಿಸಿಗಾಳಿ ಬೀಸುವ ಸಾಧ್ಯತೆ ಇದೆ’ ಎಂದು ತಿಳಿಸಿದರು.

‘ರಾಜಸ್ಥಾನದ ಉಳಿದ ಪ್ರದೇಶಗಳು, ಮಧ್ಯಪ್ರದೇಶದ ಪೂರ್ವಭಾಗ, ಪಂಜಾಬ್, ಹರಿಯಾಣ, ಚಂಡೀಗಢ, ದೆಹಲಿ, ಉತ್ತರ ಪ್ರದೇಶ, ಛತ್ತೀಸಗಢದ ಕೆಲ ಭಾಗಗಳು, ಪಶ್ಚಿಮ ಬಂಗಾಳ, ಜಾರ್ಖಂಡ್, ಬಿಹಾರದಲ್ಲಿ 5–7 ದಿನಗಳಷ್ಟು ಕಾಲ ಬಿಸಿ ಗಾಳಿ ಬೀಸುವ ಸಾಧ್ಯತೆ ಇದೆ’ ಎಂದೂ ಮಹಾಪಾತ್ರ ತಿಳಿಸಿದರು.

‘ಈಶಾನ್ಯ ಭಾರತದ ಬಹುತೇಕ ಪ್ರದೇಶಗಳು, ದೇಶದ ವಾಯವ್ಯ ಮತ್ತು ಕೇಂದ್ರೀಯ ಭಾಗಗಳಲ್ಲಿ ಸಾಮಾನ್ಯ ಇಲ್ಲವೇ ವಾಡಿಕೆಯ ಗರಿಷ್ಠ ತಾಪಮಾನಕ್ಕಿಂತ ಕಡಿಮೆ ಉಷ್ಣಾಂಶ ಕಂಡುಬರುವ ಸಾಧ್ಯತೆ ಇದೆ’ ಎಂದು ಹೇಳಿದರು.

ದೇಶದ ಪಶ್ಚಿಮ ಭಾಗದಲ್ಲಿ ಕಂಡುಬಂದ ಪ್ರಕ್ಷುಬ್ಧತೆಯಿಂದಾಗಿ ದೇಶದ ಉತ್ತರ ಮತ್ತು ಕೇಂದ್ರೀಯ ಪ್ರದೇಶಗಳಲ್ಲಿ ಆಲಿಕಲ್ಲು ಸಹಿತ ಮಳೆಯಾಯಿತು. ಇದು ಈ ಪ್ರದೇ-ಶಗಳಲ್ಲಿ ಏಪ್ರಿಲ್‌ನಲ್ಲಿ ಸ್ವಲ್ಪಮಟ್ಟಿಗೆ ಬಿಸಿಗಾಳಿ ಬೀಸುವುದನ್ನು ತಡೆಯಲು ನೆರವಾಯಿತು ಎಂದು ಹೇಳಿದರು.

'ಬಂಗಾಳ ಕೊಲ್ಲಿಯ ಪಶ್ಚಿಮ ಕೇಂದ್ರ ಭಾಗ ಹಾಗೂ ದೇಶದ ಪೂರ್ವ ಕರಾವಳಿಯ ಕೆಳಮಟ್ಟದಲ್ಲಿ ಬಹಿರ್ಮುಖಿ ಚಂಡಮಾರುತ ಮುಂದುವರಿದಿತ್ತು. ಚಂಡಮಾರುತದಿಂದ ಕೂಡಿದ ಮಳೆಯೂ ಬಿದ್ದಿಲ್ಲ. ಈ ಪ್ರಾಕೃತಿಕ ವಿದ್ಯಮಾನ, ಏಪ್ರಿಲ್ ತಿಂಗಳಿನಲ್ಲಿ ದೇಶದ ದಕ್ಷಿಣ ಹಾಗೂ ಪೂರ್ವ ಭಾಗದಲ್ಲಿ ದೀರ್ಘಾವಧಿಗೆ ಬಿಸಿಗಾಳಿ ಬೀಸುವುದಕ್ಕೆ ಕಾರಣವಾಗಿತ್ತು’ ಎಂದು ಮಹಾಪಾತ್ರ ವಿವರಿಸಿದರು.

ಕೇಂದ್ರದಲ್ಲಿ ಅಧಿಕ ಒತ್ತಡ ಪ್ರದೇಶವಿದ್ದು, ಸುತ್ತಲೂ ಚಕ್ರಾಕಾರವಾಗಿ ಬೀಸುವ ಮತ್ತು ಸುತ್ತಮುತ್ತಲ ವಿಶಾಲ ಪ್ರದೇಶದಲ್ಲಿ ತಂಪಾದ ಒಣ ಹವೆಯನ್ನು ಉತ್ಪತ್ತಿ ಮಾಡುವ ಮಾರುತಗಳು ಕಂಡುಬರುವ ವಿದ್ಯಮಾನಕ್ಕೆ ಬಹಿರ್ಮುಖಿ ಚಂಡಮಾರುತ (ಆ್ಯಂಟಿ ಸೈಕ್ಲೋನ್) ಎಂದು ಹೇಳಲಾಗುತ್ತದೆ.

ಆ್ಯಂಟಿ ಸೈಕ್ಲೋನ್ ವಿದ್ಯಮಾನವು, ಒಡಿಶಾ ಮತ್ತು ಪಶ್ಚಿಮ ಬಂಗಾಳದತ್ತ ಕಡಲಗಾಳಿ ಬೀಸುವುದರ ಮೇಲೆಯೂ ಪರಿಣಾಮ ಬೀರಿತ್ತು.

ದಕ್ಷಿಣ ಭಾರತದಲ್ಲಿ ಏಪ್ರಿಲ್‌ನಲ್ಲಿ ಸರಾಸರಿ ಗರಿಷ್ಠ ತಾಪಮಾನ 31 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಇದು 1901ರಿಂದ ಈ ವರೆಗೆ ದಾಖಲಾದ ಎರಡನೇ ಗರಿಷ್ಠ ತಾಪಮಾನವಾಗಿದೆ ಎಂದು ಇಲಾಖೆ ಹೇಳಿದೆ.

ಪ್ರಮುಖ ಅಂಶಗಳು

- ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿಯ ಏಪ್ರಿಲ್‌ನಲ್ಲಿ ಬಿಸಿಗಾಳಿ ತೀವ್ರತೆ ಅಧಿಕವಿತ್ತು
- 2023 ಈ ವರೆಗೆ ದಾಖಲಾದ ಅಧಿಕ ತಾಪಮಾನದಿಂದ ಕೂಡಿದ ವರ್ಷವೆನಿಸಿದೆ
- ಮೇ ತಿಂಗಳಲ್ಲಿ ವಾಡಿಕೆ ಮಳೆ ಬೀಳುವ ಸಾಧ್ಯತೆ ಇದೆ (ದೀರ್ಘ ಅವಧಿಯ ಸರಾಸರಿಯ ಶೇ 91–ಶೇ 109ರಷ್ಟು)
- ದಕ್ಷಿಣ ಭಾಗದಲ್ಲಿ ಏಪ್ರಿಲ್‌ನಲ್ಲಿ 12.6 ಮಿ.ಮೀ.ನಷ್ಟು ಮಳೆ ಬಿದ್ದಿದೆ. 1901ರಿಂದ ಈವರೆಗೆ ಬಿದ್ದಿರುವ 5ನೇ ಕನಿಷ್ಠ ಪ್ರಮಾಣದ ಮಳೆ ಇದಾಗಿದೆ.
- ಲೋಕಸಭಾ ಚುನಾವಣೆಯ ಮತದಾನ ಮೇಲೆಯೂ ಬಿಸಿಗಾಳಿ, ಬಿಸಿಲ ಧಗೆ ಪರಿಣಾಮ ಬೀರಿದ್ದು, ಕೆಲವೆಡೆ ಕಡಿಮೆ ಪ್ರಮಾಣದ ಮತದಾನವಾಗಿದೆ



ಪಂಜಾಬ್‌ಗೆ ಮಣಿದ ಸೂಪರ್ ಕಿಂಗ್ಸ್

ಹರ್‌ಪ್ರೀತ್, ಚಾಹರ್ ಸ್ಪಿನ್ ಮೋಡಿ • ಬೆಸ್ಟೊ–ರುಸೊ ಬಿರುಸಿನ ಆಟ • ಋತುರಾಜ್ ಅರ್ಧಶತಕ

ಚೆನ್ನೈ (ಪಿಟಿಐ): ಚಿಪಾಕ್‌ನ ಮಂದ ಗತಿಯ ಪಿಚ್‌ನಲ್ಲಿ ಪಂಜಾಬ್ ಕಿಂಗ್ಸ್‌ನ ಸ್ಪಿನ್ನರ್‌ಗಳು ಕರಾರುವಾಕ್ ದಾಳಿಯ ಮೂಲಕ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಕಟ್ಟಿಹಾಕಿದ ಬಳಿಕ, ಬ್ಯಾಟರ್‌ಗಳು ಉತ್ತಮ ಪ್ರದರ್ಶನ ತೋರಿದರು. ಇದರಿಂದ ಪಂಜಾಬ್ ತಂಡವು ಬುಧವಾರ ನಡೆದ ಐಪಿಎಲ್‌ನ ಪಂದ್ಯದಲ್ಲಿ 7 ವಿಕೆಟ್‌ಗಳ ಜಯ ಸಾಧಿಸಿತು.

10 ಪಂದ್ಯಗಳನ್ನು ಆಡಿರುವ ಪಂಜಾಬ್ ತಂಡ ನಾಲ್ಕರಲ್ಲಿ ಗೆದ್ದು 8 ಅಂಕದೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಎಂಟರಿಂದ ಏಳನೇ ಸ್ಥಾನಕ್ಕೆ ಬಡ್ತಿ ಪಡೆದಿದೆ. ಈ ಮೂಲಕ ಪ್ಲೇ ಆಫ್ ಕನಸನ್ನು ಜೀವಂತವಾಗಿರಿಸಿದೆ. ಅಷ್ಟೇ ಪಂದ್ಯಗಳಲ್ಲಿ 10 ಪಾಯಿಂಟ್ಸ್ ಸಂಪಾದಿಸಿರುವ ಚೆನ್ನೈ ತಂಡವು ನಾಲ್ಕನೇ ಸ್ಥಾನದಲ್ಲಿ ಮುಂದುವರಿದಿದೆ.

ಋತುರಾಜ್ ಗಾಯಕವಾಡ ಅವರ ಅರ್ಧಶತಕದ ಬಲದಿಂದ ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗೆ 162 ರನ್‌ಗಳ ಸಾಧಾರಣ ಮೊತ್ತ ಕಲೆ ಹಾಕಿತು. ಅದಕ್ಕೆ ಉತ್ತರವಾಗಿ ಇನ್ನೂ 13 ಎಸೆತಗಳು ಬಾಕಿ ಇರುವಂತೆ ಪಂಜಾಬ್ ತಂಡವು ಮೂರು ವಿಕೆಟ್‌ಗೆ 163 ರನ್ ಗಳಿಸಿ, ಸತತ ಎರಡನೇ ಜಯ ದಾಖಲಿಸಿತು. ಅಲ್ಲದೆ, ಚೆನ್ನೈ ತಂಡವನ್ನು ಮುಂಬೈ ಇಂಡಿಯನ್ಸ್ ಬಳಿಕ ಸತತ ಐದನೇ ಬಾರಿ ಮಣಿಸಿದ ಹಿರಿಮೆಗೆ ಪಂಜಾಬ್ ತಂಡ ಪಾತ್ರವಾಯಿತು.

ಗುರಿ ಬೆನ್ನತ್ತಿದ ಪಂಜಾಬ್ ತಂಡದ ಆರಂಭ ಉತ್ತಮವಾಗಿರಲಿಲ್ಲ. ತಂಡವು 19 ರನ್ ಗಳಿಸುವಷ್ಟರಲ್ಲಿ ಪ್ರಭಸಿಮ್ರನ್ ಸಿಂಗ್ (13) ಅವರ ವಿಕೆಟ್ ಕಳೆದುಕೊಂಡಿತು. ಆದರೆ, ಜಾನಿ ಬೆಸ್ಟೊ (46; 30ಎ, 4x7, 6x1) ಮತ್ತು



ಪಂಜಾಬ್ ಕಿಂಗ್ಸ್ ತಂಡದ ಜಾನಿ ಬೆಸ್ಟೊ ಮತ್ತು ರಿಲೀ ರೂಸೊ– ಎಎಫ್‌ಪಿ ಚಿತ್ರ

ರಿಲೀ ರೂಸೊ (43; 23ಎ, 4x5, 6x2) ಎರಡನೇ ವಿಕೆಟ್ ಜೊತೆಯಾಟದಲ್ಲಿ ಬಿರುಸಿನ 64 ರನ್ (37ಎ) ಸೇರಿಸಿ ತಂಡವನ್ನು ಜಯದತ್ತ ಕೊಂಡೊಯ್ದರು.

ಅವರಿಬ್ಬರೂ ನಿರ್ಗಮಿಸಿದ ಬಳಿಕ ಶಶಾಂಕ್ ಸಿಂಗ್ (ಔಟಾಗದೇ 25;26ಎ) ಮತ್ತು ಸ್ಯಾಮ್ ಕರನ್ (ಔಟಾಗದೇ 26; 20ಎ) ತಾಳ್ಮೆಯಿಂದ ತಂಡವನ್ನು ಗೆಲುವಿನ ದಡ ದಾಟಿಸಿದರು. ಅವರು ಮುರಿಯದ ನಾಲ್ಕನೇ ವಿಕೆಟ್‌ಗೆ 50 ರನ್ ಸೇರಿಸಿದರು. ಶಾರ್ದೂಲ್ ಠಾಕೂರ್, ರಿಚರ್ಡ್ ಗ್ಲೀಸನ್ ಮತ್ತು ಶಿವಂ ದುಬೆ ತಲಾ ಒಂದು ವಿಕೆಟ್ ಪಡೆದರು. ಚೆನ್ನೈನ ಬೌಲರ್‌ಗಳಾದ ಮಥೀಷ ಪಥಿರಾಣ ಮತ್ತು ತುಷಾರ್ ದೇಶಪಾಂಡೆ ಅನಾರೋಗ್ಯದ ಕಾರಣ ಅಲಭ್ಯರಾಗಿದ್ದರು.

ಗಾಯಕವಾಡ ಆಸರೆ: ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಚೆನ್ನೈ ತಂಡಕ್ಕೆ ಗಾಯಕವಾಡ (62, 48ಎ, 4x5, 6x2) ಮತ್ತು ಅಜಿಂಕ್ಯ ರಹಾನೆ (29, 24 ಎ) ಅವರು 61 ರನ್ ಸೇರಿಸಿ ಉತ್ತಮ ಆರಂಭ ನೀಡಿದ್ದರು. ಆದರೆ ಅದಕ್ಕೆ 49 ಎಸೆತಗಳನ್ನು ಖರ್ಚು ಮಾಡಿದ್ದರು.

ಪವರ್‌ಪ್ಲೇ (ವಿಕೆಟ್ ನಷ್ಟವಿಲ್ಲದೇ 55) ಮುಗಿದು ಸ್ಪಿನ್ನರ್‌ಗಳು ದಾಳಿಗಿಳಿದ ನಂತರ ಬೌಂಡರಿಗಳು ಬತ್ತಿಹೋದವು. ರಹಾನೆ ಎಡಗೈ ಸ್ಪಿನ್ನರ್ ಹರ್‌ಪ್ರೀತ್ ಬ್ರಾರ್ ಬೌಲಿಂಗ್‌ನಲ್ಲಿ ಸ್ಲಾಗ್ ಸ್ವೀಪ್‌ಗೆ ಯತ್ನಿಸಿ ರೂಸೊ ಅವರಿಗೆ ಕ್ಯಾಚಿತ್ತರು. ಬ್ರಾರ್ ಮರು ಎಸೆತದಲ್ಲೇ ಶಿವಂ ದುಬೆ (0) ಅವರನ್ನು ಎಲ್‌ಬಿ ಬಲೆಗೆ ಕೆಡವಿದರು. ಸ್ಪಿನ್‌ಗೆ ಮದ್ದು ಅರೆಯಲು ದುಬೆ ಅವರಿಗೆ ಮೂರನೇ ಕ್ರಮಾಂಕಕ್ಕೆ ಬಡ್ತಿ ನೀಡಲಾಗಿತ್ತು.

ಮುಂದಿನ (ಹತ್ತನೇ) ಓವರಿನಲ್ಲಿ ಲೆಗ್ ಸ್ಪಿನ್ನರ್ ರಾಹುಲ್ ಚಾಹರ್ ಅವರು ರವೀಂದ್ರ ಜಡೇಜ (2) ಅವರನ್ನು ಎಲ್‌ಬಿ ಬಲೆಗೆ ಬೀಳಿಸಿದರು. ಆರರಿಂದ ಹತ್ತರವರೆಗಿನ ಓವರುಗಳಲ್ಲಿ ಆತಿಥೇಯ ತಂಡ ಗಳಿಸಿದ್ದು 16 ರನ್. ಕಳೆದುಕೊಂಡಿದ್ದು ಮೂರು ವಿಕೆಟ್. ಹರ್‌ಪ್ರೀತ್ ಮತ್ತು ಚಾಹರ್ ಒಟ್ಟು 8 ಓವರುಗಳಲ್ಲಿ ಒಂದೂ ಬೌಂಡರಿ ನೀಡಲಿಲ್ಲ. ಒಟ್ಟು 33 ರನ್ ಅಷ್ಟೇ ಕೊಟ್ಟರು.

ಕರನ್ ಬೌಲಿಂಗ್‌ನಲ್ಲಿ ಚೆಂಡನ್ನು ಲಾಂಗ್‌ಆನ್‌ಗೆ ಸಿಕ್ಸರ್ ಎತ್ತಿ ಋತುರಾಜ್ ಅವರು ಸತತ ಮೂರನೇ ಅರ್ಧಶತಕ ದಾಟಿದರು. ಅಲ್ಲದೆ, ಈ ಆವೃತ್ತಿಯಲ್ಲಿ ವಿರಾಟ್ ಕೊಹ್ಲಿ ಅವರನ್ನು ಹಿಂದಿಕ್ಕಿ ಗರಿಷ್ಠ ಸ್ಕೋರರ್ ಎನಿಸಿಕೊಂಡರು.

ಚೆನ್ನೈ ಕೊನೆಯ ಐದು ಓವರುಗಳಲ್ಲಿ 50 ರನ್ ಗಳಿಸಲು ಯಶಸ್ವಿಯಾಯಿತು. ಈ ಆವೃತ್ತಿಯ ಎಂಟು ಇನಿಂಗ್ಸ್‌ಗಳಲ್ಲಿ ಬ್ಯಾಟಿಂಗ್ ಮಾಡಿದ ಎಂ.ಎಸ್. ಧೋನಿ ಇದೇ ಮೊದಲ ಬಾರಿ ರನೌಟ್ ಮೂಲಕ ಔಟಾದರು.

ಸ್ಕೋರುಗಳು: ಚೆನ್ನೈ ಸೂಪರ್ ಕಿಂಗ್ಸ್: 20 ಓವರುಗಳಲ್ಲಿ 7 ವಿಕೆಟ್‌ಗೆ 162 (ಅಜಿಂಕ್ಯ ರಹಾನೆ 29, ಋತುರಾಜ್ ಗಾಯಕವಾಡ 62, ಸಮೀರ್ ರಿಝ್ವಿ 21; ರಬಾಡ 23ಕ್ಕೆ1, ಹರ್‌ಪ್ರೀತ್ ಬ್ರಾರ್ 17ಕ್ಕೆ2, ರಾಹುಲ್ ಚಾಹರ್ 16ಕ್ಕೆ2). **ಪಂಜಾಬ್ ಕಿಂಗ್ಸ್:** 17.5 ಓವರುಗಳಲ್ಲಿ 3 ವಿಕೆಟ್‌ಗೆ 163 (ಜಾನಿ ಬೆಸ್ಟೊ 46, ರಿಲೀ ರೋಸೋ 43, ಶಶಾಂಕ್ ಸಿಂಗ್ ಔಟಾಗದೇ 25, ಸ್ಯಾಮ್ ಕರನ್ ಔಟಾಗದೇ 26; ಶಿವಂ ದುಬೆ 14ಕ್ಕೆ 1). **ಪಂದ್ಯದ ಆಟಗಾರ:** ಹರ್‌ಪ್ರೀತ್ ಬ್ರಾರ್. **ಫಲಿತಾಂಶ:** ಪಂಜಾಬ್ ಕಿಂಗ್ಸ್‌ಗೆ 7 ವಿಕೆಟ್‌ಗಳ ಜಯ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	9	8	1	16	0.694
ಕೋಲ್ಕತ್ತ ನೈಟ್ ರೈಡರ್ಸ್	9	6	3	12	1.096
ಲಖನೌ ಸೂಪರ್ ಜೈಂಟ್ಸ್	10	6	4	12	0.094
ಚೆನ್ನೈ ಸೂಪರ್ ಕಿಂಗ್ಸ್	10	5	5	10	0.627
ಸನ್‌ರೈಸರ್ಸ್ ಹೈದರಾಬಾದ್	9	5	4	10	0.075
ಡೆಲ್ಲಿ ಕ್ಯಾಪಿಟಲ್ಸ್	11	5	6	10	-0.442
ಪಂಜಾಬ್ ಕಿಂಗ್ಸ್	10	4	6	8	-0.062
ಗುಜರಾತ್ ಟೈಟನ್ಸ್	10	4	6	8	-1.113
ಮುಂಬೈ ಇಂಡಿಯನ್ಸ್	10	3	7	6	-0.272
ಆರ್‌ಸಿಬಿ (ಬೆಂಗಳೂರು)	10	3	7	6	-0.415

ಆರೆಂಜ್ ಕ್ಯಾಪ್: ಋತುರಾಜ್ ಗಾಯಕವಾಡ್, ಸಿಎಸ್‌ಕೆ (509 ರನ್)

ಪರ್ಪಲ್ ಕ್ಯಾಪ್: ಬೂಮ್ರಾ, ಹರ್ಷಲ್ ಪಟೇಲ್, ಮುಸ್ತಫಿಜುರ್ (14 ವಿಕೆಟ್)

ಚೇಸಿಂಗ್ ವೇಳೆ ಎಡವುತ್ತಿರುವ ಕಮಿನ್ಸ್ ಬಳಗ

ರಾಯಲ್ಸ್‌ಗೆ 'ಸನ್' ಸವಾಲು ಇಂದು

ಹೈದರಾಬಾದ್ (ಪಿಟಿಐ): ಗುರಿಯನ್ನು ಬೆನ್ನಟ್ಟುವ ಸಂದರ್ಭದಲ್ಲಿ ಹಿಂದಿನ ಎರಡು ಪಂದ್ಯಗಳಲ್ಲಿ ಎಡವಟ್ಟು ಮಾಡಿ ಕೊಂಡಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡ ಗುರುವಾರ ತವರಿನಲ್ಲಿ ನಡೆ ಯುವ ಪಂದ್ಯದಲ್ಲಿ ಪ್ರಬಲ ರಾಜಸ್ಥಾನ್ ರಾಯಲ್ಸ್ ತಂಡವನ್ನು ಎದುರಿಸಲಿದೆ.

ರಾಜಸ್ಥಾನ ರಾಯಲ್ಸ್ ಪ್ಲೇ ಆಫ್ ಸ್ಥಾನವನ್ನು ಖಚಿತಪಡಿಸಿಕೊಂಡಿದ್ದು ಅಷ್ಟೇನೂ ಒತ್ತಡದಲ್ಲಿಲ್ಲ. ಆದರೆ, ಸನ್ ರೈಸರ್ಸ್ ಪಾಲಿಗೆ ಪ್ಲೇ ಆಫ್ ತಲುಪುವ ದೃಷ್ಟಿಯಿಂದ ಈ ಪಂದ್ಯ ಮಹತ್ವದ್ದು.

ಕೆಲವೇ ದಿನಗಳ ಹಿಂದೆ ಅಗ್ರ ನಾಲ್ಕು ಮಂದಿ ಆಟಗಾರರ ಅಬ್ಬರದ ಆಟದಿಂದ ಗೆಲುವು ಪಡೆಯುತ್ತಿದ್ದ ಸನ್‌ರೈಸರ್ಸ್ ಬೆನ್ನು ಬೆನ್ನಿಗೆ ಎರಡು ಸೋಲು ಕಂಡು ತಣ್ಣಗಾಗಿದೆ. ಪಾಯಿಂಟ್ ಪಟ್ಟಿಯಲ್ಲಿ 'ಅಗ್ರ ನಾಲ್ಕರಿಂದ' ಹೊರಬಿದ್ದಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 'ಚೇಸ್' ಮಾಡುವ ಸಂದರ್ಭದಲ್ಲಿ ತಂಡದ ದೌರ್ಬಲ್ಯ ಜಾಹೀರಾಗಿದೆ.

ಐದು ಗೆಲುವು, ನಾಲ್ಕು ಸೋಲು ಕಂಡಿರುವ ಸನ್‌ರೈಸರ್ಸ್ ಈಗ 10 ಪಾಯಿಂಟ್‌ಗಳೊಂದಿಗೆ ಐದನೇ ಸ್ಥಾನಕ್ಕೆ ಸರಿದಿದೆ. ಪ್ಯಾಟ್ ಕಮಿನ್ಸ್ ಬಳಗದ ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಮೊತ್ತ ಬೆನ್ನಟ್ಟುವ ವೇಳೆ ವಿಫಲರಾಗುತ್ತಿದ್ದು, ಮುಖ್ಯ ಕೋಚ್ ಡೇನಿಯಲ್ ವೆಟೋರಿ ಚಿಂತೆಗೆ ಕಾರಣವಾಗಿದೆ. ಹಾಲಿ ಆವೃತ್ತಿಯಲ್ಲಿ ಮೊದಲು ಆಡುವಾಗ ಮೂರು ಸಲ 250ಕ್ಕೂ ಹೆಚ್ಚು ಮೊತ್ತ ಕಲೆಹಾಕಿರುವ ಸನ್‌ರೈಸರ್ಸ್, ಎರಡನೆಯದಾಗಿ ಆಡುವ ವೇಳೆ 200ರ ಗುರಿದಾಟಲು ಒಮ್ಮೆಯೂ ಯಶಸ್ವಿಯಾಗಿಲ್ಲ.

'ಗುರಿ ಬೆನ್ನಟ್ಟುವಲ್ಲೂ ತಂಡ ಶಕ್ತವಾಗಿದೆ. ಆದರೆ ಇನ್ನೂ ಯಾಕೊ ಯಶಸ್ಸು ಪಡೆದಿಲ್ಲ. ಈ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತ್ತವಾಗ-ಬೇಕಾಗಿದೆ' ಎಂದು ಸಿಎಸ್‌ಕೆಗೆ ಸೋತ ನಂತರ ಪ್ಯಾಟ್ ಕಮಿನ್ಸ್ ಹೇಳಿದ್ದರು.

ಹೈದರಾಬಾದ್ ತಂಡದ ಯಶಸ್ಸು ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮಾ ಅವರಿಂದ ಸಿಗುವ ಆರಂಭದ ಮೇಲೆ ಅವಲಂಬಿತವಾಗಿದೆ. ಅವರಿಬ್ಬರೂ ಕೈಕೊಟ್ಟ ವೇಳೆ ತಂಡ ಪರದಾಡಿದೆ.

ಇನ್ನೊಂದು ಕಡೆ ರಾಜಸ್ಥಾನ್ ರಾಯಲ್ಸ್ ಯಶಸ್ಸಿನ ಓಟದಲ್ಲಿದೆ. ತಂಡ 16 ಪಾಯಿಂಟ್ಸ್ ಕಲೆಹಾಕಿದ್ದು, ಎರಡನೇ ಸ್ಥಾನದಲ್ಲಿರುವ ಕೋಲ್ಕತ್ತಕ್ಕಿಂತ ನಾಲ್ಕು ಪಾಯಿಂಟ್ಸ್ ಮುಂದೆಯಿದೆ. ಜೋಸ್ ಬಟ್ಲರ್, ಯಶಸ್ವಿ ಜೈಸ್ವಾಲ್ ಮತ್ತು ನಾಯಕ ಸಂಜು ಸ್ಯಾಮ್ಸನ್ ಉತ್ತಮ ಲಯದಲ್ಲಿದ್ದಾರೆ. ಕೆಲ ಸಂದರ್ಭಗಳಲ್ಲಿ ರಿಯಾನ್ ಪರಾಗ್, ಶಿಮ್ರೊನ್ ಹೆಟ್ಮೆಯರ್ ಮತ್ತು ಧ್ರುವ್ ಜುರೇಲ್ ಕೂಡ ಗೆಲುವಿಗೆ ಕೊಡುಗೆ ನೀಡಿದ್ದಾರೆ.

ಯಜುವೇಂದ್ರ ಚಾಹಲ್, ಟ್ರೆಂಟ್ ಬೌಲ್ಟ್, ಆವೇಶ್ ಖಾನ್ ಮತ್ತು ಸಂದೀಪ್ ಶರ್ಮಾ ಅವರಿಂದ ತಂಡ ದಾಳಿಯಲ್ಲೂ ವೈವಿಧ್ಯ ಹೊಂದಿದೆ.

ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್



ಸಂಜು ಸ್ಯಾಮ್ಸನ್ –ಪಿಟಿಐ ಚಿತ್ರ



ಟ್ರಾವಿಸ್ ಹೆಡ್ –ಎಎಫ್‌ಪಿ ಚಿತ್ರ

ಉಳಿದ ಪಂದ್ಯಗಳಿಗೆ ಮಯಂಕ್ ಅನುಮಾನ

ನವದೆಹಲಿ (ಪಿಟಿಐ): ಹಾಲಿ ಐಪಿಎಲ್‌ನ ವೇಗದ ಬೌಲಿಂಗ್ ತಾರೆ ಮಯಂಕ್ ಯಾದವ್ ಈ ಆವೃತ್ತಿಯ ಉಳಿದ ಪಂದ್ಯಗಳಲ್ಲಿ ಆಡುವುದು ಅನುಮಾನವಾಗಿದೆ. ಮುಂಬೈ ಇಂಡಿಯನ್ಸ್ ವಿರುದ್ಧ ನಡೆದ ಪಂದ್ಯದ ವೇಳೆ ಲಖನೌ ಸೂಪರ್ ಜೈಂಟ್ಸ್ ತಂಡದ ಈ ಬೌಲರ್ ಕಿಬ್ಬೊಟ್ಟೆಯ ಸ್ನಾಯು ಸೆಳೆತಕ್ಕೆ ಒಳಗಾಗಿದ್ದಾರೆ.



21 ವರ್ಷದ ಮಯಂಕ್ ನಾಲ್ಕು ವಾರಗಳಲ್ಲಿ ಎರಡನೇ ಸಲ ಗಾಯಾಳಾಗಿದ್ದಾರೆ. ಆದರೆ ಅವರಿಗೊಂದು ಶುಭ ಸುದ್ದಿಯೂ ಇದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಉಮ್ರಾನ್ ಮಲಿಕ್, ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್, ಯಶ್ ದಯಾಳ್ ಮತ್ತು ಆಕಾಶ್ ದೀಪ್ ಜೊತೆ ಮಯಂಕ್ ಅವರನ್ನೂ ವೇಗದ ಬೌಲಿಂಗ್ ಗುತ್ತಿಗೆಯಡಿ ತರಲು ಸಜ್ಜಾಗಿದೆ.

ಈ ಗುತ್ತಿಗೆಯಡಿ ಬರುವ ಆಟಗಾರನಿಗೆ, ಫಿಟ್ನೆಸ್ ಮತ್ತು ಗಾಯದ ಸಮಸ್ಯೆಯಾದಲ್ಲಿ ಅವರು ನೇರವಾಗಿ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ (ಎನ್‌ಸಿಎ) ವೈದ್ಯಕೀಯ ತಂಡದ ಮೇಲ್ವಿಚಾರಣೆಯಲ್ಲಿ ಚಿಕಿತ್ಸೆ ಪಡೆದು, ಪುನಶ್ಚೇತನ ಶಿಬಿರದ ಪ್ರಯೋಜನ ಪಡೆಯುವರು.

'ಮಯಂಕ್ ಅವರಿಗೆ ಆಗಿರುವ ಸ್ನಾಯುವಿನ ಸಮಸ್ಯೆ ಆರಂಭದ ಹಂತದಲ್ಲಿದೆ. ಆದರೆ ಅವರು ಉಳಿದ ಪಂದ್ಯಗಳಲ್ಲಿ ಆಡುವುದು ಅನುಮಾನ' ಎಂದು ಬಿಸಿಸಿಐನ ಮೂಲವೊಂದು ಪಿಟಿಐಗೆ ತಿಳಿಸಿದೆ.

ಹಾರ್ದಿಕ್‌ಗೆ ₹24 ಲಕ್ಷ ದಂಡ

ಲಖನೌ (ಪಿಟಿಐ): ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಮಂಗಳವಾರ ನಡೆದ ಪಂದ್ಯದಲ್ಲಿ ನಿಧಾನಗತಿಯಲ್ಲಿ ಓವರುಗಳನ್ನು ಮಾಡಿದ್ದಕ್ಕೆ ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರಿಗೆ ₹24 ಲಕ್ಷ ದಂಡ ವಿಧಿಸಲಾಗಿದೆ.


ಇಂಪ್ಯಾಕ್ಟ್ ಆಟಗಾರ ಸೇರಿದಂತೆ ಮುಂಬೈ ಇಂಡಿಯನ್ಸ್ ತಂಡದ ಇತರ (ಒಟ್ಟು 12) ಆಟಗಾರರು ₹6ಲಕ್ಷ ಅಥವಾ ಪಂದ್ಯ ಸಂಭಾವನೆಯ ಶೇ 25ರಷ್ಟಲ್ಲಿ ಯಾವುದು ಕಡಿಮೆಯೊ ಅದನ್ನು ವೈಯಕ್ತಿಕವಾಗಿ ದಂಡದ ರೂಪದಲ್ಲಿ ತೆರಬೇಕಾಗಿದೆ.

ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯವನ್ನು ಮುಂಬೈ ಆರು ವಿಕೆಟ್‌ಗಳಿಂದ ಸೋತಿತ್ತು.

ಟಿ20 ವಿಶ್ವಕಪ್‌ಗೆ ತಂಡ ಪ್ರಕಟ: ಮಾರ್ಷ್‌ಗೆ ನಾಯಕತ್ವ

ಆಸ್ಟ್ರೇಲಿಯಾ ತಂಡದಿಂದ ಸ್ಮಿತ್‌ಗೆ ಕೊಕ್

ಸಿಡ್ನಿ (ಎಎಫ್‌ಪಿ): ಮಾಜಿ ನಾಯಕ ಸ್ಟೀವ್ ಸ್ಮಿತ್ ಮತ್ತು ಉದಯೋನ್ಮುಖ ಬ್ಯಾಟರ್ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಅವರನ್ನು ಟಿ20 ವಿಶ್ವಕಪ್ ಆಡುವ ಆಸ್ಟ್ರೇಲಿಯಾ ತಂಡಕ್ಕೆ ಪರಿಗಣಿಸಿಲ್ಲ. ಮುಂದಿನ ತಿಂಗಳು ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ನಡೆಯುವ ಟೂರ್ನಿಗೆ ತಂಡವನ್ನು ಬುಧವಾರ ಪ್ರಕಟಿಸಲಾಯಿತು.



ಮಿಚೆಲ್ ಮಾರ್ಷ್

ಆಲ್‌ರೌಂಡರ್ ಮಿಚೆಲ್ ಮಾರ್ಷ್ ನಾಯಕತ್ವ ವಹಿಸುವರು. ತಂಡದಲ್ಲಿ ಸ್ಥಾನ ಪಡೆದಿರುವ ಡೇವಿಡ್ ವಾರ್ನರ್ ಅವರಿಗೆ ಇದು ಬಹುತೇಕ ಕೊನೆಯ ಅಂತರರಾಷ್ಟ್ರೀಯ ಟೂರ್ನಿಯಾಗುವ ಸಾಧ್ಯತೆಯಿದೆ. ಟೆಸ್ಟ್ ತಂಡದ ಕ್ಯಾಪ್ಟನ್ ಪ್ಯಾಟ್ ಕಮಿನ್ಸ್, ವೇಗದ ಬೌಲರ್ ಮಿಚೆಲ್ ಸ್ಟಾರ್ಕ್, ಬಿರುಸಿನ ಹೊಡೆತಗಳ ಆಟಗಾರ ಗ್ಲೆನ್ ಮ್ಯಾಕ್ಸ್‌ವೆಲ್ 15 ಆಟಗಾರರ ತಂಡದಲ್ಲಿರುವ ಅನುಭವಿಗಳಾಗಿದ್ದಾರೆ.

ಐಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಆರಂಭ ಆಟಗಾರನಾಗಿ ಸ್ಫೋಟಕ ಇನಿಂಗ್ಸ್‌ಗಳನ್ನು ಆಡುತ್ತಿರುವ 22 ವರ್ಷ ವಯಸ್ಸಿನ ಮೆಕ್‌ಗುರ್ಕ್ ಅವರ ಪ್ರದರ್ಶನದ ಮೇಲೆ ಹೆಚ್ಚಿನ ಗಮನ ಇಟ್ಟಿದ್ದೇವೆ ಎಂದು ಆಯ್ಕೆಗಾರ ಜಾರ್ಜ್ ಬೇಲಿ ತಿಳಿಸಿದರು.

ತಂಡ ಇಂತಿದೆ: ಮಿಚೆಲ್ ಮಾರ್ಷ್ (ನಾಯಕ), ಆ್ಯಷ್ಟನ್ ಅಗರ್, ಪ್ಯಾಟ್ ಕಮಿನ್ಸ್, ಟಿಮ್ ಡೇವಿಡ್, ನಥಾನ್ ಎಲ್ಲಿಸ್, ಕ್ಯಾಮರಾನ್ ಗ್ರೀನ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಗ್ಲೆನ್ ಮ್ಯಾಕ್ಸ್‌ವೆಲ್, ಮಿಚಲ್ ಸ್ಟಾರ್ಕ್, ಮಾರ್ಕಸ್ ಸ್ಟೊಯಿನಿಸ್, ಮ್ಯಾಥ್ಯೂ ವೇಡ್, ಡೇವಿಡ್ ವಾರ್ನರ್ ಮತ್ತು ಆ್ಯಡಂ ಜಂಪಾ.

ಆ್ಯಂಡ್ರೂ ಸೈಮಂಡ್ಸ್‌ಗೆ ಗೌರವ

ಮೆಲ್ಬರ್ನ್: ಎರಡು ವರ್ಷ ಹಿಂದೆ ಕಾರು ಅಪಘಾತದಲ್ಲಿ ಮೃತಪಟ್ಟಿದ್ದ ಆಲ್‌ರೌಂಡರ್ ಆ್ಯಂಡ್ರೂ ಸೈಮಂಡ್ಸ್ (46) ಅವರನ್ನು ಕ್ರಿಕೆಟ್ ಆಸ್ಟ್ರೇಲಿಯಾ ವಿಭಿನ್ನ ರೀತಿಯಲ್ಲಿ ಸ್ಮರಿಸಿತು. ಬುಧವಾರ ಟಿ20 ವಿಶ್ವಕಪ್‌ಗೆ ತಂಡವನ್ನು ಪ್ರಕಟಿಸುವಾಗ ಅವರ ಇಬ್ಬರು ಮಕ್ಕಳೂ ಗಣ್ಯ ಆಟಗಾರರ ಜೊತೆಯಾದರು.

ವಿಡಿಯೊ ಮೂಲಕ ತಂಡ ಪ್ರಕಟಿಸುವ ವೇಳೆ ಸೈಮಂಡ್ಸ್ ಮಗ ವಿಲ್ ಮತ್ತು ಮಗಳು ಕ್ಲೊ ಅವರು ಪಾಂಟಿಂಗ್, ಆ್ಯಡಂ ಗಿಲ್‌ಕ್ರಿಸ್ಟ್, ಮೈಕೆಲ್ ಕ್ಲಾರ್ಕ್ ಮತ್ತು ಗ್ಲೆನ್ ಮೆಕ್‌ಗ್ರಾತ್‌ಗೆ ಜೊತೆಯಾದರು.

ವಿಲ್ ಅವರು ಆ್ಯಷ್ಟನ್ ಅಗರ್ ಅವರ ಹೆಸರು ಹೇಳಿದರಲ್ಲದೇ, ಹೊಸ ನಾಯಕ ಮಿಚೆಲ್ ಮಾರ್ಷ್ ಬಗ್ಗೆ ಮಾತನಾಡಿದರು. 2003, 2007ರಲ್ಲಿ ವಿಶ್ವಕಪ್ ಗೆದ್ದ ಆಸ್ಟ್ರೇಲಿಯಾ ತಂಡದ ನಾಯಕ ಪಾಂಟಿಂಗ್ ಮಾರ್ಷ್ ಹೆಸರು ಪ್ರಕಟಿಸಿದರು. ಕ್ಲೊ ಅವರು ಮಿಚೆಲ್ ಸ್ಟಾರ್ಕ್ ಹೆಸರು ಹೇಳಿದರು.

ಅಫ್ಗನ್ ತಂಡಕ್ಕೆ ರಶೀದ್ ನಾಯಕ

ಕಾಬೂಲ್ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್‌ಗೆ ಅಫ್ಗಾನಿಸ್ತಾನ ತಂಡವನ್ನು ಪ್ರಕಟಿಸಲಾಗಿದ್ದು, ಹಾಲಿ ಐಪಿಎಲ್‌ನಲ್ಲಿ ಆಡುತ್ತಿರುವ ಎಂಟು ಮಂದಿ ಸ್ಥಾನ ಪಡೆದಿದ್ದಾರೆ. ಅನುಭವಿ ಸ್ಪಿನ್ ಆಲ್‌ರೌಂಡರ್ ರಶೀದ್ ಖಾನ್ ನಾಯಕರಾಗಿದ್ದಾರೆ.

ಅಫ್ಗಾನಿಸ್ತಾನ ಕ್ರಿಕೆಟ್ ಮಂಡಳಿ ತಂಡ ಪ್ರಕಟಿಸಿದ್ದು, 2023ರ ಏಕದಿನ ವಿಶ್ವಕಪ್ ತಂಡಕ್ಕೆ ನಾಯಕರಾಗಿದ್ದ ಹಷ್ಮತ್‌ಉಲ್ಲಾ ಶಾಹಿದಿ ಅವರನ್ನು ಕೈಬಿಡಲಾಗಿದೆ.

ರಶೀದ್ ಜೊತೆಗೆ ಅಜ್ಮತ್‌ಉಲ್ಲಾ ಒಮರ್‌ಝೈ, ನೂರ್ ಅಹ್ಮದ್, ಫಝಲ್‌ಹಕ್ ಫಾರೂಖಿ, ನವೀನ್ ಉಲ್ ಹಕ್, ಮೊಹಮ್ಮದ್ ನಬಿ, ರಹಮತ್‌ಉಲ್ಲಾ ಗುರ್ಬಾಝ್ ಮತ್ತು ಗುಲ್ಬದಿನ್ ನೈಬ್ ಅವರು ಪ್ರಸ್ತುತ ಐಪಿಎಲ್‌ನಲ್ಲಿ ವಿವಿಧ ತಂಡಗಳಲ್ಲಿ ಆಡುತ್ತಿದ್ದಾರೆ.

20 ತಂಡಗಳ ಟೂರ್ನಿಯಲ್ಲಿ ಅಫ್ಗಾನಿಸ್ಥಾನ 'ಸಿ' ಗುಂಪಿನಲ್ಲಿದ್ದು, ಇದರಲ್ಲಿ ನ್ಯೂಜಿಲೆಂಡ್, ಜಂಟಿ ಆತಿಥ್ಯ ವಹಿಸಿರುವ ವೆಸ್ಟ್ ಇಂಡೀಸ್, ಯುಗಾಂಡಾ ಮತ್ತು ಪಾಪುವಾ ನ್ಯೂಗಿನಿ ಒಳಗೊಂಡಿವೆ. ಅಫ್ಗಾನಿಸ್ತಾನ ಮೊದಲ ಪಂದ್ಯವನ್ನು ಗಯಾನಾದ ಪ್ರಾವಿಡೆನ್ಸ್‌ನಲ್ಲಿ ಯುಗಾಂಡಾ ವಿರುದ್ಧ ಆಡಲಿದೆ.



ರಶೀದ್ ಖಾನ್

15 ಮಂದಿಯ ತಂಡ ಹೀಗಿದೆ: ರಶೀದ್ ಖಾನ್ (ನಾಯಕ), ರಹಮಾನುಲ್ಲಾ ಗುರ್ಬಾಝ್ (ವಿಕೆಟ್ ಕೀಪರ್), ಇಬ್ರಾಹಿಂ ಜದ್ರಾನ್, ಅಜ್ಮತ್‌ಉಲ್ಲಾ ಒಮರ್‌ಝೈ, ನಜೀಬುಲ್ಲಾ ಜದ್ರಾನ್, ಮೊಹಮ್ಮದ್ ಇಶಾಖ್, ಮೊಹಮ್ಮದ್ ನಬಿ, ಗುಲ್ಬದಿನ್ ನೈಬ್, ಕರೀಮ್ ಜನತ್, ನಂಗ್ಯಾಲ್ ಖರೋಟಿ, ಮುಜೀಬ್ ಉರ್ ರಹಮಾನ್, ನೂರ್ ಅಹ್ಮದ್, ನವೀನ್–ಉಲ್–ಹಖ್, ಫಝಲ್‌ಹಕ್ ಫಾರೂಖಿ, ಫರೀದ್ ಅಹ್ಮದ್ ಮಲಿಕ್.

ಸಂಕ್ಷಿಪ್ತ ಸುದ್ದಿ

ಮ್ಯಾಡ್ರಿಡ್ ಓಪನ್: ನಡಾಲ್‌ಗೆ ನಿರಾಸೆ

ಮ್ಯಾಡ್ರಿಡ್ (ಎಎಫ್‌ಪಿ): ವಿಶ್ವದ ಮಾಜಿ ಅಗ್ರಗಣ್ಯ ಟೆನಿಸ್ ಆಟಗಾರ ರಫೆಲ್ ನಡಾಲ್ ಅವರು ತವರಿನಲ್ಲಿ ನಡೆಯುತ್ತಿರುವ ಮ್ಯಾಡ್ರಿಡ್ ಓಪನ್ ಟೂರ್ನಿಯ ಪುರುಷರ ಸಿಂಗಲ್ಸ್ ನಾಲ್ಕನೇ ಸುತ್ತಿನ ಪಂದ್ಯದಲ್ಲಿ ನಿರಾಸೆ ಅನುಭವಿಸಿದರು.

ಬುಧವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ನಡಾಲ್ ಅವರು 5–7, 4–6ರಿಂದ ವಿಶ್ವದ 30ನೇ ಕ್ರಮಾಂಕದ ಜಿರಿ ಲೆಹೆಕಾ (ಜೆಕ್ ಗಣರಾಜ್ಯ) ಅವರಿಗೆ ಮಣಿದರು. ಲೆಹೆಕಾ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಡೇನಿಯಲ್ ಮೆಡ್ವೆಡೆವ್ ಅವರನ್ನು ಎದುರಿಸಲಿದ್ದಾರೆ.

ತವರಿನಲ್ಲಿ ವಿದಾಯ ಪಂದ್ಯವನ್ನು ಆಡಿದ ನಡಾಲ್ ಪ್ರೇಕ್ಷಕರನ್ನು ಉದ್ದೇಶಿಸಿ ಮಾತನಾಡುವಾಗ ಭಾವೋದ್ವೇಗಕ್ಕೆ ಒಳಗಾದರು. 'ಈ ವಾರ ನನಗೆ ವಿಶೇಷ ಮಾತ್ರವಲ್ಲ, ಸಕಾರಾತ್ಮಕ ಮತ್ತು ಭಾವನಾತ್ಮಕವಾಗಿತ್ತು. ಈ ಅಂಗಣದಲ್ಲಿ ವಿದಾಯ ಪಂದ್ಯವಾಡಲು ಅವಕಾಶ ಸಿಕ್ಕಿದಕ್ಕೆ ಖುಷಿಯಿದೆ' ಎಂದರು.

ಬೋಪಣ್ಣ– ಎಬ್ಡೆನ್ ಜೋಡಿಗೆ ಆಘಾತ

ಮ್ಯಾಡ್ರಿಡ್ (ಪಿಟಿಐ): ಅಗ್ರ ಶ್ರೇಯಾಂಕದ ಭಾರತ– ಆಸ್ಟ್ರೇಲಿಯನ್ ಜೋಡಿಯಾದ ರೋಹನ್ ಬೋಪಣ್ಣ ಮತ್ತು ಮ್ಯಾಥ್ಯೂ ಎಬ್ಡೆನ್ ಅವರು ಮ್ಯಾಡ್ರಿಡ್ ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಅಷ್ಟೇನೂ ಪರಿಚಿತರಲ್ಲದ ಸೆಬಾಸ್ಟಿಯನ್ ಕೋರ್ಡಾ– ಜೋರ್ಡಾನ್ ಥಾಮ್ಸನ್ ಜೋಡಿಯ ಎದುರು ಮಂಗಳವಾರ ಆಘಾತಕಾರಿ ಸೋಲ-ನುಭವಿಸಿದರು. ಅಮೆರಿಕದ ಕೋರ್ಡಾ ಮತ್ತು ಆಸ್ಟ್ರೇಲಿಯಾದ ಜೋರ್ಡಾನ್ ಅವರು ಆಸ್ಟ್ರೇಲಿಯನ್ ಓಪನ್ ಹಾಲಿ ಡಬಲ್ಸ್ ಚಾಂಪಿಯನ್ ಆಗಿರುವ ಬೋಪಣ್ಣ– ಎಬ್ಡೆನ್ ಅವರನ್ನು 7–6 (7–4), 7–5 ರಿಂದ ಸೋಲಿಸಿದರು.

ಅಗ್ರ ಶ್ರೇಯಾಂಕದ ಆಟಗಾರರಿಗೆ ಪ್ರಬಲ ಪೈಪೋಟಿ ನೀಡಿದ ಕೋರ್ಡಾ–ಜೋರ್ಡಾನ್ ಜೋಡಿ ಪ್ರಬಲ ಸರ್ವ್‌ಗಳನ್ನೂ ಮಾಡಿತು. ಮೊದಲ ಸೆಟ್‌ಅನ್ನು ಟೈಬ್ರೇಕರನಿಲ್ಲಿ ಪಡೆಯಿತು.

ಮಹಿಳಾ ಕ್ರಿಕೆಟ್: ಸರಣಿ ಕೈವಶದತ್ತ ಚಿತ್ತ

ಸಿಲ್ಹೆಟ್, ಬಾಂಗ್ಲಾದೇಶ, (ಪಿಟಿಐ): ಮೊದಲೆರಡು ಪಂದ್ಯದಲ್ಲಿ ಪಾರಮ್ಯ ಮೆರೆದಿರುವ ಭಾರತದ ವನಿತೆಯರು ಗುರುವಾರ ಬಾಂಗ್ಲಾದೇಶದ ವಿರುದ್ಧದ ಮೂರನೇ ಟಿ20 ಪಂದ್ಯವನ್ನೂ ಗೆದ್ದು ಸರಣಿ ಕೈವಶ ಮಾಡುವತ್ತ ಚಿತ್ತಹರಿಸಿದ್ದಾರೆ.

ಐದು ಪಂದ್ಯಗಳ ಸರಣಿಯ ಮೊದಲ ಪಂದ್ಯವನ್ನು ಭಾರತವು 44 ರನ್‌ಗಳಿಂದ ಗೆದ್ದಿದ್ದರೆ, ಎರಡನೇ ಪಂದ್ಯವನ್ನು ಮಳೆಯಿಂದಾಗಿ ಡಕ್ವರ್ಥ್ ಲೂಯಿಸ್ ನಿಯಮದಡಿ 19 ರನ್‌ಗಳಿಂದ ಆತಿಥೇಯ ತಂಡವನ್ನು ಮಣಿಸಿತ್ತು.

ಈ ಪಂದ್ಯದಲ್ಲಿ ಸುಧಾರಿತ ಪ್ರದರ್ಶನ ನೀಡಿ ಸರಣಿಯನ್ನು ಜೀವಂತವಾಗಿರಲು ಆತಿಥೇಯರು ಪ್ರಯತ್ನ ನಡೆಸಲಿದ್ದಾರೆ.

ಬಾಕ್ಸಿಂಗ್: ಭಾರತದ ನಾಲ್ವರು ಸೆಮಿಫೈನಲ್‌ಗೆ

ಅಸ್ತಾನಾ (ಕಜಕಸ್ತಾನ), (ಪಿಟಿಐ): ಭಾರತದ ಆರ್ಯನ್, ಯಶವರ್ಧನ್ ಸಿಂಗ್, ಪ್ರಿಯಾಂಶು ಮತ್ತು ಸಾಹಿಲ್ ಅವರು ಅಧಿಕಾರಯುತ ಗೆಲುವಿನೊಡನೆ ಎಎಸ್‌ಬಿಸಿ ಏಷ್ಯನ್ 22 ವರ್ಷದೊಳಗಿನವರ ಮತ್ತು ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಸೆಮಿಫೈನಲ್ ತಲುಪಿದರು.

51 ಕೆ.ಜಿ. ವಿಭಾಗದಲ್ಲಿ ಆರ್ಯನ್ ಅವರು ಉಜ್ಬೇಕಿಸ್ತಾನದ ಜುರಯೇವ್ ಶಕರ್‌ಬಾಯ್ ಅವರನ್ನು 5–0 ಯಿಂದ ಸರ್ವಾನುಮತದ ತೀರ್ಪಿನಲ್ಲಿ ಸೋಲಿಸಿ ಭಾರತಕ್ಕೆ ಉತ್ತಮ ಆರಂಭ ಒದಗಿಸಿದರು. ಯಶವರ್ಧನ್ 63.5 ಕೆ.ಜಿ. ವಿಭಾಗದಲ್ಲಿ ಇರಾನ್‌ನ ಮಿರ್‌ಅಹಮದಿ ಬಾಬಾಹೀದಾರಿ ವಿರುದ್ಧ ಮೊದಲ ಸುತ್ತಿನಲ್ಲಿ ಹಿನ್ನಡೆ ಅನುಭವಿಸಿದರೂ ಚೇತರಿಸಿಕೊಂಡ 4–1 ಅಂತರದ ಜಯ ಸಂಪಾದಿಸಿದರು.

ಪ್ರಿಯಾಂಶು (71 ಕೆ.ಜಿ) ಮತ್ತು ಸಾಹಿಲ್ (80 ಕೆ.ಜಿ) ಅವರು ತಮ್ಮ ಎದುರಾಳಿಗಳನ್ನು ಸೋಲಿಸಲು ಅಷ್ಟೇನೂ ಪ್ರಯಾಸಪಡಲಿಲ್ಲ. ಅವರು ಕ್ರಮವಾಗಿ ಚೀನಾ ತೈಪೆಯ ವು ಯು ಎನ್ ಮತ್ತು ತುರ್ಕಮೆನಿಸ್ತಾನದ ಯಕ್ಲಿವೊಮ್ ಅಬ್ದಿರ್ಮಾ ಅವರನ್ನು ಸೋಲಿಸಿದರು.

ಆದರೆ 57 ಕೆ.ಜಿ. ವಿಭಾಗದಲ್ಲಿ ಜತಿನ್ ಹಿನ್ನಡೆ ಕಂಡರು. ಉಜ್ಬೇಕಿಸ್ತಾನದ ಎ.ನಾಡಿರ್ಬೆಕ್ ಅವರು 4–1 ರಿಂದ ಭಾರತದ ಬಾಕ್ಸರ್ ವಿರುದ್ಧ ಜಯಗಳಿಸಿದರು.

ಯುವ ವಿಭಾಗದ ಸೆಮಿಫೈನಲ್ ಪಂದ್ಯಗಳು ಶುಕ್ರವಾರ ನಡೆಯಲಿವೆ.

ಮಂಗಳವಾರ ತಡರಾತ್ರಿ ನಡೆದ 22 ವರ್ಷದೊಳಗಿನವರ ಪಂದ್ಯಗಳಲ್ಲಿ ಜುಗ್ನೂ (86 ಕೆ.ಜಿ), ತಮ್ಮನಾ (50 ಕೆ.ಜಿ) ಮತ್ತು ಪ್ರೀತಿ (54 ಕೆ.ಜಿ) ಅವರು ಜಯಗಳಿಸಿ ಸೆಮಿಫೈನಲ್ ತಲುಪಿದ್ದರು.

ಗುರುವಾರ ಎಂಟು ಮಂದಿ ಬಾಕ್ಸರ್‌ಗಳು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೆಣಸಾಡಲಿದ್ದಾರೆ.

ಥಾಮಸ್ ಕಪ್: ಕೊನೆಯ ಲೀಗ್ ಪಂದ್ಯ

ಇಂಡೊನೇಷ್ಯಾಕ್ಕೆ ಮಣಿದ ಭಾರತ

ಚೆಂಗ್ಡು (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡ, ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ 'ಸಿ' ಗುಂಪಿನ ಕೊನೆಯ ಪಂದ್ಯದಲ್ಲಿ ಇಂಡೊನೇಷ್ಯಾ ಎದುರು ಬುಧವಾರ 1–4 ಅಂತರದಿಂದ ಸೋಲನುಭವಿಸಿತು.

ಇಂಡೊನೇಷ್ಯಾ ಗುಂಪಿನಲ್ಲಿ ಆಡಿದ ಎಲ್ಲ ಮೂರೂ ಪಂದ್ಯ ಗೆದ್ದು ಅಗ್ರಸ್ಥಾನ ಪಡೆದರೆ, ಭಾರತ ಎರಡು ಗೆಲುವಿನೊಡನೆ ಎರಡನೇ ಸ್ಥಾನ ಪಡೆಯಿತು. ಎರಡೂ ತಂಡಗಳು ಕ್ವಾರ್ಟರ್ ಫೈನಲ್ ಪ್ರವೇಶಿಸಿದವು. ಈ ಹಿಂದಿನ ಆವೃತ್ತಿಯ ಫೈನಲ್‌ನಲ್ಲಿ ಭಾರತ 3–0 ಯಿಂದ ಇಂಡೊನೇಷ್ಯಾ ಮೇಲೆ ಜಯಗಳಿಸಿ ಮೊದಲ ಬಾರಿ ಪ್ರಶಸ್ತಿ ಗೆದ್ದಿತ್ತು. ಆ ಸೋಲಿಗೆ ಇಂಡೊನೇಷ್ಯಾ ಸೇಡನ್ನೂ ತೀರಿಸಿಕೊಂಡಿತು.

ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಎಚ್.ಎಸ್. ಪ್ರಣಯ್ 13–21, 21–12, 21–12 ರಿಂದ ಅಂಥೋನಿ ಜಿಂಟಿಂಗ್ ಅವರನ್ನು ಸೋಲಿಸಿ ಭಾರತಕ್ಕೆ ಮುನ್ನಡೆ ಒದಗಿಸಿದ್ದರು. ಆದರೆ ಡಬಲ್ಸ್‌ನಲ್ಲಿ ಅನುಭವಿಗಳಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ 24–22, 22–24, 19–21 ರಲ್ಲಿ ಮುಹಮ್ಮದ್ ಶೊಹಿಬುಲ್ ಫಿಕ್ರಿ– ಬಗಾಸ್ ಮೌಲಾನಾ ಎದುರು ಸೋಲನುಭವಿಸಿದ್ದರಿಂದ ಸ್ಕೋರ್ 1–1 ಸಮಬಲ ಆಯಿತು.



ಎಚ್.ಎಸ್. ಪ್ರಣಯ್

ಇಂಡೊನೇಷ್ಯಾದ ಇದೇ ಜೋಡಿ ಕಳೆದ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿ-ಪ್‌ನಲ್ಲಿ ಸಾತ್ವಿಕ್–ಚಿರಾಗ್ ಜೋಡಿಯನ್ನು ಮಣಿಸಿತ್ತು. 22 ವರ್ಷದ ಲಕ್ಷ್ಯ ಸೇನ್ ನಂತರ 18–21, 21–16, 17–21ರಲ್ಲಿ ಆಲ್ ಇಂಗ್ಲೆಂಡ್ ಸಿಂಗಲ್ಸ್ ಚಾಂಪಿಯನ್ ಜೊನಾಥನ್ ಕ್ರಿಸ್ಟಿ ಅವರಿಗೆ ಸೋತರು.

ನಾಲ್ಕನೇ ಪಂದ್ಯದಲ್ಲಿ ಭಾರತದ ಧ್ರುವ್ ಕಪಿಲ– ಸಾಯಿ ಪ್ರತೀಕ್ 20–22, 11–21ರಲ್ಲಿ ಲಿಯೊ ರೋಲಿ ಕರ್ನಾಲ್ಡೊ – ಡೇನಿಯಲ್ ಮಾರ್ಟಿನ್ ಅವರಿಗೆ ನೇರ ಗೇಮ್‌ಗಳಲ್ಲಿ ಮಣಿದರು. ಅಂತಿಮ (ಸಿಂಗಲ್ಸ್) ಪಂದ್ಯದಲ್ಲಿ ಕಿದಂಬಿ ಶ್ರೀಕಾಂತ್ 21–19, 22–24, 14–21ರಲ್ಲಿ ಚಿಕೊ ಆರೊ ದ್ವಿ ವಾರ್ದೊಯೊ ಎದುರು ಪರಾಜಿತರಾದರು.